ಕತ್ತಲು ಕರಗುವ ಮುನ್ನ



ಶಾಂತನಾಯ್ಕ ಶಿರಗಾನಹಳ್ಳಿ

ಕತ್ತಲು ಕರಗುವ ಮುನ್ನ

(ಕಾದಂಬರಿ)

ಶಾಂತನಾಯ್ಕ ಶಿರಗಾನಹಳ್ಳಿ
ಆಂಗ್ಲ ಭಾಷಾ ಉಪನ್ಯಾಸಕ
ಮಹಾರಾಜ ಕಾಲೇಜು
ಮಾನಸಗಂಗೋತ್ರಿ, ಮೈಸೂರು

ತಾರಾ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್
285/F6, 5ನೇ ವೆಸ್ಟ್ ಕ್ರಾಸ್, ಉತ್ತರಾದಿಮಠದ ರಸ್ತೆ,
ಮೈಸೂರು - 570 004.

KATTALU KARAGUVA MUNNA : NOVEL
Written by **SHANTHA NAIK SHIRAGANAHALLI** Published by **TARA PRINTING & PUBLISHING HOUSE,** 285/F6, 5th West cross, Uttharadi mutt road, Mysore. ✆ **2448023**

ಪುಟಗಳು : VIII+110=118

First Edition : 2004

ಬೆಲೆ : 95/- ರೂ.

ಲೇಖಕರ ವಿಳಾಸ : ಶಾಂತನಾಯ್ಕ ಶಿರಗಾನಹಳ್ಳಿ
ಎಲ್. ೮ ಮಾನಸಗಂಗೋತ್ರಿ ವಸತಿ ನಿಲಯಗಳು
೭ನೇ ಕ್ರಾಸ್, ಜೆ.ಸಿ. ಪಾಲಿಟೆಕ್ನಿಕ್ ಕಾಲೇಜು ಎದುರು
ಮಾನಸಗಂಗೋತ್ರಿ ಮೈಸೂರು. ✆ : 2411006

ಮುದ್ರಕರು : ತಾರಾ ಪ್ರಿಂಟಿಂಗ್ ಪ್ರೆಸ್, ಮೈಸೂರು. ✆ : 2448023

ಅರ್ಪಣೆ

ಪ್ರೊ. ರಾಜಶೇಖರ್ ಮನ್ಸೂರ್

ಹಾಗೂ

ಡಾ. ಟಿ. ನಾಗೇಶ್ವರರಾವ್ ಅವರಿಗೆ

NOVEL

HALLI Publishers

5th West cross

ಅರ್ಪಣೆ

ನನ್ನಾಳಕ್ಕಿಳಿಯುವ ಮುನ್ನ....

ಹೆಪ್ಪುಗಟ್ಟಿದ ಬದುಕಿನ ಅನುಭವವನ್ನ ಕಿತ್ತಾಗ ಹೊರಹೊಮ್ಮಿದ ಅನಿಸಿಕೆಯನ್ನು ಹಿಡಿದಿಡುವ ಪ್ರಯತ್ನ ಮಾಡಿದ್ದೇನೆ. ಅವರಿವರಂತೆ ಸರ್ವಶ್ರೇಷ್ಟ ಕಾದಂಬರಿಕಾರನೆಂಬ ಬಿಗುಮಾನ ನನಗಿಲ್ಲಾ. ನನ್ನಂತೆ ಅಪಮಾನ, ಅವಮಾನಕ್ಕೊಳಗಾದವರನೇಕರ ಸ್ಥಿತಿ ಇದು. ಹೊಸ ಬದುಕಿನ ಒತ್ತಾಸೆಯೊಳಗೆ ಕನಸು ಕಮರಿ ಹೋಗುತ್ತವೆ ಎಂಬ ಸತ್ಯ ಮೇಲಸ್ಥರದ ಅನೇಕ ಜನರಿಗೆ ಗೊತ್ತಿಲ್ಲ. ಪುಟ್ಟ ಮೆದುಳಿನೊಳಗೆ ಮೂನ್ನೂರು ಕನಸುಗಳು ಬಿಚ್ಚಿಕೊಂಡು ಬದುಕಿನ ಜೊತೆಗೆ ಬಡದಾಡುತ್ತಲೆ ತಾನೇನು ಯಾರಿಗೂ ಕಮ್ಮಿ ಅಲ್ಲ ಎಂದು ವ್ಯವಸ್ಥೆಗೆ ಎದೆಯೊಡ್ಡಿ ನಿಲ್ಲುವ ಅನೇಕ ಯುವಕರ ಕತೆ ಇದು. ಜಾತಿ ಎಂಬ ಹೊಲಸು ಅವಸ್ಥೆ ಎಂಥೆಂಥ ಪಂಡಿತರನ್ನು ಪಾಮರರನ್ನು ಮತಾಂಧರ ನ್ನಾಗಿ ಮಾಡಿಲ್ಲ. ಪ್ರಗತಿಪರರು ಎಂಬ ಗೊಸುಂಬೆಗಳು ಅಪ್ಪಿಕೊಳ್ಳುವ ನೆಪದಲ್ಲಿ ಅದನ್ನೇ ಬಂಡವಾಳ ಮಾಡಿಕೊಂಡು ಎಷ್ಟು ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡಿಲ್ಲ ಮೋಸ ಮಾಡಿಲ್ಲ ಎಷ್ಟೆ ಬುದ್ಧಿವಂತನಾದರೂ ಪ್ರತಿಭಾ ಶಾಲಿಯಾದರೂ ಬಡವ ನಾದರೆ, ಕೀಳು ಜಾತಿಯವನಾದರೆ ಆ ವಿದ್ಯಾರ್ಥಿ, ಉಪನ್ಯಾಸಕ ಅಥವಾ ಒಬ್ಬ ವ್ಯಕ್ತಿ ಎಂಥ ಹಿಂಸೆಯನ್ನ ಅನುಭವಿಸುತ್ತಾನೆ ಎಂಬುದು ಈ ಕತೆಯ ಮೂಲ. ತಮ್ಮ ಜಾತಿಯವರನ್ನು, ಧರ್ಮಿಯರನ್ನು, ತಮ್ಮ ಬಾಲ ಬಡಿಯುವವರನ್ನು ಮೇಲೆತ್ತುವ ಪ್ರವೃತ್ತಿಯನ್ನು ಬೆಳೆಸಿಕೊಂಡಿರುವ ವಿಶ್ವವಿದ್ಯಾ ನಿಲಯಗಳ So calledಗಳು ಒಬ್ಬ ವಿದ್ಯಾರ್ಥಿ ಎಂ.ಎ. ಎಂಬ ಕೆಲಸಕ್ಕೆ ಬಾರದ ಕೋರ್ಸ್ ಮುಗಿಸುವ ಮುನ್ನ ಅನುಭವಿಸುವ ಮಾನಸಿಕ ವೇದನೆ ಎಂಥಹದ್ದು ಎಂಬುದನ್ನು ಎಂದಾದರೊಮ್ಮೆ ಗಮನಿಸಿಯಾರೆ? ದುಡ್ಡಿನ ಪ್ರಾಬಲ್ಯದಿಂದ ಸಂಸ್ಥೆಗಳನ್ನು ಕಟ್ಟಿ ಮೆರೆಯುವ ಮಂದಿ ವಿದ್ಯೆಗೆಂದಾದರು ಬೆಲೆ ಕೊಟ್ಟಾರೆ? ಹೆಚ್ಚುತ್ತಿರುವ ಜನಸಂಖ್ಯೆ ಕಡಿಮೆಯಾಗುತ್ತಿರುವ ಅವಕಾಶಗಳು, ಅನಕ್ಷರತೆ, ಮೂಢನಂಬಿಕೆ, ಬಡತನ, ಶೋಷಣೆ ಸಮಾಜದ ಮೂಲಭೂತ ಪದಕೋಶಗಳಾಗಿವೆ ಬಹುವರುಷಗಳಿಂದ ಶೋಷಿತರಾದ ಜನ ಅಕ್ಷರ ಸಂಸ್ಕೃತಿಯ ಒಳಹೊಕ್ಕಾಗ ಕಾಣುವ ಅದ್ಭುತ ಲೋಕದ ಒಳ ಹರಿವುಗಳು ಚಿಂತನೆಗೆ ಹಚ್ಚುತ್ತವೆ. ಸ್ವಗೌರವ, ಸ್ವಪ್ರತಿಷ್ಠೆ, ಸ್ವಾಭಿಮಾನ ಬೆಳೆಸಿಕೊಳ್ಳುವಂತೆ ಪ್ರೇರೇಪಿಸುತ್ತವೆ ಅದನ್ನೆ ಈ ಜನರು ದುರಾಂಕಾರ ಅಂದರೆ? ಶತ ಶತಮಾನಗಳಿಂದಲೂ ತಮ್ಮ

ಅಡಿಯಾಳಾಗಿ ಕಾಲಿಂದ ತೋರಿಸಿದ್ದನ್ನು ತಲೆ ಮೇಲೆ ಹೊತ್ತು ಮಾಡುತ್ತಾ, ಸದೃಢರಾದ ಯುವತಿಯರ ಹರಕು ರವಿಕೆಯೊಳಗೆ ಕಾಣುವ ಉಬ್ಬುತಗ್ಗುಗಳಿಗೆ ಜೊಲ್ಲು ಸುರಿಸುತ್ತಾ ಸಾಧ್ಯವಾದರೆ ಸೇರು ಕಾಳಿನಾಸೆಗೆ ಶೀಲ ಹಾಳು ಮಾಡುವ ಮೂಲಭೂತವಾದಿಗಳ ಹೆಣ್ಣು ಮಕ್ಕಳು ಹೊರಗೆ ಇಣುಕಿ ಬೀದಿ ನೋಡಲು ಆರಂಭಿಸಿದಾಗ ಸಹಿಸಲಾಗದ ಸಂಕಟ ಉಂಟಾಗಿ ಆ ಜನರನ್ನು ಮತ್ತದೆ ಸ್ಥಾನಕ್ಕೆ ಒಯ್ದು ಅಲ್ಲಿ ನಿಲ್ಲಿಸಿ ಗುರುತಿಸುವ ಪ್ರಯತ್ನ ಮಾಡುತ್ತಾರೆ. ಆದರೆ ಕಾಲ ಕ್ರೂರಿಯಲ್ಲ ನಿಂತಲ್ಲೇ ನಿಂತು ಮೋಜು ಮಾಡಿದ ಮಂದಿಯ ಮೋಜನ್ನೇ ನೋಡುತ್ತಾ ನಿಂತಿಲ್ಲಾ ತನ್ನ ಕಕ್ಷೆಯೊಳಗೆ ತಿರಗುತ್ತಾ ಹೊರಟಿದ್ದಾನೆ ಮೇಲಿದ್ದವರೀಗ ಕೆಳಗಾಗುವ ಸ್ಥಿತಿ ಕೆಳಗಿದ್ದವರು......? ಈ ಕಾದಂಬರಿಯ ಘಟನೆ, ವ್ಯಕ್ತಿಗಳು ಎಲ್ಲವೂ ಇಮ್ಯಾಜಿನೇಟಿವ್ (ಕಾಲ್ಪನಿಕ). ಯಾರಿಗಾದರು ಅನ್ವಯಿಸಿದ್ದಲ್ಲಿ ಅದು ಕಾಕತಾಳೀಯ ಮಾತ್ರ. ಮುನ್ನುಡಿ ಬರೆದುಕೊಟ್ಟ, ಪ್ರೊ. ಕೃಷ್ಣಮೂರ್ತಿ ಹನ್ನೂರ್, ಬೆನ್ನುಡಿ ಬರೆದ ಡಾ. ಜಿ.ಆರ್. ತಿಪ್ಪೇಸ್ವಾಮಿ, ಚಿತ್ರ ಬರೆದ ಗೆಳೆಯರಾದ ಖಾನ್-ಮೋಹನ್, ಮುದ್ರಿಸಿದ ತಾರಾ ಪ್ರೆಸ್‌ನ ಮಾಲೀಕರಾದ ಶ್ರೀ ಶಶಿಕುಮಾರ್ ಅವರಿಗೂ, ಡಿ.ಟಿ.ಪಿ. ಸಿಬ್ಬಂದಿಯವರಿಗೂ ಹೃತ್ಪೂರ್ವಕ ವಂದನೆಗಳು.

- ಶಾಂತನಾಯ್ಕ ಶಿರಗಾನಹಳ್ಳಿ

ಭಾಷೆಯ ಆಕರ್ಷಣೆ

ಶಾಂತನಾಯ್ಕ ಶಿರಗಾನಹಳ್ಳಿ ಅವರ 'ಕತ್ತಲು ಕರಗುವ ಮುನ್ನ' ಕಾದಂಬರಿಯ ಉದ್ದಕ್ಕೂ ಧಾರವಾಡದ ಉಪಭಾಷೆಯನ್ನು ಬಳಸಿರುವುದೇ ವಿಶೇಷ ಆಕರ್ಷಣೆ. ಇಲ್ಲದಿದ್ದರೆ ಈ ಕೃತಿಯ ಕಥೆಯೂ ಕೂಡ ಈಗಾಗಲೇ ಹತ್ತಾರುಬಾರಿ ಪ್ರಯೋಗ ಗೊಂಡಿರುವ ವಸ್ತುಗಳ ಪೈಕಿ ಒಂದಾಗಿ ಬಿಡುತ್ತಿತ್ತೇನೋ ಎನಿಸುತ್ತದೆ. ಅನೇಕ ಬಾರಿ ಭಾಷೆಯ ವಿಶಿಷ್ಟ ಪ್ರಯೋಗದಿಂದಲೇ ಕಥೆಗೆ ಒಂದು ಹೊಸತನ ಬಂದು ಬಿಡುವ ಸಾಧ್ಯತೆ ಇರುತ್ತದೆ. ಸಾಮಾನ್ಯವಾಗಿ ವಿದ್ಯಾರ್ಥಿ ದಿಸೆಯ ಅನುಭವಗಳನ್ನು ಇಲ್ಲ ಬಾಲ್ಯ ಕಾಲದ ವಿವರಗಳನ್ನು ಹೇಳಿಕೊಳ್ಳುವುದು ಆರಂಭಿಕ ಲೇಖಕರ ಕೃತಿಗಳ ವಸ್ತುವಾಗಿರುತ್ತದೆ. ಹಾಗಾಗಿ ಅಲ್ಲೆಲ್ಲಾ ಪುನರಾವರ್ತನೆ ಸಹಜವೇ! ಬಾಲ್ಯ ಕಾಲದ ನೆನಪನ್ನು ಕೊಡುವುದಾದರೆ ಆ ಪರಿಸರವನ್ನು ಕಟ್ಟಿಕೊಡುವುದು, ವಿದ್ಯಾಭ್ಯಾಸ ಕಾಲದ ಅನುಭವಗಳಾದರೆ ಹೆಣ್ಣಿನ ಜತೆಯ ಪ್ರೇಮ ವ್ಯವಹಾರವನ್ನು ಹಂಚಿಕೊಳ್ಳುವುದಾಗಿ ರುತ್ತದೆ. ಈ ಬಗೆಯಲ್ಲಿ ಅನೇಕ ಕೃತಿಗಳು ಆಗಿ ಹೋಗಿಬಿಟ್ಟಿವೆ.

ಶಾಂತನಾಯ್ಕ ಶಿರಗಾನಹಳ್ಳಿಯವರ ಕಾದಂಬರಿಯ ವಸ್ತುವೂ ವಿದ್ಯಾರ್ಥಿ ಮತ್ತು ಆ ಮುಂದಿನ ಉದ್ಯೋಗ ಪರ್ವದ್ದಾದರೂ ಇಲ್ಲಿಯ ಮುಖ್ಯ ಆಕರ್ಷಣೆ ಭಾಷೆಯೇ. ಸಾಮಾನ್ಯ ವರ್ಗದಲ್ಲಿ ಹುಟ್ಟಿ ಅಲ್ಲಿ ತಾಂಡವವಾಡುವ ಬಡತನದ ಮಧ್ಯೆ ಶಿಕ್ಷಣ ಪಡೆಯುವುದರೊಂದಿಗೆ ಪ್ರೇಮಸಂಗತಿಗಳನ್ನು ಅಲ್ಲಿ ತಳುಕು ಹಾಕಿಕೊಂಡಿವೆ. ಆದರೆ ಒಮ್ಮೊಮ್ಮೆ ವಿವರಗಳು ವಾಚ್ಯದ ನೆಲೆಯಲ್ಲೇ ಪ್ರವಹಿಸತ್ತವೆ. ಕಥಾನಾಯಕನ ಸ್ವಗತ ಲಹರಿ ಎಂಬಂತೆ ನಡೆಯುವ ಕಥಾನಕ ತಂತ್ರ ಸಮರ್ಥವಾಗಿದೆಯಾದರೂ ಆತನಿಗೆ ಮುಖಾಮುಖಿಯಾಗುವ ಘಟನೆಗಳು ಚಿತ್ರವತ್ತಾಗಿ ಮೂಡಬೇಕಿದ್ದಿತಷ್ಟೆ. ಅಂದರೆ ಅಧ್ಯಾಪಕ ಪ್ರಭುವಿಗೆ ಹೆಣ್ಣುಮಕ್ಕಳ ಜತೆಗಿರುವ ಸ್ನೇಹವನ್ನು ಇತರ ವಾರಿಗೆಯ ಅಧ್ಯಾಪಕರು ತಪ್ಪಾಗಿ ಅರ್ಥೈಸುತ್ತಾ ಹೋಗುತ್ತಾರೆ. ಅದರಿಂದ ಅನೇಕ ಅನರ್ಥ ಪರಂಪರೆಗಳು ಸೃಷ್ಠಿಯಾಗುತ್ತಾ ಅಲ್ಲಿಂದ ಕಾಲು ಕೀಳುವ ಕಥಾನಾಯಕ ಚುನಾವಣೆಗೆ ನಿಲ್ಲುತ್ತಾನೆ.

ಪ್ರೇಮದ ಹಂತದಿಂದ ಕಥೆ ಚುನಾವಣೆಯ ಹಂತಕ್ಕೆ ಜಿಗಿಯುವುದು ಬಹುಶಃ ಪ್ರೇಮ ವ್ಯವಹಾರದಲ್ಲಿ ಪ್ರಧಾನ ಪಾತ್ರವಹಿಸುವ ಜಾತಿ ವ್ಯವಸ್ಥೆ, ಚುನಾವಣೆಯಲ್ಲಿ ಅದೇ ಜಾತಿ ವ್ಯವಸ್ಥೆ ಹಣದೊಂದಿಗೆ ಸೇರಿಕೊಂಡು ಹೇಗೆ ರಾಕ್ಷಸ ಸ್ವರೂಪಿಯಾಗಿ ಎದುರು ನಿಲ್ಲುತ್ತದೆ ಎಂಬುದನ್ನು ಹೇಳುವುದಕ್ಕೋಸ್ಕರವೇ ಚುನಾವಣೆಯ ಚಿತ್ರವನ್ನು ಲೇಖಕರು ತಂದಂತೆ ಕಾಣಿಸುತ್ತದೆ. ಚುನಾವಣೆಯ ವಿವರಗಳು, ಲೇಖಕರು, ಆರಂಭಕ್ಕೆ ಪ್ರಸ್ತಾಪಿಸುವ ಪ್ರೇಮ

ವ್ಯವಹಾರಕ್ಕಿಂತಲೂ ಹೆಚ್ಚು ಜೀವಂತವೆನಿಸುತ್ತವೆ. ಅದೇ ಜಾತಿವ್ಯವಸ್ಥೆ ಗುಂಪುಗಾರಿಕೆ ಯೆಂಬುದು ಶಿಕ್ಷಣ ಸಂಸ್ಥೆಗಳಲ್ಲೂ ಹೇಗೆ ಅನರ್ಥ ಪರಂಪರೆಗಳನ್ನು ಸೃಷ್ಟಿಸುತ್ತದೆ ಎಂಬುದರೊಂದಿಗೆ ಮುಂದುವರೆಯುವ ಕಾದಂಬರಿ, ಕಥಾನಾಯಕನ ನಿರುದ್ಯೋಗ, ನಿರಾಶೆ, ಒಂಟಿತನಗಳಲ್ಲಿ ಮುಕ್ತಾಯವಾಗುತ್ತದೆ. ಪ್ರತಿಭಾವಂತನೆನಿಸಿಕೊಂಡರೂ ಆ ವಿದ್ಯಾರ್ಥಿ ಇಲ್ಲವೇ ಅಧ್ಯಾಪಕನನ್ನು ತನಗೆ ಬೇಕಾದ ಕಾರಣಗಳಿಗಾಗಿಯೇ ವ್ಯವಸ್ಥೆಯು ಹೇಗೆ ವಿಕೃತವಾಗಿ ನೋಡುತ್ತಾ ಹೋಗುತ್ತದೆ ಎಂಬ ವಿವರಗಳು ಕಾದಂಬರಿಯ ತುಂಬ ಇದ್ದು, ವಿದ್ಯಾರ್ಥಿ ಅಥವಾ ಆ ದಿಸೆಯನ್ನು ಮುಗಿಸಿ ಹೊರಬಂದ ಒಬ್ಬ ಕೆಳವರ್ಗದ ವ್ಯಕ್ತಿಯ ನೆಲೆ ಯಾವುದಿರಬಹುದು ಎಂಬುದನ್ನು ಕಾದಂಬರಿ ತನ್ನ ಅಂತ್ಯದಲ್ಲಿ ಹಿಡಿದಿಡು ತ್ತದೆ. ಅಂದರೆ ಯಾವುದೇ ನೆಲೆಯಲ್ಲೂ ಭರವಸೆ ಕಳೆದುಕೊಂಡಿರುವ ಯುವ ಸಮೂಹ ಇಂದು ತಾಳಬೇಕಾದ ನಿಲುವು ಏನು? ಸಮಸ್ಯೆಗಳನ್ನು ಎದುರಿಸಲು ಅವರು ವಹಿಸಬೇಕಾದ ಧೈರ್ಯ ಯಾವ ಬಗೆಯದು ಎಂಬ ಪ್ರಶ್ನೆಗಳಲ್ಲಿ ಕೃತಿ ಕೊನೆಯಾಗುತ್ತದೆ. ಕಥಾನಕದಲ್ಲಿ ಏಕಸೂತ್ರತೆ ಇರುವುದು ಅದರ ಭಾಷೆಯಲ್ಲಿ ಆದರೆ ಕಥೆಯ ಕೆಲವು ಸಂದರ್ಭಗಳಲ್ಲಿ ಶಿಥಿಲತೆ ಏರ್ಪಡುತ್ತದೆ. ಆದರೆ ಇದನ್ನೆಲ್ಲ ಶಾಂತನಾಯ್ಕ ಶಿರಗಾನಹಳ್ಳಿಯವರು, ತಮ್ಮ ಮುಂದಿನ ಬರವಣಿಗೆಯಲ್ಲಿ ನೀಗಿಕೊಳ್ಳಬಹುದಾದ ಮತ್ತು ಬದುಕಿನ ಬೇರೆ ಬೇರೆ ಅನುಭವಗಳನ್ನು ಹಿಡಿದುಕೊಡ ಬಹುದಾದ ಶಕ್ತಿಯುಳ್ಳವರಾಗಿದ್ದಾರೆ ಎನಿಸುತ್ತದೆ.

- ಕೃಷ್ಣಮೂರ್ತಿ ಹನೂರು.

ಧರೆ ಹತ್ತಿಉರಿದೊಡೆ

ಆಜಾದ್ ಪಾರ್ಕಿನ ಮೂಲಿಯೊಳಗ ಕುಂತವನಿಗ ಯಾಕೋ ಸಮಾಧಾನ ಆಗಲಿಲ್ಲಾ. ಸ್ವಲ್ಪಹೊತ್ತು ಅವಾಗ ತಾನೆ ಅರಳಾಕ ಹತ್ತಿದ್ದ ಗುಲಾಬಿಗಳನ್ನ ನೋಡಬೇಕು ಅನಿಸಿತು. ಆದ್ರ ನೋಡಾಕ ಹೋಗ್ಲಿಲ್ಲಾ. ಎದ್ದವನೆ ಸೀದಾ ಗಾಂಧಿಚೌಕದ ಕಡೀಗ ನಡೆದ. ಲೈನ್ ಬಜಾರ್ ತುಂಬ ಮಂದಿ ತುಂಬ್ಕೊಂಡಿದ್ಕ ಬೂಸಪ್ಪ ಚೌಕದ ಹತ್ರ ಬಂದೊಡನೆ, ಚೌಕದ ನಡಕ್ಕ ಕುರ್ಚಿ ಮ್ಯಾಲ ಕುಂತ್ಕೊಂಡಿರೊ ಆ ಮೂರ್ತಿಯನ್ನ ನೋಡಿ "ಪಾಪ ಈ ಮನುಷ್ಯಗ ದಿನಾ ಕುಂತ್ಕೊಂಡು ಬೇಜಾರ ಆಕೈತೋ ಇಲ್ರೊ" ಅಂತ ಮಾತಾಡಿಕೊಳ್ತಿದ್ದು ನೆಪ್ಪಾತು. ಅದ್ಯಾವುದು ಮನಸ್ಸಿನೊಳಗ ಹೊಂಟಿರಲಿಲ್ಲಾ, ಅಲ್ಲೆ ಪಕ್ಕದಾಗಿನ ಹೋಟೆಲಿಗ ಹೋಗಾಕು ಅಂತ ಕಿಸೆ ತಡಕಾಡಿದ ಮೂಲ್ಯಾಗ ಚಿಲ್ಲರೆ ಬಡೀತು ಚಹನಾರು ಕುಡದ್ರ ಆತು ಅಂದ್ಕೊಂಡ. ಮೂರ ದಿನದಿಂದ ಹೊಟ್ಟೆಗ ಏನೂ ಇಲ್ದೆ ಬಹಳ ಹಸದಿತ್ತು, ಸೀದಾ ಮಂದಿ ಗೊಂದಲ ಇಲ್ಲದ ಟೇಬಲಿಗ ಹ್ವಾದವನೆ ಚಹಕ ಆರ್ಡರ್ ಮಾಡಿ ಕೈತೊಳ್ಕೊಂಡು ಬೈನ್ನಹತ್ತಿರೋ ನೆನಪಿನ ಪಾತಾಳಕ್ಕ ಇಳಿದೆ ಬಿಟ್ಟ.

ಯಾವದೋ ಹಳೇ ಹಿಂದಿ ಹಾಡು ಹತ್ತಿತ್ತು ಅದರ ಗುಂಗಿನೊಳಗಿದ್ದ ಅವನನ್ನ ಚಹ ತಂದ ಹುಡುಗ ಎಚ್ಚರಿಸಿದಾಗ ಗಡಿಬಡಿಯಿಂದ ವಾಸ್ತವಕ್ಕೆ ಬಂದಿದ್ದ. ಚಹದ ಕಪ್ಪಿನೊಳಗಿಂದ ಹೊಗೆ ಹೊರಟಹೋಗ್ತಿರೋದನೆ ನೋಡತೊಡಗಿದ, "ಬದುಕಿನೊಳಗ ಎಲ್ಲವೂ ಹಿಂಗೆ ಅಲಾ, ಗೊತ್ತಿಲ್ದೆ ಎಲ್ಲವು ಕಾಣೆಯಾಗಿ ಹೊಕ್ಕಾವ, ನನ್ನ ಆ ದಿನಗಳು ಎಂಥವು". ಗೊತ್ತಿಲ್ಲದೆ ಎದಿಯೊಳಗಿಂದ ಉಸಿರು ಹೊರಗ ಬಂದಿದ್ದೆ ಭ್ರಮನಿರಸವಾಗಿತ್ತು. ಯಾರನ್ನ ತಾನು ತಮ್ಮಂತಹ ಮಂದಿಪರ ಅಂತ ಅಂದ್ಕೊಂಡಿದ್ನೋ ಆ ಮಂದಿ ಬರಿ ಹೆಸರಿಗಾಗಿ ಪರದಾಡೋ ಗೋಸುಂಬಿ ಅಂತೋರು ಅಂತೇಳಿ ತಿಳಿದಾಗ ದಿಕ್ಕೆ ತಪ್ಪಿಹೋಗಿತ್ತು. "ಕ್ರಾಂತಿ" ಎಲ್ಡ ಸಲ ಒದರಿದವನೆ ಸಿಟ್ಟಿಂದ ಚಾ ಕಪ್ಪ ಎತ್ಕೊಂಡು ಬಿಸಿ ಬಿಸಿ ಚಾ ಸುರ್ರಂತ ಎಳ್ಕೊಂಡು "ಕ್ರಾಂತಿ" ಮಾಡೋನ ಅಂತೇಳಿ ಅಂದಿದ್ದ ಪ್ರೊ. ಕಂಪಣ್ಣ ಅವರ ಮೇಲಿನ ಸಿಟ್ಟು ವ್ಯಕ್ತಪಡಿಸಿದ. ಅವನೊಳಗಿನ ಹೊಯಿದಾಟ ಕಮ್ಮಿ ಆಗಲಿಲ್ಲಾ, ಯಾಕಂದ್ರ ಅಂವ ಎಂ.ಎ. ಅಂತಿಮ ವರ್ಷದಲ್ಲಿ ಫೇಲಾಗಿ ಮೂರು ದಿನಗಳಾಗಿದ್ದು. ಅಂದ್ಕೊಂಡಿದ್ದೆಲ್ಲಾ ಮಾಯವಾಗಿ ಹೋದಂಗಾಗಿ ಹುಚ್ಚು ಹಿಡಿದಿತ್ತು. ಡಿಪಾರ್ಟಮೆಂಟಿನ ಕ್ಲಾರ್ಕ್ ಅಡಿವೆಪ್ಪನ ಮುಂದ ಹಸುಗೂಸಿನಂಗ ಗೋಳೋ ಅಂತ ಅತ್ತಿದ್ದ. ಅವನಿಗೆ ಮೊದಲು ಸಿಟ್ಟು ಬಂದಿದ್ದು ತನ್ನ ಮ್ಯಾಲ ಯಾಕಂದ್ರ ಊರ ಉಸಾಬರಿ ಬಿಟ್ಟು ಮಾಸ್ತರ ಮಂದಿ ಹಿಂದ ಬಾಲ ಬಡ್ಕೊಂತ ಅಡ್ಡಾಡಿ" ಸರ್ ಆಕಿ ಹಂಗೇ. ಆ ಮಾಸ್ತರಗ ಕಲಸಾಕ ಬರಂಗಿಲ್ಲಾ, ಅಂವ ಹಿಂಗಂದ ಅಂತೇಳಿ ಬೂಸಿಕಿಟ್ಯಾನ ಹಂಗೆ ಮಾಡ್ಕೊಂತ ಅಡ್ಡಾಡಿದ್ರ ಪಾಡಿತ್ತು ಅನಿಸಿತು.

ಅಂವ ಅಂದ್ರ ಈ ಕತೆಯನಾಯಕ ಹಿತ್ಲಮನಿ ಪ್ರಭು. ಜಗತ್ತಿನ ಮಂದಿಯೊಳಗೆ ಕೀಳಜಾತಿಯೋನು ಬಡತನ, ಅವಮಾನ ಸಹಿಸಿ ಸಾಕಾಗಿ ಅವನಪ್ಪ ಅವ್ವ ದೂರದೂರನ್ನ ಬಿಟ್ಟುಗುಳೆ ಬಂದು ಜೀವೂರ ತಾಂಡದಾಗ ತಮ್ಮದೆ ಆದ ಒಂದ ಗುಡಿಸಲ ಹಾಕ್ಕೊಂಡು ಅಡವಿಯೊಳಗ ಹೊಲ ಇಲ್ಲ ಊರಾಗ ಮನಿ ಇಲ್ಲದ ಸ್ಥಿತಿಯೊಳಗ ಅದೆಂಗೊ ತಲೆಎತ್ತಿ ನಿಲ್ಲೋ ಛಲದಿಂದ ಅವನಪ್ಪ ಪತ್ಲೆಪ್ಪನಾಯ್ಕ ಹಗಲು ರಾತ್ರಿ ಒಂದಮಾಡಿ ದುಡದಿದ್ದ. ಗುಡಿಸಲಾಗ ಹಿಂಡಮಕ್ಕಳು ಒಂದೆಲ್ಡ ಎತ್ತು, ಎಮ್ಮಿ ಕರ, ಆಡು, ನಾಯಿ ಜೋತಿಗವಾಸ. ಪ್ರತಿದಿನ ಕೂಲಿಮಾಡೆ ಬದಕಬೇಕು ಇಲ್ಲಾಂದ್ರ ಉಪವಾಸಾನೆ ಗತಿ. ಒಂದೊಂದ ದಿನ ಹುಳ್ಳಿಕಾಳುಗುಗ್ಗರಿ, ತೊಂಡಿಸಪ್ಪಬೇಯಿಸಿ ತಿಂದಬದುಕಿದ್ರು. ಹುಡ್ರುಹೊಟ್ಟೆ ಹಸದ ಕಂಗಾಲಾದಾಗಂತು ತಿನ್ನೋರ ಬಾಯಿ ಆಡೋದನ್ನ ನೋಡ್ತ ನಿಂತ ಬಿಡ್ತಿದ್ದು. ಜೀವೂರ ತಾಂಡದ ಸಾಲಿ ಮಾಸ್ತರ ಕಂಟುಭಟ್ಟ ತರ್ತಿದ್ದ ಊಟಕ್ಕಾಗಿ ಪ್ರತಿದಿನ ಸಾಲಾಗಿ ನಿಲ್ತಿದ್ದು, ಅದ್ರಾಗ ಹಿತ್ಲಮನಿ ಪ್ರಭುನೂ ಒಬ್ಬಾಂವ ಮಾಸ್ತರ ಅನ್ನದ ಜೋಡಿ ಚೀಪಿಬಿಸಾಡಿದ್ದ ಮಾವಿನಕಾಯಿಗೊರಟನ್ನ ಪ್ರಭು ಎತ್ಕೊಂಡು ಜಗದುಜಗದು ಅಡಗಿಆಗೋಮಟ ಟೈಂಪಾಸ್ ಮಾಡ್ತಿದ್ದ. ಸಂಜಿಮುಂದ ರಾಗಿ ಅಂಬಲಿ ಕುಡದು ಹಾಸಗಿ ಸೇರಿದ್ರ ಮತ್ತೆ ಮುಂಜಾನಿಗ ಅದೇ ಹೋರಾಟ. ಅವರಮಂದಿ ಅಸಹಾಯಕತೆ ಉಪಯೋಗ ಪಡ್ಕೊಂಡಿದ್ದ ಪಾಪಾಪೂರದ ತೆವರೆಗೌಡ ಅಚ್ಚೇರರಾಗಿಯೊಳಗ ಅರ್ಪಾವಿನಾಟು ಮಣ್ಣ ಸೇರ್ಸಿ ಕೂಲಿಕೊಡ್ತಿದ್ದ. ಅವನ ಮಗ ದಿಂಬೇಗೌಡ ತಾಂಡದ ಹುಡುಗಿಯರನ್ನ ಹೆಂಗಬೇಕೊ ಹಂಗ ಬಳಸಿಕೊಳ್ತಿದ್ದ. ಯಾ ಹುಡುಗಿ ಮದ್ಲ ಸಾಲದಾಟತಾಳೋ ಆಕೀನ ಪಕ್ಕದ ದೊಡ್ಡಜ್ವಾಳದ ಹೊಲಕ್ಕ ಒಯ್ದು ತೀಟೆ ತೀರಿಸಿಕೊಂಡು ಒಂದೆರಡ ರೂಪಾಯಿ ಇನಾಮು ಕೊಟ್ಟು ಗದಮುತ್ತಿದ್ದ. ಆಟಕ್ಕೆ ತೃಪ್ತಿ ಪಡೊ ಮಂದಿ ಪಡಿಪಾಟ್ಲ ತಿಳಿದ ಪ್ರಭು ಪತ್ಲೆನಾಯ್ಕನ ಹಂಗೆ ಸ್ವಾಭಿಮಾನಿ ಕಸುಕಿತ್ತು ಬೆಳಿಬೇಕು ಅಂದ್ಕೊಂಡವನೆ ಎಲ್ಲಾ ತಯಾರಿ ನಡೆಸಿದ್ದ.

ಗೌಡರ ಹಾವಳಿಗ ತಾಂಡದ ಮಂದಿ ಬ್ಯಾಸತ್ತಿದ್ರು, ಅವನ ಸಣ್ಣ ಮನಿಸಿನ ಮ್ಯಾಲ ಎಲ್ಲಾನು ಪರಿಣಾಮ ಬೀರಿದ್ದು. ಅಂವss ಕೂಲಿ ಕೆಲ್ಸಕ ಹೋಗ್ತಿದದ್ದು, ಅವನು ಮೆಟ್ರಿಕ್ ಓದೊ ಮುಂದ ಫೀ ತುಂಬಾಕ ರೊಕ್ಕ ಇಲ್ಲದಕ ಅವನ ಅಣ್ಣಂದಿರು ಎಷ್ಟೋವರ್ಷಗಳಿಂದ ಮುಳ್ಳಿನ ಗಿಡ ಬೆಳದಿದ್ದ ಬಸರನ ಗದ್ದೆಯನ್ನ ಮುಳ್ಳ ಕಡಿಯಾಕ ಗುತ್ತಿಗಿಹಿಡದು ಕಡದು ರೊಕ್ಕ ಕೊಟ್ಟಿದ್ದು, ಪಟೇಲ ಸಿರಂಗಣ್ಣನ ಗದ್ದಿನಾಟಿ ಹಚ್ಚಾಕ ಗುತಗಿ ಹಿಡದು ನಾಟಿಹಚ್ಚೋ ಮುಂದ ಸಿರಂಗಣ್ಣ ರೂಪಾಯಿಕೊಟ್ಟು ಸಿಗರೇಟ ತರಾಕ ಪ್ರಭುಗ ಕಳಸಿದ್ದ ಹೊಟ್ಟೆ ಹಸದಿದ್ಕ, ಚಿಲ್ಲರೆ ಕೊಡದೆ ಕಾರಮಂಡಕ್ಕಿ ತಿಂದಿದ್ದ ಪಾಟೀಲ ಇಡಿ ತಾಂಡವ ಮಂದಿ ಮುಂದ ಅವಮಾನ ಮಾಡಿದ್ದ, ದನಕಾಯೋಮುಂದ ಮೇಕೆ ತಿನ್ನೋ ಪತ್ರಿಗಿಡದ ಹಣ್ಣು, ಚೆಪ್ಪಲುಚೆಂಡು, ಘೋಲಾಬಳ್ಳಿ ಕುಡಿತಿಂದದ್ದು ನೆನಪಿನಲ್ಲಿಟ್ಟು ಪ್ರಭು ಹಾಡು, ನಾಟಕ, ಕತಿ, ಕವನ ಬರದು ಇಡೀ ಕಾಲೇಜಿನ್ಯಾಗ ಹೆಸರ ಮಾಡಿದ್ದ. ಅವನ ಹೆಸರ ಕೇಳಿದ ಮೇಷ್ಟ್ರುಗಳು ಮಾರಿಸಿಂಡರಿಸಿಕೊಂಡು, "ಲೇ ನಿಮಗ ಏನಾಗ್ಯತ್ರಲೇ, ಅಲ್ನೋಡ್ರಿ

ಅಂವ ಅದ್ಯಾವದೋ ಕೆಟ್ಟ, ಜಾತಿಯೋನು ನಿಮ್ಮನ್ನ ತುಳಿದು ಮ್ಯಾಲ ಹೊಂಟಾನ "ಅಂದು ಪ್ರಭು ಮೇಲಿನ ತಮ್ಮ ಸಿಟ್ಟನ್ನ ಕಡಮಿಮಾಡ್ಕೊಂತಿದ್ರು.

ದ್ರೋಣಂಗೆ ಹೆಬ್ಬೆಳ್ಳು ಕೊಟ್ಟ ಏಕಲವ್ಯನಿಗೂ ಆಗದಷ್ಟು ಸಂಕಟನೋವು ಅವನಿಗಾಗಿತ್ತು. ಅಲ್ಲಿ ಅವನ ಸಮಕ್ಷಮ ಅವನ್ನ ಕೇಳಿ ಬೆಳ್ಳು ಪಡ್ಕೊಂಡಿದ್ದ ದ್ರೋಣ. ಆದ್ರೆ ಅದೇ ಜಾತಿ ಇವತ್ತು ಎಂಥ ನೀಚ ಕೆಲ್ಸ ಮಾಡಿಸಿತ್ತು. ಆ ದ್ರೋಣ, ಏಕಲವ್ಯರು ಗಳು ಸತ್ತಿಲ್ಲ ಇನ್ನೂ ಜೀವಂತವಾಗೇ ಅದಾರನಿಸಿತು, ಎಲ್ಲಿವರಿಗ ಈ ಶೂದ್ರರ ಬೆಳ್ಳುಗಳನ್ನು ಪಡದು ಯಾರನ್ನೋ ತೃಪ್ತಿಮಾಡ್ತಾರೆ ಇವರು, ಅವನಿನ್ನು ಯೋಚಿಸುತ್ಲೆ ಇದ್ದ. ಆ ಯೋಚನೆಗ ಕೊನಿ ಅನ್ನೋದೆ ಇಲ್ದಂಗ ಆಗಿತ್ತು. ಅದೆಲ್ಲಾ ತಿರಸ್ಕರಿಸ್ಕೊಂತ್ಲೆ ಬಂದಿದ್ದ ಪ್ರಭು ಕಡೀಗು ಜಾತಿವಾದಿ ಮಂದಿ ಕೈಯಾಗ ಒಂದ ವರ್ಷದ ತನ್ನ ಅವಕಾಶ ಹಾಳ ಮಾಡ್ಕೊಂಡಿದ್ದ. ಮದ್ಲ ವರ್ಷ ಎಲ್ಲಾ ಗಂಡ ಹುಡ್ರಿಗಿಂತ ಮೊದಲಿದ್ದೋನು ಎರಡನೇ ವರ್ಷದ ಎಂ.ಎ.ಯಲ್ಲಿ ನಪಾಸಾಗಿದ್ದ. ಮುಗಿಸಿಕೊಂಡು ಮತ್ತೆ ಮೇಲೆ ಹಾರಬೇಕು ಅಂತಂದು ಅಂದ್ಕೊಂಡಿದ್ದೋನ ಬಲಿತ ರೆಕ್ಕೆಗಳನ್ನು ಕಿತ್ತುಹಾರದಂಗ ಮಾಡಿದ್ರು ಅವನ ಮೇಷ್ಟ್ರುಗಳು.

ಅವನಹಂಗೆ ಎಲ್ಲ ವರ್ಷಗಳ ಕಾಲ ಅನುಭವ ಪಡೆದಿದ್ದ ಹುಡುಗರು ಅವನ ಕೈಯಾಗ ಕಡ್ಡಿಕೊಟ್ಟ ಹೇಳಿದ್ರು. "ನೋಡು ಪ್ರಭು ನಾವು ಎಷ್ಟೇ ಆದ್ರೂ ಕೆಳಗಿನ ಜಾತಿಯೋರು ಮೀಸಲಾತಿ ಪಡದು ಖಾಲಿಪುಕ್ಕಟ್ಟೆ ಸ್ಕಾಲರ್‌ಶಿಪ್ ತಗೊಂಡು ಶಿಕ್ಷಣ ಪಡಿಯಾಕ ಹತ್ತೀವಿ ಅಂತಂದು ಇಲ್ಲಿ ಮೇಷ್ಟ್ರು, ಹುಡ್ರು ನಮ್ಮ ಬಗ್ಗೆ ಆಡಿಕೊಳ್ತಾರ, ನಮ್ಮ ಕೂಡ ಪಾಡದಾರಂತ ನಾವು ಅಂದ್ಕೊಂಡ ನನಮಕ್ಕಳು ಮೇಷ್ಟ್ರುಹತ್ರಹೋಗಿ ಸಾರ್, ಅಂವ ಅದಾನಲ್ಲ ಪುಕ್ಕಟೆ ಸಾಲಿಕಲಿಯೋನು ಎನ್‌ಸೊಕ್ಕು ಬಂದೈತಿಸಾರ್, ಯಾವಾಗ ನೋಡಿದ್ರು ಹುಡುಗಿಯರ ಹಿಂದೆ ಸುತ್ತತಾನ ಅಂತಂದು ಚಾಡಿ ಹೇಳಿ ಬರ್‍ತಾರ ನಮಗಗೊತ್ತಾಗೋದೆ ಇಲ್ಲಾ. ನಾವು ಬಹಳ ಪಾಡ ಅದಾನ ದೊಡ್ಡ ಜಾತಿಯೋನು ನನ್ನ ಗೆಳೆಯ ಅಂತ ನಂಬತೀವಿ, ಆದ್ರ ಹಿಂದೆ ನಮಗ ಅವಮಾನ ಮಾಡ್ತಾರ ಆಡಿಕೊಳ್ತಾರ ಹೊಟ್ಟೆಕಿಚ್ಚು ಪಡ್ತಾರ. ಹಿಂದೇನೊ ಮಾಡಿದ್ದಾತು ಈಗ ಮಾತ್ರ ಒನ್ನೆ ಕ್ಲಾಸ್ ಹುಡ್ರಂಗ ಏನೂ ತಿಳಿದವನ ಹಂಗೆ ಇದ್ದುಬಿಡು." ಆತ ಹೇಳಿದಾಗ ಏನೂ ಅನಿಸಿರಲಿಲ್ಲಾ, ಯಾಕ ಮಾಡಬಾರ್ದು ವಿದ್ಯೆ ಯಾರಪ್ಪನ ಸ್ವತ್ತಲ್ಲಾ ಇದೊಂದು ಸ್ಪರ್ಧೆ ಪ್ರತಿಯೊಬ್ಬರಿಗೂ ಅವಕಾಶ ಐತಿ, ಬ್ಯಾರೆಜಾತಿಯವರಾದ್ರೇನು ಮೇಲ್ಜಾತಿಯವರ ಸರಿಸಮನಾಗಿ ಇರಬಾರ್ದು ಅಂತೇನಾರು ಐತೇನು? ಪ್ರಶ್ನಿಸಿಕೊಂಡಿದ್ದ. ತನಗ ಹ್ಯಾಂಗ ತಿಳಿತ್ತೈತೊ ಹಂಗೆ ಇರತೊಡಗಿದ. ಅದೇ ಅವನಿಗೆ ಕುತ್ತಾತು. ಅವನ ಸೀನಿಯರ್ ಕಾಂಬಳೆ ಬುದ್ಧಿವಂತ, ಅವನು ಪ್ರಶ್ನೆ ಕೇಳೋದಕ ಇಡಿ ಕ್ಲಾಸ್‌ನಲ್ಲಿ ವಿಚಿತ್ರವಾಗಿ ಕಾಣ್ತಿರಲಿಲ್ಲೆ. ಹುಡುಗಿಯರು ಅಂದ ತಕ್ಷಣ ಕರಗಿಹೋಗುವ ಬೆಣ್ಣೆಯಂತ ಬಾಯಿಯೊಳಗ ಹಲ್ಲು ಇಲ್ದಿರೋ ಮಾಸ್ತರಗಳು ನಾಚಿ ನೀರಾಗ್ತಿರಲಿಲ್ಲೆ. ಒಬ್ಬನಂತು ಸ್ಯಾಡಿಸ್ಟ್, ಮತ್ತೊಬ್ಬ ರಕ್ತದೊತ್ತಡದಿಂದಾಗಿ ತಾನೇನು ಮಾತಾಡ್ತೀನಿ ಅನ್ನೋ ಕಲ್ಪನೆಯೆ ಇರ್‍ತಿರಲಿಲ್ಲಾ, ಒಬ್ಬನಿಗೆ ಕೂಡಿಸಿ ಓದಲಾಗುತ್ತಿರಲಿಲ್ಲಾ

ಮತ್ತೊಬ್ಬ ಮಹಾನ್ ಜಾತಿವಾದಿ ಡಂಬಾಯದ ಹೋರಾಟಗಾರ. ಮಾತೆತ್ತಿದರೆ ಕ್ರಾಂತಿ ಎಂದೇ ಉಲಿಯುತ್ತಿದ್ದ. ಅವಾಗ್ಲೆ ಅವನಿಗೆ ಯಾವಾಗಲೂ ಕ್ರಾಂತಿ ಬಗ್ಗೆ ದೊಡ್ಡ ದೊಡ್ಡ ಮಾತುಗಳನ್ನಾಡುತ್ತಿದ್ದ ಪ್ರೊ. ಕಂಪಣ್ಣನವರ ಬಗ್ಗೆ ಗೌರವ ಹುಟ್ಟತೊಡಗಿತು. ಇಡೀ ಮನುಕುಲದ ನೋವನ್ನ ಅರ್ಥಮಾಡಿಕೊಂಡವರಂತೆ ಮಾತಾಡತೊಡಗಿದ್ರು. ಇಡೀ ವಿಶ್ವವಿದ್ಯಾಲಯದ ಹುಡ್ರೆಲ್ಲಾ ಈ ಜಾತಿಯವರಿಗ ಯಾಕ ಮೀಸಲಾತಿ ಅಂತೇಳಿ ಸಿಕ್ಕಲೆಲ್ಲಾ ಬೆಂಕಿ ಹಚ್ಚುವುದು ಮಾರಾಮಾರಿ ಆರಂಭಿಸಿದ್ರು. ನನಗೆ ಯಾಕ್ಲೆ ಬೋಳಿ ಮಗನೆ ನಿಮ್ಮಪ್ಪಂದ ಪುಸ್ತಕ ಅಂತೇಳಿ ಹೀಯಾಳಿಸಿದ್ದ ಪ್ರೊಫೆಸರ್ ಅನ್ನಾರು ಹಿರಿಮಗಳು ನೋಡಾಕ ಯಲ್ಲಮ್ಮನ ಕೊಡ ಹೊರುವ ಸೌದತ್ತಿ ಗಂಡ ಜೋಗತಿಗಿಂತ ಕಡೀಗ ಇರೋಕಿ ಹುಡ್ರನ ಸೇರಸಿ ಮಂಡಲ್ ವರದಿ ಅಂತಂದ್ರ ಏನೂ ಅಂತೇಳಿ ತಿಳಿಯದೆ ಸುಕಾಸುಮ್ಮನೆ ದಾಂದ್ಲಿ ಮಾಡ್ತಾ ಇಡಿ ವಿಶ್ವವಿದ್ಯಾಲಯ ಬಂದ್ ಮಾಡ್ಸಿದ್ರು. ಗಲಾಟೆಯೊಳಗ ಇದ್ದೋರೆಲ್ಲಾ ಹುಂಬರೆ. ಯಾರೊಬ್ಬರಿಗೂ ಸರಿಯಾದ ಮಾಹಿತಿ ಇಲ್ಲದೆ ಅಧ್ಯಯನ ಇಲ್ಲದೆ ಇಡಿ ಇಂಡಿಯಾದ ತುಂಬೆಲ್ಲಾ ಹೋರಾಡಿದವರು ಕೆಳಜಾತಿ ಮಂದಿಯೇ, ನಮ್ಮ ಮಂದಿಯನ್ನ ವ್ಯವಸ್ಥಿತವಾಗಿ ಹಾದಿ ತಪ್ಪಿಸುವ ಶಕ್ತಿಗಳ ಬಗ್ಗೆ ಈ ಮಂದಿ ಇನ್ನೂ ತಿಳಿಯೋದಿಲ್ಲಾ ಅಂದ್ರ ಏನು ಹೇಳಬೇಕಂತ ತಿಳಿಯದಂಗಾಗಿತ್ತು, ನಮ್ಮನ್ನ ಆಳುವ ಶಕ್ತಿ ನಮಗಿಂತ ಘನಪಂಡಿತರು ಅವರು ಎಂದು ಅಕ್ಷರ ಸಂಸ್ಕೃತಿಯ ಗುತ್ತಿಗೆದಾರರನ್ನ ಪೋಷಿಸುತ್ತಿರುವ ಬುದ್ದಿಹೀನ ಕೆಳಗಿನ ಮಂದಿಯ ವರ್ತನೆ ಕಂಡು ನಕ್ಕಿದ್ದೆ. ಆದರೆ ನಾನೇನು ದೊಡ್ಡನಾಯಕನೆ ಈ ಮಂದಿಯನ್ನ ಜಾಗೃತರನ್ನಾಗಿ ಮಾಡಲು. ಹತ್ತು ಮಂದಿ ಹುಂಬರ ಗುಂಪಿನೊಳಗೆ ಮೆಲ್ಲಗೆ ನುಸುಳಿಕೊಂಡು ಹತ್ತು ಪಿತೂರಿಯ ಸುಳ್ಳಿನ ಮಂತ್ರಗಳನ್ನೋದಿ ಹತ್ತಾಗಿ ವಿಭಜಿಸಿ ಆಳ್ವಿಕೆ ಮಾಡುವ ನರಿಬುದ್ಧಿಯ ಜನರಿಗೆ ಶರಣಾಗಿರುವ ಬುದ್ಧಿಹೀನ ಮಂದಿಯ ಬಾಲಬಡಕುತನ ಕಂಡಾಗಲೇ ನನಗೆ ಪ್ರೊ. ಕಂಪಣ್ಣರ ಮಾತುಗಳು ಅತಿಯಾಗಿ ಹಿಡಿಸಿದ್ದು. "ಏಯ್ ಮೂಢ ಮನುಷ್ಯರೆ ಮಂಡಲ್ ವರದಿ ನೀವೇನು ಬೇಡಾ ಅಂತಂದು ಹೋರಾಡಾಕ ಹತ್ತಿರಲ್ಲಾ ಇದು ನಿಮಗ ನಿಮ್ಮ ಉಪಯೋಗಕ್ಕ. ಶತಶತ ಮಾನಗಳಿಂದ ಶೂದ್ರರಾಗಿ ಅತಿ ಶೂದ್ರರಾಗಿ ಚಿಪ್ಪಿನೊಳಗೆ ಕುಬ್ಜರಾಗಿ ಜೀವ ಸವೆಸುತ್ತಾ ಬಂದಿರೊ ನಿಮಗ ಅದೇ ಬದಕು ಪಸಂದ ಕಂಡೈತೋಹ್ಯಾಂಗ ಮಠದಾಗ ಕುತ್ಕೊಂಡು ಕೆತ್ತಾಬಾಜಿ ಮಾಡ್ಲೊ ಮಂದಿಗ ಹೇಳದೆ ಕೇಳದೆ ದುಡಿದಿದ್ದೆಲ್ಲಾವನ್ನ ಒಯ್ದು ಕೇಳ್ದಿದ್ರು ಕೊಡ್ತಿರಲ್ಲಾ ಏನ ಮಾಡ್ತಾರ ಆ ಮಂದಿ ಅದನೆಲ್ಲಾ ತಗೊಂಡು." ಅವರ ವಿಚಾರ ಲಹರಿ ಜೋರಾಗೆ ನಡದಿತ್ತು ನನಗೆ ಅರಿವಿಲ್ಲದೆ ಅವರು ನನ್ನೊಳಗೆ ಪರಕಾಯ ಪ್ರವೇಶ ಮಾಡಿದ್ದರು.

ಯೂನಿವರ್ಸಿಟಿಯೊಳಗ ಹರತಾಳ ವಿಕೋಪಕ್ಕ ಹೋಗಿತ್ತು, ನಾಕೈದು ಬಸ್ಸಗಳು ಸುಟ್ಟಿದ್ರು, ಹುಬ್ಬಳ್ಳಿ ರಸ್ತೆಯೊಳಗಿನ ಕಾಲೇಜೊಂದರ ಹುಡುಗಿ ಹೋರಾಟದ ಹೆಸರಿನೊಳಗ ಬೆಂಕಿ ಹಚ್ಚಿಕೊಂಡಿದ್ಲು. ಆಕಿಯಾಕ ಸತ್ಲು ಅಂತ ಇವತ್ತಿಗೂ ಗೊತ್ತಾಗಲೇ ಇಲ್ಲ. ಅಂಥ ಸ್ನಿಗ್ಧ ಸ್ಥಿತಿಯೊಳಗ ಪ್ರೊ. ಕಂಪಣ್ಣ ತರಗತಿ ತಗೊಂಡ್ರು. ಯಾವೊಬ್ಬ ನರಪಿಳ್ಳೆಯೂ ಬಂದಿರಲಿಲ್ಲಾ. ಪ್ರಭು ಮಾತ್ರ ಮೊದಲ ಸಾಲಿನೊಳಗ ಕುಂತುಪಾಠ ಕೇಳಾಕ ಹತ್ತಿದ್ದ.

ಹುಯ್ ಅಂತೇಳಿ ನುಗ್ಗಿದ ಮಂದಿಯೊಳಗಿನ ರೌಡಿಗಳ ಗುಂಪೊಂದು ಪ್ರೊ. ಕಂಪಣ್ಣರ ಮೈಕೈ ಮುಟ್ಟಿದಾಂದ್ಲೆ ಮಾಡಿತು. ಆ ರೌಡಿಗಳೆಲ್ಲಾ ಕರ್ನಾಟಕ ಕಾಲೇಜಿನಾಗ ಅವನೊಟ್ಟಿಗೆ ಕಲ್ತವರೇ ಆದ ಬಂಡೀನ್, ಕಡ್ಡಿ, ಮುಂತಾದ ಮತಾಂಧರೆ ಸೇರಿಕೊಂಡಿದ್ರು. ನಾನು ಅವರೆಲ್ಲಾ ಒಂದೇ ಹಾಸ್ಟೆಲಿನೊಳಗ ಇದ್ರೋರು. ಅವಾಗ್ಲೆ ಕಡ್ಡಿ ಬಾಲ ಬಿಚ್ಚಿದ್ದ ಜಾತಿ ವಿಷಬೀಜ ಬಿತ್ತುವುದರೊಳಗ ನಿಷ್ಣಾತನಾಗಿದ್ದ ಕಡ್ಡಿ ಭಾವಿನೇತ. ಹುಡ್ರಗುಂಪು ಕಟ್ಕೊಂಡು ಏನೇನೊ ಇಲ್ಲದ ಸಲ್ಲದ ಕೆಲ್ಸ ಮಾಡ್ತಾ ಹಜಾರ್ ಭಾನಗೇಡಿ ಮನುಷ್ಯ ಅಂತಂದು ಜಗ ಜಾಹಿರಾತು ಆಗಿದ್ದ. ಕಾಲೇಜಿನ ಮಾಸ್ತರೆಲ್ಲ ಭಾವಿ ರಾಜಕೀಯ ಪುಡಾರಿ ಅಂತಂದ್ದೆ ಗುರುತಿಸಿದ್ರು.

'ಕಡ್ಡಿ' ದೊಡ್ಡ ರಾಜಕೀಯ ಮನುಷ್ಯನಾಗೆ ಬಿಟ್ಟ. ಪ್ರೊ. ಕಂಪಣ್ಣ ಅವರ ಕೈಹಿಡದು ಅಂಗಿ ಹಿಡದು ದಾಂದ್ಲಿಮಾಡ್ತಿದ್ದ ಹುಡುಗರ ನಡುವೆ ನಾನು ಹೋಗಿ ಗಾಂಧೀಜಿ ತತ್ವ ಅನುಸರಿಸಿ ತಾಳ್ಮೆಯಿಂದ ಬಿಡಿಸಿಕಳುಹಿಸಿದೆ. ಅವಾಗ ನನ್ನೆದುರಿಗಿದ್ದದ್ದು ಒಂದೇ ಆದರ್ಶ ಪ್ರೊ. ಕಂಪಣ್ಣರ ಕಾದಸಲಾಕೆಯಂತ ಭಾಷಣದ ನುಡಿಗಳು. ಅವರೊಂದಿಗೆ ಹತ್ತುಹಲವಾರು ವಿಷಯಗಳ ಚರ್ಚೆಯಾಯಿತು. ಒಂದು ಹೊತ್ತು ಕೂಳಿಗಾಗಿ ಪರಿತಪಿಸಿದ ಆ ದಿನಗಳು, ಜಾತಿ ಹಗರಣದಿಂದಾಗಿ ಕಳ್ಕೊಂಡ ಅವಕಾಶಗಳು ಉಳ್ಳವರ ಮಧ್ಯಿಯೊಳಗ ನನಗೆ ಗೊತ್ತಿಲ್ಲದ ಪದಾರ್ಥಗಳನ್ನು ಉಂಡು ಸಿಕ್ಕಾಗ ಕಂಬಕ್ಕ ಬಿಗಿಸಿ ಕೊಂಡು ಹೊಡ್ತಾತಿಂದದ್ದು ಅದಕ್ಕೆ ದಂಡ ಅನ್ನೋ ಹಂಗೆ ಅಪ್ಪ ಒಂದು ವರ್ಷಕಾಲ ಅವರ ಮನಿಯಾಗ ದುಡದದ್ದು ನಮ್ಮೂರ ಹರೆಯದ ಹುಡುಗಿಯರನ್ನ ಕೆಲ್ಸಕಂತೇಳಿ ಕರ್ಕೊಂಡಹೋಗಿ ಕಾಮಕ್ರೀಡೆ ನಡಸೋ ಜಮೀನ್ದಾರರ ಲಂಡಹರಕ ಕೆಲಸ ಎಲ್ಲವನ್ನು ಸಾರಾಸಗಟಾಗೆ ವಿಚಾರ ಮಾಡುತ್ತಿದ್ದೆವು. "ನೋಡ್ರಿ ಮಿ. ಪ್ರಭು, ಎಲ್ಲಿ ಮಟ ಈ ಜನ ತಮ್ಮ ಪರಿಸ್ಥಿತಿ ಕುರಿತು ಯೋಚನೆ ಮಾಡೋದಿಲ್ಲೋ ದೇಶದಸ್ಥಿತಿ ಹಿಂಗೆ ಇರೋದು ಈ ಮಂದಿ ಹ್ಯಾಂಗ ಬದುಕ್ಯಾರಪ್ಪ ಅಂತಂದ್ರ ಈ ಹುಳಾಹುಪ್ಪಡಿಕ್ಕಿಂತ್ಲು ಹೀನಾಯವಾದ ಬದುಕು" ಅಂದವರೆ ಒಂದ ನಿಮಿಷ ಕಣ್ಣು ಮುಚ್ಚಿ ವಿಚಾರ ಮಾಡಿ ಮತ್ತವೇ ಮಾತುಗಳನ್ನು ಹೇಳತೊಡಗಿದರು. ಈ ನಾಡ ಮಂದಿ ಎಲ್ಲಾ ಹಿಂಗ ಯೋಚ್ನೆ ಮಾಡಿದ್ರ? ಆಗದ ವಿಚಾರ ಒಂದು ತಲಿಯೊಳಗ ಸುಳದುಹೋತು.

ಪ್ರೊ. ಕಂಪಣ್ಣ ಮಂಡಲ್‌ವರದಿ ಹೋರಾಟದಿಂದ ಬೆಳಕು ಹರಿಯೋದ್ರಾಗ ನಾಡಿನ ಮೂಲಿ ಮೂಲಿಯಲೊಳಗ ಹೆಸರಪಡದ್ರು. ಎಲ್ಲಾ ಪತ್ರಿಕೆಯ ಮುಖ ಪುಟಗಳಲ್ಲಿ ಅವರ ಭಾವಚಿತ್ರ ಭಾಷಣದ ಬೈಲೈನ್‌ಗಳೇ. ಅವರಿಗಿಂತ ಮದ್ಲು ನಮಗ ಖುಷಿಯಾಗಿತ್ತು. ಅದಾಗಿ ಬರಾಬರಿ ಒಂದು ವರ್ಷದನಂತರ ಇದ್ದಕ್ಕಿದ್ದಂಗೆ ತಮ್ಮ ಕಂತ್ರಿ ಬುದ್ಧಿ ತೋರಿಸೇಬಿಟ್ರು ಪ್ರೊ. ಕಂಪಣ್ಣ. ನಾನೊಬ್ಬನದೇ ಹಿಂಗ ಮಾಡಿದ್ರ ಅನುಮಾನ ಬಂದೀತು ಅಂತ ನಮ್ಮ ಹುಡುಗರು ಇಬ್ಬರು ಮೂವರನ್ನ ಫೇಲ್ ಮಾಡಿದ್ರು. ಯಾರನ್ನು ನಂಬಬೇಕು ಅನ್ನೋದೆ ತಿಳಿಲಿಲ್ಲಾ ಮಾನಸಿಕವಾಗಿ ಬಳಲಿದ್ದೆ, ಒಂದ ಕಡೆ ಆದರ್ಶ, ಮೌಲ್ಯ, ಕ್ರಾಂತಿ ಹೆಸರುಗಳನ್ನು ಹೇಳಿ ಪೂಸಿಹೊಡದು ಆಕಾಶಕ್ಕೆ ಏರೋ ಮಂದಿ. ಅಲ್ಲಿ ಊರಾಗ

ಹೊಟ್ಟಿಕಟ್ಟಿ ಮಕ್ಕಳಿಗ ಆದೀತಂತ ದುಡದ ದುಡದು ಏನೋ ಮಾಡಾಕಂತ ಹೊಂಟಿದ್ದ ಅಪ್ಪ, ಆದ್ರ ಮದ್ವಿ ಆಗಿ ಹೆಂಡ್ರುಮಕ್ಕಳನ್ನು ಕಂಡ ಅಣ್ಣಂದಿರು ಇನ್ನೂ ಮದ್ವಿ ಆಗಿ ಬಾಳ ಆರಂಭ ಮಾಡೋ ಮೂರನಾಕ ಮಂದಿ ಇರೋವಾಗ್ಲೆ ಒಂದಾಗಿದ್ದ ಮನಿಯನ್ನ ಛಿದ್ರಮಾಡಿ ಬಿಟ್ರು ಅಂತ ಸುದ್ದಿ ತಿಳೀತು. ಒಂದೇ ಸಲ ಎಲ್ಲ ಅಘಾತಗಳಾಗಿದ್ವು ಅವತ್ತ ನನಗ ಹುಚ್ಚು ಹಿಡಿತೈತಿ ಅನಿಸಿತ್ತು. ಹೆಂಗೋ ಪಾರಾಗಿ ಊರಿಗ ಓಡಿದೆ.

ಅಡಗಿ ಮಾಡಿ ಹಾಕೋ ಸ್ಥಿತಿಯಲ್ಲಿ ಅವ್ವ ಇರ್ಲಿಲ್ಲ ನಾನು ಉಳಿದ ತಮ್ಮಂದಿ ರಾದ ಜಂಬ, ಸಣ್ಣು, ಅಡಗಿ ಕಲ್ತು ಮನಿ ಕೆಲಸ ಮಾಡ್ತಿದ್ವಿ. ಯಾಕೋ ಹಾಳ ಮೈ ಬಿಸಲ ಕಂಡೊಡನೆ ಮುದರಿಕೊಳ್ಳಾಕ ಹತ್ತಿತು. ನಮ್ಮನ್ನ ಕೈಬಿಟ್ಟಹ್ವಾದ ಮಂದೀಗ ತೋರಿಸಬೇಕಂತ ಭಾರಾಡಿ ಕೆಲ್ಸ ಏನೋ ಮಾಡೋ ಯೋಚನೆ ಇತ್ತು ಅದ್ರ ಇರೋ ಎಲ್ಡ ಎಕ್ಕರೆ ಜಮೀನು ಒಂದ ಮಳಿ ಬಂದ್ರ ಒಂದು ಬರಂಗಿಲ್ಲಾ ಇನ್ನೇನ ಬೆಳದೀತು ನಾವೇನು ಉದ್ದಾರ ಆದೀವಿ, ಅಂದ್ಕೊಂಡಿದ್ದೆ ಉಳ್ಳೋರ ಹೊಲ್ದಾಗ ದುಡಿಯಾಕ ಹೊಂಟ್ರು. ನನಗ ಓದು ಬ್ಯಾಡ ಅನಿಸಿತು. ಅಪ್ಪಗ ಸುದ್ದಿ ತಿಳದಿತ್ತು, ಒಳಗೊಳಗೆ ಬಹಳ ನೊಂದಕೊಂಡಿದ್ದ. ನಾನು ಅಪರಾಧಿಯಂತೆ ಅಪ್ಪನನ್ನ ಸರಿಯಾಗಿ ಮಾತಾಡಿ ಸಾಕು ಆಗದೆ ಸಂದಿಗ್ಧತೆಯೊಳಗಿದ್ದೆ. ಒಂದಂದ ಸಲ ಎಲ್ಲಾನು ಬಿಟ್ಕೊಟ್ಟು ಎಲ್ಲಿಗಾದ್ರು ದೂರ ಓಡಿಹೋಗಾಕು ಅನಿಸಿತ್ತು. ಆದ್ರ ಹೋಗೋದಾದ್ರು ಎಲ್ಲಿಗ? ಎಲ್ಲಿಗೆ ಹ್ವಾದ್ರು ಇದೇ ಸ್ಥಿತಿ ಇಲ್ಲೇ ಹೋರಾಡಬೇಕು ಅಂದ್ಕೊಂಡು ಸುಮ್ಮನಾದೆ. ಫೇಲಾದ ಎಂ.ಎ. ಕುರಿತು ಯಾವತ್ತು ಯೋಚನೆ ಮಾಡಲೇ ಇಲ್ಲ. ಅದ್ಯಾರೋ ಅಪ್ಪಗೆ ಹೇಳಿದ್ರಂತ. "ಮತ್ತೊಂದ ಪ್ರಯತ್ನ ಮಾಡಿದ್ರ ಯಾವುದಾರು ಒಂದ ನೌಕರಿ ಸಿಕ್ಕೀತು. ಇಲ್ಲಿ ಮನಸ್ಸಿಲ್ಲದ ಮನಸಿಂದ ಬದುಕ್ಯನ ಹುಡುಗ" ಅಂತೇಳಿ. ಅಪ್ಪ ಕಣ್ಣಾಗ ನೀರ ತಂದ್ಕೊಂಡು "ಮಗ, ನಿನಗಲ್ಲ ಈ ದಗದಾ, ನೀ ದೊಡ್ಡ ಮನುಷ್ಯ ಆಗಾಕಂತ ಕನಸಕಂಡಿದ್ದೆ ಆದ್ರ ಇದಿಮಾಯಿ ಹಿಂಗ ಆಡ್ತಾಳಂತ ಯಾರ ಅಂದ್ಕೊಂಡಿದ್ರು. ಈಗ ಈ ರೊಕ್ಕ ತಗೊ ನಿನ್ನ ಸಣ್ಣತಮ್ಮ ಸಣ್ಣುನ ಒಂದವರ್ಷ ಗೌಡ್ರತಾವ ದುಡಿಯಾಕ ಇಟ್ಟ ತಂದೀನಿ. ಮುಂಜಾನಿ ಬೆಳಕ ಹರಿತಂದ್ರ ನಮ್ಮ ಮೈ ಮನಸು ದಣಿಗಳ ಹೊಲಗಳತ್ತ ಕರ್ಕೊಂಡ ಹೊಕ್ಕಾವ. ಹೂಂ, ಇನ್ನ ಸಂಜಿ ಮತ್ತ ಇಲ್ಲಗ ಬರ್ತಿವಿ ಇದೇ ನಮ್ಮ ಪ್ರಪಂಚ." ನನಗ ಅಳು ತಡಿಯಾಕ ಆಗಲಿಲ್ಲಾ ಅಪ್ಪನ್ನ ತೆಕ್ಕಿಬಡ್ಕೊಂಡು ಜೋರಾಗಿ ಅತ್ತಿದ್ದೆ. ನಮದು ಅನ್ನಾಕ ನಮ್ಮತಾವ ಏನು ಇರ್ಲಿಲ್ಲಾ ಗುಳೆದ ಮಂದಿ ಹಂಗಿರೋ ಬದುಕು ಅಂತಪರಿಸರದಾಗ ಹುಟ್ಟಿ ನಾನು ಅಂತಂದು ಮುಂದ ಬಂದೋನ ಎದಿಗ ಜಾಡಿಸಿಒದ್ದು ಉತ್ತರ ಹೇಳಿದ್ದೆ. ಪಿ.ಯು.ಸಿ. ಕಲಿಯೋ ಮುಂದೆ ನನಕೂಡ ಸ್ಪರ್ಧೆಗ ಇಳಿತಿದ್ದ ಆ ಹುಡುಗಿ ಅಲ್ಲೆ ಉಳ್ಕೊಂಡಿದ್ಲು. ಬಿ.ಎ. ಕರ್ನಾಟಕ ಕಾಲೇಜು ಸೇರ್ಕೊಂಡಿಂದ ಬರಿ ಇಂಗ್ಲಿಷ್ ಉಲಿಯೊ ಲಲನಾಮಣಿಯರ ಗುಂಪನ್ನ ಕಂಡು ಮಾರುದೂರ ಹೋಗಿದ್ದೆ. ಅರ್ಧವಷದಿಂದ್ಲೆ ತರಗತಿ ಪ್ರತಿನಿಧಿಯ ಸ್ಪರ್ಧೆ ನಡದಿತ್ತು. ಯಾವಾನು ಹೆಚ್ಚು ಅಂಕ ಪಡ್ಕೊಂತಾನೋ ಅವನೆ ಪ್ರತಿನಿಧಿ ಹುಡ್ರೆಲ್ಲಾ ಕಣ್ಣಾಗ ಎಣ್ಣೆ ಬಿಟ್ಕೊಂಡು ಓದಿದ್ದೆ ಓದಿದ್ದು. ಒಬ್ಬಾಂವ ಅಂತು

ಇಡಿಗದಗಿನ ಗೈಡಿಗ ಗೈಡನ್ನೆ ಇಂಗ್ಲಿಷ್‌ನಾಗ ಇರೋದನ್ನ ಕನ್ನಡದಾಗ ಬರ್ಕೊಂಡು ಉರಹೊಡದಿದ್ದ. ಪರೀಕ್ಷ ಮುಗದು ಊರಿಗ ಹೋಗಿ ಸುತ್ತೆಲ್ಲಾ ಅಪ್ಪಾಡಿ ಕೂಲಿನಾಲಿ ಮಾಡಿ ಅರಿವಿ ಕೊಳ್ಳಾಕ ರೊಕ್ಕ ಹೊಂದಿಸಿಕೊಳ್ಳತೊಡಗಿದೆ. ಜೂನ್, ಜುಲೈಗ ಮತ್ತ ಬಂದು ಎರಡನೇ ವರ್ಷಕ್ಕ ದಾಖಲಾಗಿದ್ದೆ.

ಅವಾಗ ತಾನೆ ಫಲಿತಾಂಶ ಬಂದು ಅಂಕಪಟ್ಟಿ ಬಂದಿದ್ದು. ಚಾಲು ಹುಡ್ರು ಯಾವನೂ ಸರಿಯಾಗಿ ಇಷ್ಟೆ ಮಾರ್ಕ್ಸ್ ಬಂದೈತಿ ಅಂತ ಹೇಳ್ತಾನೆ ಇರ್ಲಿಲ್ಲಾ, ಎಲ್ರೂ ಅಂಕಪಟ್ಟಿಗಳನ್ನು ಮುಚ್ಚಿಕೊಳ್ತಿದ್ರು. ತರಗತಿಯೊಳಗ ಮೇಷ್ಟ್ರು ಎಲ್ಲಾರನ್ನೂ ಕೇಳ್ಕೊಂತ ಬಂದ್ರು. ಇನ್ನೂರಕ ಯಾವನೋ ನೂರು, ನೂರ ಹನ್ನೊಂದು, ಹನ್ನೆರಡು ಏರುತ್ತಾ ಬಂತು. ಎಲ್ರಿಗೂ ಎಲ್ಲಿಲ್ಲದ ಕುತೂಹಲ ಯಾರದಿರಬಹುದು ಅಂತ, ನನ್ನ ಪಾಳೆ ಬಂದಾಗ ನೂರಾ ಹದಿನೇಳು ಅಂತ ಹೇಳಿದೆ ಎಲ್ರೂ ಮಕ ಮಕ ನೋಡಾಕ ಹತ್ತಿದ್ರು. ಮಾಸ್ತರ ಹೌಹಾರಿದ್ರು. ಹುಡುಗಿಯರ ಗಂಟಲಾರಿದ್ವು. ಯಾವುದ್ರಾಗೂ ಕಮ್ಮಿ ಇಲ್ದಂಗ ಎಲ್ಲಾದ್ರಲೂ ಭಾಗಿಯಾಗಿ ಮನಿ ಮಾತ ಆಗಿದ್ದೆ ಅದೇ ಇವತ್ತ ನನಗ ಮುಳವಾಗಿತ್ತು. ಚಹದೊಳಗಿಂದ ಆವಿಯಾಗಿ ಹೊಂಟಿದ್ದ ಹೋಗಿ ನಿಂತಿತ್ತು, ಚಹ ಆರಿ ತಣ್ಣಗಾಗಿತ್ತು. ಕುಡಿಯಾಕ ಮನಸು ಬರ್ಲಿಲ್ಲಾ ಅಪ್ಪನ ಮಾತುಗಳು ನೆಪ್ಪಾದೊಡನೆ ಕೈ ತಮ್ಮಷ್ಟಕ್ಕೆ ತಾವೆ ಚಲಿಸಿದವು, ಒಂದೇ ಗುಟುಕಿಗ ಚಹ ಕುಡದು ಕಪ್ಪನ್ನ ಕೆಳಗಿಟ್ಟ ಮ್ಯಾಲ ಏಳಬೇಕು ಅಂತೇಳಿ ಎದ್ದು ತಿರುಗಿದೆ. "ಅರೆ ಪ್ರಭು ಏನಯ್ಯ ಹ್ವಾದವರ್ಷ ಬಂದಹೋಗೋ ನಮ್ಮ ಸ್ನೇಹಕೂಟಕ್ಕಂದ್ರು ಬರ್ಲಿಲ್ಲಾ ಪತ್ರ ಬರದರೂ ಹೊಳ್ಳಿ ಉತ್ತರಾನೆ ಬರಿಲಿಲ್ಲಾ." ಒಂದೇ ಉಸರಿಗ ಇಷ್ಟು ಪ್ರಶ್ನೆ ಕೇಳಿದ್ರು ಪ್ರೊ. ಗಟ್ಟಿಮಠ. ಯಾವುದೋ ಒಂದಕ್ಯಾಂಪಿಗ ಹೋದಾಗ ಪರಿಚಯವಾಗಿತ್ತು. ನನ್ನ ಹಾಡ ಕೇಳಿ "ಪಸಂದಾಗೆ ಹಾಡ್ತಿಯಲ್ಲೋ ಹುಡುಗ" ಅಂತಂದು ಶಬ್ಬಾಶ್‌ಗಿರಿ ಕೊಟ್ಟು ಮುಂದ ಹಂಗೆ ಸಂಪರ್ಕ ಇಟ್ಕೊಂಡಿದ್ರು ಗಟ್ಟಿಮಠ. ಒಡಕಸ್ವರ ದಿಂದ ತಾವು ಘನ ಹಾಡುಗಾರ ಅಂತಂದು ತೋರಿಸಾಕ ಹುಡುಗಿಯರನ್ನ ಸುತ್ಲು ಕರ್ಕೊಂಡು ಹಾಡಾಕ ಸುರುಹಚ್ಕೊಂಡ್ರು. ಹುಡುಗಿಯರನ್ನ ಕಂಟ್ರೋಲು ಮಾಡಾಕಂತೇಳಿ ಬಂದಿದ್ದ ಮೇಡಂ ಮುಸಿಮುಸಿ ನಕ್ಕು ಮರಿಯಾಗ್ತಿದ್ಲು. ಬರಿ ತನ್ನ ಬಗ್ಗೆ ಹೇಳ್ಕೊಂತ್ಲೆ ಒಂದೆಲ್ಡು ಪುರಾಣಕಾಲದ ಜೋಕ ಹೇಳ್ತಾ ಹುಡುಗಿಯರನ್ನ ನಗಿಸಾಕ ಪ್ರಯತ್ನ ಮಾಡಿದ್ದ, ಏನಾರ ಕೆತ್ತಾ ಬಾಜಿ ಮಾಡ್ಯಾನಂತ ನಗುಬರದಿದ್ರು ನಕ್ಕಿದ್ದು ಆ ಹುಡುಗಿಯರು. ನಾನಾಗಿ ಗಟ್ಟಿಮಠ ಮಾಸ್ತರ ಪರಿಚಯ ಆವಾಗ ಮಾಡ್ಕೊಂಡಿರಲಿಲ್ಲ ಒಂದ ಮೂರ್ನಾಕ ಸಲ ಕ್ಯಾಂಪಸ್‌ನೊಳಗ ಬೆಟ್ಟಿಯಾಗಿದ್ರು ಅಷ್ಟೇ. ಯಾವೂರ್ನೋರು, ಎಲ್ಲಿ ಕೆಲ್ಸ ಮಾಡ್ತಾರೆ ಏನು ಹಕೀಕತ್ತು ಅಂತೇಳಿ ಒಂದು ಗೊತ್ತಿರಲೇ ಇಲ್ಲ. ಒಣದಿಮಾಕು ತಾನೊಬ್ಬ ಶ್ರೇಷ್ಠ ಕನ್ನಡಪಂಡಿತ ಅಂತ ದಿಮಾಕಿದೆ ಅನ್ನೋದು ನನಗ ಸೂಕ್ಷ್ಮವಾಗೆ ತಿಳಿದಿತ್ತು. "ಹಲೋ ಎಲ್ಲಿಗ ಹೋದೆ" ಪ್ರೊ. ಗಟ್ಟಿಮಠ ಎಚ್ಚರಿಸಿದ್ರು.

"ನೋಡ ಪ್ರಭು ಜೀವನದಾಗ ಇವೆಲ್ಲವೂ ಆಗೋವೆ ನೀ ಏನು ಕಾಳಜಿ ಮಾಡಾಕ ಹೋಗಬ್ಯಾಡ, ನಿನ್ನ ಸ್ಥಾನದಾಗ ನಾನಿದ್ರು ಆಟೇಯ. ಅದೊಂದು ಕೆಟ್ಟ ಘಟನೆ ಅಂತ

ಮರಿಯಾಕ ಯತ್ನಮಾಡು. ನಾನು ಶಿರಗೂರನಾಗ ಇದ್ರು ಇಲ್ಲಿ ಏನೇನ ಆತು ಅಂತ ತಿಳ್ಕೊಂಡೀನಿ, ನಿನ್ನ ಹಿಂದಿದ್ದ ಹುಡ್ರು ಗಲಾಟೆ ಮಾಡಾನು ಅಂದ್ರು, ನೀನು ವಿ.ಸಿ. ರಿಜಿಸ್ಟ್ರಾರರಿಗೆಲ್ಲಾ ಮನವಿ ಕೊಡಾಕ ಹೋಗಿ ಪ್ರೊ. ಕಾಟೇನಹಳ್ಳಿ ಬ್ಯಾಡ ಅಂತ ಬುದ್ಧಿವಾದ ಹೇಳಿದ್ದು ಎಲ್ಲಾ ನನಗ ಗೊತ್ತು." ಒಂದ ನಿಮಿಷ ಇಬ್ರೂ ಮಾತಾಡಕ ಹೋಗಲಿಲ್ಲಾ ನನಗಂತು ಮಾತು ಬ್ಯಾಡ ಅನಿಸಿತ್ತು ಹೊರಗ ಹೊಂಟೋನ್ನ ಕರದು ಕುಂದ್ರಿಸಿಕೊಂಡ್ರು.

ಹೋಟೆಲ ಹುಡುಗನ್ನ ಕರದು ತಿನ್ನಾಕ ಪೂರಿಭಾಜಿ ಹೇಳಿದ್ರು. ನಾನು ಎಷ್ಟು ಬೇಡಾ ಅಂತಂದ್ರು ಬಿಡಲಿಲ್ಲಾ. ಪೂರಿ ಆದ ಮ್ಯಾಲ ಕಟ್ ಮಸಾಲ ಹೇಳಿದ್ರು ತಿಂದಾದ ಮ್ಯಾಲ ವಿಷಯಕ್ಕ ಬಂದ್ರು." ನಾನು ಇಲ್ಲೆ ಒಂದು ಟ್ರೈನಿಂಗಿಗಂತ ಬಂದಿದ್ದೆ. ಈ ವರ್ಷ ನಮ್ಮ ದೌಲತ್ಪೂರ ಜಿಲ್ಲಾನ ಸಾಕ್ಷರ ಜಿಲ್ಲೆ ಮಾಡಾಕಂತಂದು ಕೇಂದ್ರ ದವರು ತಗೊಂಡಾರ ನಿನ್ನಂತ ಚೂಟಿಹುಡ್ರು ನಮ್ಮ ಕೈಯಾಗ ಸಿಕ್ರ ಏನೆಲ್ಲಾ ಆದೀತು." ಇದೊಂದು ಕ್ರಾಂತಿ, ಆಂದೋಲನ" ಪ್ರೊ. ಗಟ್ಟಿಮಠ ಆವೇಶದಿಂದ ಹೇಳಾಕಹತ್ತಿದ್ರು ನನಗ ಮೈಯೆಲ್ಲಾ ಮುಳ್ಳೆದಂಗಾಗಿ ಎದ್ದು ಓಡಬೇಕು ಅನಿಸಿತು. ನನಗೆ ಅರಿವಿಲ್ಲದೆ ಮದ್ಲು ನೆನಪಾದದ್ದು ಅವಕಾಶವಾದಿ ಕುದರಿಕೂದ್ಲಿನ ಪ್ರೊ. ಕಂಪಣ್ಣಾ. ನನಗೆ ಅರಿವಿಲ್ಲದೆ ಎರಡು ಕೈಗಳು ಮುಷ್ಠಿ ಬಿಕ್ಕೊಂಡ್ವು. ಒಬ್ಬ ವಿದ್ಯಾರ್ಥಿಗ ಆಗೋ ಅನ್ಯಾಯ ಗೊತ್ತಿದ್ದು ಸುಮ್ಮನಾದ ಭಂಡ, ನೀಚ ನನ್ನ ಗುರು ಅಂತ ಕರಿಯಾಕು ಮನಸು ಒಪ್ಕೊಳ್ಳಾ ಇಲ್ಲ. ಈ ಹಾಳ ಬಡತನ ಶೋಷಣೆ ಅಂವ ಅನುಭವಿಸಿದ್ರ ಗೊತ್ತಾಗತಿತ್ತು. ಯಾರದೋ ವಸೂಲಿ ಮ್ಯಾಲ ಸೇರ್ಕೊಂಡು ಪಾಠ ಮಾಡಾಕ ಬರ್ತಿದ್ರು ತರಗತಿ ಬಿಟ್ಟನಂತರ ಹುಡುಗಿಯರಿಗಷ್ಟೇ ತಮ್ಮ ಖೋಲಿಗ ಕರದು ನೋಟ್ಸ ಕೊಡೊನೆಪದಾಗ, "ನೋಡು ಹ್ವಾದ ವರ್ಷ ನಿನಂತಾಕಿನ ಒಬ್ಬಾಕಿ ಇದ್ಲು ನಾ ಹೇಳಿದಂಗ ಕೇಳಿದ್ಕ ಆಕಿಗ ಪಸ್ಟ್‌ಕ್ಲಾಸ್ ಸಿಗ್ತು ಮತ್ತ ನೀ ಏನಂತಿ ವಿಚಾರ ಮಾಡಿ ಆ ಮ್ಯಾಲ ಹೇಳಂತ" ಪೀಡಿಸೋ ಗೋಸುಂಬೆಯಂತ ಕಂಪಣ್ಣಾ ಮಾಸ್ತರ ಪೀಚಲಾಗಿ ಕಾಣತೊಡಗಿದ. ಆತನ ಮಾತಕೇಳ್ಕೊಂಡು ಕ್ರಾಂತಿ ಮಾಡಾಕ ಹಿಂಡ ಮಂದಿ ಸಜ್ಜ ಆಗ್ತಾರಲ್ಲಾ ಅದೇ ಆತನ ದೊಡ್ಡ ವಿಶೇಷ. ಮದ ಮದಲಿಗ ಆತನ ಹಿಸ್ಟರಿ ತಿಳದಿರಂಗಿಲ್ಲಾ ಹುಂಬ ಮಂದಿ ಹೂಯ್ ಅಂತಂದು ಬರ್ತಾರ, ಗೊತ್ತುಗಾನ ಯಾರು ಹಿಂಬಾಲ ಹಾಯೋದಿಲ್ಲಾ.

"ಪ್ರಭು ಕೇಳಾಕ ಹತ್ತಿಯಲ್ಲ ನನಮಾತು". ಎಚ್ಚರಿಸಿದ್ರು "ಹಾಂ, ಹೌದು ಸಾರ್ ಕೇಳ್ತಾ ಇದೀನಿ ಹೇಳ್ರಿ, ಆದ್ರ ಆ ಕ್ರಾಂತಿ, ಆಂದೋಲನ ಅನ್ನೋ ಕೆಲ್ಸಕ ಬಾರದ ಶಬ್ದಗಳನ್ನು ಮಾತ್ರ ಎತ್ತಬ್ಯಾಡ್ರಿ ಕ್ರಾಂತಿ ಅಂದ ತಕ್ಷಣ ಘಾಯದೆ ಸಂಬಂಧ ಬಡದಾ ಡೋದು ಅನಿಸಿಬಿಟ್ಟೈತಿ. ಅದನ್ನ ಕೇಳಿದ ತಕ್ಷಣ ಮಂದಿ ಹಿಂಗ ವಿಚಾರಮಾಡಾಕ ಸುರುಮಾಡ್ಯಾರಲ್ಲ ಇದ್ರಾಗ ಇವರಿಗ ಏನೋ ಸಿಗತೈತಿ ನೋಡು, ಇಲ್ಲಾ ಯಾಕಹಿಂಗ ಗಾಳಿ ಗುದ್ದಿ ಮೈನೋವು ಮಾಡ್ಕೊಳ್ಳಾಕ ಹೊಕ್ಕಿದ್ರು ಹೇಳು" ಅಂತ. ಇನ್ನು ಏನೇನೋ ಹೇಳಬೇಕು ಅಂತಿದ್ದೆ ನಡಕ ಬಾಯಿಹಾಕಿದ್ರು." ಛೇ ಛೇ ಹಂಗಲ್ಲ ಇದು, ನೀ ತಿಳ್ಕೊಂಡಂಗ ಅಲ್ಲೆ ಅಲ್ಲ, ಇದು ಬಡಜನರನ್ನ ಜಾಗೃತಿ ಮಾಡೋಕೆಲ್ಸ. ವಿದ್ಯೆ ಕಲಿಯದೆ ವಿಚಾರ

ಬರಂಗಿಲ್ಲಾ, ವಿಚಾರ ಬರದೆ ಅವರ ಜೀವನ ಸುಧಾರಣೆ ಆಗೋದಿಲ್ಲಾ. ವಿಶ್ವದಾಗ ಎರಡನೆಯ ದೊಡ್ಡ ರಾಷ್ಟ್ರವಾದ ಭಾರತದಾಗ ವಿಶ್ವಬ್ಯಾಂಕ್ ಸಮೀಕ್ಷೆ ಪ್ರಕಾರ ಶೇಕಡ, ಅರವತ್ತರಷ್ಟು ಮಂದಿ ಅವಿದ್ಯಾವಂತರದಾರ, ಹಿಂದುಳಿಯುವಿಕೆಯಿಂದ ದೇಶದ ಪ್ರಗತಿಯಾಗೋದಿಲ್ಲಾ ನೀನು ಹೋರಾಡುತ್ತಿದ್ದದ್ದು ಆ ಮಂದಿ ಸಲವಾಗಿಯೇ ಅಲ್ಲಾ." ನಾನು ಮಾತಾಡಲಿಲ್ಲಾ, ಅವರು ಹೇಳಿದ್ದು ಒಂದರ್ಥದಾಗ ನಿಜ ಅನಿಸಿತು. ಈ ಮಂದಿ ಜೀವನಸುಧಾರಣೆಗೆ ಅಕ್ಷರ ಬಹಳ ಮುಖ್ಯ. ನಮ್ಮೂರ ಮಂದಿ ಹತ್ತ ಹದಿನೈದ ರೂಪಾಯಿ ಸಾಲ ತಗೊಂಡು ಹೆಬ್ಬಟ್ಟು ಒತ್ತಿದ್ಕ ಊರಪಕ್ಕದ ಮಂಗಳೂರ ಸಾವುಕಾರ ಒಂದಕ್ಕ ಎಲ್ಡರಂತೆ ಹಚ್ಕೊಂಡು ಅಸಲು ಬಡ್ಡಿಯನ್ನು ಜಪದು ಹೊಲ ಅಡುಹಾಕಿದ್ರು ಸಾಲ ತೀರದಂಗ ಮಾಡಿ ಹೊಲಗಳನ್ನೆ ನುಂಗಿ ಹಾಕಲಿಲ್ವೆ. ಇತ್ತೀಚಿನತನಕಾನು ದುಡ್ಡ ಕೊಟ್ಟೆದು ಲೆಕ್ಕ ಮಡಾಕ ಬರದ ಮಂದಿಗ ನಂಬಿಸಿ ಖೊಟ್ಟೆ ಸರಾಯಿ ಕುಡ್ಸಿ ಎಲೆಕ್ಷನ್‌ದೊಳಗ ಓಟು ಹಾಕಿಸಿಕೊಂಡು ಗೆದ್ದಮ್ಯಾಲ ಹೊಳ್ಳಿ ನೋಡದ ಶಾಸಕರೆಂಬ ಶನಿಗಳ ಕಾಟದಿಂದ ಬಿಡುಗಡೆ ಆಗಬೇಕಾರ ಅಕ್ಷರ ಒಂದೇ ಮದ್ದು ಅನಿಸಿತು. "ನನ್ನ ಮಾತು ಕೇಳು, ನಾನಿರೋ ಊರಾಗ ಒಂದು ಜೂನಿಯರ್ ಕಾಲೇಜಿನೊಳಗ ನಾಕ ಮಂದಿ ಪರಿಚಯ ಅದಾರ. ನೀ ಒಪ್ಕೊಂಡ್ರ ನನಗ ಸಂಘಟನೆ ಕೆಲ್ಸ ಆಕ್ಕೈತಿ. ನೀನು ಬಹಳ ಸಂಕಟದೊಳಗ ಅದಿ ಅಂತ ನಿನ್ನ ಸ್ನೇಹಿತ ದುಂಡ್ರೇಶಿಹೇಳಾಕ ಹತ್ತಿದ್ದ ವಿಚಾರ ಮಾಡು. "ಅಂದವರೆ ಚಹದ ಗಲಾಸಿಗ ಕೈಹಾಕಿದ್ರು. ಪ್ರೊ. ಗಟ್ಟಿಮಠ ನನ್ನ ಪಾಲಿನ ದೇವರಂತೆ ಕಾಣತೊಡಗಿದ್ರು. ಎಂ.ಎ. ಪಾಸಾದೆ ಮುಂದೇನ ಮಾಡ್ಲಿ, ಕಿಸೆಯೊಳಗ ಊರಾಗ ಹೊಳ್ಳಿ ಹೋಗೋ ಆಟು ದುಡ್ಯೆತಿ, ಕೆಲ್ಸ ಎಲ್ಲಿ ಹುಡಕಲಿ ಮನಿಗ ಹೋದ್ರ ಅಪ್ಪಗ ತಮ್ಮಂದಿರಿಗ ಇಲ್ಲದ ಹಿಂಸೆ, ಯಾವುದಾದ್ರು ಹೋಟೇಲಾದ್ರು ಸರಿ ತುರ್ತಿಗ ಕೆಲ್ಸ ಹಿಡಿಬೇಕು ಅನ್ನೋದೆ ಗುರಿಯಾಗಿತ್ತು. ಅಷ್ಟರೊಳಗ ಎಂಥ ಒಳ್ಳೆ ಸುದ್ಧಿ "ಅದೆಂಥ ಪೋಸ್ಟ್ ಸರ್" ಕುತೂಹಲ ಅದುಮಿ ಹಿಡದು ಹೇಳಿದೆ." ಓ ಅದೋ, ನಿಮ್ಮ ಮಂದಿಗ ಮೀಸಲಾದ ಜಾಗ ಕಣಪ್ಪ, ಬಹಳ ಹಳೆ ಕಾಲೇಜು, ಒಂದೆರಡು ತಿಂಗಳೊಳಗ ಏನಾರು ಮಾಡಿ ಪರ್ಮನೆಂಟ್ ಮಾಡ್ಕೊವಂತೆ" ಅಂತ ಆತಂಕ ಕಮ್ಮಿ ಮಾಡಿದ್ರು.

ನನ್ನ ಪುಣ್ಯ ಎಂಬಂತೆ, ಒಬ್ಬನೇ ಒಬ್ಬನು ಸಂದರ್ಶನಕ್ಕ ಬಂದಿದ್ದ ಇಬ್ರಿಗೂ ಪಾಠ ಮಾಡಾಕ ಹೇಳಿದ್ರು, ಭಾಷಣ ನಾಟಕ ಮಾಡಿದ ಅನುಭವದ ಮ್ಯಾಲ ಎಪ್ಪತ್ತು ವಿದ್ಯಾರ್ಥಿಗಳಿರೋ ಸೆಕೆಂಡಿಯರ್ ವಿದ್ಯಾರ್ಥಿಗಳಿಗೆ ಪದ್ಯ ಹೇಳಿದೆ. ಹೊರಗ ಬಂದು ಸಂದರ್ಶನಕ್ಕೆ ಹೋದೆ ಛೇರ್ಮನ್, ಜಂಗಲಸ್ವಾಮಿಗ ಭಯಂಕರ ಖುಷಿಯಾಗಿದ್ದೆ, ಅರ್ಧಗಂಟೆಯೊಳಗ ನನಗ ನೇಮಕಾತಿ ಪತ್ರಕೊಟ್ಟೆ, ಬಿಟ್ರು. ಪ್ರಿನ್ಸಿಪಾಲ ಪಾಪೇಶಿ, ಕೈ ಕುಲುಕಿ ನನ್ನ ಆಯ್ಕೆ ಬಗ್ಗೆ ಖುಷಿ ಪಟ್ಟರು. ನನಗ ತಯಾರ ಮಾಡಿದ್ದ ಸಂಗಣ್ಣ ಅನ್ನೋ ಮಾಸ್ತರ ಒಳಗೊಳಗೆ ಖುಷಿಯಿಂದ ತೃಪ್ತಿ ಪಡ್ಕೊಂಡಿದ್ದ. ಯಾಕಂದ್ರ ಪ್ರೊ. ಗಟ್ಟಿಮಠ, "ಹುಡುಗ ಒಳ್ಳೆ ಹಾಡಗಾರ, ಕಲಾವಿದ ಕತಿಗಾರ, ನಾಟಕಕಾರ, ಸಂಘಟಕ ನಾಳಿ ಇಡಿ ಜಿಲ್ಲಾದ ತುಂಬ ಆಗೋ ಆಂದೋಲನದಾಗ ನಿಮ್ಮ ತಾಲ್ಲೂಕ ಮೊದಲ ಸ್ಥಾನಕ್ಕ ಬರಾಕು

ಅಂದ್ರ ಇವನಿಂದ್ಲೆ ಸಾಧ್ಯ "ಅಂತೇಳಿ ಹವಾಹಾಕಿದ್ರು ಸಂಗಣ್ಣ ಮಾಸ್ತಾರ ಯಾವದೋ ಕಾಲದಾಗ ಒಂದ ಪುಸ್ತಕ ಬರದು ಖ್ಯಾತನಾಮರಾಗಿದ್ರಂತೆ, ಅವತ್ತಿಂದ್ಲೆ ಸ್ವಯಂಘೋಷಿತ ಖ್ಯಾತ ಬರಹಗಾರ ಹಣೆಪಟ್ಟಿ ಹಚ್ಕೊಂಡಿದ್ರು. ಇಡೀ ತಾಲೂಕಿನೊಳಗ ಅದೊಂದೆ ಹೈಸ್ಕೂಲ ಕಂ ಕಾಲೇಜು ಆದ್ದರಿಂದ ಅಲ್ಲಿ ಕಲಿಯಾಕ ಬಂದ ಹುಡ್ರೆಲ್ಲಾ ಸಂಗಣ್ಣಗ ಪರಿಚಿತರೆ ಆತನಿಂದ ಗಟ್ಟಿಮಠ ಮಾಸ್ತರ ಪರಿಚಯಾನು ಆಕ್ಕಿತ್ತು. ಒಂದ ಆಗಸ್ಟ್ ಹದಿನೈದ ನಡದ್ರ ಸಂಗಣ್ಣ, ಗಟ್ಟಿಮಠ ಮುಂದಿನ ಸಾಲಿ ನೊಳಗ ಇರ್ತಿದ್ರು ಒಂದು ಜನೇವರಿ ಇಪ್ಪತ್ತಾರಿದ್ರು ಅವರದೆ ಮುಂಚೂಣಿ ನಾಯಕತ್ವ. ಪ್ರೈಮರಿ ಸ್ಕೂಲ್ ಕಾರ್ಯಕ್ರಮ ಇರವಲ್ಲದ್ಯಾಕ ಅವರಿಬ್ಬರ ಅಸ್ತಿತ್ವ ಇಲ್ಲದಿದ್ರ ಆ ಕಾರ್ಯಕ್ರಮಕ್ಕ ರಂಗೇ ಬರ್ತಿರಲಿಲ್ಲ.

ಆ ಮೂವರ ಮಹಾಕೂಟ

ನಾನು ಕಾಲೇಜಿಗ ಸೇರ್ಕೊಂಡಿಂದ ನಾನಾಯ್ತು ನನ್ನ ಪಾಠ ಆಯ್ತು. ಒಣಉಸಾಬರಿ ಯಾಕ ಬೇಕಂತೇಳಿ ಸೀದಾ ಪ್ರೊ. ಗಟ್ಟಿಮಠ ಕೊಠಡಿಗ ಹೋಗಿ ಬಿಡ್ತಿದ್ವೆ, ನನಗಂತೇಳಿ ಅದನ್ನ ಬಿಟ್ಕೊಟ್ಟು, ಅಲ್ಲೇ ಒಂದ ಖಾನಾವಳಿಗ ಉದ್ರಿ ಊಟ ಉದ್ರಿ ತಿಂಡಿಗ ಹಚ್ಚಿ ಹೋಗಿದ್ರು. ಇದ್ವಕ್ಕಿದಂಗೆ ಆಂದೋಲನದ ರಂಗ ಬಡ್ಕೊಂಡಿದ್ವೆ ಜಿಲ್ಲಾ ಮಟ್ಟದಾಗ ಬಹಳ ಸಕ್ರಿಯಿರಾದ್ರು ಗಟ್ಟಿಮಠ, ಸಂಗಣ್ಣಮಾಸ್ತರ ಮಾತ್ರ ಊರಾನ ಗಲ್ಲಿ ಗಲ್ಲಿಯೊಳಗ ಕಾರ್ಯಕ್ರಮ ಮಾಡಿದ್ರು ವಾತಾವರಣ ನಿರ್ಮಾಣ ಮಾಡಾಕಂತ, ನನ್ನ ಕರ್ಕೊಂಡು ಹೊಂಟೆ ಬಿಡ್ತಿದ್ರು. ಕಲೆಗಾಗಿನೆ ನೂರಾ ಎಂಟ ಅವಕಾಶಗಳನ್ನ ಕಳ್ಕೊಂಡಿದ್ವ ನಾನು ಜೂನಿಯರ್ ಕಾಲೇಜ ಮಾಸ್ತರ ನೌಕರಿ ಸಿಗ್ತು ಮತ್ತೇನ ಬೇಕು, ಒಳ್ಳೆ ಸಂಸ್ಥೆ, ಜಿಂಗಲ್‌ಸ್ವಾಮಿ ದೊಡ್ಡ ಕುಳ. ಸಾವಿರಾರು ಎಕರೆ ಹೊಲ ಹಿಂದಿನ ದುಡ್ಡುಕಾಸು ಸಿಕ್ಕಾಪಟ್ಟೆ, ಬಹಳ ಒಳ್ಳೆಯ ಗುಣದವರು, ಆದ್ರ ಮತ್ತ ಉಳದ ಎಲಿಅಡಕಿ ಜಗಿಯೋ ಹೆಬ್ಬಟ್ಟಿನ ಮಂದಿ ಮಾತ್ರ ಸಿಕ್ಕಾಪಟ್ಟೆ ಎಗರಾಡ್ತಿದ್ರು, "ಲೇ ಹುಡಗ ನಾಯಾರಂತ ಅಂದ್ಕೊಂಡಿಯಾ, ಈ ಸಂಸ್ಥಾದ ಮೆಂಬರ್, ನಾ ಬಂದಾಗ ಕುಂತ್ಕೊಂಡಿಯಾ, ಏಳ್ ಮ್ಯಾಲ, ಎದ್ದೇಳು." ಅಂತಂದು ನಾಯಿಗ ಗದರಿಸೋ ಹಂಗ ಗದರಿಸಿಬಿಡ್ತಿದ್ರು. ಹುಡ್ರ ಮುಂದ ಪಾಠ ಹೇಳೋಮುಂದ ಮಂದಿ ಹೇಳಿದ್ದೆಲ್ಲಾ ಮರತೆ ಹೊಕ್ಕಿತ್ತು. ದಿನೆ ದಿನೆ ವರ್ಚಸ್ಸು ಬೆಳಿತಿರೋದು ಸಹಿಸಲಿಕ್ಕ ಆಗದ ಮಾಸ್ತರಗಳೆಲ್ಲಾ ಹಿಂದಿನಿಂದ ಏನೇನೋ ಆಡಿಕೊಳ್ಳಾಕ ಹತ್ತಿದ್ರು. ಸದ್ರಿ ಅನ್ನೋ ಒಂದಕಣ್ಣು ಸದಾ ಮುಚ್ಕೊಂಡು ಮಾತಾಡೊ ಮೇಷ್ಟ್ರು. ದಫಲಿಶೆಟ್ಟಿ, ಹೊಂಗಣ್ಣ, ಅನ್ನೊ ಸೀನಿಯರ್ ಮೇಷ್ಟ್ರುಗಳಿಗ ಜಾತಿ ಹಿಡದು ಹಿಯಾಳಿಸಿ ಮಜಮಾಡೋದ್ರಾಗ ಎಲ್ಲಿಲ್ಲದ ತೃಪ್ತಿ. ಹುಡುಗರಿಗ ಏನೂ ಗೊತ್ತಿಲ್ಲದ ಯಾವದೋ ಒಂದನ್ನ ಹೇಳಿ, ನನ್ನ ಕೇಳಾಕ ಹಚ್ಚುತ್ತಿದ್ರು. ನಾನಂತು ಯಾವದಕ್ಕೂ ಕೇರ್ ಮಾಡ್ತಾನೇ ಇರ್ಲಿಲ್ಲಾ.

ಹುಡ್ರನೆಲ್ಲಾ ನನ್ನ ವಿರುದ್ಧ ಚಾಡಿ ಹೇಳಾಕ ಹಚಿದ್ರು. ಪಾಠ ಕೆಡಿಸೋ ಯತ್ನ ಮಾಡಿದ್ರು, ನನ್ನ ಹೆದರಿಸಿ ನೌಕರಿ ಬಿಟ್ಟು ಓಡಿಸೋ ಹುನ್ನಾರ ನಡಸಿದ್ರು ಇದಕ್ಕಿಂತ ಭಯಾನಕ ಲೋಕ ನನ್ನೂರೊಳಗ ಇರೋದರಿಂದ ನನಗ ನಾನು ಇರೋ ಪರಿಸರಾನೆ ವಾಡ ಅನಿಸಾಕಹತ್ತು. ಬಂದಿದ್ವನ್ನ ನೋಡಾನು ಅಂತೇಳಿ ಗಟ್ಟಿಮನಸು ಮಾಡಿದೆ. ನನ್ನ ಜನರ ಜೀವನ ಸ್ಥಿತಿಯ ಮ್ಯಾಲ ನನ್ನ ಸ್ಥಾನ ಗುರುತಿಸಿದ್ರು ಅದ್ಯಾವುದನನು ಮನಸಿಗಹಚ್ಚಿಕೊಳ್ಳದೆ ನನ್ನ ತರಗತಿಯಲ್ಲಿದ್ವ ಕೆಲ ಹುಡುಗರನ್ನ ಬಹಳ ಹತ್ರ ತಗೊಂಡೆ. ನಾನು ತರಗತಿ ಮುಗಿಸಿಕೊಂಡು ಖೋಲಿ ಕಡೀಗ ಹೊಂಟಿದ್ವೆ ಸಂಗಣ್ಣ ಮಾಸ್ತರ ತಮ್ಮ ಎಂದಿನ ದಿಮಾಕಿನಿಧಾಟಿಯಲ್ಲಿ "ಪ್ರಭು ಆಟ್ ತಾಲೂಕ ಆಫೀಸಿಗ ಬಾ, ನಮ್ಮ ತಾಲೂಕಿನ ಎಲ್ಲಾ ಕಲಾವಿದರೂ ಬಂದಾರ ಅಂದಂಗ ಇವತ್ತ ನಿನಗ ಒಬ್ಬ ಮಹಾನ್ ವ್ಯಕ್ತಿ ಬೆಟ್ಟಿಯಾಗ್ತಾರ,

ಉಂಡವನೆ ಎಲ್ಲ ಗಂಟಿಸುಮಾರಕ್ಕ ಬಂದ ಬಿಡು" ಅಂದವರೆ ಪೆಸ್ಟರನ್ನ ಗ್ವಾಡಿಗಕುಟ್ಟಿ ಧೂಳ ಕೊಡವಿಕೊಂಡು ಹೊಂಟ್ರು. ಅವರು ಹೋದ ದಾರಿಯನ್ನೆ ನೋಡ್ತಾ ನಿಂತಬಿಟ್ಟೆ, ಇವತ್ತ ಬೆಟ್ಟಿಯಾಗಲಿರೋ ಆ ಮಹಾನ್ ವ್ಯಕ್ತಿಯಾರಿರಬಹುದು? "ಏಯ್ ಡೊಣ್ಣ್ಯಾಡ್, ಬಾರಯ್ಯ, ಈ ತಾಲೂಕಿನೊಳಗ ಮಹಾನ್ ವ್ಯಕ್ತಿಗಳು ಯಾರ‍್ಯಾರದರಂತ ಹೇಳು" ಅಂದೆ.

ಡೊಣ್ಣ್ಯಾಡಗ ಏನೊಂದು ತಿಳಿಯದೆ ತಲಿಕೆರ‍್ಕೊಂತ ನಿಂತ, "ಸಾರ್ ಈ ತಾಲೂಕಿನ್ಯಾಗ ಅಂತ ಮಾನ್ ವ್ಯಕ್ತಿಯಾರೂಂತ ನಂಗೇನ ಗೊತ್ತು ಸಾ" ಎಲಿ ಅಡಕಿ, ತಂತಬಾಕ ತಿಂದು ತಿಂದು ಕಮಟಿರೊ ಹಲ್ಲು ಪ್ರದರ್ಶಿಸುತ್ತಾ ನಿಂತ. ಅನಾನು ಕೂಲನೋ, ಇಲ್ಲಾ ದಂಡಯಾತ್ರೆಗಳ ಫಲದಿಂದಾಗಿ ಎಲ್ಲಾ ಹುಡುಗರಿಗಿಂತ ವಯಸ್ಸಿನೊಳಗ ದೊಡ್ಡನಹಂಗ ಕಾಣ್ತಿದ್ದ. ಡೊಣ್ಣ್ಯಾಡ ಇಡಿ ಊರ ಉಸಾಬರಿ ಗೊತ್ತಿರೋನು, ಅಂವ ಹಿಂಗೆಸಾ, ಇಂವ ಹಿಂಗೆ ಸಾ ಅಂತಂದು ಇಡಿ ಊರಿನ ಇತಿಹಾಸವನ್ನೆ ಹೇಳಿದ್ದ.

ಗಡಿಬಿಡಿಯಿಂದ ಉಂಡವನೆ ಸೀದಾ ಡೊಣ್ಣ್ಯಾಡನ ಮನಿಕಡೀಗ ಹೋಗಿ ಅವನನ್ನ ಕರ‍್ಕೊಂಡು ತಾಲೂಕ್ ಆಫೀಸ್ ಕಡಿಗನಡದೆ, ಆ ಮಹಾನ್ ಜೀವಿಯನ್ನ ಕಾಣುವ ಕಾತರ ನನ್ನಿಂದ ತಡಿಯಾಕ ಆಗಲಿಲ್ಲಾ. ನಾವು ಹೋಗುವುದರೊಳಗ ಮೀಟಿಂಗ್ ಆರಂಭ ಆಗಿತ್ತು. ಗಟ್ಟಿಮಠ, ಸಂಗಣ್ಣ ಮಾಸ್ತರ, ಆ ಮಹಾನ್ ವ್ಯಕ್ತಿ ವೇದಿಕೆ ಮ್ಯಾಲ ಕುತ್ಕೊಂಡು ಸೇರಿದ್ದ ಮಂದಿಗೆಲ್ಲಾ ಏನೇನೊ ಮಾರ್ಗದರ್ಶನ ಕೊಡಾಕ ಹತ್ತಿದ್ರು. ನಾನು ಹೋದ ತಕ್ಷಣ ಆ ಮೂವರು ನನಕಡೀಗ ನೋಡಿ "ಗೆಳೆಯರೇ ನಮ್ಮ ತಾಲೂಕಿಗೆ ಒಂದು ಅದ್ಭುತವಾದ ಕೊಡುಗೆ ಅಂತಂದ್ರ ನಮ್ಮ ಪ್ರೊ.ಪ್ರಭು" ಅಂತ ಪ್ರೊ. ಗಟ್ಟಿಮಠ ಹೇಳಿದ್ರು, ಮಂದಿ ಎಲ್ಲಾ ಒಮ್ಮೆಲೆ ನನ್ನತ್ತ ತಿರುಗಿ ನೋಡಿದ್ರು ನನಗ ಮುಜುಗರ ಅನಿಸಿತು, ಏನು ಹೇಳಾಕಂತ ತಿಳಿಯದೆ ಕೈಜೋಡಿಸಿ ಕುರ್ಚಿಮ್ಯಾಲ ಕುತ್ಕೊಂಡೆ, ಸಂಗಣ್ಣ ಹೇಳಿದ ಮಹಾನ್ ವ್ಯಕ್ತಿ ವೇದಿಕೆ ಮ್ಯಾಲ ಕುತ್ಕೊಂಡಿದ್ದ. ವಿಚಿತ್ರ ವೇಷದಾರಿಯನ್ನ ನೋಡಿಯೇ ಅಂದ್ಕೊಂಡೆ. ಕೊಬ್ಬರಿ ಎಣ್ಣೆ ಸುರ‍್ಕೊಂಡು ನೀಟಾಗಿ ಕೂದ್ಲ ಎತ್ತಿ ಹಿಂದಕ್ಕ ಬಾಚ್ಕೊಂಡು ಹಳೆ ಪುರಾಣದ ಕತಿಯೊಳಗ ಓದಿದ ನಕಲಿ ಮನುಷ್ಯರು ಹಾಕ್ಕೊಳ್ತಿದ್ದ ಕುತ್ತಗಿ ಹತ್ರ ಗುಂಡಿ ಹಾಕೊಂಡ ಜುಬ್ಬ, ಕೆಳಗೊಂದು ವಿಚಿತ್ರ ಪ್ಯಾಂಟು ವೇಷ ನೋಡಿದ ತಕ್ಷಣ ಐದನೆ ಕ್ಲಾಸಿನ್ಯಾಗಿದ್ದಾಗ ಹುಡುಗಿಯ ಮುಂದೆ ಪೌರುಷ ಕೊಚ್ಚಿಕೊಳ್ತಾ ತನ್ನ ಹೇಡಿತನವನ್ನ ಮುಚ್ಚಿಕೊಳ್ತಿದ್ದ ಉತ್ತರ ಕುಮಾರನ ಪಾಠ ನೆನಪಾತು. ಕ್ಲೀನ್ ಶೇವ್ ಮಾಡ್ಕೊಂಡು ಐವತ್ತೈದರ ಗಡಿದಾಟಿದ್ರು ಒಳ್ಳೆ ಮೂವತ್ತರ ಹುಡುಗನಹಂಗ ಕಾಣ್ತಿದ್ದ. ಬಹುಶಃ ಆತನ ಈ ಉಡುಗೆಯಿಂದ್ಲೆ ಮಹಾನ್ ಮನುಷ್ಯ ಆಗಿರಾಕು ಅಂದ್ಕೊಂಡೆ. ನಾನು ಕುಂತಿದ್ದ ಸಾಲಿನೊಳಗ ಮತ್ತೆ ಇಬ್ಬರು ಫೇಟ್ ಅದೆ ಆಕಾರದ ಬಟ್ಟೆ ಹಾಕ್ಕೊಂಡು ಕುಂತ್ಕೊಂಡಿದ್ರು, ಮತ್ಯಾರಾದ್ರು ಅದಾರೇನಂತ ಹುಡುಕಾಡುತ್ತಿದ್ದೆ. ಆ ಮನುಷ್ಯ ಎದ್ದು ನಿಂತವನೆ "ಗೆಳೆಯ ಪ್ರೊ. ಪ್ರಭು ವೇದಿಕೆಗೆ ಬರಬೇಕು ಬನ್ನಿ, ಬನ್ನಿ" ಎದ್ದು ನಿಂತು ಕರೆಯತೊಡಗಿದ ನಾನು ಹೋಗದ ಹೊರತು ಆತ ಬಿಡುವುದಿಲ್ಲ ಅನಿಸಿತು. ಸೀದಾ ವೇದಿಕೆಗೆ ಹೋದೆ, ಕೈ ಕುಲುಕಿ ಆತನ ಪಕ್ಕದ ಖುರ್ಚಿ ಮೇಲೆ ಕುತ್ಕೊಂಡೆ.

"ಪ್ರೊಫೆಸರ್ ನಿಮ್ಮ ಬಗ್ಗೆ ಹೇಳಿದ್ರು, ಅವರು ಹೇಳಿದ್ದಕ್ಕಿಂತ ಬಹಳ ಭಿನ್ನ ಮತ್ತ ಪ್ರಬಲವಾಗೆ ಅದಿರಿ, ಇವತ್ತ ಈ ದೇಶಕ್ಕ ನಿಮ್ಮಂತೋರೆ ಬೇಕ್ರಿ. ಹಳಿತಪ್ಪಿರೋ ಈ ವ್ಯವಸ್ಥೆಯನ್ನ ರಿಪೇರಿ ಮಾಡಬೇಕು, ನಿಮ್ಮಂತ ಕ್ರಿಯಾಶೀಲ ಹುಡ್ರುಬೇಕು." ಕ್ಯಾಷ್ಟ್ರೋ, ಲೆನಿನ್, ಚೀನಾದ ಸುದ್ದಿಗಳೆಲ್ಲಾ ನಮ್ಮ ಚರ್ಚೆಯೊಳಗ ಬಂದ ಹ್ವಾದ್ವು. ಆತ ಕೊರೆಯುತ್ತಲೆ ಇದ್ದ ನನಗೆ ತಲಿ ಚಿಟ್ಟಹಿಡಿದ ಹೋಗಿತ್ತು. ಒತ್ತಾಯದಿಂದ ಅವನ ಐಡಿಯಾಲಜಿ, ಸ್ಟ್ರಾಟೇಜಿಗಳನ್ನ, ಅಜೇಂಡಾ ಎಲ್ಲವನ್ನ ನನ್ನೊಳಗ ತುರಾಕಾಕ ಹವಣಿಸ ತೊಡಗಿದ. ನಾನು ಬರಿ ಹೂಂ 'ಊಹೂಂ ಎರಡ ಶಬ್ದಗಳನ್ನ ಗಟ್ಟಿ ಹಿಡ್ಕೊಂಡಿದ್ದೆ. ಒಂದೇ ದಿನದೊಳಗ ಮಾತುಗಳನ್ನ ಖಾಲಿಮಾಡ್ಕೊಳಾಕ ಹೊಂಟಂತಿತ್ತು. ಆತನ ಎಲ್ಲಾ ಮಾತುಗಳಿಗೆ ವಿರಾಮ ಹಾಕಬೇಕಂತ ಅಂದುಕೊಂಡಿದೆ, "ನೋಡಿ ಸ್ವಾಮಿ ರಷ್ಯ, ಚೀನಾ, ಕ್ಯೂಬಾದಲ್ಲಿ ಹೆಚ್ಚುಕಮ್ಮಿ ಒಂದೇ ಪಂಥಕ್ಕೆ ಸೇರಿದ ಮಂದಿ ಇದ್ರು ಅಲ್ಲಿಯ ಹೋರಾಟವು ಹಂಗಿತ್ತು, ಬಾರತದಂತ ದೈತ್ಯರಾಷ್ಟ್ರವು ಅದ್ರಾಗು ನಾನಾನಮೂನಿ ಜಾತಿ, ಜನಾಂಗ, ಧರ್ಮ, ಪಂಥ ತುಂಬಿರೋ ಇಲ್ಲಿ ಯಾವತ್ತು ಕ್ರಾಂತಿಯನ್ನು ನಿರೀಕ್ಷೆ ಮಾಡಬ್ಯಾಡ್ರಿ. ತಲಿಗೊಂದು ವಿಚಾರ ಮಾಡೋ ಜನ, ಮನಿಗೊಬ್ಬ ನಾಯಕನಾಗಿರೋ ಸ್ಥಿತಿಯೊಳಗ ಸಾಮೂಹಿಕವಾಗಿ ಒಬ್ಬನನ್ನ ಒಪ್ಪಿಕೊಂಡಾರೇನ್ರಿ, ಬಡವರೆಲ್ಲಾ ಒಟ್ಟಾಗದ ಹೊರತು ಏನೂ ಸಾದ್ಯವಿಲ್ಲ" ಆತನ ಮಾತಿನ ಧಾಟಿ ಬದಲಾತು.

ಅವರೆಲ್ಲರನ್ನು ಬಿಳ್ಕೊಟ್ಟು ನಡದು ಹೊಂಟಿದ್ದೆ. ಸಂಜೆಯ ಹವಾಮಾನ ಹಿತ ಅನಿಸಿತ್ತು, ನನ್ನ ಹೋರಾಟ ಇನ್ನೂ ಎಲ್ಲಿವರಿಗ, ಒಂದ ಕಡೀಗ ಮೇಷ್ಟ್ರ ಕಿರಿಕಿರಿ ಹುಡುಗರೆಲ್ಲಾ ಯಾರೋ ಕಲಿಸಿರುವ ಕೆಲ್ಸಕ್ಕ ಬಾರದ ಪ್ರಶ್ನೆ ಕೇಳಿ ತಲಿ ತಿನ್ನಾಕ ಹತ್ತಿದ್ರು ಮ್ಯಾನೇಜಮೆಂಟಿನೋರು ಕುಂದ್ರು ನಿಂದ್ರು ಅಂತೇಳಿ ಅವಮಾನಿಸುವುದು ಅತಿಯಾಗಿತ್ತು. ಮನಿಯೊಳಗಿನ ಬಡತನದ ಮುಂದೆ ಇದೇನು ಅಲ್ಲಾ ಜಲ್ದಿ ಪಗಾರ ಬರೋಹಂಗಾದ್ರ ಮನಿಗಾರ ಒಂದಿಷ್ಟು ಹಣ ಕಳಿಸಾಕ ಆದ್ರು ಆದೀತು ಅಂತೇಳಿ ನನ್ನೊಳಗೆ ಅಂದ್ಕೊಂತ ಹೊಂಟಿದ್ದೆ. ಒಂದು ಗಲ್ಲಿಯ ಪಾನ್ ಅಂಗಡಿಯಿಂದ "ಸಾರ್", ಅಂತ ಕೂಗಿದಂಗೆ ಅನಿಸಿ ತಿರುಗಿದೆ ಡೊಣ್ಣಾಡ ಎಮ್ಮಿ ಮೆಕ್ಕಲ ಹಾಕೊಹಂಗ ವಚಾವಚಾ ಬಾಯಿ ಆಡಿಸ್ತಾ ಪಿಚಕ್ ಅಂತೇಳಿ ಉಗಳಿದೋನೆ, ಏನೋ ಕಂಡು ಹಿಡಿದವನಂತೆ. "ನೀವು ಮದ್ಯಾಹ್ನ ಕೇಳಿದ್ರಲ್ಲಾ ಮಹಾನ್ ವ್ಯಕ್ತಿ, ನಿಮ್ಮನ್ನ ವೇದಿಕೆ ಮ್ಯಾಲಕ ಕರದ್ರಲ್ಲಾ" "ಅದೇ ಆ ಕುಬಸಣ್ಣ" "ಬರಿ ಕುಬಸಣ್ಣ ಅಲ್ಲಾ, ಕುಬಸಣ್ಣಾ ಮಾಸ್ತರ" ಹಾಂ, ಅವರ್ಯಾವ ಮೇಷ್ಟ್ರು? ಅನುಮಾನಿಸಿದೆ. "ಓ ಹಂಗ್ಯಾಕಂತೀರಿ, ಅವರು ಒಂದ ಕಾಲದಾಗ ಅದ್ಯಾವದೋ ಊರ್ನಾಗ ಏನೋ ಕೆಲಸ ಮಾಡಿ ಫೇಮಸ್ ಆಗಿದ್ರಂತ, ಅವರು ಇಲ್ಲೆ ಅಲ್ಲಾ ಬೊಂಬಾಯಿ ಮದ್ರಾಸ ಮಟಾನು ಫೇಮಸ್ ಆದೋರು ಅದೇನೋ ಮಾಡಿ, ಅಲ್ಲಿಂದ ಸೀದಾ ಕೆಲ್ಸ ಬಿಟ್ಕೊಂಡು ಅದೇನೊ ಮಾಡೆ ಬಿಡ್ತೀನಿ ಅಂತ ಊರಿಗ ಬಂದು ಬಿಟ್ರು. ನಾ ಅವಾಗಿನ್ನು ಬಹಳ ಸಣ್ಣೋನು ಒಂದ ಗ್ಯಾಂಗ್ ಮಾಡ್ಕೊಂಡು ಕುಣಿಯೋರು ಕುಣಿಯೋರು, ಹೇಳಬಾರ್ದು ಬಿಡ್ರಿ. ಅದೇನಾತು ಅವರ ಗುಂಪು ಮೂರಾಬಟ್ಟೆ ಆತು." ಯಾರೋ ಬಂದಂಗಾತು ಮಾತನಿಲ್ಸಿದ

ಅವನು. ಅವನ ಮಾತುಗಳು ಬಹಳ ಕುತೂಹಲ ಅನಿಸತೊಡಗಿದವು. "ಹೂಂ ಆಮ್ಯಾಲ" ಮುಂದಕ ನಡದೆ, "ಆಮ್ಯಾಲ ಇನ್ನೇನು, ದಿನಾ ಬೆಳಿಗ್ಗೆ ಅವರ ಊರಾದ ಹೊನ್ನೆಬತ್ತಿಯಿಂದ ರಾತ್ರಿಯ ವಸ್ತಿ ಬಸ್ಸು ಮುಂಜಾನೆ ಆರಕ್ಕ ಊರಬಿಡತೈತಿ ಅದ್ರಾಗ ಬಂದು ಬಸ್ಟ್ಯಾಂಡ ಪಕ್ಕ ಪಾಪನಾಶಿ ಹೋಟೇಲಿನೊಳಗ ಚಾ ಕುಡದು ಸಿಕ್ಕಮಂದಿಗೆಲ್ಲಾ ಗುರತಿರ್ಲಿ ಇಲ್ಲದಿರಲಿ ಮಾತಾಡಿಸುತ್ತಾ ಸುತ್ತಲು ಗುಂಪುಕಟ್ಕೊಂಡ ಮಂದಿಗ ಖಾಲಿ ಪುಕ್ಕಟೆ ಮಾಹಿತಿ ಕೊಟ್ಟಾದ ಮ್ಯಾಲ ಹನ್ನೊಂದ ಹನ್ನೆಲ್ಡ ಗಂಟಿ ಸುಮಾರಕ್ಕ ಅವರ ಇಬ್ರೂ ಶಿಷ್ಯರುಗಳಾದ, ಬಂಡು ಸಂದು ಬರ್ತಾರ, ಅವರ ಜೊತಿಗ ಮಾತು ಕತಿ ಆಗತೈತಿ. ಒಣಮಾತು ಮಾತು ಆಡಿದ್ದೆ ಆಡಿಪ್ಪು, ಅವರ ಬಾಯಿ ಚರ್ಮದ್ದು ಅಂತೇಳಿ ಉಳ್ಕೊಂಡೈತಿ, ಒಂದ ಪಕ್ಷಕ ಕಟ್ಟಿಗಿದೇನಾರು ಆಗಿದ್ರ ಖಂಡಿತ ಹೊಡದ ಹೊಕ್ಕಿತ್ತೋ ಏನೋ. ಅಲ್ಲಿಂದ ಸೀದಾ, ಎಡಕ್ಕ ಬಂಡು ಬಲಕ್ಕ ಸಂದು ನಟ್ಟನಡಕ ಕುಬಸಣ್ಣ ಮಾಸ್ತರ ಸವಾರಿ ಸಂತಿ ಮಾಳದ ಕಡೀಗ ಬರತೈತಿ. ಕುಬಸಣ್ಣ ಮಾಸ್ತರ ಎಡಗೈಯೊಳಗ ಅದ್ಯಾವಾಗ ತೊಳದಿರ್ತಾರೋ ಏನೋ ಕಿಮಟ ವಾಸನಿ ಹೊಡೆಯೋ ರುಮಾಲ ಹಿಡ್ಕೊಂಡು ಅವಾಗ ಅವಾಗ ಮಾತಾಡಿ ಮಾತಾಡಿ ಎರಡು ದವಡಿ ಪಕ್ಕಕ್ಕ ಬಂದಿರೊ ಬಿಳಿ ನೊರೆಯಂತ ಉಗಳನ್ನ ಒರಸುತ್ತಾ ಮುಂದ ಬಂದ ಮಂದಿಗ ನಮಸ್ಕಾರ ಮಾಡ್ತಾ ಮಾತಾಡಿಸುತ್ತಾ ಸಂತಿ ಪ್ಯಾಟಿಯೊಳಗಿನ, ಜೈ ಕರ್ನಾಟಕ ಹೋಟೇಲಿಗ ಬರ್ತಾರ. ಅಲ್ಲಿ ಆತನ ಇಬ್ಬರು ಖಾಯಂ ದೋಸ್ತಗಳಾದ ಪ್ರೊ. ಗಟ್ಟಿಮಠ ಮತ್ತ ಸಂಗಣ್ಣ ಮೇಸ್ತ್ರು ಸಿಗ್ತಾರ. ಇಬ್ಬರು ಚೇಲಾಗಳು ತಾಲೂಕ ಕಛೇರಿ, ತಹಸೀಲ್ದಾರ್ ಆಫೀಸ್ ಕಡೀಗ ಹೋಗಿ ಅಲ್ಲಿ ಬಂದಿರೋಹಳ್ಳಿ ಮಂದಿ ತಾವ ಬಾತ್ಮಿತಕ್ಕೊಂಡಬಾರಾಕ ಹೊಕ್ಕಾರ, ಇವರ ಮೂವರು, ಇಡಿ ಜಗತ್ತಿನ ಸುದ್ಧಿ ತಕ್ಕೊಂಡು ಹೋಟೆಲಿನೊಳಗ ಕುಂತಮಂದಿಗ ತಲಿ ಚಿಟ್ಟ ಬರೋಮಟ ಮಾತಾಡಿ ಹೋಟೆಲಿನವನಿಗ ತಮ್ಮ ಪಾಂಡಿತ್ಯ ತೋರಿಸಿದವರೆ ಇಬ್ಬರು ಚೇಲಾಗಳು ತರಬಹುದಾದ ಸುದ್ಧಿಗಾಗಿ ಕಾದು ನಿಲ್ಲುವರು." ಒಂದು ಮನಿಯಿಂದ ಯಾರೋ ಕುಬಸಣ್ಣಗ ಬೇಕಾದ ಮನುಷ್ಯ ಬಂದಂಗಾಗಿ ಗಪ್ಪಾದ.

ಡೊಣ್ಯಾಡ ಅವನ ವಿಷಯ ಇನ್ನೂ ಹೇಳತೊಡಗಿದ, "ತಾಲೂಕಿನ ಯಾವುದೇ ಊರಿನೊಳಗ ಒಂದು ಜಾತ್ರಿ, ನಾಟಕ, ಸಭೆ ನಡದ್ರು, ಈ ಮೂವರ ಮಹಾಕೂಟ ಇದ್ದೇ ಇರತೈತಿ. ಈ ಊರ ಎಂ.ಎಲ್.ಎ. ನಸೀಬಣ್ಣ ಅದಾನಲ್ಲ, ಇವರ ಗುಂಪಿಗ ಕೇರ್ ಮಾಡೋದಿಲ್ಲಾ ಅದಕಂತ್ಲೆ ಹೋದ ಹೋದ ಹತ್ರ" ನಸೀಬಣ್ಣ ಮಹಾ ಹರಾಮಿ ಹಡಗನುಂಗೋನು ನೀವು ಫಹಣಿ ತಗೊಳಾಕ ಕೊಡ್ತಿರಲ್ಲಾ ಇಪ್ಪತ್ತ ರೂಪಾಯಿ ಅದ್ರಾಗ ಹತ್ತು ರೂಪಾಯಿ ಅವನಿಗ ಹೊಕ್ಕೈತಿ. ಅಂತಂದು ಹೆಸರು ಕೆಡಿಸಿಕೊಳ್ತಾ ಅಡ್ಡಾಡಿ ಬಿಡ್ತಾರ. ಒಂದ ಸಲ ಹೊಡ್ತ ಬಿದ್ದಾವ ಆದ್ರೂ ಮತ್ತ ಅವನ ಹಿಂದ ಶನಿಗಂಟು ಬಿದ್ದಾರ ಅಷ್ಟೆ ಅಲ್ಲಾ ಸಂಜೀ ಮತ್ತದೇ ಜಾಗ ಬಸ್ಟ್ಯಾಂಡ್‌ನ ಪಾಪನಾಶಿನಿ ಹತ್ರ ಕುತ್ಕೊಂಡು ಯಾವನಾದ್ರು ಬಕರ ಸಿಕ್ಕ ಅಂತಂದ್ರ ಸರಿಯಾಗಿ ಚಹ ತಿಂಡಿ ಗಂತ ತಲಿ ಬೋಳಿಸಿ ಮತ್ತೆ ಆತನೂರಿನ ವಸ್ತಿ ಬಸ್ಸು ರಾತ್ರಿ ಒಂಬತ್ತಕ ಬಿಡ್ತಂದ್ರ ಆ ಬಸ್ ಹತ್ತಿದೊಡನೆ ಮಹಾ

ಕೂಟದ ಮುಕ್ತಾಯವಾಯ್ತು. ಇಬ್ಬರು ಚೇಲಾಗಳು ಖಾಲಿ ಕೈ ಬಿಸ್ಕೊಂತ ತಮ್ಮೂರಗಳಿಗೆ ಹೊಂಟ ಹೊಕ್ಕಾರ ಗಟ್ಟಿಮಠ ಮೂಗತೂರಿಸಿಕೊಳ್ತಾ ಬಸ್ಟ್ಯಾಂಡ ಪಕ್ಕ ಅಂದಾನಿ ಭಟ್ಟನ ಹೋಟೆಲ ಒಳಗಸೇರ್ತಾನ. ಸಂಗಣ್ಣ ಕಾಲೇಜಿನೊಳಗ ನಡದ ಸುದ್ಧಿಯ ವರದಿಯನ್ನ ಒಪ್ಪಿಸಾಕಂತ ಮ್ಯಾನೇಜಮೆಂಟ ಮೆಂಬರುಗಳ ಮನಿಕದ ತಟ್ಟಾಕ ಹೊಕ್ಕಾನ. ಇದು ಪ್ರತಿದಿನದ ಕತಿ, ಒಂದ ದಿನ ದೇವರ ಮ್ಯಾಗ ಹೂ ತಪ್ಪಿದ್ರು ಕುಬಸಣ್ಣನ ಜಂಬೂಸವಾರಿ ತಪ್ಪಂಗೆ ಇಲ್ಲಾ."

ನನಗ ಅವನ ಮಾತಕೇಳಿ ಸಾಕ ಸಾಕಾಗಿ ಹೋತು. ಅವನ ಮಾತ ಕೇಳ್ತಾ ಹೋದಂಗ ಮೂರ ಕಿಲೋಮೀಟರ ಹೋದದ್ದೆ ಗೊತ್ತಾಗಲಿಲ್ಲಾ. "ನೋಡು ಡೊಣ್ಣಾಡ ಬರೋಮುಂದ ನಿನ್ನ ಕತಿ ಕೇಳ್ತಾ ಬಂದದ್ದೆ ಗೊತ್ತಾಗಲಿಲ್ಲಾ ವಾಪಾಸ ಹೋಗೋ ಮುಂದ ಅದನ್ನೆ ಮುಂದವರಿಸು ಹೋಗಿ ಸೇರಿಕೊಳ್ಳಾನು." ಅಂದೆ, "ಅಯ್ಯ ನೀವು ಸುಮ್ಮಕಿರ್ರಿ ಇನ್ನೂ ಒಂದ ತಿಂಗಳಾದ್ರು ಅವರ ಇಡಿ ಇತಿಹಾಸ ಹೇಳಾಕ ಆಗೋದಿಲ್ಲಾ" ಅಂದವನೆ ಏನೋ ಯೋಚನೆ ಮಾಡತೊಡಗಿದ ನಾನು ಅವನನ್ನ ಹಿಂಬಾಲಿಸಿದೆ.

"ಅದು ಮಾಡ್ತೀನಿ, ಇದು ಮಾಡ್ತೀನಿ ಅಂತೇಳಿ ದೊಡ್ಡ ಮಂದಿ ತಾವ ಸಿಕ್ಕಾಪಟ್ಟೆ ಹಣತಗೊಂಡು ಇವತ್ತ ನಾಳೆ ಅಂತಂದು ಯಾರೊಬ್ಬರಿಗೂ ಸಾಲಾ ವಾಪಾಸ ಕೊಡೋದೆ ಇಲ್ಲಾ. ಅವನ ಸಾಲ ಒಬ್ಬರಹತ್ರ ಅಲ್ಲ. ಮನ್ನಿನ್ಯಾಗ ಯಾರೋ ದೊಡ್ಡ ಸಾಲಿಮೇಷ್ಟ್ರಂತ ಪಾಪ ಅವನ ಹತ್ರ ರೊಕ್ಕ ಇಸ್ಕೊಂಡ ಖರ್ಚು ಮಾಡ್ಕೊಂಡು ಸುಳ್ಳ ಹೇಳಿ ಹೇಳಿ ಅವನಿಗ ಸರಿ ಟೋಪಿ ಹಾಕಿದ. ಮತ್ತೇನೋ ವಿಚಿತ್ರ ವ್ಯವಹಾರ ಐತಿ ಅವನದು". ನನಗ ನಂಬಾಕ ಆಗಲಿಲ್ಲಾ ಮಾತಾಡಬೇಕಾದ್ರ ಎಂತ ಸಾಚಾ ಅನ್ನೋರ ಹಂಗೆ ಮಾತಾಡ್ತಾನ ಅದ್ರ ಬಹಳ ನೀಚ ಮನುಷ್ಯ ಅನಿಸಿತು. "ಅಲ್ಲಾ ಸಾಲಾ ತಗೊಂಡು ಏನ ಮಾಡ್ತಾನ?" ಕೇಳಿದೆ, "ಮತ್ತೇನು ಮೂಗು ತೂರಿಸುವುದು ಮತ್ತ ದಿನ ಪ್ಯಾಟೀಗ ಅಡ್ಡಾಡಾಕ, ಮನಿಖರ್ಚಿಗ ಒಂದ ಎರಡ ಹರಕತೀಟಗ ತ್ಯಾಪಿ ಮುಚ್ಚಾಕ ಮತ್ತೊಂದ ಕಡೀಗ ಹರಿತಾನ ಆಟೇಯ. ಅವನ ತಲಿಯೊಳಗ ಅವೇನೋ ವಿಚಾರಗಳು ಅದಾವಂತ ಮಂದಿ ಇದ್ರಿಗ ಅಂತಿರ್ತಾನಂತ. ಆದ್ರ ಅವ್ಯಾವು ಕೆಲ್ಸ ಮಾಡ್ತಿಲ್ಲಾ, ಮನ್ನಿನ್ಯಾಗ ಸರ್ಕಾರ ದೊಡ್ಡ ಕಾರ್ಯಕ್ರಮವನ್ನ ಹರಿಜನರಿಗ ಮಾಡಾಕು ಅಂತೇಳಿ ಕೊಟ್ಟಿತು. ಅವನ ಚೇಲಾ ಸಂದುಗ ತಿಳಿಯದಂಗ ಇಡಿ ಲಕ್ಷ ಲಕ್ಷವನ್ನ ನುಂಗಿ ಹಾಕಿದ. ಅವರೆಲ್ಲರಿಗೂ ಇವನೆ ಗುರು ಊರಾಗ ಮಂದೀನು ಅಷ್ಟಕ್ಕ ಅಷ್ಟೇ ಇವನನ್ನ ಯಾರು ನಂಬೋದಿಲ್ಲಾ. ಇದ್ದ ನೌಕರಿ ಬಿಟ್ಕೊಂಡು ಏನೋ ಘನ ಸಾಧನೆ ಮಾಡ್ತೀನಿ ಅಂತೇಳಿ ತನ್ನ ಹೆಸರಿಗ ಮಾಡ್ಕೊಂಡು ಆರೇಳು ಕುರಿ ಸಾಕಿದ, ರೋಗ ಬಂದ್ಕೊಂಡು ಅವು ಸತ್ತಹೋದವು. ಹಿಂಡೊ ಆಕಳ ಮಾಡಿದ ಅವು ವದ್ಕೊಂಡವು ಈಗ ಬೇಕಾರ ತಿರಗಾಡ್ತಾ ಯಾವುದಾರು ಹೊಸ ಗಿರಾಕಿಸಿಕ್ರ ಪುಸಲಾಯಿಸಿ ದುಡ್ಡು ಎತ್ಕೊಂಡು ಗಪ್ ಆಕ್ಕಾನ." ಡೊಣ್ಣಾಡ ಹೇಳ್ತಾ ಹೊಂಟಿದ್ದ ನನಗ ಮಾತ್ರ ಅವನ ಕಂಡಾಗ ಇದ್ದ ಅನುಮಾನ ಪರಿಹಾರ ಆದಂಗ ಅನಿಸಿತು. ಸಂಗಣ್ಣ ಮಾಸ್ತರ ಸರಿಯಾಗಿ ಹೆಸರ ಇಟ್ಟಾನ ಬಿಡು ಮಹಾನ್ ವ್ಯಕ್ತಿ ಅಂತ ಅನಿಸಿತು.

ಪ್ರೊ. ಗಟ್ಟಿಮಠ ಕನ್ನಡ ಮಾಸ್ತರ ಇರಬೇಕು ಅಲ್ಲಿ ಇಲ್ಲಿ ಮಂದಿ ಹೇಳಿದ ಕೆಟ್ಟ ಜೋಕ್‌ಗಳನ್ನ ತನ್ನವೇ ಅಂದ್ಕೊಂಡು ಏನೂ ತಿಳಿಯದ ಹುಡ್ರ ಮುಂದ ಹೇಳಿ ನಗಸಿದ್ರೆ ತಾನೊಬ್ಬ ಪ್ರಖ್ಯಾತ ಪ್ರವಾಚಕ ಅಂತ ತಿರಗ್ತಾನ. ಹುಡುಗರಿಗಿಂತ ಹುಡುಗಿಯರಂದ್ರೆ ಪಂಚಪ್ರಾಣ, ಅವನ ಮಾರಿ ನೋಡಿ ಯಾ ಹುಡುಗಿಯೂ ಮೋಸ ಹೋಗಿಲ್ಲ. ಆದ್ರೂ ಒಂದ್ಯೆತಿ ಕರಿಚೊಟ್ಟ ಪಮಾರಿ ಅಂತೇಳಿ ಒಂದಿಷ್ಟ ದಿನ ಅವನ ಹಿಂದ ತಿರುಗಾಡಿದಳು. ಇಡಿ ಕಾಲೇಜಿಗ ತಿಳದ ಹೋತು ಇಡಿ ಮ್ಯಾನೇಜಮೆಂಟ ಮುಂದ ತಾನೆ ಪಂಡಿತ ಅಂತ ಪೋಸ್ ಕೊಡ್ತಾನ. ಎಲ್ಲರೂ ಪುಂಗಿ ಊದಿದಾಗ ತಲಿಹಾಕೊ ಹಾವಿನಂಗೆ ತಲಿ ಅಲ್ಲಾಡಿಸ್ತಾರ ಮುಗೀತು. ಅವನಷ್ಟಕ್ಕ ಅವನೆ ಮಹಾ ಮೇಧಾವಿ, ಚಿಂತಕ, ವಿಮರ್ಶಕ ಅಂತ ತಿಳ್ಕೊಂಡಾನ. ಅವನಿಗೂ ಉಳಿದ ಮಾಸ್ತರಗಳಿಗೂ ಆಗೋದಿಲ್ಲಾ, ಹಿಂದಕ್ಕ ಒಂದಸಲ ಕಾಲಾನವು ಕೈಯಾಗಿ ಹಿಡ್ಕೊಂಡು ಹೊಡದಾಡಕೊಂಡಾರ. ಬರದದ್ದೇನಿಲ್ಲಾ, ಓದಿದಂತು ದೂರ ಉಳಿತು. ಪಾಠದಾಗ ಬಂದಿದ್ದನೆ ಒಗ್ಗರಣೆ ಹಾಕಿ ಹೇಳ್ತಾನ ಮುಗಿತು. ಯಾರಾದ್ರು ಸರಿಯಾಗಿ ಓದಿಕೊಂಡು ಬಂದು ಪ್ರಶ್ನೆ ಕೇಳಿದ್ರ ಮುಗಿತು ಬಾಯಿ ಬಾಯಿ ಬಿಡ್ತಾನ. ಇಡಿ ತಾಲೂಕಿನ ತುಂಬ ಅವನ ಮಂದಿಗಳು ಅದಾರ ವರ್ಷಕ ಒಂದ ಸಲನಾರು ಹಳ್ಳಿಗಳಿಗ ಹೊಕ್ಕಾನ ಅವೇ ಹಳಿಸಿದ ಮಾತುಗಳು ಆದ್ರ ಒಂದೀಟು ತಲಿ ಖರ್ಚು ಮಾಡ್ತಾನ ಏನಪ್ಪ ಅಂದ್ರ ಈ ಹಳ್ಳಿಯೊಳಗ ಹೇಳಿದ್ದನ್ನ ಮತ್ತೊಂದು ಹಳ್ಳಿಯೊಳಗ ಹೇಳೋದಿಲ್ಲಾ ಅವನ ಹಿಂದ ಎರಡು ಮೂರು ಹಳ್ಳಿಗಳನ್ನ ತಿರುಗಿದ್ರೆ ಆತು ಇಂತ ಮಾತುಗಳೇ ಬರ್ತಾವ ಅಂತೇಳಿ ಹೇಳಿಬಿಡಬಹುದು. ಬಹಳ ನಿರೀಕ್ಷೆ ಇಟ್ಕೊಂಡಿದ್ದ ನನಗೆ ಬೇಜಾರಾಯಿತು. ಮತ್ತೆ ಆ ಮನುಷ್ಯನ ಬಗ್ಗೆ ಕೇಳಾಕ ಮನಸು ಬರಲಿಲ್ಲಾ ನಿರ್ಲಿಪ್ತನಾಗಿ ಸುಮ್ಮನೆ ಹೊಂಟೆ.

ಏನೂ ಗೊತ್ತಿಲ್ಲದ ನಾನು ಈ ಮಂದಿ ಬಗ್ಗೆ ಬಹಳ ಹೆಚ್ಚಿನ ನಿರೀಕ್ಷೆ ಇಟ್ಕೊಂಡಿದ್ದೆ ಮೊದಲ ಪರಿಚಯಕ್ಕ ಕುಬಸಣ್ಣ ನನ್ನ ಸರಿಮಾರ್ಗಕ್ಕ ಒಯ್ಯೊ ದ್ರೋಣ ಸಿಕ್ಕ ಅಂದ್ಕೊಂಡಿದ್ದೆ ಅವನದೆ ರಗಡ ಆಗಿರೋ ಹೊತ್ನಾಗ ನನಗೇನು ತಿಳುವಳಿಕೆ ಕೊಟ್ಟಾನು ಗಟ್ಟಿಮಠ ನನ್ನ ಹತ್ರ ಎಂಥ ಚಲೋ ಮಾತಾಡಿದ್ದ. ಕ್ಯಾಂಪಿನೊಳಗೆ ಆತನ ಬಗ್ಗೆ ಬಹಳಷ್ಟು ಮಾತುಗಳು ಎದ್ದಿದ್ರು ನಾನು ಆ ಮಾತುಗಳನ್ನು ನಂಬಿರಲಿಲ್ಲ ಆದ್ರ ಇವತ್ತು. ನಾನು ಗೊಂದಲದೊಳಗ ಸಿಕ್ಕೊಂಡಿದೆ ಯಾವುದು ಖರೆ ಯಾವುದು ಸುಳ್ಳು. "ಸರ್ ಏನ್ ಯೋಚ್ನೆ ಮಾಡಾಕಹತ್ತಿರಿ. ನಿಮ್ಮ ಮೂರನೇ ಆದರ್ಶ ಸಂಗಣ್ಣ ಮಾಸ್ತರ ಕತಿ ಕೇಳಿದ್ರ ಹೌಹಾರಿ ಹೋಕ್ಕಿರಿ" ಅವನು ಹೇಳೋ ತಯಾರಿ ಮಾಡತೊಡಗಿದ. ನಾನು ಕೇಳಲು ತಯಾರಾದೆ. "ಸಂಗಣ್ಣ ಮದ್ಲು ಯಾವದೊ ಊರಿನೊಳಗ ಮಾಸ್ತರ ಆಗಿದ್ನಂತ, ಅವನಿಗ ಇದೇ ಊರ ಬೇಕಾಗಿತ್ತು. ಕೆತ್ತಾಬಾಜಿ ಮಾಡೋದ್ರಲ್ಲಿ ಬಹಳ ನಿಷ್ಣಾತನಾದ ಆತ ಸುಲಭವಾಗೆ ಈ ಸಾಲಿಯೊಳಗಿದ್ದ ಒಬ್ಬನನ್ನ ಕಮ್ಮಿಮಾಡಿಸಿ ಹೆಡ್‌ಮಾಸ್ತರರ ಆಗಾಕಂತೇಳಿ ಬಂದ. ಇಲ್ಲಿದ್ದ ಹೆಡ್‌ಮಾಸ್ತರ ಬಹಳ ಜೋರು ಇದಿದ್ದರಿಂದ ಕೆಮ್ಮಾಕ ಆಗದೆ ಮುಚ್ಕೊಂಡು ಬರಿ ಮಾಸ್ತರ ಆಗಿಯೇ ಉಳ್ಕೊಂಡು ಪ್ರತಿದಿನ ಸಾಲಿಯೊಳಗ ನಡಿಯೋದನ್ನ ಮ್ಯಾನೇಜಮೆಂಟಿನ

ಎಲ್ಲಾ ಮೆಂಬರಗಳಿಗೆ ಮುಟ್ಟಿಸಿ ಬರೋದೊಂದೆ ಕೆಲಸ. ಪಾಠ ಮಾಡಿದ್ರ ಮಾಡಿದ ಇಲ್ಲದಿದ್ರ ಇಲ್ಲಾ ಯಾಕಂದ್ರ ಎಲ್ಲಾ ಮೆಂಬರಗಳಿಗೆ ಸುದ್ಧಿ ಮುಟ್ಟಿಸೋ ಮಾಧ್ಯಮ ಆಗಿರೋದ್ರಿಂದ ಎಲ್ಲಾ ಮಂದಿಗೂ ಇವನ ಬಗ್ಗೆ ವಿಶೇಷ ಗೌರವ. ಇದನ್ನೆ ಬಂಡವಾಳ ಮಾಡ್ಕೊಂಡು ಬೆಳಿಗ್ಗೆ ಸಾಲಿಗ ಬಂದು ಹಾಜರಿ ಹಾಕಿ ಹೆಡ್‌ಮೇಷ್ಟ್ರ ಮುಂದ ಕುಂತು ಅವನಿಗ ಮ್ಯಾನೇಜ್‌ಮೆಂಟಿನೊಳಗಿನ ಸುದ್ಧಿ ಮುಟ್ಟಿಸಿದ್ವೆ ಎದ್ದು ಸೀದಾ ತಾಲೂಕ ಕಛೇರಿಗ ಹೋಗಿ ಹರಟೆಹೊಡದು ಸೀದಾ ತಾಸೀಲ್ದಾರ್ ಕಛೇರಿಗೆ ಹೋಗಿ ಮಂದಿ ಕೂಡ ಮಾತಾಡಿಕೊಂಡು ಸುದ್ಧಿಗಂತೇಳಿ ಕಾಲೇಜ ಕಡೀಗ ಬರೋದು, ಇದೇ ಆತನ ದಿನಚರಿ, ಯಾವನಾರು ಅವನೊಂದಿಗ ಹೆಚ್ಚು ಕಮ್ಮಿ ಮಾಡಿಕೊಂಡ್ರೆ ಮುಗೀತು. ಮೆಂಬರುಗಳಿಗ ಇಲ್ಲದೆಲ್ಲಾ ಹೇಳ್ಕೊಂಡು ಸರಿಯಾಗಿ ಛೀಮಾರಿ ಹಾಕಿಸಿ ಬಿಡ್ತಾನ ಅದಕ್ಕಂತೇಳಿ ಅವನ ಉಸಾಬರಿಗ ಯಾರೂ ಹೋಗೋದಿಲ್ಲಾ ಅಷ್ಟೇ ಅಲ್ಲಾ ಮನ್ನೆ ಪ್ರಿನ್ಸಿಪಾಲರನ್ನ ಅಲುಗಾಡಿಸಿ ಎತ್ತಿ ತಾನು ಕಡಿಗಾಲದಾಗಾದ್ರು ಪ್ರಿನ್ಸಿಪಾಲ್ ಆಗಿದ್ವೆ ಅನ್ನೋ ನೆನೆಪಿನೊಳಗೆ ಸತ್ತ ಹೋದ್ರಾತು ಅಂದವನೆ ಎಂಥ ಪಗಡೆಯಾಟ ಆಡಿದ ಅಂತಂದ್ರ ಪ್ರಿನ್ಸಿಪಾಲರು ಕುರ್ಚಿ ಬಿಟ್ಕೊಟ್ಟು ಸುಮ್ಮನೆ ಎದ್ದು ಬರಬೇಕಾತು. ಎಲ್ಲಾ ಜಾತಿ ಲೆಕ್ಕಾಚಾರ ಸಂಸ್ಥೆಯೊಳಗಿರೋ ಎಲ್ಲಾ ಹೆಗ್ಗಣಗಳು ಅವನ ಜಾತಿಯವರೆ ಅದೊಂದೆ ಸಾಕು ಯಾರನ್ನ ಬೇಕಾರು ಆಟ ಆಡಿಸಬಹುದು." ನನಗ ಹೆದರಿಕೆ ಸುರು ಆತು, ಸಂಗಣ್ಣ ಮಾಸ್ತರ ನೀಚ ಕೆಲ್ಸ ಕೇಳಿ ವಾಕರಿಕೆ ಬಂತು. ಹಂಗೇನಾರು ಆದ್ರ ನನ್ನ ಗತಿ ಏನು? ನನ್ನ ತಲಿ ಹಾಳಾತು, ಈ ಡೊಣ್ಣಾಡಗ ಯಾಕಾರು ಕೇಳಿದೇ ಅನಿಸಿಬಿಡ್ತು. ಆಗೋದು ಗೊತ್ತಿಲ್ಲದೆ ಆಗಿಹೊಕ್ಕಿತು. ಇದು ಒಂದ ರೀತಿಯಿಂದ ಅನುಕೂಲ ಆತು ಬಿಡು, ಆತನೊಟ್ಟಿಗ ಪಾಡಿದ್ರ ಆತು, ಅಂತ ಸಮಾಧಾನ ಮಾಡ್ಕೊಂಡೆ.

ವಿಷಯಗಳ ತಾಕಲಾಟದೊಳಗ ಕತ್ತಲಾಗಿದ್ವೆ ಗೊತ್ತಾಗಲಿಲ್ಲಾ ನಾವಿಬ್ರು ಊರಾಗ ಬಂದಿದ್ವಿ, ಯಾರೊ ನನ್ನ ಶಿಷ್ಯೋತ್ತಮ "ನಮಸ್ತೆ ಸಾರ್" ಅಂದ, ತಿರುಗಿ ನಾನು 'ನಮಸ್ತೆ' ಅಂದೆ, ಅವನು ತುಸು ದೂರ ಹೋದ ಮ್ಯಾಲ ಇಂವ ಸುರುಮಾಡಿದ. "ಸರ್ ಈಗ ನಮಸ್ತೆ ಅಂದ್ನಲ್ಲಾ ಗೊಳಪ್ಪನವರ್, ಸಾಮಾನ್ಯನಲ್ಲ ಅವನಪ್ಪ ಒಂದ ಕಾಲದಾಗ ದೊಡ್ಡ ಶ್ರೀಮಂತ ಮತ್ತ ಈಗ ಬಿಕಾರಿ, ಯಾಕ ಹೇಳ್ರಿ ಅವನ ಮಾರಿ ನೋಡಿದೆ. ಮೂರನಾಕು ವರ್ಷದ ಹಿಂದೆ, ಓ.ಸಿ. ಅಂತ ಕಟ್ತಾರ, ಅದನ್ನ ಕಟ್ಟಿಸಿಕೊಂಡು ಸಿಕ್ಕಾಪಟ್ಟೆ ಒಳಗ ಹಾಕ್ಕೊಂಡಿದ್ದ ಈಗ ಸ್ಟ್ರಿಕ್ಟ್ ಎಸ್.ಪಿ. ಬಂದಿದ್ವೆ ಒಳಗ ಹಾಕ್ಯಾರ. ಇವನು ಮಹಾ ಡೇಂಜರ್ ಸರ್, ಹುಷಾರು" ಅಂತೇಳಿ ಎಚ್ಚರಿಸಿದ. "ಹೋಗಲಿ ಬಿಡಪ್ಪ ನನಗ್ಯಾಕ ಬೇಕು. ಕೆಟ್ಟೋರನ್ನು ಒಳ್ಳೆಯವರನ್ನು ಒಂದೇ ರೀತಿ ನೋಡೋದು ನನ್ನ ಕೆಲ್ಸ. ಅವನ ಕೆಟ್ಟತನದ ಹಿಂದೆಯೂ ಒಳ್ಳೆತನ ಐತಿ. ಅವನು ಮಾಡ್ತಿರೋದು ಹೊಟ್ಟೆಗಾಗಿಯೇ" ಅಂದವನೆ ನನ್ನ ರೂಂ ಕಡಿಗ ಹೊರಟೆ.

ಆವಾಗಲೇ ಹುಡುಗರು ಹುಡುಗಿಯರು ಸಲುಗೆ ಬೆಳೆಸಿಕೊಂಡಿದ್ದರು. ಪಾಠದೊಂದಿಗೆ ಅವರ ಸಾಮಾಜಿಕ ಜವಾಬ್ದಾರಿಯನ್ನು ಹೇಳ್ತಿದ್ವೆ. "ಈ ದೇಶದೊಳಗೆ ಕೆಲವೆ ಕೆಲ ಮಂದಿ

ಮಾತ್ರ ಆರಾಮದಿಂದ ಅದಾರ, ಇನ್ನೂ ಮುಕ್ಕಾಲ ಪಾಲು ತಮ್ಮ ಅವಶ್ಯಕತೆಗಾಗಿ ಪರದಾಡುತ್ತಿದ್ದಾರೆ. ಇನ್ನೂ ದೇಶದ ಬಡವರಿಗ ಉಣ್ಣಾಕ ಬಾಯಿ ಬಂದಿಲ್ಲಾ. ಕನಸುಕನವರಿಕೆಯೊಳಗೆ ಎಷ್ಟೋ ರಾತ್ರಿಗಳು ಕರಗಿಹೊಕ್ಕಾವ." ಆ ಕ್ಷಣ ಹುಡ್ರೆಲ್ಲಾ ಉಸಿರು ಬಿಗಿ ಹಿಡ್ಕೊಂಡು ನಾನು ಹೇಳೋದನ್ನ ಕೇಳ್ತಿದ್ರು ನಾನು ಹಂಗೆ ಪ್ರೊ. ಕಂಪಣ್ಣ ಅವರ ಬಾಷಣವನ್ನ ಕೇಳ್ತಿದ್ದೆ. ಆ ಮನುಷ್ಯ ಆಟೊಂದು ಸ್ವಾರ್ಥಿ ಅಂತೇಳಿ ತಿಳಿದಾಗ ಭರವಸೆ ಎಲ್ಲಾನೂ ಹೊಂಟಹೋಗಿತ್ತು. ಸಂಗಣ್ಣ, ಪ್ರೊ. ಗಟ್ಟಿಮಠ, ಕುಸಬಣ್ಣ ಮಾಸ್ತರ ಶಿರಗೂರ ತಾಲೂಕ ಸುತ್ತೆಲ್ಲಾ ಹಳ್ಳಿಗಳೊಳಗ ತಿರಗಾಡಿ ಅನಕ್ಷರಸ್ಥ ಮಂದಿ ತಲಿ ಹಿಂಗೆ ತಿಂತಿರಾಕು ಅನಿಸೀತು.

ಮಾಸ್ತರಗಳು ಎಷ್ಟೊಂದು ಪ್ರಯತ್ನ ಮಾಡಿದ್ರು ಹತ್ತ ಹದಿನೈದ ಹುಡ್ರು ಇಪ್ಪತ್ತ ಹುಡುಗಿಯರ ಗುಂಪು ಸದಾನನ್ನ ಕೂಡ ಇರಾಕ ತಯಾರಾದ್ರು. ಆ ಮೂವರ ಯೋಜನೆ ಯಂತೆ ನನ್ನನ್ನ ಆಂದೋಲನದ ಸಂಬಂಧ ನಾಟಕ ತಯಾರ ಮಾಡಾಕ, ಯಾವದೋ ಹಳೆ ಉಗ್ರಾಣವನ್ನ ಬಿಟ್ಟುಕೊಟ್ರು. ಅದು ಎಷ್ಟೊಂದು ಹೊಲಸಾಗಿತ್ತು ಅಂತಂದ್ರ ಅದ್ರಾಗ ಕಾಲ ಇಡಾಕ ವಾಕರಿಕೆ ಬರೋಹಂಗಿತ್ತು. ತೊಳದು ಸ್ವಚ್ಛಮಾಡಿಕೊಟ್ರು. ಶಿರಗೂರಿನ ವಿಶೇಷ ಅಂದ್ರ ಮಲ್ನಾಡ ಸೆರಗು ಸಾಧಾರಣ ಮಳಿಯಾಗಿ, ವಾತಾವರಣ ಪಸಂದ ಇದಿದ್ದರಿಂದ ಹುಡುಗಿಯರಂತು ಒಂದಕ್ಕಿಂತ ಒಂದು ಚೆಂದಾಗೆ ಇದ್ದವು. ನಾಟಕಕ್ಕ ಮದಲದಿನ ಬರಿ ಇಪ್ಪತ್ತ ಹುಡುಗಿಯರು ಬಂದಿದ್ರು ಅದನ್ನ ಕಂಡು ಪಿ.ಯು.ಸಿ ಎಲ್ಡನೆಯ ವರ್ಷದ ರಾಮ, ಹನಮು, ಸಿದ್ಧ, ಜಗ್ಗಿ, ಗುಂಪು ಕಿತ್ಕೊಂಡು ಬಂದಿತ್ತು ಮಾರನೆಯದಿನ. ಇಡಿ ಉಗ್ರಾಣ ಎಲ್ಲೆಲ್ಲೂ ಹಿಡಿಸದಂಗಾಗಿತ್ತು, ಗುಂಪಿನ್ಯಾಗೆಲ್ಲಾ ಉದ್ದಕಾಣ್ತಿದ್ದ ಹುಡುಗಿಯಾರಂತ ಒಂದ ಕ್ಷಣ ಯೋಚ್ನೆ ಮಾಡಿದೆ, ನಾನು ನನ್ನ ಪರಿಸ್ಥಿತಿ ನೆಪ್ಪಾಗಿದ್ದೆ ಯೋಚನೆಯನ್ನ ಬೇರ ಸಮೇತ ಕಿತ್ತಹಾಕಿದೆ. ಮೂರನೆಯ ದಿನ ಮದಲೆರಡು ದಿನಗಳಷ್ಟು ಹುಡ್ರು ಬಂದಿರಲಿಲ್ಲಾ, ನನಗ ಗೊತ್ತಿತ್ತು ಬಂದಿದ್ದ ಹುಡ್ರೊಳಗ ಬಹಳ ಮಂದಿ ಏನೇನೊ ಕಲ್ಪನೆಯಿಂದ ಬಂದಿದ್ರು ಅಂತೇಳಿ, ಗಟ್ಟಿಯಾಗಿ ಉಳ್ಕೊಂಡವರೊಳಗ ಆ ಹುಡುಗಿನೂ ಒಬ್ಬಾಕಿ. ಪ್ರತಿಯೊಬ್ಬರು ನೆಲದ ಮ್ಯಾಲ ಕೂಡಾಕಬೇಕು ಮದಲ ದಿನ ಹಿಂಜರಿದಿದ್ದೋಳು ಸಹಜವಾಗೆ ಕುಂತ್ಕೊಂಡ್ಲು, ಇದೊಂದು ಹೊಸ ಬದಲಾವಣೆ ಅನಿಸಿತು. "ನೋಡ್ರಿ ಇಲ್ಲಿ ನಾವೆಲ್ಲಾ ಸೇರಿರೋದು ಜನರೊಳಗ ಜಾಗ್ರತೆ ಮೂಡಿಸಿ ಅಕ್ಷರ ಕಲಿಯಾಕ ಪ್ರೇರಪಿಸೋದು ನಮ್ಮ ಭಾವನೆಗಳಿಗೆ ಯಾವುದೇ ಸ್ಥಾನವಿಲ್ಲಾ. ನಾವೆಲ್ಲರೂ ಒಂದೆ ಸಮಾನತೆ ಗಂತೇಳಿ ಬಡದಾಡಕ ಹತ್ತೀವಿ. ನಾನು ನಿಮ್ಮ ಮೇಷ್ಟ್ರ ಅನ್ನೋ ಭಾವನೆ ಬೇಡಾ. ಇದು ಕನಸು ಹೆಣೆಯೋ ಕಾಲ ಅನ್ನೋದನ್ನ ನಿಮಗ ನೆಪ್ಪಮಾಡಿಕೊಡ್ತೀನಿ, ಯಾರು ಯಾರ ಬಗ್ಗೆ ಆ ಭಾವನೆಯನ್ನ ತಳಿಯೋದೆ ಬೇಡಾ, ಯಾಕಂದ್ರ ಈ ನಾಡಿನ ಕೋಟ್ಯಾಂತರ ಜನರ ಕನಸುಗಳಿಗೆ ಅರ್ಥ ಕಲ್ಪಸಿಕೊಡೋ ಅವಕಾಶ ನಮ್ಮ ಪಾಲಿಗೆ ಬಂದಿದೆ," ಖಂಡು ತುಂಪಾಗೆ ಹೇಳಿದ್ದೆ. ನನ್ನ ಮಾತಕೇಳಿದ್ದೆ ಮತ್ತೊಂದಿಷ್ಟು ಮಂದಿ ಜಾಗ ಖಾಲಿ ಮಾಡಿದ್ರು, ಗಟ್ಟಿಯಾಗಿ ಉಳ್ಕೊಂಡವರನ್ನ ತಯಾರ ಮಾಡಲು ಆರಂಭ ಮಾಡ್ಕೊಂಡೆ. ಹೊಸ

ಉಮೇದು ಒಳಗೆ ಯಾವುದೇ ಉದ್ದೇಶ ಇದ್ರೂ ಯಾರೂ ತೋರಗೊಡದೆ ಎಲ್ಲವನ್ನೂ ಕಲಿಯತೊಡಗಿದರು.

ಜಾಥಾ ಆರಂಭಗೊಂಡಿತ್ತು. ಕಾಲೇಜು ಮುಗಿಸಿಕೊಂಡು ಹುಡುಗರ ಜೊತೆಗೆ ನಾನು ಶಿರಗೂರಿನ ಪ್ರತಿಯೊಂದು ಹಳ್ಳಿಹಳ್ಳಿಗಳಿಗೂ ಭೆಟ್ಟಿಕೊಡತೊಡಗಿದೆ. ನನ್ನೊಂದಿಗೆ ಸಂಗಣ್ಣ ಮಾಸ್ತರ, ಇಲ್ಲ ಕುಸಬಣ್ಣ ಯಾರಾದ್ರು ಒಬ್ಬರು ಇರುತ್ತಿದ್ರು. ಹುಡುಗರು ಹುಡುಗಿಯರು ರಾತ್ರಿ ಹತ್ತು ಗಂಟೆಯಾದರು ಅಂಜಿಕಿ ಇಲ್ದೆ ನಮ್ಮ ಕೂಡ ಇರೋದು ಸರ್ವೆ ಸಾಮಾನ್ಯ ಆತು. ಆಗ್ಲೆ ಊರಾಗೆಲ್ಲಾ ಗುಸು ಗುಸು ಸುದ್ಧಿಯ ಕಿಡಿ ಎದ್ದಿತು. ಯಾರ ಇದ್ರು ನಡ್ಕೊಂಡ ಹೊಕ್ಕಿತ್ತು ಆದ್ರ ಶಿರಗೂರಿನ ಸುಂದರಿ ಡಾ. ಹಳ್ಳೆಪ್ಪ ನವರ ಮಗಳು ಮಲ್ಲಿಕಾ ತನ್ನ ಐಶಾರಾಮ ಬದುಕನ್ನ ಬಿಟ್ಟು, ಎದ್ದೆನೋ ಜೋಗಿ ಅಂದ್ರ ಹೆಗಲಮ್ಯಾಲ ಕಡಾಸ, ಅನ್ನೊಹಂಗ ಊರೂರು ತಿರಗಾಡ್ತಿದ್ದ ನಮ್ಮ ಟೀಂನಲ್ಲಿ ಇದಿದ್ದೆ ಆಗಿತ್ತು. ನಾನು ಯಾರಿಗೂ ವೈಯಕ್ತಿಕ ಭಾವನೆ ವ್ಯಕ್ತಪಡಿಸಾಕ ಅವಕಾಶನೆ ಕೊಡ್ತಾ ಇರ್ಲಿಲ್ಲಾ. ನಮ್ಮ ತಂಡ ಬದ್ಧವಾಗಿ ಒಂದ ಕೆಲ್ಸಕ ಅಂಟಿ ಕೊಂಡೀವಿ ಅಷ್ಟೇ, ಮತ್ತೆ ನಮ್ಮ ನಡಕ ಯಾವ ಸಂಬಂಧಗಳ ಕಲ್ಪನೆಯೂ ಬರಕೂಡದು. ಅಂತ ಅವಾಗ ಅವಾಗ ಹೇಳುತ್ತಾ ಅವರೊಳಗೆ ಮೊಳೆಯುವ ಭಾವನೆಯನ್ನ ಬದಲಿಸಿಕೊಳ್ಳಾಕ ನೋಡಿದೆ.

ಮೋಹ ಮುಸುಕಿದ ಸಂಜೆ

ನಾನು ನಾನಾಗಿರಲಿಲ್ಲಾ, ನಾನೊಬ್ಬಕ್ರಾಂತಿಯ ನಾಯಕನಾಗಿದ್ದೆ. ಬಡತನ, ದಾರಿದ್ರ್ಯ ಅನಕ್ಷರತೆ ನಮ್ಮ ಹಳ್ಳಿಗಳಲ್ಲಿ ತಾಂಡವ ಆಡಾಕಹತ್ತಿತ್ತು. ಎಲ್ಲಿ ನೋಡಿದರೂ ಹರಕು ಅಂಗಿ, ಹರಕು ಸೀರೆ, ಎಣ್ಣೆಕಾಣದೆ ತರಗಲೆಯಾಗಿರುವ ಕೂದಲು ಬಿಟ್ಕೊಂಡು ತಮ್ಮ ಅಸಾಹಾಯಕತೆಯನ್ನ ಪ್ರದರ್ಶಿಸುವ ಮಂದಿ ನಮ್ಮ ಮಾತುಗಳನ್ನ ಮಂತ್ರಮುಗ್ಧರಾಗಿ ಕೇಳ್ತಿದ್ರು. ಮಾತನ್ನೆ ಬಂಡವಾಳ ಮಾಡ್ಕೊಂಡಿದ್ದ ಪ್ರೊ. ಗಟ್ಟಿಮಠ ಒಮ್ಮೊಮ್ಮೆ ಇಡೀ ವ್ಯವಸ್ಥೆಯನ್ನ ಕ್ಷಣಾರ್ಧದಲ್ಲೆ ಬದಲಿಸಿ ಬಿಡೋರಹಂಗ ಮಾತಾಡಿ ಪೇಚಿಗೆ ಸಿಕ್ಕೊಂಡ ಬಿಡ್ತಿದ್ರು, ಎಷ್ಟೆ ಮುಗ್ಧ, ಅನಕ್ಷರಸ್ಥರಾದ್ರು ತಿಳುವಳಿಕೆ ಉಳ್ಳ ಮಂದಿ ತಿರಗಿ ಬೀಳ್ತಿದ್ರು. ನಾನಂತು ನನ್ನ ರಕ್ಷಣೆ ಮಾಡ್ಕೊಂಡೆ ಮಾತಾಡ್ತಿದ್ದೆ. ಹಾಗಾಗಿಯೇ ನನ್ನ ಹಿಂದಿದ್ದ ಹುಡುಗರಿಗೆ ಹುಡುಗಿಯರಿಗೆ ನನ್ನ ಮೇಲೆ ವಿಶ್ವಾಸವಿತ್ತು. ಒಂದೊಂದು ಕಡೆಗೆ ಒಂದೊಂದು ಹೊಸ ಅನುಭವ, ಹೊಸದೊಂದು ಲೋಕದ ಪರಿಚಯವಾಗತೊಡಗಿತು. ಬದುಕನ್ನ ಬೆರಗುಗಣ್ಣಿಂದ ನೋಡ್ತುತ್ತಿದ್ದ ಡಾ. ಹಳ್ಳೆಪ್ಪನವರ ಮಗಳು ಮಲ್ಲಿಕಾ, ಬದುಕು ಹೀಗೂ ವಿಕಾರ ಐತಿ ಅನ್ನೋದು ಕಂಡು ಅಯ್ಯೋ ಅಂತ ಮರಗಿದ್ಲು. ಇಂತಹ ಜನರಿಗಾಗಿ ಗುದ್ದಾಡ್ತಿರೋ ನಾನು ಅವಳಿಗೆ ಸಜವಾಗಿಯೇ 'ಹೀರೋ'ನ ಹಂಗ ಕಂಡಿದ್ದೆ. ಎಷ್ಟೋ ಸಲ, ತಲೆ ಬುಡವಿಲ್ಲದ ಪ್ರಶ್ನೆಗಳನ್ನ ಕೇಳಿ, ತಲೆಹರಟೆ ಮಾಡಿದ್ಕ ಬೈಯ್ಯಿಸ್ಕೊಂಡಿದ್ಲು.

ನಾನು ಪ್ರತಿ ಹಳ್ಳಿಯಲ್ಲಿ ಭಾಷಣ ಮಾಡುವಾಗ ನನ್ನೂರಿನ ಜನರಿಗೆ ಹೇಳ್ತಿದ್ದೀನೇನೋ ಅನ್ನೊಹಂಗೆ ಮಾತಾಡ್ತಿದ್ದೆ. ಪ್ರತಿದಿನ ಹತ್ತ ಕಿಲೋಮೀಟರ ದೂರ ನಡ್ಕೊಂಡ ಹೋಗಿ ಭತ್ತದ ನಾಟಿ ಮಾಡಿ ರಾತ್ರಿ ನಡ್ಕೊಂಡ ಬಂದು ಅಡಗಿ ಮಾಡಿ ಮುಂಜಾನಿಂದ ಸಂಜಿ ಮಟಾನು ನೀರೋ, ಗಂಜೀನೊ ಕುಡದು ತಂದಿ- ತಾಯಿ ಮನಿಗ ಬರೋದನ ಕಾಯ್ತಿದ್ದ ಸಣ್ಣ ಕೂಸುಗಳು ಕಾಲಾಗ ಶಕ್ತಿ ಇಲ್ದೆ, ಮೈಯಾಗ ಕಸು ಇಲ್ದೆ ಬದುಕಿಗಾಗಿ ಬಡಿದಾಡೊ ಕಾಕನಾಯ್ಕ, ಕೆಂಡವ್ವ ಜಿಗಣಿನಾಯ್ಕ, ಗೋಸಂಬಿ, ಗಾಣಿ, ಪಿಟ್ಟು, ಡುಬ್ಬ, ಥಾಂಸು, ಬಡಕು, ಇವರ ಬದುಕಿಗೇನು ಅರ್ಥವೇ ಇಲ್ಲಾ. ಮಳಿಗಾಲ, ಚಳಿಗಾಲ, ಬ್ಯಾಸಗಿಕಾಲ ಎಲ್ಲಾ ಒಂದೇ ಅವರಜ್ಜಂದಿರು ಅದೇ ಬಂಕೂರೂ, ಕೊಡಂಬಿ, ಕೊತ್ಲಿಳ್ಳಿ ಕಟ್ಟಿ- ಕಂಪೆಳ್ಳಿ ಮಟ, ಶೆಂಗಾಕಿಳೋದ್ರಿಂದ ಹಿಡದು - ರಾಗಿ, ಜ್ವಾಳ, ನವಣೆ, ಸಜ್ಜಿ, ತೊಗರಿ, ಭತ್ತ, ಕಬ್ಬ, ನೆಲ ಅಗಿಯೋದು ಕಲ್ಲು ಎಬ್ಬೋದು, ರೋಡ ಕಡಿಯೋದು, ರೋಡ ಮಾಡೋದು, ಚಾನಲ್ ಅಗಿಯೋದು, ಒಂದ ಎರಡಾ, ನಾನಾ ನಮೂನಿ ಕೆಲಸ ಮಾಡಿ ಜಂಗ ಹಿಡದು ಸತ್ತಹ್ವಾದ್ರು. ಅವರ ಮಕ್ಕಳಿಗ ಬಿಟ್ಟ ಹೋಗಿದ್ದು ಅವೇ ಸವದ ಹಾದಿ ಕಲ್ಲುಗಳು ಅವನ್ನೆ ಮೆಟ್ಕೊಂತ ಊರೂರು ಅಲದು ಹೊಟ್ಟಿ ತುಂಬಿಕೊಳ್ಳೋದು. ಹಬ್ಬಕ್ಕ ಹತ್ತರೂಪಾಯಿ ಅಡ್ವಾನ್ಸ್ ಇಸ್ಕೊಂಡು ಅನುಭವಿಸಿದ್ದೆ ದೊಡ್ಡ ಅನುಭವ. ಅವರ ನೆನಪಿನ

ಮಾತಗಳಂತಂದ್ರ, ಧರಣೆಪ್ಪ ಸಾವುಕಾರನ ಸೂಳಿ ಮಗಳ ಮದ್ವಿ ಊಟ ಒಂದೇ, ತಮ್ಮದಾಗಿರೋ ಖಾಸಗಿ ಅನುಭವಗಳೆ ಇಲ್ಲದ ಮಂದಿ. ಎಷ್ಟೋ ರಾತ್ರಿ ಎಷ್ಟೋ ಹಗಲು ನಮ್ಮಪ್ಪ ಪೆತ್ಲಪ್ಪ - ನಮ್ಮವ್ವ ಭರಮಕ್ಕರ ಪಡಿಪಾಟ್ಲು ಒಂದ ಸವಾಲಾಗಿ ಕಾಡತಿತ್ತು. ಪೆತ್ಲಪ್ಪನ ಪೌರುಷದ ಫಲಕ್ಕ, ನಮ್ಮವ್ವ ಹದಿಮೂರ ಮಂದಿಗ ಜನ್ಮ ಕೊಟ್ಟಿದ್ಲು. ಹದಿಮೂರು ಜೀವ ಉಳಸಾಕ ಅಪ್ಪ ಹಗಲು ರಾತ್ರಿ ಒಂದಮಾಡಿ ದುಡಿತಿದ್ದ. ಹಕ್ಕಿಗೂಡಿನಂತ ಮನಿಯಾಗ ಹದಿನೈದು ಜೀವ ಉಸಿರಾಡ್ತಿದ್ವು, ಪಕ್ಕಿರೆಕ್ಕಿ ಬಲ್ತಿಂದ ಹಾರ ಹೋಗೊ ಹಂಗಿಲ್ಲ ಈ ಮನುಷ್ಯನ ಜೀವನ ಒಬ್ಬಾಂವ ದೊಡ್ಡವನಾದ ನಂದ್ರ ತಂದಿ ತಾಯಿ ಹಿಂದ ಕೂಲಿಗ ನಡದ ಬಿಡಾಕು. ಸಾಲಿಕಲಿಯೋದಿಲ್ಲಾ ಬದುಕಿನ ಬಗ್ಗೆ ಕನಸ ಕಾಣೋದಿಲ್ಲಾ ಎಲ್ಲಾ ನಿರ್ಧಾರನೂ ಹೊಟ್ಟಿಮಾಡ್ತಿತ್ತು. ಹೊಟ್ಟಿತುಂಬ ಬೇಕಂದ್ರ ನಡಬಗ್ಗಿಸಿ ಶೇಂಗಾ ಆರಿಸಬೇಕು, ಹೊಲ್ದಾಗ ಕಲ್ಲು ಆರಿಸಿ ಮ್ಯಾರಿಮ್ಯಾಲ ಸುರಿಬೇಕು. ಸಾವುಕಾರ "ಲೇ ಹಲ್ಕಟ ಸೂಳಿಮಕ್ಕಳ್ರ ಪಸಂದಾಗಿ ಕೆಲ್ಸ ಮಾಡ್ರಲೇ ಅಂದ್ರ" ಆತ್ರಿ ಧಣಿ" ಅಂತಂದು ಮುಂದ ಓಡಬೇಕು, ಕನಸಕಾಣ್ಕೊಂತ ಕುಂತ್ರ ಮುಕಳಿ ಮ್ಯಾಲ ಲಾತ ಬಿಳ್ತಿದ್ವು. ಅದು ಒಂದ ಬದುಕೇ, ಬರಿಹೊಟ್ಟೆ ತುಂಬಿಸಿಕೊಳ್ಳಾಕಾಗೆ ಬದುಕೋದು ಯಾಕಂದ್ರ ಅವರಪ್ಪ ಅಜ್ಜಂದ್ರು ಅವರಿಗ ಕಲಿಸಿಹೋದ ಪಾಠನೆ ಇದು.

ಆ ಹುಡುಗಿ ನನ್ನ ಮುಂದ ತನ್ನ ಗುಲಾಬಿ ಕೆನ್ನೆಗಳನ್ನ ಅರಳಿಸಿ ಮೋಹಕ ನಗೆ ಬೀರಿ ಸರ್ ಅಂತ ಎಚ್ಚರಿಸಿದ್ಲು. "ಏನ್ಸಾರ್ ನಮ್ಮನ್ನ ಈ ಲೋಕದಾಗ ಬಿಟ್ಟು ನೀವೊಬ್ಬರೆ ಯಾವ್ಯಾವದೋ ಲೋಕ ಸಂಚಾರ ಮಾಡಕ ಹತ್ತಿರಿ, ಇದು ನ್ಯಾಯಾನಾ" ಅಂದ್ಲು. ನನಗೆ ಗಾಬರಿಯಾತು, ಆ ಹುಡುಗಿ ಮಾತಕೇಳಿ, ಏನಾದ್ರು ಹೇಳಿದ್ರ ನಾನೆ ತಪ್ಪಿದಸ್ಥನಾಗಿ, ವಾಸ್ತವದ ಸಂಗತಿ ಹೇಳಿದ್ರ ಯಾರೂ ನಂಬೋದಿಲ್ಲ ಅಂದ್ಕೊಂಡವನೆ "ಛೇ ಅಂತ ಯಾವ ಲೋಕಕ್ಕೂ ನಾ ಹೋಗಿರಲಿಲ್ಲಾ, ಹಾಗೇನಾದ್ರು ನಾ ಹೋಗೋದಾದ್ರ ಕಂಡಿತ ನಿನ್ನ ಕರ್ಕೊಂಡ ಹೊಕ್ಕೀನಿ" ಅಂದೆ. ಹುಡುಗಿಯರೆಲ್ಲಾ ಅವಳ ನೋಡಿ, ಛಾನ್ಸ್ ಹೊಡ್ದೆಯಲ್ಲೆ ಅಂತ ಚುಡಾಯಿಸತೊಡಗಿದ್ರು. ನಾನೇನಾದ್ರು ತಪ್ಪು ಮಾತಾಡಿದ್ನಾ, ಯೋಚ್ನೆ ಮಾಡಿದೆ, ಈ ಹುಡುಗಿಯರು, ನನ್ನ ಮಾತನ್ನ ಯಾವ ರೀತಿ ತಪ್ಪ ಅರ್ಥೈಸಿಕೊಂಡಾರಲ್ಲಾ, ಹಿಂಗಾದ್ರ ನನ್ನ ಹರಾಜ ಹಾಕ್ತಾರ ಅಂದ್ಕೊಂಡ ವನೆ, "ನಡೀರಿ, ಹೊತ್ತಾತು ನಮಗಾಗಿ ಮಂದಿ ಕಾಯಾಕ ಹತ್ತಿರಬೇಕು" ಅಂತ ಗಡಿಬಿಡಿ ಮಾಡಿದೆ. ಆ ಹುಡುಗಿ ಮಾತ್ರ ನನ್ನ ಹಿಂದೆ ಬರತೊಡಗಿದ್ಲು. ನಾನು ಹುಡುಗಿಯರ ಗುಂಪಿನಿಂದ ತಪ್ಪಿಸಿಕೊಂಡು ಹುಡುಗರ ನಡುವೆ ಹೋದೆ, ಎಲ್ಲ ಜನರ ದೃಷ್ಟಿ ತಪ್ಪಿಸಿ ನನ್ನ ಕಡೆಗೆ ನೋಡತೊಡಗಿದಳು. ನನಗ್ಯಾಕೋ ಗಾಬರಿ ಆತು. ನಾನು ಆ ಮಾತು ಹೇಳಬಾರದಿತ್ತೇನೊ ಅನಿಸಿತು. ನಾನು ಹೇಳಿದ್ದು ಇಕಿ ಈ ಪರಿ ಹಚ್ಕೊಂತಾಳಂತ ಅಂದ್ಕೊಂಡಿರಲಿಲ್ಲಾ. ಏನಪ್ಪ ಮಾಡೋದೀಗ ಕೈ ಕೈ ಹಿಚಕಿಕೊಂಡೆ. ಗುಂಪಿನೊಳಗಿಂದ ಪಾರಾಗಿ ನಮ್ಮ ಷೋ ನೋಡಾಕ ಬಂದಿದ್ದ ಸಂಗಣ್ಣ ಮಾಸ್ತರ ಮತ್ತ ಕುಬಸಣ್ಣಾ ಮಾಸ್ತರ ಕೂಡ ಸೇರ್ಕೊಂಡೆ. ನಾನು ತಯಾರ ಮಾಡಿದ್ದ ಹುಡುಗರು ಅದ್ಭುತವಾಗೆ ಅಭಿನಯಿಸಿದ್ರು. ಷೋ ಮುಗದಿಂದ, ನಾ ಮಾತಾಡ್ತಾ ಇದಿ

ಪರಿಸ್ಥಿತಿಯನ್ನ ವ್ಯವಸ್ಥೆಯನ್ನ ಹಿಂಜಿ ಹಿಂಜಿ ಬಿಡಿಸಿ ಅವರ ಮುಂದಿಡತೊಡಗಿದೆ. ನೆರದ ಮಂದಿಗ ಹೌದ ಹೌದ ಅನಿಸತೊಡಗಿದ್ವೆ ಜೋರಾಗಿ ಚಪ್ಪಾಳೆ ಹೊಡದ್ರು. ಆ ಹುಡುಗಿ ಅದೇ ಹುಡುಗಿ ಡಾ. ಹಳ್ಳೆಪ್ಪನವರ ಮಗಳು 'ಮಲ್ಲಿಕಾ' ಖುಷಿಯಿಂದ ನನ್ನ ಕಡೆಗೆ ನೋಡ್ತಾ ಚಪ್ಪಾಳೆ ತಟ್ಟಾಕ ಹತ್ಯಾಳ. ನನಗ್ಯಾಕೊ ಮಾತು ಗಕ್ಕನೆ ನಿಂತಗಾತು. ನಾಲಗಿ ತೊದಲಾಕತ್ತು, ಸುತ್ತ ನೂರಾರ ಜನ ಅದಾರನ್ನೋ ಪರಿವೆ ನನಗಿಲ್ದಂಗಾತು. ಸಂಗಣ್ಣಾ, ಕುಸಬಣ್ಣಾ ನೆನಪಾಗಿದ್ದೆ ನನ್ನನಾ ಸುಧಾರಿಸಿಕೊಂಡು ಹೆಚ್ಚು ಮಾತಾಡದೆ ಕುಸಬಣ್ಣಮಾಸ್ತರ ಹೆಸರ ಹೇಳಿ ಸರದ ಬಿಟ್ಟೆ. ಕುಸಬಣ್ಣಾ, ತನ್ನ ಹೆಸರ ಬಂದಿದ್ದೆ, ಏನ ಮಾತಾಡ ಕಂತ ತಿಳಿಯದೆ, ನಮ್ಮ ಷೋ ಮತ್ತು ಅದರ ಯಶಸ್ಸು. ಅದರ ರೂವಾರಿ. ಏನೇನೊ ಹಾಳಾ ಮೂಳ ಜೋಡಿಸಿ ನನ್ನ ಮತ್ತೆ ನಡಿಕ ಕರಿಸಿ ಹಿಗ್ಗಾಮುಗ್ಗ ಹೊಗಳಿದ, ನಾನು ಯಾವದನ್ನ ಬೇಡ ಅಂದ್ಕೊಂಡಿದ್ನೊ ಅದೇ ನಡಿತಿರೊ ಹಂಗ ಅನಿಸಿತು. ಡೊಣ್ವಾಡ, ಖಬರೂಸಾಬ್, ನಲ್ವತ್ತಪ್ಪ, ನಸೀಬು ಕರಿಯ ಖದೀಮ ಹಲ್ಲೇಶಿ, ಹಾಲ್ಗಪ್ಪ, ನನ್ನ ಹತ್ರ ಓಡಿ ಬಂದ್ರು. ಜಾಮಿ, ಯಂಕಮ್ಮ, ಸೂಫಿ, ಮಲ್ಲಿಕಾಳ ಸುತ್ತ ನಿಂತ್ಕೊಂಡಿದ್ರು ಆಕಿ ಮಾತ್ರ ಅವರೆಲ್ಲರ ಕಣ್ಣು ತಪ್ಪಿಸಿ ನನ್ನ ಕಡೀಗ ನೋಡಾಕ ಹತ್ತಿದ್ಲು. ಹುಡುಗರಿಗ ನನ್ನ ಮ್ಯಾಲೆ ಅನುಮಾನ ಬಂದೀತಂತ ಆಕಿ ಕಡೀಗ ನೋಡದೆ, ದಿಂಡೂರಿನವನೇ ಆದ ನನ್ನ ಸ್ಟೂಡೆಂಟ ಎರೆಸೀಮಿ ನನ್ನ ಹತ್ರ ಬಂದು. "ಸಾ, ಎಲ್ರು ಹಾಲಿನ ಡೈರಿ ತಾವ ಕಾಯಾಕ ಹತ್ಯಾರ, ಚುರಮುರಿ ತಿನ್ನಾಕ ಬರಬೇಕಂತ" ಅಂದವನೆ ಭೋ ರೆಸ್ಪೆಕ್ಟ್‌ನಿಂದ ತಲಿಬಗ್ಗಿಸಿ ನಿಂತ್ಕೊಂಡಿದ್ದ. "ಹೌದೇನ್ರಿ ಮಿ. ಯರಸೀಮಿ, ನೀವು ಇದೇ ಊರ್ನವರೇನ್ರಿ, ಗುಡ್, ಊರಾಗೆನಾದ್ರು ಕ್ರಿಯೇಟಿವ್ ಆಗಿ ಮಾಡ್ರಿ, ನಿಮ್ಮಂತ ಯುವಕರಿಂದಲೇ ಏನಾದ್ರು ಸಾಧನೆ ಮಾಡಾಕ ಆಗೋದು". ಎಂದಿನ ನನ್ನ ಉಪದೇಶ ಆರಂಭ ಆಗಿತ್ತು. ಹುಡ್ರು ಅವಾಗ್ಲೆ ಹೋಗಿದ್ರು ಹುಡುಗಿಯರು ನಿಧಾನವಾಗೆ ಹೆಜ್ಜೆ ಹಾಕ್ಕೊಂತ ಹೊಂಟಿದ್ರು. "ಜಾಮಿ, ಯಂಕಮ್ಮ ಗಡಾನೆ ನಡಿರಿ. ಹೆಬ್ಬೂರಿಗ ಹೋಗಾಕು" ಅವರ ಉತ್ತರಕ್ಕೂ ಕಾಯದೆ ಹಾಲಿನ ಡೈರಿ ಕಡೆಗೆ ಹೊರಟು ಬಿಟ್ಟೆ.

ನೆಲದ ಮ್ಯಾಲ ಯೂರಿಯಾ ಗೊಬ್ಬರದ ಪ್ಲಾಸ್ಟಿಕ್ ಚೀಲಗಳನ್ನ ಹರದು ಹೊಲದಿದ್ದ ಪಾಟು ಹಾಸಿದ್ರು. ಹತ್ತ ಸೇರಿನಷ್ಟು ಚುರಮುರಿ ಅರ್ಧ ಕೇಜಿಯಷ್ಟು ಸೇವು ಹಾಕಿ ಎರಡಕಡೀಗ ಗುಡ್ಡೆ ಹಾಕಿದ್ರು ಸಂಗಣ್ಣಮಾಸ್ತರ ಮತ್ತ ಕುಬಸಣ್ಣ 'ಹೆಬ್ಬೂರಿ'ಗ ಜೀಪ ಹತ್ತಿ ಹೋಗಿದ್ರು ನಾನು ಹುಡುಗರಿಗೆ ಬೇಗ ತಿನ್ನುವಂತೆ ಗಡಿಬಿಡಿಮಾಡಿದೆ. ನಮ್ಮ ಗುಂಪಿನ ಪಕ್ಕದಾಗ ಬಂದು ಕುಂತ್ರು ಹುಡುಗಿಯರು ಮಲ್ಲಿಕಾ ನನ್ನ ಎದುರಿಗೆ ಕಾಣುವಂತೆ ಕುಳಿತುಕೊಂಡವಳೆ ಆಕಿ ಕೈಗ ಸಿಕ್ಕ ಖಾರ ಮೆಣಸಿನ ಕಾಯಿ ನನಗ ತೋರಿಸಿದಾಕಿನೆ ಕರ ಕರ ಕಡದು ಜಗದು ನುಂಗಿದ್ಲು ನಾನು ಆ ಕಡೆ ಈ ಕಡೆ ನೋಡಿದೆ ಹುಡ್ರೆಲ್ಲಾ ತಮ್ಮ ಪಾಡಿಗ ತಾವು ಜಾಲಿಕಾಯಿ ಮೇಯೋ ಆಡಿನ ಹಂಗೆ ಕರಂ ಕುರಂ ಅಂತಂದು ಮಂಡಕ್ಕಿ ಮೇಯಾಕ ಹತ್ತಿದ್ರು. ಆಕಿ ಮತ್ತೊಂದು ತೆಳ್ಳನೆಯ ಮೆಣಸಿನ ಕಾಯಿ ತಗೊಂಡು ನನ್ನ ಕಡೀಗ ತೋರಿಸಿದಾಕೀನೆ ಕಚಕಚ ಜಗದು ನುಂಗೆ ಬಿಟ್ಲು. ನಾನು ಹಾಂ, ಹೂಂ ಅನ್ನಿದಂಗೆ

ಮೂರನೆಯದನ್ನ ತಗೊಂಡು ಬಾಯಾಗ ಹಾಕಿದ್ಲು, "ಛೇ ಈ ಹುಡುಗೀಗ ಹುಚ್ಚ ಹಿಡದೈತಿ" ಅಂದೆ ಪಕ್ಕದಾಗಿದ್ದ ಡೊಣ್ಣಾಡ, "ಯಾರಿಗಪ್ಪ ಹುಚ್ಚು" ಆಂದ. "ಇನ್ನೊಂದ ಸ್ವಲ್ಪ ಹೊತ್ತು ಇಲ್ಲೆ ಕುಂತ್ರ ನನಗ ಹಿಡಿತೈತಿ" ಅಂದೆ. ಉತ್ತರ ನಿರೀಕ್ಷಿಸದ ಅವನು ಬಾಯಾಗಿನ ಚುರಮುರಿ ಜಗಿಯಾಕ ಆಗದೆ ನನ್ನ ಕಡೀಗ ನೋಡಿದ. ನಾನು ಹಿಡಿ ಚುರುಮುರಿ, ಒಂಚೂರ ಹಸಿ ಮೆಣಸಿನ ಬಾಯಿಗ ಒಕ್ಕೊಂಡೆ. ಬ್ಯಾಡಗಿ ಕಡ್ಡಿಮೆಣಸಿನ ಕಾಯಿ ಖಾರ ಅಂದ್ರ ಖಾರ ನನ್ನ ಬಾಯಾಗ-ಮೂಗಿನ್ಯಾಗ, ಕಣ್ಣಾಗ ನೀರ ಬಂತು. "ಅಯ್ಯೋ ಅಪ್ಪ, ನೀರು" ಪದರಿದೆ. "ಅದಕ್ಕೂ ದೃಢಮನಸ್ಸು ಬೇಕು ಸಾರ್" ಅಂದ್ಲು ಮಲ್ಲಿಕಾ, ನೇರವಾಗಿ ನನಗೆ ಹೇಳಿದ ಮಾತಂತ ನನಗ ತಿಳೀತು."ನೀವು ಮಲ್ನಾಡ ಮಂದಿ ಬಹಳ ಘಾಟಿ ಬಿಡ್ರಿ" ಅಂತ ಮಾತ ಮುಗಸಾಕ ನೋಡಿದೆ. ಆದ್ರ ಮಾತು ಆರಂಭ ಆಗಿತ್ತೆ ವಿನಃ ಮುಕ್ತಾಯದ ಯಾವ ಲಕ್ಷಣ ಕಾಣಲಿಲ್ಲ. ಮನಸಿನ ಮೂಲಿಯೊಳಗ ಆ ಹುಡುಗಿ ಸಣ್ಣದೊಂದು ಜಾಗ ಮಾಡ್ಕೊಂಡ ಅನುಭವ ಆಗತೊಡಗಿತು, ಮಲ್ಲಿಕಾ ನಿಜವಾಗ್ಲೂ ಖಾರ ಹೆಚ್ಚಾಗಿ ಸಂಕಟ ಪಡ್ತಿದ್ಲು. ಕೆಂಪಗಿನ ಮಾರಿ ಖಾರದಿಂದಾಗಿ ಮತ್ತೊಂದೀಟು ಕೆಂಪಡರಿತ್ತು, 'ಯಾಕ ಹಿಂಗ ಮಾಡಿದ್ಲು' ಯೋಚಿಸಿದೆ. ಮರುಕದಿಂದ ನನ್ನ ಕಡೀಗ ನೋಡಾಕ ಹತ್ತಿದ್ಲು. "ನಾನು ಅಷ್ಟು ಸುಲಭದಿಂದ ಸೋಲಂಗಿಲ್ಲ, ನಾನು ಅಂದ್ಕೊಂಡಿದ್ದನ ಮಾಡೆ ಮಾಡ್ತೀನಿ" ಗಟ್ಟಿ ನಿರ್ಧಾರ ಮಾಡ್ಕೊಂಡಿದ್ಲು. ಮತ್ತೊಂದ ಮೆಣಸಿನ ಕಾಯಿ ತಗೊಂಡ್ಲು. "ನಿಮ್ಮ ಎದಿಯೊಳಗ ಒಂಚೂರು ನನ ಬಗ್ಗೆ ಕರುಣೆ ಪ್ರೀತಿ ಇದ್ರ ಇದನ್ನ ತಿನ್ಲೆಬೇಕು, ಇಲ್ಲಾಂದ್ರ ವಾಪಾಸ ಬಿಸಾಕಬೇಕು" ಅಂತ. ಮನಸ್ಸಿನೊಳಗೆ ಅಂದ್ಕೊಂಡವಳೆ ಯಾರಿಗೂ ಗೊತ್ತಾಗದಂಗ ನನ್ನ ಕಡೀಗ ಬಿಸಾಕಿದ್ಲು. ಯಾರ ಬಿಸಾಕಿದ್ರಂತ ಸುತ್ಲು ನೋಡ್ದೆ, ಎಲ್ಲ ತಮ್ಮ ಪಾಡಿಗ ತಾವು ತಿನ್ನೋದ್ರಲ್ಲಿ ಮಗ್ನರಾಗಿದ್ರು. ಈ ಕೆಲ್ಸ ಅವಳದೆ ಅಂತ ಗೊತ್ತಾತು. ಆ ಕಡೆ ನೋಡ ಬಾರ್ದಂತ ಕೆಳಗ ಮಾರಿ ಹಾಕ್ಕೊಂಡು ಕುಂತ್ಕೊಂಡೆ. ಆಕಿ ಕಣ್ಣುಗಳು ನನ್ನ ಇರದಂಗಾಗಿ ನೋಡ್ದೆ. ಮೆಣಸಿನಕಾಯಿ ತಿನ್ನುವಂತೆ ಸನ್ನೆ ಮಾಡಿದ್ಲು. "ಅಯ್ಯೋ ವಿಧಿಯೇ" ಅಂದವನೆ ಹಿಂದೆ ಮುಂದೆ ನೋಡದೆ ಕರಕರ ಕಡದು ನುಂಗಿದೆ. ಜೋರಾಗೆ ಚೀರಬೇಕಂತ ಬಾಯಿ ತಗದ್ಲು. ನಾನು ಬೇಡ ಎಂದು ಸನ್ನಿ ಮಾಡಿದೆ. ಅವಳಿಗ ಬಹಳ ಖುಷಿಯಾಗಿತ್ತು. ನನಗ ಯಾಕೋ ಹಿಡತ ತಪ್ಪುತ್ತಿರೋ ಅನುಭವ ಆಗತೊಡಗಿತು. ಇದು ಎಡವಟ್ಟಿನ ಬೆಳವಣಿಗೆ. ನಾನು ಈ ಸುಳಿಯಾಗ ಸಿಕ್ಕಿಹಾಕಿಕೊಳ್ಳಾಕ ಮದ್ಲು ನನ್ನ ಹಿಂದಿನ ಪರಿಸ್ಥಿತಿ ಅರ್ಥ ಮಾಡ್ಕೊಬೇಕು. ಪ್ರೊ. ಗಟ್ಟಿಮಠ ಈ ನೌಕರಿ ಕೊಡಿಸದಿದ್ರ ಕೂಲಿ ಮಾಡೋ ಸ್ಥಿತಿ ಬರ್ತಿತ್ತು. ನನ್ನ ನಾಳೆಯನ್ನ ಸುಖವಾಗಿಡಾಕ ಬಯಸೋದಾದ್ರ ನನ್ನ ನಿನ್ನೆಯನ್ನ ಸದಾ ನೆನಪಿಸಿಕೋ ಬೇಕು. ಯಾಕಂದ್ರ ಇವತ್ತಿಗಾಗಿ ಬದುಕಿರೋ ಜನ ನಾವು. ಈ ಪ್ರೇಮ ಪ್ರೀತಿಗಳೆಲ್ಲ ನಮಗಲ್ಲ ಅವೇನಿದ್ರು ಉಳ್ಳವರಿಗೆ. ನಮ್ಮ ಜೀವೂರ ಮಂದಿ ಹೆಂಡಕುಡದು ಭಾನಗೇಡಿ ಮಾಡ್ತಾರ ಈ ಪ್ಯಾಟಿಮಂದಿ ಅವರನ್ನ 'ಕುಡಕ ಸೂಳಿಮಕ್ಕಳ್ರು' ಅಂತ ಕರಿತಾರ. ಅದೆ ಈ ಮಂದಿ ಕುಡದು ಗಟಾರಕ ಬಿದ್ರ ಪಾರ್ಟಿಗ ಹೋಗಿದ್ರಂತ ಹೆಸರ ಕಟ್ಕೊಂತಾರ. ಬಡವರ ಮಾಡೋದು ಯಾರಿಗೂ ಹಿಡಸೋದಿಲ್ಲಾ, ಅವರಿಗ ಒಂದು ಚೌಕಟ್ಟನ್ನೋದೈತಿ

ಅದನ್ನ ಮೀರಿ ಬರೋಹಂಗಿಲ್ಲಾ. ನಮ್ಮ ಕರ್ನಾಟಕ ಕಾಲೇಜಿನಾಗ ನಾವು ಕಲಿಯೋ ಮುಂದ ಸೋನಾರಸುಬ್ಬು ಪ್ರೊ. ಸಂಗಟಿಮಗ ಸಿಪ್ಪು, ಅವರ ಎಂಟಹತ್ತ ಉಡಾಳ ಕಂಪನಿಹುಡ್ರು ತಮ್ಮ ಬೈಕಗಳ ಮ್ಯಾಲ ಹಾಡಹಗಲೆ ದಿನಕೊಬ್ಬ ಹುಡುಗಿಯರನ್ನ ಕುಂದ್ರಿಸಿಕೊಂಡ ಹೊಕ್ಕಿದ್ರು. ಅವರ ಮೋಜ ನೋಡಿದ ಮಂದಿ "ಪಾಪ ವಯಸ್ಸು ಮಾಡ್ಲಿ ಬಿಡು" ಅಂತ ಪ್ರಶಂಸೆ ಮಾಡ್ತಿದ್ರು ಅದೇ ಸಾವ್ಯಾರಾದ್ರು ಹುಡುಗಿಯರ ಜೊತಿಗ ಹೊಂಟ್ರೆ ಅಂತಂದ್ರ, "ಹೊಂಟ ನೋಡ್ರಿ, ಮಗನಿಗ ತಿನ್ನಾಕ ಕೂಳಿಲ್ಲ ಹುಡುಗಿಯರ ಹಿಂದ ಅಡ್ಯಾಡ್ತನ. "ಅಂತ ಚುಚ್ಚ ಮಾತಾಡ್ತಿದ್ರು. ಇಂತ, ಕೆಟ್ಟ ಜನರಿರೋ ಈ ಹಾಳವ್ಯವಸ್ಥೆ ಯೊಳಗ ನನಂತೋರು ಬದಕಕಾದ್ರು ಆದೀತೇನು? ಯೋಚನೆಯ ಜಾಡು ದೂರ ಹೋಗಿತ್ತು. ಖಬರೂಸಾಬ್, "ಸಾ ಜೀಪ ತಯಾರಾಗ್ಯತಿ" ಅಂತ ಎಚ್ಚರಿಸಿದಾಗ್ಲೆ ವಾಸ್ತವಕ್ಕ ಬಂದಿದ್ದೆ. "ಹೂಂ ಗಡಾನ ನಡೀರಿ" ಅಂತ ಗಡಿಬಿಡಿ ಮಾಡಿದೆ.

ಹುಡುಗರೆಲ್ಲಾ ಹಿಂದ ಕುಂತಿದ್ರು. ಹುಡುಗಿಯರು ಮುಂದಿನ ಸೀಟಿನ ಮ್ಯಾಲ ಕುಂತ್ಕೊಂಡ್ರು ಮಲ್ಲಿಕ ತನ್ನ ಪಕ್ಕದ ಸೀಟು ಯಾರಿಗೂ ಬಿಡದೆ, "ಸಾರ್ ಬರ್ತಾರಲೇ" ಅಂತ ಬಂದೋರಿಗ ಹೇಳ್ತಿದ್ಲು. ಇಡಿ ಜೀಪು ಪುಲ್ ಆಗಿತ್ತು. ಒಂದ ಘಳಿಗೆ ವಿಚಾರ ಮಾಡಿದೆ, ಅನಿವಾರ್ಯ ಎಂಬಂತೆ ಅವಳ ಪಕ್ಕದ ಜಾಗಕ್ಕೆ ಹೋಗಿ ಕುಂತ್ಕೊಂಡೆ. ನಾನು ಜಡವಸ್ತುವಾಗಿದ್ದೆ. ನನ್ನ ಸ್ಥಿತಿ, ಬಯಕೆ ಕನಸುಗಳನ್ನೆಲ್ಲಾ ನುಸಿ ಹಂಗ ತಿಂದು ಹಾಕಿತ್ತು. ಅವರೆಲ್ಲಾ ಜೋರಾಗಿ ಹಾಡ ಹಾಡ್ತಿದ್ರು, ಆಕಿ ಬೇಕಂತ್ಲೆ ನನಗೆ ಆತ್ಕೊಂಡೆ ಕುಂತಿದ್ಲು. ಕೈಯನ್ನ ಬಿಗಿಯಾಗಿ ಹಿಡಿಯೋದು, ಯಾವದೋ ಒಂದು ವಿಚಿತ್ರ ಅನುಭವಕ್ಕೆ ನನ್ನ ಎಳ್ಕೊಂಡ ಹೋಗಾಕ ಪ್ರಯತ್ನ ನಡಸಿದ್ಲು. ನಾನು ಹುಡುಗರ ಹಾಡಿನೊಳಗ ಜೋರಾಗಿ ಧನಿಗೂಡಿಸಿ ಹಾಡತೊಡಗಿದೆ. ಅದೇನು ಖುಷಿಯ ಹಾಡೋ, ದುಃಖದ ಹಾಡೋ - ಇಲ್ಲಾ ದಿನ ಹುಡುಗರೊಂದಿಗೆ ಹಾಡುವ ಪ್ರಯತ್ನ ಪೂರ್ವಕ ಹಾಡೆಂಬೋದ ಮಾತ್ರ ತಿಳಿಲಿಲ್ಲಾ. ಮಲ್ಲಿಕಾ ನಾನಾ ನಮೂನಿ ಪ್ರಯತ್ನಗಳನೆಲ್ಲಾ ಮಾಡಿಸೋತಿದ್ಲು ನನ್ನ ಕಲ್ಲು ಮನಸಿನೊಳಗ ತೂರಿಕೊಳ್ಳಾಕ ಮಾತ್ರ ಆಕಿಯಿಂದ ಸಾಧ್ಯ ಆಗಿರಲಿಲ್ಲಾ, ಅಷ್ಟೊತ್ತಿಗಾಗ್ಲೆ ಹೆಬ್ಬೂರು ಬಂದಿತ್ತು. ಸಂಗಣ್ಣ ಊರ ಪಂಚಾತಿ ಮೆಂಬರ ಲಕ್ಕ್ಮವ್ವ, ಕುಬಸಣ್ಣಾ ನಮ್ಮ ದಾರಿ ಕಾಯಾಕ ಹತ್ತಿದ್ರು. ನಾವು ಹೋಗಿದ್ದೆ ಮಂದಿ ಸೇರ್ರ್ನೋಕೆಲ್ಸ ಮಾಡಿದ್ವಿ. ಇಳಿ ಹೊತ್ತಾಗಿದ್ಕ ಅಡವಿಗ ಹೋಗಿದ್ದ ದನಗಳು, ಎತ್ತ, ಎಮ್ಮಿ ಕರಗಳು ಮನಿ ಕಡೀಗ ಮಕಮಾಡಿದ್ವು. ಗಳೇಕ ಹ್ವಾದ ಮಂದಿ ಕೂಲಿಗ ಹೋಗಿದ್ದ ಹೆಣ್ಣಾಳು, ಗಂಡಾಳು ಖಾಲಿ ಬುತ್ತಿ ಗಂಟಿನೊಳಗ ಸಿಕ್ಕ ಸಪ್ಪು ಸೆದಿ ಅಂತ ಕಟ್ಕೊಂಡು ತಲಿಮ್ಯಾಲ ಇಟ್ಕೊಂಡು ಅವಸರದಿಂದ ಮನಿ ಮುಟ್ಟಾಕ ಹೊಂಟಿದ್ರು. ಹುಡ್ರು ಜೋರಾಗಿ ಹಾಡ ಹೇಳಿ ಕೈಯಾಗಿದ್ದ ಖಂಜರ ಬಾರ್ಸಿದ್ಕ ಊರಾಗಿದ್ದ ಕುಲ್ಡು, ಕುಂಟ್ರು ಸಮೇತ ಎಲ್ಲಾ ಸಣ್ಣ ಹುಡ್ರು ಆಗ್ಲೆ ನೀರ ಸೇದೋ ಬಾವಿ ಕಟ್ಟೆ ಹತ್ರ ಸೇರಿದ್ರು ಒಂದರ್ದ ಹುಡ್ರು ಹಾಡ ಹೇಳ್ಕೊಂತ ಬಾರಿಸಿ ಕೊಂತ ಹೊಂಟಿದ್ದ ನಮ್ಮ ಹುಡುಗರ ಕೂಡ ಹೋಗಿದ್ರು. ಅವರೆಲ್ಲಾ ಆ ಕಡೆ ಹೋಗಿದ್ದೆ ಸಂಗಣ್ಣ, ಕುಬಸಣ್ಣ ಲಕ್ಕವ್ವನ ಕೂಡ ಮಾತಾಡ್ಕೊಂತ ನಿಂತಿದ್ದನ್ನ ನೋಡಿದ ಮಲ್ಲಿಕಾ,

ನನತಾಗ ಬಂದ ನಿಂತ್ಲು. "ಹೌದು ನಿಮ್ಮ ಎದಿಯಾಗ ಹೃದಯ ಅನ್ನೋದೈತೊ ಇಲ್ಲ". ಧೈರ್ಯದಿಂದ ಹೇಳಿದ್ವನ್ನ ಕೇಳಿದ ನಾನು ನಡಗತೊಡಗಿದೆ. ಮಾತಾಡಕ ಮನಸ ಬರ್‍ಲಿಲ್ಲಾ ಸಂಜಿಯ ತಂಪಗಾಳಿ ಹಾಯಾಗಿತ್ತು ಆದ್ರು ಆಕಿ ಮಾತ ಕೇಳಿ ಬೆವರತೊಡಗಿದೆ. ಸಂಜಿ ಮುಂದ ಗೂಡ ಸೇರಾಕ ಹೊಂಟಿದ್ವ ಹಕ್ಕಿ ಹಿಂಡಗಳನ್ನ ತೋರ್‍ಸಿ", ಅಗೋ ಅಲ್ನೋಡು - ನಂದು -ಆ ಹಕ್ಕಿಗಳ ಪಾಡು ನನ್ನಹಿಂದ ಬಿದ್ರ ನಿನಗೇನು ಸಿಗೋದಿಲ್ಲಾ ಕಾಲ ಮಿಂಚಿಲ್ಲ ಅದೆಲ್ಲಾ ಮರತು ಬ್ಯಾರೆ ಯೋಚನೆ ಮಾಡು." ಅಂತ ಸಾಗ ಹಾಕಕ ನೋಡಿದೆ. "ಹೌದು ಆ ಹಕ್ಕಿಗಳಿಗೂ ಗೂಡ ಇರ್‍ತಾವ, ತಮ್ಮದೇ ಒಂದ ಲೋಕ ಇರತೈತಿ ಗಂಡು -ಹೆಣ್ಣು- ಮರಿ ಹೀಗೆ" ಮತ್ತೇನೋ ಹೇಳಾಕಂತ ಬಾಯಿತಗದಿದ್ಲು 'ಸೂಫಿ' ಓಡಿ ಬಂದಿದ್ಕ ಗಪ್ಪಾದ್ಲು. "ಏನಮ್ಮ ಯಾಕ ಓಡಿ ಬಂದೆ" ಕೇಳಿದೆ. "ಸಾರ್ ನೀವು ಹೇಳಿದ್ರಲ್ಲಾ ಆ ಹಾಡೂ ಅದನ್ನ ಹಾಡಬೇಕಂತ ಸಂಗಣ್ಣ ಮೇಷ್ಟ್ರು ಹೇಳಿದ್ರು", ಅಂದ್ಲು. "ಹೌದ, ಕರಿ ಎಲ್ಲರನ್ನು" ಅಂದೆ. ನಾನು ಹಾಡು ಹಾಡೊದ್ವನ್ನ ತದೇಕ ಚಿತ್ತದಿಂದ ಗಮನಿಸತೊಡಗಿದ್ಲು, ಅವಳ ಒಳಗಿನ ತಾಕಲಾಟ ಮಾತ್ರ ನಡದೆ ಇತ್ತು.

ಷೋ ಮುಗದು ಹುಡುಗರೆಲ್ಲಾ ಕುತ್ಕೊಂಡಿದ್ರು, ಆಕಿ ಮಾತ್ರ ತಾನು ಸೋಲುವವಳೆ ಅಲ್ಲಾ ಅನ್ನೊಹಂಗ ನನ್ನ ಮನಸ್ಸನ್ನ ತನ್ನ ಕಡೀಗ ಸೆಳೆಯೋ ಪ್ರಯತ್ನ ನಡಸಿದ್ಲು. ಯಾರಿಗೂ ಅನುಮಾನ ಬರದಂಗ ಸೀದಾ ನನ್ನ ಬಾಜೂಕ ಕುಂತ್ಲು. ನಮ್ಮಿಬ್ಬರ ನಡುವಿನ ಸೆಣಸಾಟ ಇಬ್ಬರಿಗೆ ಬಿಟ್ರ ಮೂರನೆಯವರಿಗ ಗೊತ್ತೆ ಇರ್‍ಲಿಲ್ಲಾ. ಆಕಿ ವರ್ತನೆ ಅತಿಯಾಯ್ತು ಅಂದ್ಕೊಂಡವನೆ ಆಕಿ ಕಡೀಗ ನೋಡೋದನ್ನೆ ನಿಲ್ಲಿಸಿದೆ. ಹುಡುಗರು ಮಾತ್ರ ಆಕಿ ಸುತ್ತ ತಿರುಗಾಡಿ, ತಮ್ಮ ಕಡೀಗ ಗಮನ ಸೆಳಿಯಾಕ ನೋಡ್ತಿದ್ರು. ಡಾಕ್ಟರ್ ಇಡಿ ಶಿರಗೂರು ತಾಲೂಕಿನಲ್ಲೆ ಬಹಳ ಪ್ರಸಿದ್ಧಿ ಪಡದಿದ್ದರಿಂದ ಕೋಟ್ಯಾಂತರ ರೂಪಾಯಿ ಗಳಿಸಿದ್ರು. ದೊಡ್ಡ ಕುಟುಂಬ ನೂರಾರು ಎಕರೆ ಜಮೀನು ಮೂರ ಮಕ್ಕಳಲ್ಲಿ ದೊಡ್ಡವಳೆ ಮಲ್ಲಿಕಾ. ಅಳ್ಳಿಕಟ್ಟಿ ಓಣಿಯೊಳಗ ದೊಡ್ಡ ಬಂಗ್ಲೆ, ಆಸುಪಾಸ ಹಾದವರಿಗೆ ಇದು ಡಾಕ್ಟರ ಮನೀನ ಅಂತ, ಒಳಗಿದ್ದ ದೊಡ್ಡ ನಾಯಿಯ ಒದರಾಟದಿಂದ್ಲೆ ಗೊತ್ತಾಗತಿತ್ತು. ಅಳ್ಳಿ ಕಟ್ಟಿ ಓಣಿ ಶಿರಗೂರ ನಲ್ಲೆ ಪ್ರತೀಷ್ಠಿತ ದಲ್ಲಾಲಿಗಳು, ಆಫೀಸಿರುಗಳು ಇರೋ ಓಣಿ ಅಲ್ಲಿಂದ ಅವಳನ್ನ ಕಾಡುವ ರೋಮಿಯೋ ದಂಡು ಆರಂಭವಾಗತಿತ್ತು. ಅದ್ಯಾವದನ್ನೂ ಕೇರ್ ಮಾಡದೆ ಕಾಲೇಜಿಗ ಬರ್‍ತಿದ್ಲು ಮಲ್ಲಿಕಾ. ಕಾಲೇಜ ಹುಡ್ರಂತು ಆಕೀನ ಮಾತಾಡ್ಸಾಕ, ನೂರಾಎಂಟ ಪ್ರಯತ್ನ ಮಾಡ್ತಿದ್ರು. ಅಂತ ಅದೃಷ್ಟ ಲಕ್ಷ್ಮಿ, ಬಡಪಾಯಿ ಮೇಷ್ಟ್ರು, ನನ್ನ ತನ್ನ ಬುಟ್ಟಿಯೊಳಗ ಹಾಕ್ಕೊಳ್ಳಾಕ ಪ್ರಯತ್ನ ಮಾಡಾಕ ಹತ್ಯಾಳಂತ ಯೋಚನೆಮಾಡಿದೆ. ಎಲ್ಲಾರೂ ಊಟಕ ಕುಂತ್ಕೊಂಡ್ರು. ಸಂಗಣ್ಣ, ಕುಬಸಣ್ಣ ನಾನು ಹುಡ್ರನ್ನ ಬಿಟ್ಟು ಬ್ಯಾರೆ ಕಡೀಗ ಕುಂತ್ಕೊಂಡ್ವಿ. ಎರಡಕಡೀಗ ಷೋ ಕೊಟ್ಟು, ಒದರಾಡಿ ಸುಸ್ತಾಗಿದ್ದ ಹುಡ್ರು ಎಗ್ಗಿಲ್ಲದೆ ಹೊಡದ್ರು. ಮಲ್ಲಿಕಾ ತಾಟಿನೊಳಗ ಬೆರಳಾಡಿಸ್ತಾ ಕುಂತ್ಲು ಯಂಕಮ್ಮ, ಸೂಫಿ, ವಿಜಿ, ದೊಡ್ಡ ಕಣ್ಣಿನ ಸರೋಜ ಎಷ್ಟು ಹೇಳಿದ್ರು ಊಟ ಮಾಡಲೇ ಇಲ್ಲ. ಮನೀಗ ಹ್ವಾದ ತಕ್ಷಣ ಬೀಳುವ ಹೊಡೆತಗಳ ಅಂಜಿಕೆ ಒಂದ ಕಡೀಗ, ಏನೇನು ಬೋಯ್ಗಿಳನ್ನ

ಅನಿಸಿಕೋಬೇಕೋ ಏನೋ, ನಾನು ಬಂದಿದ್ದು ಈ ಮನುಷ್ಯನಿಗಾಗಿ ಅವನಾದ್ರು ಸಿಕ್ಕರೆ, ಬೇಕಾದ್ದನ್ನ ತಡ್ಕೊಳ್ಳೊ ಶಕ್ತಿ ಐತಿ ನನಗ, ಕನಸಿನ ಲೋಕಕ್ಕೆ ಜಾರ್‍ಕೊಂಡ ಹೋದಳು. ಹಳೇ ಜಂತಾಬಜಾರಿನೊಳಗ ಅವರು ಹೇಳಿದ ಜೀವನದ ಕುರಿತು, ಬದುಕಿನ ಕುರಿತ ಮಾತುಗಳು ನನ್ನ ಮನಸಿಗ ಯಾಕ ನಾಟಿದವೋ, ಯಾವ ನೋವನೆ ಕಂಡರಿಯದ ನನಗ ಅವರೊಂದು ಹೊಸ ಅದ್ಭುತ ಲೋಕದ ಪರಿಚಯ ಮಾಡಿಕೊಟ್ಟಿದ್ರು. ಹೂಂ... ಇವರ ದಿಸೆಯಿಂದ್ಲೆ ಈ ಹಳ್ಳಿಗಳಿಗ ಸುತ್ತಾಡೊ ಅವಕಾಶ ಸಿಕ್ಕಿದ್ದು, ಇಲ್ಲ ನಾ ಬಿಡೋದಿಲ್ಲಾ. "ಎಂಟ ಗಂಟೆಯಾಗಾಕ ಮದ್ಲು ಊರ ಸೇರ್‍ಕೊಬೇಕ್ರಪ್ಪ ಎದ್ದೇಳ್ರಿ". ಅನ್ಕೊಂತ ಒಳಗ ಬಂದೆ. ತಟ್ಟೆಯೊಳಗ ಕೈಯಾಡಿಸುತ್ತಲೇ ಇದ್ದ ಮಲ್ಲಿಕಾ ನನ್ನ ನೋಡಿ ನಕ್ಕಳು, "ಯಾಕ್ರಿ ನೀವಿನ್ನೂ ಊಟಾನೇ ಮಾಡಿಲ್ಲ ಏನಾತು, ಯಾರಾದ್ರು ಏನಾದ್ರು ಅಂದ್ರ," ಗಾಬರಿಯಿಂದ್ಲೆ ಕೇಳಿದೆ. ನನ್ನೆ ನೋಡ್ತಾ "ಯಾರು ಇಲ್ಲಾ ಸಾರ್ ಯಾಕೋ ಬ್ಯಾಡ ಅನಿಸಿತು" ಅಂದವಳೆ, ತಾಟನೊಳಗ ಕೈ ತೊಳ್ಕೊಂಡ್ಲು. ಅವಳಿಗ ಏನೋ ಹೇಳಬೇಕಂತ ಬಾಯಿತಗದಿದ್ದೆ ನನ್ನ ಮಾತು ಗಂಟಲೊಳಗೆ ಸಿಕ್ಕೊಂಡ್ವು. ಬೇಜಾರಾತು ಊರಾಗ ಎಷ್ಟೋ ಎಳೆ ಮಕ್ಕಳು ತುತ್ತಕೂಳಿಗಾಗಿ ಮುಂಜಾನಿಂದ ಸಂಜಿಮಟಾನು ಹಪಹಪಿಸ್ತಾವ ಈ ಹುಡುಗಿ ಎಂಥ ಕೆಲ್ಸ ಮಾಡಿದ್ಲು, ಇಷ್ಟು ಅನ್ನ ಬೆಳಿಯಾಕ ಆರತಿಂಗಳ ಕಾಲ ಹಗಲು ರಾತ್ರಿ ಮಂದಿ ಅಂಡ ಹರಿಯೋ ಹಂಗ ದುಡಿತಾರ. ದುಡಿಯದೇ ಉಣ್ಣೋ ಇಂಥ ಮಂದಿಗ ದುಡಿಮೆ ಫಲ ತಿಳಿಯೋದಾದ್ರು ಹ್ಯಾಂಗ. ಹೋಗಲಿ ಇಕಿಯಾಕ ಉಪವಾಸ ಎದ್ಲು, ನಮ್ಮೂರಾಗ ಮಂದಿ ಇಲ್ದೆ ಉಪಾಸಬಿದ್ರ ಈ ಹುಡುಗಿ, ಇದ್ದು ಉಣಾಲಿಲ್ಲಾ, 'ಛೇ' ಅಂದೆ. ಆಕಿ ನೇರವಾಗೆ ನನ್ನ ನೋಡಿದ್ಲು. ತನ್ನ ಹಠಮಾರಿತನ ಬಿಟ್ಟಂಗ ಕಾಣಲಿಲ್ಲ.

ಅವಳು ನನಗಾಗಿ ಜಾಗ ಹಿಡಿದದ್ಲು, ಮನಸಿಲ್ಲದಿದ್ರು ಅನುಮಾನ ಬಂದೀತು ಅಂತ ಸೀದಾ ಹೋಗಿ ಕುಂತ್ಕೊಂಡೆ. ಅವಳು ಗಂಭೀರವಾಗೆ ಕುಂತಿದ್ಲು. ಅದು ಇದು ಮಾತುಗಳ ನಡಕ್ಕ ಆಕಿ ಕಡೀಗ ಲಕ್ಷ ಕೊಡಾಕ ಹೋಗಲಿಲ್ಲಾ. ದಿಂಬೂರ ದಾಟ, ಜಾಮ್ನೂರಿಗ ತಲುಪಿದ್ವಿ ಇನ್ನೂ ಎಲ್ಡ ಕಿಲೋಮೀಟರ್ ಊರು ದೂರ ಇದ್ದಂಗೆ ಆಕಿ ನನ್ನ ಕಿಸೆಯೊಳಗ ಏನೋ ತೂರಿಸಿದ್ಲು ಗೊತ್ತಾತು, ನನ್ನ ಕಿವಿ ಹತ್ರ ಬಗ್ಗಿ "ನಿಮ್ಮ ರೂಮಿಗ ಹೋಗಿ ಓದಿ ನಾನೆ ನಾಳೆ ಬರ್ತೀನಿ ನಿಮ್ಮ ಅಭಿಪ್ರಾಯ ಹೇಳಬೇಕು" ಅಂದ್ಲು. ನಾನು ಕುಂತ ಹತ್ರ ನಡಗಿದೆ. ಶಿರಗೂರು ಬಂದಿದ್ದೆ ತಿಳಿಲಿಲ್ಲಾ, ಹುಡ್ರೆಲ್ಲಾ ಇಳದ ಹೋಗಿದ್ರು ನಾನು ಸುಮ್ನೆ ಕುಂತ್ಕೊಂಡಿದ್ದೆ ಹೋದವರೆಲ್ಲಾ 'ಬರ್ತಿವಿಸಾರ್' ಅಂತೇಳಿ ಹೇಳಿ ಹೋಗಿದ್ರು, ಯಾಂತ್ರಿಕವಾಗಿ ಹಾಂ ಹೂಂ ಅಂತ ಸಾಗಹಾಕಿದೆ. ನನ್ನೊಳಗ ನಡಿತಿದ್ದ ತಾಕಲಾಟ ಆತಂಕ ಹೆಚ್ಚಾಗತೊಡಗಿತು. ಏನ ಬರದಿರಬೇಕು? ಊಹೆಗೂ ಮೀರಿದ್ದೇನಾದ್ರು ಇದ್ರ. ಏನಪ್ಪ ಮಾಡಲಿ, ಯಾರದೋ ಪುಣ್ಯದಿಂದ ಸಿಕ್ಕಿರೋ ಒಂದ ತುತ್ತ ಕೂಳಿಗೂ ಸಂಚಕಾರ ಬೀಳೊ ಹಂಗ ಕಾಣಾಕ ಹತ್ಯತಿ ಹಂಗೇನಾದ್ರು ಆತಂದ್ರ, ಐತಲ್ಲ ಜಟ್ಟನಾಯ್ಕ ಮೇಸ್ತ್ರಿ ಕೂಡ ಕಾಫಿಬೀಜ ಹರಿಯಾಕ ಹೋಗೋದು. ಆದದ್ದು ಆಗ್ಲಿ ನಾಳೆ ನೋಡಿದ್ರಾತು. ಹೆಂಗಾರ ಮಾಡಿ ಆ ಹುಡುಗಿಯನ್ನ ಟೀಮಿಂದ್ಲೆ ಕೈ ಬಿಟ್ಟರಾಯ್ತು ಅಂತ ವಿಚಾರ ಮಾಡ್ತಿದ್ದಂಗೆ

ನನ್ನ ಗೆಳೆಯ ಪಟಗಾರನ ನೆನಪಾತು, ಸೀದಾ ಅವನಿದ್ದ ಹತ್ರ ಹೊಂಟೆಬಿಟ್ಟೆ.

ಚೀಟಿ ನೋಡಿದ ಪಟಗಾರ ದಂಗಾಗಿದ್ದ, "ಛಾನ್ಸ್ ಹೊಡೆದೆಯಲ್ಲಲೇ, ಇಡಿ ಊರಿಗೂರೆ ಆಕಿ ಹಿಂದ ಹುಚ್ಚರಾಗಿ ತಿರಗಾಡ್ತಿದ್ರ, ಆಕಿ ಮಾತ್ರ ನಿನ್ನ ಮ್ಯಾಲ ಸಾಯಾಕ ಹತ್ಯಾಳ. ಮಜಾ ಮಾಡು" ಅಂದ. ಅವನ ಮಾತ ಕೇಳಿ ನೆತ್ತಿ ಉರಿಯತೊಡಗಿತು, "ಲೇ ಬೇವರ್ಸಿ, ನಾನ ಬದುಕಿರೋ ಸ್ಥಿತಿ ನೋಡಿ ಮಾತಾಡು ಊರಾಗ ಮನಿ ಇಲ್ಲಾ ಅಡವಿಯೊಳಗ ಹೊಲ ಇಲ್ಲದ ಪರಿಸ್ಥಿತಿಯೊಳಗ ನಾ ಅದೀನಿ, ಮಜಾ ಮಾಡು ಅಂತ. ದೊಡ್ಡದಾಗಿ ಹೇಳಿಬಿಟ್ಟೆ, ನಾ ಯಾರು? ಏನು ? ಅನ್ನೋದು ನನಗಗೊತ್ತು, ಮೇಲಾಗಿ ಆಕೀಗ ನಾನ ಪಾಠ ಹೇಳೋ ಮಾಸ್ತರ. ಶಿಷ್ಯಳನ್ನೆ ಕಾಮಕ್ಕ ಎಳದೆ ಅಂತಂದ್ರ ನನ್ನ ಮನಃ ಸಾಕ್ಷಿಯನ್ನ ನಾನೇ ಕೊಂದಕೊಂಡ ಹಂಗ" ನಾನು ಬಹಳ ವಿಚಲಿತನಾಗಿದೆ. ಅಂವ ಶಾಂತ ಚಿತನಾಗಿದ್ದ, "ನೋಡಯ್ಯ ಪ್ರಭು, ನೀ ಏನಂದಕೊಂಡಿದ್ದಿಯೋ ಅವೆಲ್ಲಾ ಸವದ ಹೋದ ಮಾತುಗಳು ಸೃಷ್ಟಿಕರ್ತ ಬ್ರಹ್ಮ ಅಂತಾರಲ್ಲಾ ಪುರಾಣದಾಗ ಅವನೆ ಅಂವ ಸೃಷ್ಟಿಸಿದ ಸರಸ್ವತಿಯನ್ನ ಮೋಹಿಸಿ ಮದ್ವಿಯಾದ ನಿಂದೇನ ಲೆಕ್ಕ. ಯಾವದನ್ನೂ ಅತಿಯಾಗ ಮನಸ್ಸಿಗ ಹಚ್ಕೊಳ್ಳಾಕ ಹೋಗಬ್ಯಾಡ, ಮಲ್ಲಿಕಾ ಮತ್ತ ಆಕಿ ಗೆಳತಿ ಸೂಫಿ ಬಂದಿದ್ರು ನಾಳೆ ಮ್ಯಾಟ್ನಿ ಷೋ ಸಿನಿಮಾ ನೋಡಾಕ ಕರದಾರ" ಗಂಭೀರವಾಗೆ ಹೇಳಿದ ಪಟಗಾರ. ನಾನು ಯೋಚಿಸುತ್ತಲೇ ಇದ್ದೆ" ನೋಡು ನಾಳೆ ಹ್ಯಾಂಗು ಭಾನುವಾರ ಕಾಲೇಜಿಲ್ಲಾ ಜಲ್ದಿ ರಡಿಯಾಗಿ ಬಂದಬಿಡು ಹೋಗನಂತ" ಅಂದ. ಗಾಬರಿಯಿಂದ್ಲೆ ಕೇಳಿದೆ "ಅಯ್ಯೋ ನಿನ್ನ ಅವಾಗಿನಿಂದ್ಲೆ ಬಡ್ಕೊಳ್ಳಾಕ ಹತ್ತೀನಿ ನಿನ್ನ ಶಿಷ್ಯಂದಿಯರು ಸಿನಿಮಾಕ ಕರದ ಹೋಗ್ಯಾರಂತ." ಅವನ ಮಾತ ಆಗತಿದ್ದಂಗೆ ಜೋರಾಗಿ ಒದರಿದೆ" ನಾ ಬರೋದಿಲ್ಲಾ, ಏನ ಅನಾಹುತ ಮನುಷ್ಯ ನೀನು ಅಂತೀನಿ. ಆಕಿ ಊರಾಗ ಅದೂ ಆಕಿ ಅಂತಂದ್ರ ಇಡಿ ಓಣಿ ಓಣಿಗೂ ಗಲ್ಲಿ ಗಲ್ಲಿಗೂ ಗೊತ್ತು ರಿಕ್ಷಾ ಹೊಡಿಯೋರು, ಮನಿಕಟ್ಟೊಗೌಂಡಿ ಹುಡ್ರು, ಎಕ್ಕಗಾಡಿ ಓಡ್ಸೋನು, ಕಿರಾಣಿ ಅಂಗಡಿಯೊಳಗ ಗಿರಾಕಿ ಕೊಡೋನು, ಚಾದಂಗಡಿ ಸಪ್ಲೇಯರ್, ಟೆಲಿಫೋನ ಬೂತಿನ ಹುಡ್ರು. ಮಿರ್ಚಿ ಮಾಡೋರು ಲಾಟ್ರಿ ಮಾರೋರು, ರದ್ದಿ ಆರಿಸೋರು, ಕ್ಲೀನರ್‌ಗಳು, ಡಾಕ್ಟರ್ ದವಾಖಾನಿಯೊಳಗಿನ ಹುಡುಗರು ಒಬ್ರ, ಇಬ್ರ, ಆಕೀನ ನೋಡಾಕ ಆಶಿ ಪಡದೋರು. ನಿನಗೆಲ್ಲೋ ಹುಚ್ಚು ಹಿಡದೈತಿ ಆಕಿ ಕೂಡ ನಾ ಸಿನಿಮಾ ನೋಡಾಕ ಹೋಗುದು ಅಸಾಧ್ಯದ ಮಾತು." ಖಡಾಖಂಡಿತವಾಗಿ ಹೇಳಿದೆ." ಹೋಗೋನಿನ್ನ ಮಂಚಾಳಾಗ ಜೋರಾಗಿ ನಗತೊಡಗಿದ" ಇಷ್ಟೆಲ್ಲಾ ಮಂದಿಗ ಬೇಕಾದ ಒಬ್ಬ ಹುಡುಗಿ, ನಿನ್ನ ಹಿಂದ ಬಿದ್ದಾಳಲ್ಲ ಅದು ನಿಜವಾಗ್ಲೂ ನಿನ್ನ ಅದೃಷ್ಟ, ಈ ತಾಲೂಕಿನ್ಯಾಗ ಆಕಿ ಅಂತ ಸುಂದರ ಹುಡುಗಿ ಮತ್ತೊಬ್ಬಾಕಿ ಇಲ್ಲಾ, ಸ್ವಲ್ಪ ಸೌಂದರ್ಯ ನೋಡಿ ಖುಷಿ ಪಡೋ ಪ್ರವೃತ್ತಿಯನ್ನ ಬೆಳಸಿಕೋ" ನನ್ನ ಚುಚ್ಚಿ ಮಾತಾಡತೊಡಗಿದ." ಈ ಸೌಂದರ್ಯ ಗಿಂವದರ್ಯ ನನ್ನಂತೋನಿಗಲ್ಲ ನಾನು ನನ್ನ ಬದುಕಿಗ ಒಂದ ಅರ್ಥ ಹುಡುಕಾಕ ಹೊಂಟೀನಿ. ನನಗ ಅಡ್ಡದಾರಿ ಹಿಡಸಬ್ಯಾಡ." ಉದ್ವೇಗಗೊಂಡಿದ್ದೆ. "ನಿನ್ನ ಬದುಕಿಗೂ ಈ ಹುಡುಗಿಗೂ ಯಾವ ಸಂಬಂಧ ಇಲ್ಲಾ, ಆ ಬದುಕೆ ಬ್ಯಾರೆ, ಈ ಹುಡುಗಿ

ನಿನಗೆ ಮನಸಕೊಟ್ಟಾಳಲ್ಲ ಇದೇ ಬ್ಯಾರೆ, ಇದು ನಿನ್ನ ಬದುಕಿನ ಆರಂಭ ಒಂದ ನಿಮಿಷ ಕಣ್ಣು ಮುಚ್ಚು," ಯಾಕೋ ಕೇಳಿದೆ, "ಸುಮ್ನೆ ಮುಚ್ಕೋ" ಅಂದ. "ಸರಿಯಪ್ಪ ಅದೇನ ಮೋಡಿ ಮಾಡ್ತಿ ಮಾಡು" ಅಂದವನೆ ಗಟ್ಟಿಯಾಗಿ ಕಣ್ಣು ಮುಚ್ಚಿದೆ. ಮನಸ್ಸಿನೊಳಗ ಮಲ್ಲಿಕಾಳ ಮಕ ನೆನಪಿಸಿಕೊ, "ಹಿಪ್ನಾಟೈಸ್ ಮಾಡಾಕ ನೋಡಿದ." ಎಯ್ ತಗಿಯೋ ಎಲ್ಲಿ ಹಚ್ಚಿ "ಕಣ್ಣು ಬಿಟ್ಟೆ" ನೋಡು ನಿನ್ನ ಕೈಯಿಂದ ಒಂದ ಗಟ್ಟಿನಿರ್ಧಾರ ತಗೊಳಾಕ ಆಗಲಿಲ್ಲಾ ಅಷ್ಟೊಂದು ವೀಕ್ ಮೈಂಡ್ ನಿಂದು, ಎಲ್ಲಾನು ಎದುರಿಸಬೇಕ್ಕಾರ ಗಟ್ಟಿಯಾದ ಎದೆಗಾರಿಕೆ ಬೇಕು. ನೋಡಪ್ಪ, ಈ ಜಗತ್ತಿನ್ಯಾಗ ಮೂರ ನಮೂನಿ ಮಂದಿ ಇರ್ತಾರ. ಒಂದನೇ ಕ್ಯಾಟಗರಿಯವರು ಬಹಳ ಆರಾಮದಿಂದ ಜೀವನದಾಗ ಏನೇನು ಬ್ಯಾಡ ಅವರಿಗೆ, ಅಪ್ಪ ಮಾಡಿದ ಇಡಿಗಂಟನ್ನ ಖರ್ಚ ಮಾಡ್ತಾ ಸಾಧನೆಯಿಂದ ದೂರ ಉಳಿಯೊ ದರಿದ್ರ ನಾರಾಯಣ ನಂತೋರು. ಎರಡನೆಯ ಕ್ಯಾಟಗರಿ ಮಂದಿ, ಸ್ವಲ್ಪ ಡಿಫರೆಂಟ್ ಇರ್ತಾರ, ಹ್ಯಾಂಗಪ್ಪ ಅಂದ್ರ, ಕೆಲ್ಸ ಆರಂಭಮಾಡಿ ಅರ್ಧಕ್ಕೆ ಬಿಟ್ಟು ಹಿಡಿದ ಕೆಲಸದಿಂದ ವಿಮುಖ ರಾಗ್ತಾರ. ಇನ್ನೂ ಮೂರನೆಯ ಕ್ಯಾಟಗರಿ ಜನರು ಜೀವನದಾಗ ರಿಸ್ಕ್ ತಗೊಳೋದೆ ಗುರಿಯನ್ನಾಗಿ ಮಾಡ್ಕೊಂಡು ಯಶಸ್ಸು ಪಡಿತಾರ, ಸಾಧನೆ ಮಾಡೋದಾಗದಿದ್ದರೆ ಎಷ್ಟೋ ಸಂದರ್ಭದಾಗ ಹುಚ್ಚರಾಗ್ಯಾರ, ಕೆಲವರಂತು ಪ್ರಾಣ ಕಳ್ಕೊಂಡಾರ, ನೀ ಈ ಮೂರ ಕ್ಯಾಟಗರಿಗ ಸೇರದೋನು ನಿನ್ನ ಬಡತನ, ನಿನ್ನೊಳಗ ದೊಡ್ಡ ಕೀಳರಿಮೆ ಸೃಷ್ಟಿ ಮಾಡ್ಯಾತಿ, ನೀ ಅದನ್ನೆ ಬಂಡವಾಳ ಮಾಡ್ಕೊಂಡು ಪ್ರತಿಯೊಂದಕ್ಕೂ ಅಸಹಾಯಕನಂತೆ ವರ್ತನೆ ಮಾಡ್ತೀಯಾ ವಿನಃ ನೀ ಅಸಹಾಯಕ ಅಲ್ಲ ನನಗೊತ್ತು". ದೊಡ್ಡ ಭಾಷಣ ಬಿಗದಿದ್ದ. ಅವನಿಗೆ ಉತ್ತರ ಕೊಡಾಕ ಶಬ್ದಗಳ ತಡಕಾಟ ನಡೆಸಿದ್ದೆ. "ಇವನ ಮಾತ ಕೇಳಿ ಸಾಹಸ ಮಾಡಾಕೇನರ ಹೋದ್ರೆ ಕತಿಮುಗದ ಹೋತು" ನನ್ನೊಳಗೆ ಅಂದಕೊಂಡೆ. "ಇನ್ನೂ ನೀ ಅರ್ಥ ಮಾಡಿಕೊಳ್ಳಲಿಲ್ಲಾಂದ್ರ ನಾನಾದ್ರು ಏನ ಹೇಳ್ಲಿ." ಅಂವ ಮತ್ತೆ ಚುಡಾಯಿಸಿದ. ನೋಡ ತಮ್ಮ ಶಿರಗೂರು ಒಂದು ದೊಡ್ಡ ಹಳ್ಳಿ, ಏನೋ ಆಡಳಿತದ ಅನುಕೂಲಕ್ಕ ತಾಲೂಕ ಮಾಡ್ಯಾರ ಅಷ್ಟೆ. ಇಂತ ಹಳ್ಳಿಯೊಳಗ ಪ್ರತಿಯೊಂದ ದೊಡ್ಡ ಸಣ್ಣ ಸುದ್ದಿಗಳೆಲ್ಲಾ ಮಂದಿಗ ಗೊತ್ತಾಗತಾವ ಬಾಯಿಂದ ಬಾಯಿಗ ಬಂದಿದು ಹತ್ತುಗತಾವ, ಹತ್ತ ಇದ್ದಿದ್ದು ಹತ್ತ ಬಣ್ಣ ಕಟ್ತಾವ, ಒಂದೊಂದ ಆಕಾರ ಪಡದು ಇಡಿ ತಾಲೂಕಿನ ತುಂಬಾ ಹಾರಾಡತಾವ. ಅಷ್ಟಕ್ಕೂ ಶ್ರೇಣೀಕೃತ ಈ ವ್ಯವಸ್ಥೆಯೊಳಗಿನ ನಾನು ಕೆಳಗಿನ ಸ್ಥರದಾಗ ಅದೀನಿ ಆಕಿ ಮೇಲಿನ ಸ್ಥರದಾಗ ಅದಾಳ, ಇಂತ ಕ್ಲಿಷ್ಟ ಜಾತಿ ವ್ಯವಸ್ಥೆಯೊಳಗ ನೀ ಕಣ್ಣು ಮುಚ್ಚಿ ಸ್ವಾಮಿಗಳು ಬಾಯಿಗ ಬಂದಂಗ ಉಪದೇಶ ಮಾಡ್ತಾರಲ್ಲ ಹಂಗ ಉಪದೇಶ ಮಾಡ್ತಿ ಅಂದ್ರ ಏನ ಹೇಳ್ಲಿ ನಿನಗ". ನಾ ಹೇಳಿದ್ದ ಅವನಿಗ ಹಿಡಸಲಿಲ್ಲಾ ಅವನ ವಾದವನ್ನೆ ಹಿಡ್ಕೊಂಡ ಕೂಡೊ ಮನುಷ್ಯ, ಅವನಿಗೆ ಹೇಳಿ ಪ್ರಯೋಜನ ಇಲ್ಲಂತ ಗೊತ್ತಾತ ನನಗ." ಸರಿ ಕಣಯ್ಯ ನಾಳೆ ನೀ ಅವರ ಕೂಡ ಸಿನಿಮಾಕೆ ಹೋಕ್ಕೊಂಡ ಬಾ ನಾಳೆ ಸಂಜಿ ಮುಂದ ಹಂಗೆ ಅಡ್ಡಾಡಾಕ ಹೋಗಾನಂತ", ಅಂದವನೆ ಮೇಲೆದ್ದು ಹೋಗಾಕ ರಡಿಯಾದೆ. "ಏಯ್ ಕೂತ್ಕೊಳಯ್ಯ, ನಾನು ಹೋಗೋದಿಲ್ಲಾ, ಅವರು ನಿನಗ ಬರಾಕ ಹೇಳ್ಯಾರ, ಅವರಿಬ್ರು

ಬರ್ತಿರೋದೆ ನಿನಗಾಗಿ ಅಂತದ್ರಾಗ ನೀ ನನ್ನೊಬ್ಬನಿಗೆ ಹೋಗಂತಿಯಲ್ಲಾ, ಬೇಕಾರ ನೀ ಹೋಗು ನಾ ಒಲ್ಲೆ" ಅಂದೆ. ಇದೊಳ್ಳೆ ಪಜೀತಿಗಿಟ್ಕೊಂತು ಅನಿಸಿತು ನನಗೆ. ಇಲ್ಲಾ ಹೋಗಲೆ ಬಾರದು ಅಂತ ಗಟ್ಟಿ ನಿರ್ಧಾರ ಮಾಡಿದೆ. "ಊಹೂಂ, ನನಕೈಲೆ ಆಗೋದಿಲ್ಲಾ", ಅಂದೆ, "ಹೆದರಪುಕ್ಲ ಕಣೋ ನೀನು, ಒಂದ ಕೆಲ್ಸ ಮಾಡಾನು ನಾನು ನೀನು ಮದ್ಲು ಹೋಗಿ ಟಿಕೀಟ ತಗಸ್ಕೊಂಡ ಒಳಗ ಹೋಗಾನು ಅವರಿಬ್ಬರೂ ಆ ಮ್ಯಾಲ ಬೇಕಾರ ಬರ್ಲಿ, ಮಂದಿಗೆ ಅನುಮಾನವೇ ಬರಲ್ಲ, ಯಾಕೆ ಹೇಳು ನೀ ಮೇಷ್ಟ್ರ ಆದ ತಕ್ಷಣ ಸಿನಿಮಾ ನೋಡಬಾರದಂತ ಏಲ್ಲಾರು ಬರದ್ಯೆತೇನು"? ಹೊಸ ವಿಚಾರ ಹೇಳಿದ. ಈ ಮನುಷ್ಯ ಅಷ್ಟು ಸುಲಭದಿಂದ ಬಿಡೋನಲ್ಲ ಅಂತ ಗೊತ್ತಾತು "ಸರಿ ಕಣಯ್ಯ ನೀ ಅದೇನ ಮಾಡ್ತಿಯೋ ಮಾಡು ನನ್ನ ಮರ್ಯಾದಿ ಹರಾಜ ಮಾಡದಂಗ ಏನಾರು ಮಾಡು" ಅಂದವನೆ ಅವನ ಕೋಣೆಯಿಂದ ಹೊರನಡೆದೆ.

ನನಗ್ಯಾಕೋ ಹೆದರಿಕೆ ಆಗತೊಡಗಿತು. ನಾನು ತಪ್ಪುಮಾಡಕ ಹತ್ತೀನಿ ಅನಿಸಿತು ಆದ್ರ. ಈ ಮನುಷ್ಯ ಪಟಗಾರ ಬಿಡಾಕ ತಯಾರಿಲ್ಲ, ಆ ಹುಡುಗಿಯರಿಗ ಹೇಳದೆ ಕೇಳದೆ ಸಿನಿಮಾ ಟಾಕೀಸ್‌ಗೆ ಬಂದಿದ್ವಿ, ಅವರು ಹುಡ್ಕೊಂಡಬಂದೇ ಬರ್ತಾರನ್ನೊ ಧೈರ್ಯ ಪಟಗಾರನಿಗಿತ್ತು. ನನಗ ಅಲ್ಲಿ ನಿಲ್ಲಾಕ ಮುಜಗರ ಅನಿಸತಿತ್ತು. "ಪಟಗಾರ ನೀ ಒಬ್ಬನೇ ಹೋಗಿ ಬಾರೋ, ನನಗ್ಯಾಕೋ ಹೆದರಿಕೆ ಆಗಾಕ ಹತ್ಯಾತಿ" ಗೋಗರೆದೆ, "ಬಾಯಿ ಮುಚ್ಕೋ ಇಲ್ಲಿವರೀಗ ಬಂದಿಯಾ, ಈಗ ವಾಪಸ್ ಹೊಕ್ಕೀನಿ ಅಂತಿಯಲ್ಲ ನಡಿ ಟಿಕೇಟ ತಗೊಂಡ ಒಳಗ ಹೋಗಿ ಬಿಡಾನು, ಕತ್ತಲ ಪ್ರಪಂಚದಾಗ ನಿನ್ನ ಹೆದರಿಕೆ ಎಲ್ಲಾ ಓಡಿ ಹೊಕೈತಿ" ಅಂದವನೆ. ಸೀದಾ ಹೋಗಿ ನಾಕು ಟಿಕೇಟಕ ತಗೊಂಡಬಂದೇಬಿಟ್ಟ, ಎರಡು ಹರಿಸಿಕೊಂಡು ಒಳಗ ಹೋಗಾಕು ಡೊಣ್ಣಾಡ ಎದುಸಿರು ಬಿಡ್ತಾ ಸೈಕಲ್ ತುಳ್ಕೊಂಡ ಬಂದೇ ಬಿಟ್ಟ. ನಾನು ಪರದೆ ಹಿಂದ ಹೊಕ್ಕೊಳ್ಳಾಕ ನೋಡಿದೆ, ಪಟಗಾರ ಬಿಡಲಿಲ್ಲಾ ಹೊರಗ ಎಳದೇ ಬಿಟ್ಟ. "ಏನ್ಸಾರ ಸಿನಿಮಾಕ್ಕ ಹೊಂಟಿರಾ" ಅಂದ. "ಹೌದು ಈ ಮನುಷ್ಯ ಬಿಡ್ತಾ ಇಲ್ಲ ಕಣ್ರೀ" ಅಂದು ಅವನ ಮೇಲೆ ಹಾಕಿದೆ. ಮತ್ತ ಆ ಇಬ್ರು ಹುಡುಗಿಯರು ನಿಮ್ಮ ರೂಮಿನ ಮುಂದ ನಿಂತ್ಕೊಂಡು ಅಳಾಕ ಹತ್ಯಾವ, ನೀವೇನೊ ಸಿನಿಮಾಕ ಕರದಿರಿ ಈಗ ನೋಡಿದ್ರ ಎಲ್ಲೊ ಹೋಗ್ಯಾರ, ಅಂತ." ಅಂದ. ಅವನ ಮಾತ ಕೇಳಿ ನಾನು ಮುಗಿಲ ನೋಡತೊಡಗಿದೆ. ಕೈ ಕಾಲು ಸತ್ವಕೊಳ್ಕೊಂಡು ಕೆಳಗ ಬೀಳ್ತಿನೇನೋ ಅನಿಸಿತು. "ಇಲ್ಲಪ್ಪನಾ ಏನು ಹಂಗ ಹೇಳಿಲ್ಲಾ ಅವರಿಗ" ಸಾವರಿಸಿಕೊಂಡು ಹೇಳಿದೆ. "ಅದೇ ಸಾರ್ ನೀವು ನಿಮ್ಮ ಫ್ರೆಂಡ್ ಪಟಗಾರ ಮಲ್ಲಿಕಾ ಮತ್ತು ಸೂಫಿಗ ಕರದಿದ್ರಂತ" ಅಂತ ಒತ್ತಿ ಹೇಳಿದ. "ಹೌದ್ರಿ ಡೊಣ್ಣಾಡ, ನಾನೇ ಹಂಗಂತ ಅವರಿಗೆ ಹೇಳಿದ್ವೆ, ಹೋಗಿ ಕರ್ಕೊಂಡ ನೀವು ಟಿಕೇಟ್ ತಗೊಂಡ ಅವರ ಕೂಡ ಬರ್ರಿ" ಅಂತ ಕಿಸೆಯಿಂದ ಹತ್ತರ ನೋಟುಗಳನ್ನು ಅವನ ಕೈಗಿಟ್ಟವನೆ ಒಳಗ ನಡೆದು ಬಿಟ್ಟ ಪಟಗಾರ.

ನನ್ನ ಎದಿ ಬಡಕೊಳ್ಳಾಕ ಹತ್ತಿತ್ತು, ಮಂದಿ ಏನಂದಾರಂತ ತಲಿಮ್ಯಾಲ ಕೈಇಟ್ಕೊಂಡ ಕುಂತೆ. ಒಂದ ಮೂಲಿಯೊಳಗ ಕುಂತಿದ್ದ ನಮ್ಮನ್ನ ಹುಡಕೊಂಡು ಡೊಣ್ಣಾಡ ಮಲ್ಲಿಕಾ,

ಸೂಫಿ, ಕತ್ಲಾಗ ತಡವರಿಸಿಕೊಂತ ಬಂದ್ರು. ನಾನೇ ಕಡೀಗ ಕುಂತಿದ್ದೆ, ನನ್ನ ಪಕ್ಕ ಪಟಗಾರ ಅವನ ಪಕ್ಕ ಮಲ್ಲಿಕಾ, ಸೂಫಿ, ಆಕಿ ಪಕ್ಕ ಡೊಣ್ಣ್ಯಾಡ ಕುಂತ್ಕೊಂಡಿದ್ವಿ. ಸಿನಿಮಾ ಸುರುಆಗಿತ್ತು. ಅಣ್ಣ ತಂಗಿ ಸೆಂಟಿಮೆಂಟ ಇದ್ಯಾವ ಸಿನಿಮಾಕ ಕರ್ಕೊಂಡ ಬಂದಾನ ಈ ಮನುಷ್ಯ ಅನಿಸಿತು. ಒಳಗಿನ ಹೆದರಿಕೆಯಿಂದಾಗಿ ಸಿನಿಮಾ ಪರದಿಮ್ಯಾಲ ಏನೇನ ನಡಿತೈತಂತ ತಿಳಿಯದಾಗಿತ್ತು. ಮಲ್ಲಿಕಾ ಇದ್ದಕ್ಕಿದ್ದಂಗ ಎದ್ದಾಕಿನ "ಸರ್, ನಾನು ಆಕಡೀಗ ಹೊಕ್ಕೀನಿ" ಅಂತ ಪಟಗಾರನನ್ನು ಸರಿಸಿ ನನ್ನ ಪಕ್ಕ ಬಂದು ಕುಂತೆ ಬಿಟ್ಲು. ನನಗ ಏನು ಹೇಳಾಕ ತಿಳಿಯದೆ ಬೆಂಕಿ ಪಕ್ಕ ಕುಂತಂಗ ಮುದರಿಕೊಂಡು ಕುಂದ್ರಾಕ ನೋಡಿದೆ. ಮಲ್ಲಿಕಾ ಮುಲಾಜಿಲ್ದೆ ಇಡಿ ತನ್ನ ಮೈಯ ಅರ್ಧ ಜಾಗವನ್ನ ನನ್ನ ಮ್ಯಾಲ ಹೇರ್ಕೊಂಡು ಕುಂತ್ಲು. ಇಡಿ ಮೈಯಾನ ರಕ್ತ ಒಂದೇ ಸಲಕ ಎದಿಯಾಗ ಶೇಖರಣೆಗೊಂಡಂಗಾಗಿ ಮೈ ಸುಡುತ್ತಿರೊಹಂಗಾತು. ಈಗ ನನಗ ಇಡಿ ಪ್ರಪಂಚದ ಎಲ್ಲಾ ವ್ಯವಹಾರ ಮರತಹೋದವು. ನಾನು ಮಲ್ಲಿಕಾ ಮತ್ತೆಲ್ಲಾ ಏನೂ ಇಲ್ಲ ಅನಿಸತೊಡಗಿತು. ಪರದೆಯ ಮೇಲೆ ಹೊಡೆದಾಟದ ದೃಶ್ಯ ಸುರು ಆಗಿತ್ತು. ಈ ಕಡೀಗ ನಮ್ಮಿಬ್ಬರ ಎದಿಯೊಳಗ ಹೊಸದೊಂದು ಅನುಭವದ ಹೊಡದಾಟ ಸುರು ಹಚ್ಕೊಂಡಿತ್ತು. ಜೀವನದಾಗ ಮೊದಲ ಸಲ ಹೆಣ್ಣಿನ ಕೂಡ ಸರಸಕ್ಕೆ ಇಳದಿದ್ದೆ. ಅವಳ ಮೃದುವಾದ ಕೈ ನನ್ನ ಕೈಯೊಳಗಿತ್ತು ಆಕಿ ಕಾಲಿಂದ ನನ್ನ ಕಾಲುಗಳ ಮೇಲೆ ಮೆತ್ತಗೆ ಏನೇನೋ ಭಾವನೆಗಳ ಚಿತ್ತಾರ ಬಿಡಿಸತೊಡಗಿದ್ಲು ಅವಾಗ ನಾನು ನಾನಾಗಿರಲಿಲ್ಲ. ನನ್ನೆಲ್ಲಾ ನಿನ್ನೆನಾಳೆಗಳನ ಮರ್ತಿದ್ದೆ. ಮಲ್ಲಿಕಾಳ ಮೋಡಿಯಿಂದ ಬಿಡಿಸಿಕೊಳ್ಳಾಕ ಆಗದೆ ಹೆಣ್ಣು ಜೇಡ ಹೆಣೆದ ಮೋಸದ ಮೃತ್ಯು ಬಲೆಯೊಳಗ ಸಿಗಾಕಿಕೊಂಡ ಗಂಡು ಜೇಡನ ಸ್ಥಿತಿ ನನ್ನದಾಗಿತ್ತು. ಇದ್ದಕ್ಕಿದ್ದಂಗೆ ಹತ್ಕೊಂಡ ದೀಪಗಳಿಂದ ಇಬ್ಬರು ಬೆಚ್ಚಿ ಕೊಡವಿಕೊಂಡ ಮೇಲೆದ್ವಿ. ಅವಾಗ್ಲೆ ನಾನು ವಾಸ್ತವಕ್ಕೆ ಬಂದಿದ್ದು. ಮಾತು ಎದಿಯೊಳಗೆ ಗೂಡು ಕಟ್ಟತೊಡಗಿದವು. ಹೊರಗಡೆ ಭೀಕರ ಸನ್ನಿವೇಶ ನೆನಪಾಗಿದ್ದೆ ಪಟಗಾರ ನಾನು ಒಳಗಡೆಯಿಂದ್ಲೆ ಅವರೆಲ್ಲರಿಗೂ ಹೇಳಿ ಹೊರಗಡೆ ಹೊಂಟಬಿಟ್ಟೆವು.

ಬಹಳ ಖಿನ್ನನಾಗಿದ್ದೆ, ಎಲ್ಲಾ ಮುಗಿದ ನಂತರ ಖಾಲಿಗೊಂಡ ಖಜಾನೆಯಂತೆ ನಾನು ಖಾಲಿಯಾದೆ ಅನಿಸಿತು. ಆದರ್ಶವಾಗಬೇಕು, ಬದುಕಿನ ಜೊತೆಗೆ ಹೋರಾಡಬೇಕೆಂದು ಕೊಂಡ ನನಗೆ ಈ ಹೆಣ್ಣನ್ನ ಮುಂದೆ ಬಿಟ್ಟು ನನ್ನ ಕ್ರಿಯಾಶೀಲತೆಯನ್ನು ಮತ್ತೊಂದು ಕಡೆಗೆ ಡೈವರ್ಟ್ ಮಾಡಾಕ ಹಾಕಿರೊ ಸಂಚಿರಬೇಕು ಅನಿಸಿತು. ಯಾವುದರಿಂದ ದೂರ ವಿರಬೇಕೆಂದು ಕೊಂಡಿದೆ ಅದರ ಬೆನ್ನ ಹತ್ತಿ ಓಡತೊಡಗಿದೆ. ನಾನೆಷ್ಟು ಬೇಡವೆಂದರೂ ಮಲ್ಲಿಕಾ ನನ್ನೊಳಗೆ ಕ್ಯಾನ್ಸರ್ ಗೆಡ್ಡೆಯಂತೆ ಆವರಿಸಿಕೊಳ್ಳುತ್ತಾ ಹೊರಟಿದ್ಲು. ಯಾಕೆ ಹಿಂಗಾತು ರಾತ್ರಿ ನಿದ್ದೆ ಬರದೆ ಹೊರಳಾಡತೊಡಗಿದೆ. ಸರಿಯಾಗಿ ಊಟ ಮಾಡಾಕ ಆಗದೆ ಸರಿಯಾಗಿ ತಯಾರಾಗಿ ಪಾಠ ಹೇಳಾಕು ಆಗದೆ ಪರದಾಡತೊಡಗಿದೆ. ತರಗತಿಯಲ್ಲಿ ಪಾಠ ಮಾಡ್ತಾ ಮಲ್ಲಿಕಾಳನ್ನ ನೋಡಿದೊಡನೆ ನನ್ನನ್ನೆ ತಿನ್ನುವಂತೆ ಬೊಗಸೆಕಂಗಳನ್ನ ಅರಳಿಸಿ ಮಲ್ಲಿಕಾ ನೋಡಿದಾಗ ಪಾಠದ ದಿಕ್ಕುತಪ್ಪುತ್ತಿತ್ತು. ನಾನು ಹಿಂಗ ಮಾಡಬಾರದಿತ್ತು.

ನನ್ನ ಅಂತಃ ಸತ್ವಕ್ಕೆ ಮೋಸ ಮಾಡಿದೆ ಅನಿಸತೊಡಗಿತು. ಯಾರಿಗೂ ಅಪಮಾನ ಬರಬಾರದಂಗ ಸೂಕ್ಷ್ಮದಿಂದಲೇ ನಡಕೊಳ್ಳತೊಡಗಿದೆ. ನಾನು ಸೋತಿದ್ದೆ. ವ್ಯವಸ್ಥೆ ಕುಟಾಗ ಒಪ್ಪಂದ ಮಾಡ್ಕೊಂಡು ರಾಜಿಯಾಗಿದ್ದೆ- ನನ್ನ ಹೋರಾಟಕ್ಕ ಈಗ ತಾಕತ್ತು ಇಲ್ಲದಂಗಾತು ಅನಿಸಿತು. ಬ್ಯಾರೆ ಮಂದಿಗ ದಾರಿ ತೋರಿಸೋ ನಾನು ತಪ್ಪದಾರಿ ಹಿಡದಬಿಟ್ಟೆ, ಈಗ ಉಪದೇಶ ಮಾಡಿದ್ರೆ ಆದ್ರಾಗ ಹುರಳೆ ಇಲ್ಲದಂತಾಗುತ್ತದೆ ಅಂದ್ಕೊಂಡು ಹುಡುಗರ ಹಿಂದೆ ಕಾಟಾಚಾರಕ್ಕ ಹೋಗೋ ನೆಪಮಾಡತೊಡಗಿದೆ. ಡೊಣ್ಣಾಡ ನನ್ನ ಮತ್ತು ಮಲ್ಲಿಕಾಳ ಸುದ್ದಿ ತಗೊಂಡು ಆಕೀಗ ಬ್ಲಾಕ್‌ಮೇಲ್ ಮಾಡಿದ್ದ. ಅದಕ್ಕ ಹೆದರಿ ಅವನಿಗ ಸರಾಯಿ ಕುಡಿಯಾಕ ಪುಡಿಕಾಸ ಕೊಟ್ಟು, ರುಚಿತೋರಿಸಿದ್ಲು ನಮ್ಮಿಬ್ಬರ ನಡುವೆ ಗೌಪ್ಯವಾಗೆ ಉಳ್ಕೊಂಡಿದ್ದ ಸಂಬಂಧ ಹೊಗೆಯಾಡತೊಡಗಿತು. ಕಿಡಿಕಿಡಿಯಾಗಿ ಹೊರಬೀಳಾಕ ಮದ್ಲು ಒಂದ ಗತಿ ಕಾಣಿಸಬೇಕಂತ ಯೋಚಿಸತೊಡಗಿದೆ.

ಅವತ್ತಿಂದ ನಾನು ಹುಚ್ಚನಂತಾಗಿದ್ದೆ. ಸಂಗಣ್ಣ, ಕುಬಸಣ್ಣ, ಇಬ್ಬರೂ ಭೆಟ್ಟಿಯಾಗಿದ್ರು ಅಷ್ಟೊಂದು ಆಸಕ್ತಿಯಿಂದ ಮಾತಾಡಿರಲಿಲ್ಲಾ. ಹುಡ್ರೆಲ್ಲಾ ಹಿಂಡ ಹಿಂಡಾಗಿ ರೂಮಿಗೆ ಬರೋದು ಹೋಗೋದು ನಡಿತಾನೆ ಇತ್ತು. ಯಾವದೋ ಖುಷಿಯೊಳಗ ಹುಡ್ರೆಲ್ಲಾ ಸೇರಿ ನಾನೊಬ್ಬನೆ ಇದ್ದ ರೂಮಿನಲ್ಲಿ ಪಾರ್ಟಿಯಂತ ಇಟ್ಕೊಂಡ್ರು ಕುಬಸಣ್ಣನ ಇಬ್ಬರು ಚೇಲಾಗಳಾದ ಬಂಡು ಸಂದು ಇದ್ದಕ್ಕಿದ್ದಂಗ ಟಪಕಾಸ್ಕೊಂಡ್ರು. ಸಂದು, ಅನ್ನೋನು ಸೀದಾ ನನತಾಗ ಬಂದವನೆ ಇನ್ನೂ ಆರಂಭವಾಗಿದ್ದ ಅರ್ಥಂಬರ್ಥ ಕತೆಯ ಉಹಾಪೋಹಗಳ ಬಗ್ಗೆ ಮಾತನಾಡತೊಡಗಿದ "ಸಾ ನೀವು ಯಾರನ್ನ ನಮ್ಮ ಹುಡ್ರು ಅಂದ್ಕೊಂಡಿರೊ, ಅವರು ಬಾಳ ಉಡಾಳರು, ಪೋಕರಿಗಳು ನಾಲಾಯಾಕಗಳು. ಅವರನ್ನ ಒಂದಡಿ ದೂರ ಇಡ್ರಿ. ಮಾರ್ಕೆಟ್‌ನ್ಯಾಗ ಅವರ ಹೆಗಲ ಮ್ಯಾಲ ಕೈ ಇಟ್ಕೊಂಡ ಅಡ್ಡಾಡೋದು, ಅವರ ಮುಂದ ಆ ಈ ಸುದ್ದಿ ಮಾತಾಡೋದನ್ನ ಕೈಬಿಡ್ರಿ ಯಾಕಂದ್ರ ಈ ಮಂದಿ ಒಂದ ಪಾಕೀಟ ಸರಾಯಿಗ ಮಾನ ಮರ್ಯಾದಿಯನ್ನ ಮಾರಿಕೊಳ್ಳಾಕ ತಯಾರಾದವರು" ಅಂದ. ನಾನು ಅವನ ಮಾತನ ಗಂಭೀರವಾಗಿ ತಗೊಳಲಿಲ್ಲಾ. "ಹೌದೇನ್ರಿ... ಸಂದು, ನಾ ಈ ಊರಿಗ ಹೊಸಬ ಕಣ್ರಪ್ಪ, ನಾಳೆ.." ಅನುಮಾನಿಸಿದೆ," ಅಂತದ್ದೇನು ಆಗೋದಿಲ್ಲಾ ನಿಮ್ಮ ಪಾಡಿಗ ನೀವಿರ್ರಿ. ಅಂದವನೆ ಹೋಗಬಿಟ್ಟ. ಎಲ್ಲೊ ಎಡವಟ್ಟು ಆಗಿರೊ ಹಂಗ ಅನಿಸಿತು. ಹುಡಗರೆಲ್ಲಾ ತಿಂದು ಕುಡದು ಮಜಮಾಡ ತೊಡಗಿದ್ರು. ಗಲಾಟೆ ಜೋರಾತು, ನನ್ನ ಎದರಿಗೆ ನನ್ನ ವಿದ್ಯಾರ್ಥಿಗಳು ಅನಿಸಿಕೊಂಡವರು ಕೆಟ್ಟದಾಗಿ ವರ್ತಿಸತೊಡಗಿದ್ರು. ನನ್ನ ಒಂದ ತಪ್ಪಿಂದ ಹಿಂಗ ಆಗಾಕ ಹತ್ತಿದೆ ಏನೋ ಅನುಮಾನ ಬರತೊಡಗಿತು. ಅವರ ನಡುವಿಂದ ದೂರ ಹೋಗಿ ಕುಂತಬಿಟ್ಟೆ. ಮಲ್ಲಿಕಾ ನನ್ನ ಬುಡವನ್ನೆ ಅಲುಗಾಡಿಸತೊಡಗಿದ್ಲು. ಅವಳದೆ ನೆನಪು ಸದಾ ಕಾಡತೊಡಗಿತು. ಗಲಾಟೆ ನಡವೆಯೂ ಏಕಾಂಗಿಯಾದ ಅನುಭವ.

ನವರಾತ್ರಿಗೆ ಇಡಿ ಶಿರಗೂರಿನ ಮಂದಿ ಬನ್ನಿಕೊಡೋ ರೂಢಿಯಿಂದ ರಾತ್ರಿ ಸುಮಾರು ಹನ್ನಂದ ಗಂಟೆವರಿಗ ಹೆಣ್ಣುಗಂಡು ಅನ್ನದೆ ಬನ್ನಿ ಹಂಚಿಕೊಳ್ಳಿತ್ತಿದ್ರು. ನಾನು ಪಟಗಾರನ

ರೂಮನಾಗಿದ್ದೆ ಹುಡ್ರೆಲ್ಲಾ ಹೆಚ್ಚು ಕಮ್ಮಿ ಅಲ್ಲೆ ಠಿಕಾಣಿ ಹೂಡಿದ್ರು. ಯಂಕಮ್ಮ, ಪಾಪಿ, ರೋಜಮ್ಮ, ಬನ್ನಿಕೊಟ್ಟು ಹೋಗಿದ್ರು. ನನಗ್ಯಾಕೊ ತವಕ ಸುರು ಆಗಿತ್ತು. ಆಕಿಯಾಕ ಬರ್ಲಿಲ್ಲಾ, ಅವರ ಮನಿಯಾಗೇನಾರು ಗೊತ್ತಾತೇನು? ಅವಳಜ್ಜಿ ಮಹಾ ಘಾಟಿ ಹೆಂಗಸಂತ," ಎತ್ಲಾಗ ಹೊಕ್ಕೀಬೇ ಗಯ್ಯಾಳಿ ಮನಿಯಾಗ ಕುಕ್ಕರಬಡಿ" ಅಂತಂದು ಗದರಿಸಿ ಕುಂದರಿಸಿದ್ರೊಹ್ಯಾಂಗೊ. ಯಾಕೊ ಆತಂಕ ಹೆಚ್ಚಾಗತೊಡಗಿತು ಈ ಕಾರ್ಯೋಕೆಲ್ಸದಂತ ಕೆಟ್ಟದ್ದು ಇನ್ಯಾವದು ಇಲ್ಲೇನೊ ಅನಿಸತೊಡಗಿತು. ಕಾರ್ಯೋದು ಎಷ್ಟು ಕಷ್ಟ ಅಂತ ಆಕೀಗ ಹೇಳಬೇಕು ಇವತ್ತು ಅಂದ್ಕೊಂಡೆ. ನನ್ನ ಚಡಪಡಿಕೆ ಗಮನಿಸಿದ ಪಟಗಾರ," ಅಲ್ನೋಡ್ರೊ ನಿಮ್ಮ ಮೇಷ್ಟ್ರು ಹ್ಯಾಂಗ ಚಡಪಡಿಸಾಕ ಹತ್ಯಾರ" ಅಂತ ನಗತೊಡಗಿದ. ನನ್ನ ನಾ ರಕ್ಷಣೆ ಮಾಡ್ಕೊಳ್ಳಾಕ "ಏಯ್, ನಾಯಾಕಯ್ಯ ಚಡಪಡಿಸಲಿ, ಯಾರಿಗಾಗಿ ?" ಜೋರಾಗೆ ಹೇಳಿದೆ, ಡೊಣ್ಣಾಡ, ನನ್ನ ಕಡೀಗ ನೋಡಿ, "ಆದ್ರು ಸರ್ ನೀವು ಒಂದ ಗಂಟೆಯಿಂದ, ಒಂದ ನಮೂನಿ ಆಗೀರಿ" ಅಂದ. ಅವನ ಮಾತಿನ ಹಿಂದಿನ ಅರ್ಥ ಗ್ರಹಿಸಿದ ಕೆಲವರು ಜೋರಾಗೆ ನಕ್ಕರು, ನನಗೆ ತಡ್ಕೊಳ್ಳಾಕ ಆಗಲಿಲ್ಲಾ, ಸಿಟ್ಟು ಮಾಡ್ಕೊಂಡು ಒದರಾಡಿದ್ರ ಏನಾರು ಎಡವಟ್ಟಾದೀತಂತ", ನನಗೇನಾಗ್ಯೆತಪ್ಪ ಡೊಣ್ಣಾಡ, ಪಟಗಾರನ ಜೊತೆಗೆ ನೀ ಒಬ್ಬ ಸೇರ್ಕೊಂಡ್ಯಾ, ಆತ ಬಿಡಿನ್ನ" ಅಂದವನೆ ಹೊರಗ ಬಂದೆ. ಕತ್ಲಾಗ ಯಾರೊ ಒಂದಿಬ್ಬರು ಬರ್ತಿರೊ ಹಂಗ ಅನಿಸಿತು. ಎದಿಯೊಳಗಿದ್ದ ಆತಂಕ ಮತ್ತೊಂದೀಟು ಜೋರಾತು ಹೌದು ಆಕೀನ, ಎಷ್ಟೋ ದಿನಗಳಿಂದ ಆಕಿಗಾಗೆ ಕಾಯ್ತಿದ್ದೀನೇನೋ ಅನಿಸಿತು. ಎದಿ ಜೋರಾಗೆ ಬಡಕೊಳ್ಳಾಕ ಹತ್ತು ಕೈ ಕಾಲು ಚಲಿಸದಾದವು. ನನಗ ಯಾಕ ಹಿಂಗ ಆಗಾಕ ಹತ್ತೈತಿ ಅಂತ ಗೊತ್ತಾಗಲಿಲ್ಲಾ. ಹತ್ತಿರ ಬರ್ತಿದ್ದಂಗ ನಾನು ಸ್ಥಿಮಿತ ಕಳ್ಕೊಳ್ಳಾಕ ಹತ್ತಿದೆ. ಹೌದು ಆಕಿ ಬಂದೇ ಬಿಟ್ಲು.

ಆಕಿ ಬಗ್ಗಿ ಬನ್ನಿ ಕೊಡೋ ಟೈಮಿಗೆ ಸರಿಯಾಗಿ ಪಟಗಾರ ಫೋಟೋ ಕ್ಲಿಕ್ಕಿಸಿದ. ಹುಡುಗರೆಲ್ಲಾ ಓ.. ಅಂತ ಚೀರಿದ್ರು. ಆಕಿ ನಾಚಿಕೆಯಿಂದ ಕೆಂಪಾದ್ಲು. ಈ ಮಲ್ನಾಡ ಸೆರಗಿನಲ್ಲಿ ಸುಂದರ ಸೃಷ್ಟಿಯ ನಡುವೆ ವಿಚಿತ್ರ ಸುಂದರಿಯರು ಸೃಷ್ಟಿಯಾಗಿರೋದು ನಮ್ಮಂತ ಬಯಲು ಸೀಮಿ ಗಂಡಸರ ತಲಿತಿನ್ನಾಕ ಇರಾಕು ಅನಿಸಿತು. ಆಕಿ ಬಹಳಂದ್ರ ಬಹಳ ಸುಂದರಿಯಾಗಿದ್ಲು. ನಾನು ನೂರ ಸರ್ತಿಯಾದ್ರು ನೋಡಿರಬೇಕು ಅನಿಸಿತು. ಹೌದು, ಇವತ್ತೊಂದು ನಿರ್ಧಾರಕ್ಕ ಬರಬೇಕು ಇಲ್ಲಾಂದ್ರ - ಎಲ್ಲಾ ನಿಷ್ಪ್ರಯೋಜನ ಆಗಿ ಹೋಕ್ಯೆತಿ ಅಂದವನೆ ಹೊರಗ ಹೋಗಿ "ಮಲ್ಲಿಕಾ" ಅಂತ ಕರೆದೆ, ಆಕೀಗ ಅಷ್ಟೆ ಬೇಕಿತ್ತು. ಜಿಂಕೆ ಹಂಗ ನೆಗದ ಬಂದ್ಲು" ನೋಡು ಮಲ್ಲಿಕಾ ನಿನ್ನ ಹತ್ರ ಮಾತಾಡಬೇಕು. ನೀನು ಮತ್ತು ಸೂಫಿ ಸೀದಾ ನನ್ನ ರೂಮಿಗ ಹೋಗಿರ್ರಿ ನಾನ ಹೆಂಗಾದ್ರ ಮಾಡಿ ತಪ್ಪಿಸಿಕೊಂಡ ಬರ್ತೀನಿ". ಅಂತ ರೂಂ ಚಾವಿ ಕೊಟ್ಟೆ. ಹೂಂ ಅಂದಾಕಿನೆ ಚಾವಿ ತಗೊಂಡು ಸೀದಾ ರೂಂ ಕಡೀಗ ಹೊಂಟ್ಲು. ನಾನು ಒಳಗ ಹೋದವನೆ, ಪಟಗಾರನಿಗ ಹೇಳಿದೆ, ಅಂವ ಹುಡ್ರುನೆಲ್ಲಾ ಅಲ್ಲೆ ತಡದ, ನಾನು ಅಲ್ಲೆ ಇದ್ದ ಸೈಕಲೊಂದನ್ನ ತಗೊಂಡವನೆ ಸೀದಾ ರೂಮಿಗೆ ಹೊರಟೆ. ಬಂದೇಕರ್ ಓಣಿ, ನಡಕಿನೋಣಿ, ಆರೆರಗಲ್ಲಿ ದಾಟಿ

ಗೌರ್ಮೆಂಟ್ ಹೈಸ್ಕೂಲ ಮೈದಾನಕ ಬಂದೆ ದೊಡ್ಡ ದೊಡ್ಡ ಬೇವಿನ ಮರಗಳು. ಮಾವಿನ ಮರಗಳು ಕತ್ತಲಾಗ ದೊಡ್ಡ ದೆವ್ವಗಳ ಹಂಗ ಕಾಣತೊಡಗಿದವು. ಯಾಕೊ ಹೆದರಿಕೆ ಆದಂಗಾತು. ಜೋರಾಗೆ ಸೈಕಲ ತುಳಿದೆ, ಯಾವನಾದ್ರು ಪೋಕರಿ ಆ ಇಬ್ಬರು ಹುಡುಗಿಯರನ್ನು ಚುಡಾಯಿಸಿಕೊಂತ ಎಲ್ಲಿಗ ಹೊಕ್ಕಾರಂತ ಹಿಂದಿಂದ ಹೋಗಿವ್ರ ಅನುಮಾನಿಸಿದೆ. ಇವತ್ತು ಬನ್ನಿ ಹಬ್ಬ, ಊರ ತುಂಬ ಅಡ್ಡಾಡಬಹುದು, ಇವತ್ತು ಯಾರು ಅನುಮಾನಿಸೋದಿಲ್ಲ ಅಂದ್ಕೊಂಡು ಧೈರ್ಯ ತಂದ್ಕೊಂಡೆ.

ಅವರು ಅನುಮಾನಪಡದೆ ಕುಂತ್ಕೊಂಡು ನನ್ನ ದಾರಿಕಾಯತೊಡಗಿದರು. ನಾನು ಕೆಳಗೆ ಸೈಕಲ ನಿಲ್ಲಿಸಿದೆ. ಕೆಳಗಿನ ಮನಿಯೊಳಗಿಂದ ಮನೆಯ ಮುದಕಿ "ಯಾರದು" ಅಂತ ಹೊರಗ ಬಂದ್ಲು "ಛೇ, ಮುದಕಿ ಎಡವಟ ಮಾಡ್ಯಾಳೇನು," ಅಂದ್ಕೊಂತ್ಲೆ, "ನಾನಮ್ಮ ಮೇಲಿನ ಮೇಷ್ಟ್ರು", ಅಂದವನೆ ಆಕಿ ಉತ್ತರಕ್ಕೂ ಕಾಯದೆ ಸೀದಾ ಮೇಲಕ್ಕೆ ಅಟ್ಟಹತ್ತತೊಡಗಿದೆ. ಏನೋ ಒಂದು ನಿರ್ಧಾರಕ್ಕೆ ಬರೋ ವಿಚಾರ ತಲಿಯಾಗ ಕೊರಿಯಾಕ ಹತ್ತಿತು. ಒಳಗೆ ಹೋದವನೆ ಸೂಫಿಯನ್ನು ಒಳಗ ಕುಂದ್ರಾಕ ಹೇಳ್ದೆ. ಮಲ್ಲಿಕಾಳನ ಹೊರಗಡೆ ಕರೆದೆ "ಯಾಕ ಹಿಂಗ ಮಾಡಾಕ ಹತ್ತಿ" ಶಾಂತಚಿತ್ತದಿಂದ ಕೇಳ್ದೆ. ಹೇಳು, ಅವತ್ತು ನಾನು ಎಷ್ಟು ಆಂಗಲಾಚಿದೆ. ನೀನು ನಾನು ಎಂದೂ ಒಂದಾಗದ ಎರಡು ವಿಭಿನ್ನ ದಿಕ್ಕಿನ ನದಿಗಳು, ಶಾಂತಚಿತ್ತನಾಗಿದ್ದ ನನ್ನ ಎದೆಯ ಸೆಲೆಯೊಳಗ ಕಲ್ಲು ಬಿಸಾಡಿ ಇಡಿ ಸೆಲೆಯನ್ನು ಕಲುಕಿಬಿಟ್ಟೆ. ಯಾಕ ಹಿಂಗ ಮಾಡಿದೆ?" ಒಂದೆ ಸಮನೆ ಒದರಾಡತೊಡಗಿದೆ. ಆಕಿ ತುಟಿ ಪಿಟಕ್ ಮಾಡದೆ, ಸುಮ್ಮನೆ ಕುಂತಿದ್ಲು ಟೆರಸ್ಸಿನಮೇಲೆ. "ನನಗ ಮದ್ಲೆ ಗೊತ್ತಿತ್ತು ಈ ಹೆಂಗಸರು ನಂಬಿಸಿ ಮೋಸ ಮಾಡ್ತಾರ, ನಡು ನೀರಿಗ ತಳ್ಳಿದಂಡಿಮ್ಯಾಲ ಕುಂತ್ಕೊಂಡು ಚಪ್ಪಾಳೆ ತಟ್ಟಿ ತಮಾಷೆ ನೋಡ್ತಿರ್ತಾರ ಹುಡುಗಿಯನ್ನ ನಂಬಿ ಅಂವ ನೇಣ ಹಾಕ್ಕೊಂಡಿದ್ದ. ನಾನು ಕೈಲಾಗದವನು, ಬದುಕಾಕ ಆಗದೆ. ಬದುಕಿಗೆ ಹೆದರ್ಕೊಂಡ ಸತ್ತ ಹೋದ ಅಂತ ಬಾಯಿಗ ಬಂದಂಗ ಬೋಯ್ದಿದೆ. ನನಗ ಇವತ್ತ ತಿಳಿತು ಅಂವ ಹಿಂಗೆ ಆಗಿ ಮಾನಸಿಕ ಹಿಂಸೆ ಅನುಭವಿಸಿ ಸತ್ತ ಹೋದ ಅಂತ... ನಾನು... ಹೆಚ್ಚು ಕಮ್ಮಿ ಅವನದಾರೀನೆ ಹಿಡಿಬೇಕಾಗೋದೇನೋ". ನನಗೆ ಅಳು ತಡಿಯಾಕ ಆಗಲಿಲ್ಲಾ ಅವಳನ್ನ ಅಲ್ಲೆ ಬಿಟ್ಟ ಮತ್ತೊಂದು ಮೂಲಿಗ ಹೋಗಿ ಕತ್ತಲೊಳಗ ನಿಂತಕೊಂಡೆ. ಮನಸು ಖಾಲಿಯಾದ ಅನುಭವ. ತಲೆಸಿಡಿತ ಜೋರಾಗತೊಡಗಿತ್ತು. ನಾಲ್ಕೈದತಾಸಿನಿಂದ ಮಾನಸಿಕ ಸಂಘರ್ಷ ನಡದಿತ್ತು ನನ್ನೊಳಗ. ಮಲ್ಲಿಕಾ ಹಿಂದಿನಿಂದ ಬಂದಾಕಿನ ಬಿಗಿಯಾಗಿ ಅಪ್ಪಿಕೊಂಡ್ಲು ಹಿತ ಅನಿಸಿತು ಸ್ವಲ್ಪ ಹೊತ್ತು ಮಾತಾಡಲಿಲ್ಲ. "ಎಲ್ಲದಕ್ಕೂ ದೋಷಿ ನಾನೇ, ನನ್ನ ಸ್ಥಿತಿಯೊಳಗ ನೀವಿದಿದ್ದರ ತಿಳಿತಿತ್ತು. ಕತ್ತಲಾದಿಂದ ಹೊರಗಿನ ಪ್ರಪಂಚದ ಎಲ್ಲಾ ಸಂಪರ್ಕಗಳು ಕಡದು ಹೋಗ್ತಾವ, ಹಗಲಿನೊಳಗ ಮುಲಾಜು ಮರ್ಜಿ ಕಾದು ಹತ್ತ ಸಲ ಅಂಗಲಾಚಿ ಮನಿ ಬಿಡಬೇಕು. ನನಗೂ ಸದಾ ನಿಮ್ಮ ಮುಖ ನೋಡ್ತಾ ಉಣ್ಣದೇ ತೊಟ್ಟ ನೀರು ಕುಡಿಯದೆ ಹಾಗೆಯೇ ಇದ್ದ ಬಿಡಬೇಕು

ಅನಸತೈತಿ, ಆದ್ರ.. ನಮ್ಮಜ್ಜಿ ನಮ್ಮಪ್ಪ... ನಮ್ಮತ್ತೆ..... ಅವ್ವ.... ಹೆಜ್ಜೆ ಹೆಜ್ಜಿಗ ತಡಿಗೋಡಿ ಹಂಗ... ಯಾಕ? ಎಲ್ಲಿಗ ಹೊಂಟಿ? ಹೊರಗ ಹೋಗೋದ ಬ್ಯಾಡ. ನನ್ನ ಆಕಾಂಕ್ಷೆಯನ್ನ ಕಿತ್ತಬಿಸಾಡಿ ತಮ್ಮ ಅಧಿಕಾರವನ್ನ ಹೇರ್ತಾರ ನಾ ಏನಮಾಡ್ಲಿ ಹೇಳ್ರಿ. ನಿಮ್ಮನ್ನ ಬಿಟ್ಟು ಇರೋದು ಎಷ್ಟು ಕಷ್ಟ ಗೊತ್ತ. ದೊಡ್ಡ ದೊಡ್ಡ ಗೋಡಿಗಳ ನಡಕ್ಕ ಸಿಕ್ಕೊಂಡ ನರಳಾಡಾಕ ಹತ್ತೀನಿ. ಒಳಗೋಡೆಯು ಹೊರಗಿನ ಕಾಂಪೌಂಡು ಆ ಗೇಟು ಎಲ್ಲ ನನ್ನ ಕಾಯಾಕೆ ನಿರ್ಮಾಣ ಮಾಡಿರೋ ಹಂಗ ಅನಸ್ತಾವ. ಒಂದೊಂದ ಸಲ ಯೋಚನೆ ಮಾಡ್ತೀನಿ. ನಾನ ಹೆಣ್ಣಾಗಿ ಹುಟ್ಟಬಾರದಿತ್ತು ಅಂತ. ನೀವು ನನ್ನ ಸ್ಥಿತಿ ಅರ್ಥ ಮಾಡಿಕೊಳ್ಳದೆ, ನನ್ನನ್ನೆ ದೋಷಿ ಮಾಡಾಕ ಹತ್ತೀರಿ". ಅಂತ ಕಣ್ಣು ಒರೆಸಿಕೊಂಡ್ಲು, "ಏಯ್ ಅಳಾಕಹತ್ತಿ ಹುಚ್ಚಿ ಅಳಬಾರ್ದು, ನಾ ಏನ ಮಾಡ್ಲಿ ಹೇಳು ಮಲ್ಲಿಕಾ, ನೀನಿಲ್ಲದೆ ಕಳಿಯೋ ಒಂದೊಂದು ಘಳಿಗೆನೂ ಒಂದೊಂದು ವರ್ಷಗಳಾಗ್ತವ. ಈ ಬಯಲು. ಬೆಳಕು-ರಾತ್ರಿ, ಸೂರ್ಯ ಚಂದ್ರ ಯಾವದಕ್ಕೂ ಅರ್ಥನೆ ಇಲ್ಲಾ... ನಾನು ನಿನ್ನ ಜಾತಿಯೊಳಗ ಹುಟ್ಟಿದ್ರ". ಎದಿಯೊಳಗಿದ್ದ ಉಸರನ್ನ ಹೊರಗಾಕಿದೆ. "ನೀವು ಹುಟ್ಟದಿದ್ದೆ ಚಲೋ ಆತು. ಈ ಮಂದಿ ನಾಲಾಯಕ್ ಇವರಿಗ ತಮ್ಮದೊಂದೆ ಜಾತಿ ಬೋ ಶ್ರೇಷ್ಟ ತಾವೇ ಘನ ಪಂಡಿತರು. ಜಗತ್ತಿನೊಳಗ ನಾವೇ ಬುದ್ಧಿವಂತರು ಆ ಬ್ರಿಟೀಷರಿಗ ರಾಜ್ಯಬಾರ ಮಾಡೋದನ್ನ ನಾವೇ ಕಲಿಸಿದೋರು ಅಂತ ಖಾಲಿ ಪುಕ್ಕಟ್ಟೆ ಭಾಷಣ ಬಿಗಿತಾರ. ಹುಟ್ಟು ನಮ್ಮ ಕೈಯಾಗಿದ್ರ ನಾನು ನಿಮ್ಮ ಜನರೊಳಗೆ ಹುಟ್ಟಿ ಸದಾ ನಿಮ್ಮನ್ನ ಬಿಡದಂಗೆ ಹಿಂದಿಂದೆ ಇರ್ತಿದ್ದೆ". ಮನಸಿನೊಳಗೆ ಎಲ್ಲೊ ಅವ್ಯಕ್ತವಾಗದೆ ಉಳದಿದ್ದ ಬಯಕೆಯನ್ನ ಹೊರ ಹಾಕಿದ್ಲು. ನವರಾತ್ರಿಯ ಸಂಜೆ, ಪ್ರಭು ಮಲ್ಲಿಕಾಳಿಗೆ ಮೋಹಕವಾಗಿತ್ತು. ಬಾಗಿಲ ಮರೆಯಲ್ಲಿ ನಿಂತ್ಕೊಂಡಿದ್ದ ಸೂಫಿ ಚಾಚುತಪ್ಪದೆ ಅವರಿಬ್ಬರ ಮಾತುಗಳನ್ನ ಕೇಳಿಸಿ ಕೊಂಡಿದ್ಲು ಪ್ರಭು ಆಕೀನ ನಂಬಿ ತನ್ನ ವ್ಯವಹಾರ ನಡಸಿದ್ದ. ಇಡೀ ಜಗತ್ತಿನೊಳಗ ಇಬ್ಬರೇ ಇರೋ ಅನುಭವ ಆಗತೊಡಗಿತ್ತು. "ಮಲ್ಲಿಕಾ ಒಂದವೇಳೆ ನೀ ಏನಾರು ಕೈಕೊಟ್ಟೆ. ಈ ಬಿಲ್ಡಿಂಗ್ ಮೇಲಿಂದ ಹಾರಿ ಪ್ರಾಣ ಕಳ್ಕೊಂತೀನಿ". ಉದ್ವೇಗದಿಂದ್ಲೆ ಹೇಳಿದ್ದೆ." ಛೀ ಬಿಡ್ತು ಅನ್ರಿ. ಎಂತ ಮಾತಾಡ್ತೀರಿ, ಅಂತಹದ್ದೇನು ಆಗೋದಿಲ್ಲ". ನಂಬಿಕೆಯಿಂದೆ ಹೇಳಿದಳು. ಸೂಫಿ ಹೊರಗಬಂದಿದ್ಲು, "ನೋಡು ಸೂಫಿ ಹೇಳ ನಿನ್ನ ಗೆಳತಿಗ, ಈಕೆ ಏನಾರು ಪ್ರೀತಿಸೋದಿಲ್ಲಾಂದ್ರ ನಾನು...." ಮಲ್ಲಿಕಾ ಮಾತಾಡಕ ಬಿಡಲಿಲ್ಲಾ. "ಸರ್ ನನ್ನ ಸಾಯಿಸಿದ್ರಿ" ಅಂದ್ಲು ಸೂಫಿ. ಆಕಿ ಮಾತಿನ ಅರ್ಥ ಹುಡಕಾಕ ಹೋಗಲಿಲ್ಲಾ. ಮಲ್ಲಿಕಾಳ ಮನದಾಳದೊಳಗೆ ನನ್ನ ಕುರಿತು ಇರೋ ಭಾವನೆ ಕಂಡು ಬಹಳ ಖುಷಿ ಯಾಗಿತ್ತು". ಏಯ್ ಮಲ್ಲಿ ನಡಿಯೇ ನಿಮ್ಮ ಮನಿಯಾಗ ಹುಡಕಾಡ್ತಿರ್ತಾರ, ಇಡಿರಾತ್ರಿ ಇಲ್ಲೆ ಇರೋ ವಿಚಾರ ಐತೇನ ನಿಂದು" ಅಂದ್ಲು. ಬಿಡುಗಡೆ ಅನಿವಾರ್ಯ ಅಂದ್ಕೊಂಡ ನಾನು ಸರಿ ಹೊರಡ್ರಿ, ಹೊತ್ತಾತು" ಅಂತ ಅವರನ್ನ ಕೆಳಗಿನವರಿಗ ಬಂದು ಕಳುಹಿಸಿದೆ. ಮಲ್ಲಿಕಾ ಗೆಲುವಾಗೆ ಇದ್ಲು. ನಾನು ಮಾತ್ರ ಅಗಲಿಕೆಯನ್ನ ಸಹಿಸಿಕೊಳ್ಳೊದಕ್ಕೆ ತಯಾರಿ ನಡೆಸಿದೆ ಎಂಥ ಸುಂದರ ಸಂಜೆ ಇದು. ಜೀವನದಾಗ ಒಂದೇ ಒಂದ ಸಲಸಿಗೋದು

ಇದನ್ನ ನನ್ನ ಎದಿತುಂಬ ತುಂಬಿಕೊಬೇಕು ಅಂದವನೆ, ಮೇಲೆ ಹೋಗಿ ಪ್ರೊ. ಗಟ್ಟಿಮಠ ಬಿಟ್ಟುಹೋಗಿದ್ದ ಹಳೇ ಲಟಕೂರಿ ಕಾಟಿನ ಮೇಲೆ ಅಂಗಾತ ಬಿದ್ಕೊಂಡವನೆ ಮತ್ತೆಂದು ಬಾರದ ಈ ಸಂಜೆಯ ಸುತ್ತ ಕನಸು ಹೆಣೆಯತೊಡಗಿದೆ.

ರಹಸ್ಯದ ಗೋಡೆ ಹೊಡೆದವರು

ಸೂಫಿ ನನಗಾಗಿ ಕಾದ್ಕಂಡ ನಿಂತಿದ್ಲು, ನಾನು ತರಗತಿ ಮುಗಿಸಿ ಹೊಂಟಿದ್ದೆ "ಸಾರ್, ನಿಮ್ಮತಾಗ ಒಂದ ಒಂದ ವಿಷಯ ಮಾತಾಡಬೇಕಿತ್ತು" ಅಂದವಳೆ ನನ್ನ ಹಿಂದಿಂದ ಬಂದ್ಲು. ನನಗೆ ಗಾಬರಿಯಾತು,"ಏನ ವಿಷಯ ಇರಬಹುದು, ನನ್ನ ಮಲ್ಲಿಕ ಸಂಬಂಧ ಗೊತ್ತಿರೋದು ಈಕೀಗ, ಡೊಣ್ಣ್ಯಾಡಗ ಮಾತ್ರ, ಇವರಿಬ್ಬರು ಸೇರಿ ಏನಾದರೊಂದು ಹೊಸ ಐಡಿಯಾ ಹುಡಕ್ಯಾರೇನು?" ಯೋಚಿಸ್ತಾ ನಿಂತಬಿಟ್ಟೆ. "ಸರ್, ಏನ ಯೋಚ್ನೆ ಮಾಡಾಕ ಹತ್ತೀರಿ." ವಾಸ್ತವಕ ಜಗ್ಗಿ ತಂದ್ಲು." ಆಂ... ಹೂಂ "ಏನೋ ವಿಷಯ ಅಂದ್ರಲ್ಲ ಹೇಳ್ರಿ... ಹುಡ್ರೆಲ್ಲಾ ನೋಡಾಕ ಹತ್ಯಾರ, ಮತ್ತ"... ಅಂದೆ. "ಸಂಜಿಕ ನಾನು ಮಲ್ಲಿಕಾ ನಿಮ್ಮ ರೂಮಿಗ ಬರಾಕಹತ್ತೀವಿ" ಆಂದಾಕಿನ ನನ ಮಕ ನೋಡಿದ್ಲು ಇದ್ದಕ್ಕಿದ್ದಂಗೆ ನನ್ನೆರಡು ತುಟಿಗಳು ಬಿರಿದು ಮುಗಳ್‌ನಕ್ಕೆ, "ಓ.... ಇಷ್ಟೆನಾ ವಿಷಯ ನಾನು ಏನೆಲ್ಲಾ ಯೋಚನೆ ಮಾಡಿದೆ" ಅಂತ ಅಂದಕೊಂಡೆ. "ಸರ್, ಬರಾನೋ ಬ್ಯಾಡೋ, ಏನು ಹೇಳಲಿಲ್ಲ" ಅಂದ್ಲು. "ಬರ್ರಿ... ಬರ್ರಿ.... ಎಷ್ಟೊತ್ತಿಗ ಬರಾಕ ಹತ್ತೀರಿ. ಅವತ್ತಿನ ಹಂಗ ದಾರಿನೋಡೋದ ಮಾಡಬ್ಯಾಡ್ರಿ. ನಾನು ಎಲ್ಲಿಗೂ ಹೋಗೋದಿಲ್ಲ ನಿಮ್ಮ ದಾರಿ ನೋಡ್ತಿರ್ತೀನಿ" ಅಂತ ಹೇಳಿದವನೆ ಹೊರಟೆ". ಸರ್ ಇನ್ನೊಂದು ವಿಷಯ, ನಿಮ್ಮನ್ನ ನೋಡಾಕ ಮತ್ತೊಬ್ಬರು ಬರ್‍ತಾರ." ಅಂದವಳೆ ಹೊಂಟ್ಲು. "ಮತ್ತೊಬ್ಬರು" ದಿಗಿಲ ಬಡಿತು. "ಯಾರಿ ಇನ್ನೊಬ್ಬರು? ಛೇ ನನ್ನ ನೆಮ್ಮದಿಯನ್ನ ಹಾಳಮಾಡಿ ಹೋದ್ಲಲ್ಲಾ. ಸುಮ್ನೆ ಬಂದಿದ್ರ ಆಕ್ಕೀತು." ಅಲ್ಲೆ ಯೋಚ್ನೆ ಮಾಡ್ತ ನಿಂತ ಬಿಟ್ಟೆ. ಸೆಕೆಂಡಿಯರ್ ಹುಡುಗಿಯರ ಗುಂಪು ಬಂದು, "ಸಾರ್ ಕ್ಲಾಸಿತ್ತು". ಅಂತ ರಾಗ ಎಳದಾಗ್ಲೆ ನಾನು ಹೊರಗಡೆನೆ ಅದೀನಿ ಅಂತ ಗೊತ್ತಾದದ್ದು. ಗಡಿಬಿಡಿಯಿಂದ ಅವರಿಗ ಅನಮಾನ ಬರಬಾರ್‍ದಂತ "ಹೌದ್ರಿ ಗೊತ್ತೈತಿ, ಈಗ ಬಂದೆ ನಡೀರಿ" ಅಂತ ಸಾಗಹಾಕಿದೆ.

ಸಂಜೆ ಹೊತ್ತು ಮೇಲೇರತಾ ಇರೊ ಹಂಗ ನನೊಳಗ ಆತಂಕ ಏರಾಕಹತ್ತಿತ್ತು. ಪ್ರತಿ ಸೆಂಕೆಂಡು ಕಳಿಯೋದು ದುಸ್ತರ ಅನಿಸತೊಡಗಿತು. ಆರಗಂಟಿಯಾಗಿದ್ದೆ ಎದಿ ಬಡಿತ ಜೋರಾತು ಒಳಗಿರಾಕ ಆಗವಲ್ದು ಹೊರಗಬಂದು ನಿಲ್ಲಾಕು ಆಗದೆ ಚಡಪಡಿಸತೊಡಗಿದೆ. ಹುಡ್ರು ಪಾಠ ಹೇಳಿಸಿಕೊಂಡ ಹೋಗಿದ್ರು. ನನ ಕೂಡ ಇರ್‍ತಿದ್ದ ಪಿಣ್ಣು, ಗೂಸ, ಮನಿಗ ಹೋಗಿದ್ರು. ಕೊನೆ ಸರ್‍ತಿ ಅಂತ ಗಡಿಯಾರ ನೋಡಿದವನೆ ಹೊರಗ ಬಂದೆ. ಗೌರ್‍ನಮೆಂಟ್ ಹೈಸ್ಕೂಲ್ ಹಿಂದಿನ ಬೇನ ಮರದ ನೆರಳಾಗ ಎರಡು ಆಕೃತಿಗಳು ಕಂಡಂತಾತು. ಟೆರಸ್‌ಮೇಲಿಂದ ಬಗ್ಗಿನೋಡಿದೆ. ಹೌದು ಎರಡು ಹೆಣ್ಣು ಆಕೃತಿಗಳೆ. ಮಾರು ದೂರದ ಲೈಟಿನ ಕೆಳಗೆ ಬರೊಮಟ ಕಾದೆ, ಹೌದು ಅವರೆ ಆದ್ರ ಮೂರನೆ ವ್ಯಕ್ತಿ ಕಾಣಸ್ತಿಲ್ಲವಲ್ಲ. ಹೂಂ.. ತಲಿ ಕೆರ್‍ಕೊಂಡವನೆ ಅಲ್ಲೆ ನಿಂತೆ ಇಪ್ಪತ್ತಮೂರು ಇಪ್ಪತ್ನಾಕವರ್ಷದ ತೆಳ್ಳನೆಯ

ವ್ಯಕ್ತಿ ಒಂದು ಲಟಕೂರಿ ಸೈಕಲ್ ತಳ್ಳಿಕೊಂಡ ಅವರ ಹಿಂದೆ ಎರಡ ಮಾರ ದೂರ ಬರಾಕ ಹತ್ತಿದ್ದ. ಯಾಕೊ ಹೆದರಿಕೆ ಆತು ಒಳಗ ಹೋಗಾಕ ಮನಸ್ಸು ಬರಲಿಲ್ಲಾ. ಛೇ, ನಾನು ತಪ್ಪುಮಾಡ್ದೆ ಅನಿಸತೊಡಗಿತು. ಈ ಹುಡುಗಿ ಹಿಂದ ನೂರಾರು ಹುಡುಗರು ಗಂಟಬಿದ್ದಾರ. ಅಂತದ್ರಾಗ ಈ ಊರ್ನವನಲ್ಲಾ, ಈ ಕೇರಿಯವನಲ್ಲ, ಆಕಿ ಜಾತಿಯವನು ಅಲ್ಲ, ಹಿಂಗ ಮಾಡಿದ್ರ. ಯೋಚಿಸಿದೆ. ನಮ್ಮೂರ ನೆನಪಾತು. ಮೇದಾರ ಓಣಿ ನಾಯಿ - ಒಂದ ದಿನ ನಮ್ಮ ಗಲ್ಲಿಯ ಹೆಣ್ಣಾಯಿ ಹಿಂದ ಅಡ್ಡಾಡ್ತಿತ್ತು, ನಮ್ಮ ಕರಿಯ ಪಕ್ಯಾ ಅನ್ನೋ ನಾಯಿ ನೋಡಿದ್ದೆ ಇಡಿ ಓಣಿ ನಾಯಿಗಳನ್ನ ಕರದಬಿಡ್ತು ಮುಗೀತು. ಒಂದ ನಿಮಿಷ ಕಣ್ಣು ಮುಚ್ಚಿ ತಗಿಯೋದರಾಗ ಮೇದಾರ ಓಣಿ ನಾಯಿನ ಕಡದು ಹಣ್ಣಗಾಯಿ ನೀರಗಾಯಿ ಮಾಡಿದ್ವು. ಘಟನೆ ನೆನಪಾದದ್ದೆ ಇಡಿ ಮೈ ಕಂಪಿಸತೊಡಗಿತು. ಮೈ ಬೆವರಬಿಡಾಕಹತ್ತು. ಆ ವ್ಯಕ್ತಿ ಬಂದೋನೆ ಹೊಡಿಯಾಕ ಸುರುಮಾಡಿದ್ರ. ಹಿಂದಿಂದು ಮುಂದಿಂದು ನೆನಪಾತು. ಎಡಗೈಯಿಂದ ಬೆವರು ಒರೆಸಿಕೊಂಡೆ. ರಸ್ತೆ ಮೇಲೆ ಬರ್ತಿದ್ದೋರು ಎಲ್ಲದಾರಂತ ನೋಡೋದ್ರಾಗ ಅವರು ನನ್ನ ಮುಂದ ನಿಂತಿದ್ರು. ಒಳಗ ಹೋದೆ, ಕಾಟ್‌ಮ್ಯಾಲೆ ನಾ ಕುಂತ್ಕೊಂಡೆ ಅಲ್ಲೆ ಇದ್ದ ಕಬ್ಬಿಣದ ಕುರ್ಚಿಮ್ಯಾಲ ಅವರಿಬ್ಬರು ಕುಂತ್ಕೊಂಡ್ರು. ನಾ ಪ್ರಶ್ನಾರ್ಥಕವಾಗೆ ಅವರ ಮಾರಿ ನೋಡಾಕ ಹತ್ತಿದ್ದೆ. ನನ್ನ ದಿಗಿಲಿಗೆ ಉತ್ತರ ಅನ್ನೋ ಹಂಗ, ಕೆಳಗ ಸೈಕಲ್ ಸ್ಟ್ಯಾಂಡಿನ ಟರ್‌ರ್.... ಅಂತೇಳಿ ಅಳೊ ಶಬ್ದ ಕೇಳ್ತು. ಸೂಫಿ ಅವರೆ ಅಂತ ಸನ್ನೆ ಮಾಡಿದ್ಲು. ನನಗ ಏನ ಮಾಡಬೇಕಂತ ತೋಚಲಿಲ್ಲಾ. ಏನೋ ಹೇಳಾಕ ಬಾಯಿ ತಗಿಯಾಕು ಆ ವ್ಯಕ್ತಿ ಒಳಗ ಬರಾಕು ನನ್ನ ಬಾಯಾನ ಮಾತು ತುಟಿಗ ಬರದೆ ಗಂಟಲಾಗ ಸಿಕ್ಕೊಂತು. ಅವನು ಒಳಗ ಬರದೆ ಬಗ್ಗಿ ನನ್ನ ನೋಡಿದ, ಆ ಕಡೀಗ ತಿರುಗಿ ಅವರಿಬ್ರನ್ನೂ ನೋಡಿದ. ಹೊರಗ ನಿಂತ್ಕೊಂಡ. ಸೂಫಿ ಒಳಗಿಂದ ಹೊರಗ ಬಂದ್ಲು. ನಾನು ಅಂಜುತ್ತಾ, ಕೇಳಿದೆ ಆಕಿ ಮೆಲ್ಲಗೆ ಏನೋ ಹೇಳಿದ್ಲು. "ಛೇ ನೀ ಮದ್ಲೆ ಹೇಳಿ ಬೇಕೋ ಬ್ಯಾಡ ಅಂವ ನನ್ನ ಹುಡಗ ಅಂತ, ಸರಿ ಬಿಡು ಇವತ್ತಿಂದ ನಾ ನಿನ್ನ ಸುದ್ದಿಗ ಬರಂಗಿಲ್ಲಾ, ಬರಿ ಹೇಳಿದ್ರ ಆಕ್ಕೀತು. ಕರ್ಕೊಂಡ ಬರೋ ಜರೂರತ್ತೇನಿತ್ತು." ಅಂದವನೆ ಆಕಿ ಮಾರಿ ನೋಡಿದೆ. ನಾ ಯಾಕೆ ಹಿಂಗ ಮಾತಾಡಾಕ ಹತ್ತಿನೋ ತಿಳಿಯದೆ ಆತಂಕಗೊಂಡಿದ್ಲು ಮಲ್ಲಿಕಾ, "ರೀ ಅಂವ ಸೂಫಿ ಫ್ರೆಂಡ್ ನನಗ ಅಣ್ಣನಾಗಬೇಕು, ನೀವ್ಯಾಕ ಹಂಗ ಗಾಬರಿಯಾಗಿರಿ ಬೆಟ್ಟಿಯಾಗಬೇಕು ಅಂದ ಕರ್ಕೊಂಡು ಬಂದೆ" ಅಂತ ನನ್ನ ಉದ್ವೇಗವನ್ನ ಕಡಮಿ ಮಾಡಿದಳು. "ಹೌದಾ" ಜೋರಾಗೆ ಹೇಳಿದೆ. ನನ್ನ ಮಾತ ಕೇಳಿದ ಅವನು ಒಳಬಂದ."ಸಾರ್ ನಾನು ದುರ್ಗೇಶಿ ಅಂತ." ಪರಿಚಯ ಮಾಡಿಕೊಂಡ ನಿಮ್ಮ ಬಗ್ಗೆ ನಮ್ಮ ಮಲ್ಲಿಕಾ ಎಲ್ಲಾ ಹೇಳ್ಯಾಳ ನೀವೇನ ಹೆದರಬ್ಯಾಡಿ, ನಾ ಅದೀನಿ, ಯಾವನಾರು ನಿಮ್ಮ ನಡಕ ತಲಿಹಾಕಿದ್ನೊ ಅವನ ತಲಿನ ತಗಿತೀನಿ. ಅಂದಂಗ ನಾ ಯಾರಂತ ಗೊತ್ತಾಗ್ಲಿಲ್ಲಾ ಅಲಾ, ಶಿರಗೂರ ಶ್ರೀಮಂತ ಸುಣ್ಣಪ್ಪನ ಮಗ. ಈ ಹುಡುಗಿ ನಮ್ಮ ಓಣಿಯೊಳಗ ಇರ್ತಾಳ, ನನ್ನ ಹಿಂದ ನಲ್ವತ್ತ ಮಂದಿ ಹುಡ್ರ ಅದಾರ ನಿಮಗ ಯಾವನಾದ್ರು ಏನಾರ ಅಂದ, ನನಗ ಒಂದ ಮಾತ ಹೇಳ ಕಳಸ್ರಿ ಆತು. ಮುಂದಿಂದ ನಾ ನೋಡ್ಕೊಂತೀನಿ,

ಇನ್ನೊಂದ ಮಾತು, ನಮ್ಮಪ್ಪ ನೀವೇನ ಕೆಲ್ಸ ಮಾಡಕ ಹತ್ತೀರಿ ಆ ಸಂಸ್ಥಾದ ಮೆಂಬರು." ಅಂದವನೆ ಸೂಫಿಗ ಸನ್ನಿ ಮಾಡಿ ದಡದಡ ಇಳಿದುಹೊಂಟ ಬಿಟ್ಟ. ನಾನು ಬಾಯಿ ಬಿಟ್ಕೊಂಡು ಅವನನ್ನೆ ನೋಡತೊಡಗಿದೆ. ಆ ಕ್ಷಣ ನನಗ ಏನ ನಡಿಯಾಕ ಹತ್ತಿದೆ ಅನ್ನೊದೆ ಅರ್ಥ ಆಗಲಿಲ್ಲ. ಮಲ್ಲಿಕಾ, ಸೂಫಿ ಸ್ವಲ್ಪ ಹೊತ್ತು ಕುಂತ್ಕೊಂಡು ಎದ್ದ ಹ್ವಾದ್ರು. ನನ್ನೊಳಗ ಹೊಸದೊಂದು ಬಗೆಯ ಬುಗಲು ಹತ್ಕೊಳ್ತು. ಹೆದರಿಕೆನೋ, ಸಂತೋಷನೋ ತಿಳಿಯದಾಗಿತ್ತು. ನಾಳೆ ಮಾಡಬೇಕಾದ ಪಾಠದ ತಯಾರಿಗ ಪುಸ್ತಕ ಹಿಡದೆ ಮನಸಿನೊಳಗ ಇಳಿಯಾಕೆ ತಯಾರಿಲ್ಲ. ಪಿಣ್ಣು ಅಪರತಪ್ರ ಯಾವದೋ ಹಾಡ ಗುಣಿಗಿಕೊಳ್ಳುತ್ಲೆ ಒಳಗ ಬಂದ. "ಸಾ ಉಂಡ್ರೇನು?" ಕೇಳಿದ. ಹೂಂ ಅಂದವನೆ ಒತ್ತಾಯ ಪೂರ್ವಕವಾಗಿ ಓದಿ ನೊಳಗ ಇಳಿಯತೊಡಗಿದೆ. ತಲಿಬುಡ ಅರ್ಥ ಆಗಲಿಲ್ಲ ಪುಸ್ತಕ ಬಿಸಾಡಿದವನೆ "ಪಿಣ್ಣು ಬಾರಯ್ಯ ಅಡ್ಡಾಡ್ಕೊಂಡ ಬರಾನ" ಅಂತ ಕರ್ಕೊಂಡು ಶರ್ಟ ಹಾಕ್ಕೊಂಡು ಹವಾಯಿ ಮೆಟ್ಟು ಮೆಟ್ಟಲಿಳದು ಹೆಜ್ಜಿ ಹಾಕ್ತಾಹೊಂಟೆ.

ನಾನು ನನಗ ಗೊತ್ತಇಲ್ಲದೆ ಯಾವದೋ ಸುಳಿಯೊಳಗ ಸಿಕ್ಕ ಹಾಕ್ಕೊತ್ತಿದ್ದೀನಿ ಅನಿಸ್ತು. ಎಲ್ಲಿ ಮಲ್ಲಿಕಾ ನನಗ ಪ್ರೀತ್ಸೊ ನಾಟಕಮಾಡಿ ನನ್ನ ಸಿಗಸಾಕ ಮಾಡಕ ಹತ್ಯಾಳೇನೊ ? ಅನುಮಾನ ಹೆಚ್ಚಾತು. "ಸಾ, ಏನಾತ್ಸಾ, ವಾಕಿಂಗಂತ ಕರ್ಕೊಂಡ ಬಂದ್ರಿ ಏನೇನು ಮಾತಾಡ್ತಿಲ್ಲಾ ಮನ್ಸಿಗ ಏನಾರು ಬೇಜಾರಾಗಿರಬೇಕು". ಅಂತ ತನ್ನ ಎಂದಿನ ಪೆದ್ದಧಾಟಿಯೊಳಗ ಕೇಳ್ದ ಪಿಣ್ಣು! "ಯಾಕು ಇಲ್ಲ ಬಿಡು, ಯಾಕೋ ಬೇಜಾರಾಗಿತ್ತು" ಅಂತ ಜಾರಿಕೊಂಡೆ. ಮಾತು ಬ್ಯಾಡ ಅನಿಸಿತ್ತು. ಮಸೀದಿ ದಾಟಿ, ರಾಮಲಿಂಗದೇವರ ಗುಡಿ ಹತ್ರ ಬಂದಾಗ ಮನಸಿನ ದುಡುಗ ಹಂಗೆ ಇತ್ತು. ಹೊಟ್ಟೆ ಹಸ್ಕೊಂಡಿತ್ತು. ದುಂಡಪ್ಪನ ಹೋಟೆಲ ಕದ ಮುಚ್ಚಿರಲಿಲ್ಲ. ಕಿಸೆಯೊಳಗ ಕೈ ಹಾಕಿದೆ, ಹುಡುಗರು ಕೊಟ್ಟಿದ್ದ ಟ್ಯೂಷನ್ ರೊಕ್ಕ ಇತ್ತು. ಯಾಂತ್ರಿಕವಾಗಿ ಒಳಗೆ ಹೋದವನೆ, ತಣ್ಣಗ ಐಸಾಗಿದ್ದ ಮಧ್ಯಾಹ್ನದ ಅನ್ನ ರೊಟ್ಟಿ, ಪಲ್ಯ ಅನಿವಾರ್ಯ ಎಂಬಂತೆ ಹೊಟ್ಟಿಗ ತುರಕಿಕೊಂಡು ರೂಮಿಗೆ ವಾಪಾಸಾದ್ದಿ. ಕಾಟಿನ ಮ್ಯಾಲ ಬಿದ್ಕೊಂಡೆ, ಎಷ್ಟು ಹೊತ್ತಿನ ತಾಕಲಾಟದ ನಂತರ ನಿದ್ದೆ ಬಂದಿತು.

ಕಾಲೇಜ ಕಡೀಗ ಅವಸರದಿಂದ ಹೊಂಟಿದ್ದೆ. ದುರ್ಗೇಶಿಯ ಲಟಕೂರಿ ಸೈಕಲ್ಲು ಅಡ್ಡಾತು. ಸದ್ದ ಮಾಡದ ಬೆಲ್ಲನ ಒತ್ತಾಯ ಪೂರ್ವಕವಾಗಿ ಬಾರಿಸುತ್ತ ನನ್ನ ಗಮನ ಸೆಳಿಯಾಕ ನೋಡ್ದ. ನಾನಾಗ್ಲೆ ನೋಡಿದ್ರಿಂದ ಅನಿವಾರ್ಯವಾಗಿ ಬಂದ ಪೀಡೆಯನ್ನು ಮಾತಾಡಿಸಲೇ ಬೇಕಾತು. "ಹೂಂ, ಏನ್ಸಾ ಕಾಲೇಜಿಗಾ ಹೋಗ್ರಿ... ಎಲ್ಲಾ ನಿಮ್ಮದೆ." ಅಂದವನೆ ವಿಚಿತ್ರ ನಗೆ ನಕ್ಕು ಜೋರಾಗಿ ಸೈಕಲ್ಲ ತುಳ್ಕೊಂಡ ಹ್ವಾದ. ಒಳ್ಳೆ ಖುಷಿಯಿಂದ ಹೊಂಟಿದ್ದ ನನಗ ಬಲದಿಂದ ಎಡಕ ಹಾದ ಹೋದ ಬೆಕ್ಕಿನಂಗ ಮನಸ್ಸಿನೊಳಗ ಕಿರಿಕಿರಿ ಉಂಟ ಮಾಡಿದ್ದ. ಹೋದವಾರ ಪಿಳ್ಳ ಅನ್ನೋ ಹುಡಗ ಪಿಡ್ಡು ಅನ್ನೋ ಒಂದಕಣ್ಣು ಮುಚ್ಚಿ ತಾನೇ ಸರ್ವಶ್ರೇಷ್ಠ ಅನ್ನೋ ಮುಠ್ಠಾಳ ಜಿರಲೆ ಮೀಸೆಗಳನ್ನು ತಿರುವುತ್ತಾ ಎಲ್ಲೊ ನಿಗಾ ಇಟ್ಟು ಮಾತಾಡೊ ಗಂಡ್ರಗೂಳಿಯಂತ ಪಿಡ್ಡು ಮಾಸ್ತರ, ನನಗ ಸುಕಾಸುಮ್ಮನೆ

ಕಾಟ ಕೊಡಬೇಕಂತ ಪಿಳ್ಳ ಅನ್ನೊ ನಾಕ ಅಕ್ಷರ ಕಲ್ತ ದುರಂಕಾರಿ ಹುಡಗನ ತಲಿತಿಕ್ಕಿ ಗ್ರಾಮರ್‌ನೊಳಗ ತಲಿಹರಟೆ ಪ್ರಶ್ನೆ ಕೇಳೋ ಹಂಗ ಮಾಡಿದ್ವ ಅವನದೆ ಕೈವಾಡ ಅಂತ ಗೊತ್ತಾಗಿದ್ದೆ ಅಲ್ಲೆ ಅವನ ಬೇರಗಳನ್ನ ಕಿತ್ತಬಿಸಾಕಿದ್ದೆ. ಇವತ್ತ ಅಂತಹದ್ದೆ ಪ್ರಶ್ನೆ ಏನಾರು ಕೇಳ್ದ ಅಂತಂದ್ರು ಸರಿಗ ಬುದ್ದಿ ಕಲಿಸಬೇಕಂತ ತಯಾರಿ ಮಾಡ್ಕೊಂಡಿದ್ದೆ. ಆದ್ರು ಅಂವ ನನ್ನ ಕ್ಲಾಸಿಗೆ ಚಕ್ಕರ್ ಕೊಟ್ಟಿದ್ದ ಅಂತ ತಿಳಿತು. ಪಿಡ್ಡು ಮಾಸ್ತರ ಅವನ ಚೇಲ ಜಂಗೀರ ಹುಡ್ರು ನನ್ನ ಹಿಂದ ಗುಂಪಕೂಡೋದು ಹುಡುಗಿಯರು ಪ್ರಭುಮಾಸ್ತರ ಅದಾರೇನ್ರಿ ಅಂತ ಅವಾಗವಾಗ ಮೇಷ್ಟ್ರ ರೂಮಿಗ ಬರೋದು ಕಂಡು ಸಂಕಟಪಡ್ತಿದ್ರು. ಹೆಂಗಾನ ಮಾಡಿ ಈ ಪುಟಕೋಶಿ ಪ್ರಭ್ಯಾನ ದಿಮಾಕ ಇಳಿಸಲೇ ಬೇಕಂತ ನೂರಾ ಎಂಟು ನಮೂನಿಗಳನ್ನು ಮಾಡಿದ್ರು. ಪ್ರಿನ್ಸಿಪಾಲ ಪಕ್ಷಪಾಟೀಲ ನನ್ನ ಪರವಾಗಿದಿದ್ದು ಅವರಿಗ ನುಂಗಲಾರದ ತುತ್ತಾಗಿತ್ತು. ಸುಣ್ಣಪ್ಪ, ಸಂಕ್ರೂ, ಶಿವಳ್ಳಿ ಸಣಗೌಡನ ಮುಂದ ಚಾಡಿ ಹೇಳಿಯೂ ಆಗಿತ್ತು. ಹೆಂಗಾನ ಮಾಡಿ ಅವನ ಯಾವದಾರ ಕೇಸಿನ್ಯಾಗ ಸಿಗಸ್ರಿ ಆಮ್ಯಾಲ ನೋಡ್ರಿ ನನ್ನ ಕಸರತ್ತು ಏನಂತ ಅಂತೇಳಿ ಪಿಡ್ಡ ಮತ್ತು ಜಂಗೀರಗ ಭರವಸೆ ಕೊಟ್ಟಿದ್ದ. ಅದೇ ನೆಪ್ಪುಗಳನ್ನು ಮನಸ್ಸಿನ್ಯಾಗ ಮಂಡಗಿ ತಿನ್ನೊರಂಗ ಮೆಲಕ ಹಾಕ್ತ ಎಲ್ಲಿ ಸಿಕ್ಯಾನ ಈ ಮಗ ಅಂತಂದು ಕಣ್ಣಿಗ ಎಣ್ಣಿ ಬಿಟ್ಕೊಂಡು ಕಾಯ್ತಿದ್ರು. ನಾನು ಮಾತ್ರ ಅವರ ಎಲ್ಲಾ ಪ್ರಯತ್ನಗಳನ್ನ ನಿಷ್ಕ್ರಿಯಗೊಳಿಸಿದ್ದೆ. ಇಪ್ಪತ್ತೈದು ವರ್ಷಗಳ ಸೇವೆಯನ್ನ ಪ್ರತೀಷ್ಠೆಯಾಗಿ ತಗೊಂಡಿದ್ದ ಇಬ್ಬರು, ನನ್ನನ್ನ ಪಿಕ್ಸ್ ಮಾಡೋ ವಿಚಾರ ನನಗ ಗೊತ್ತಾಗದೆ ಗುಟ್ಟಾಗಿ ಉಳ್ಕೊಳ್ಳಲಿಲ್ಲಾ. ಸುದ್ದಿ ಗೊತ್ತಾಗಿದ್ದೆ, ಅವರಿಗಿಂತ ಮದ್ಲು ದಾಳಗಳನ್ನ ಬಿಸಾಡತೊಡಗಿದೆ. ಒಕ್ಕಣ್ಣಿ ಪಿಡ್ಡುಮಾಸ್ತರ, "ಅವನಿಗ ಬುದ್ದಿ ಕಲಿಸದಿದ್ರ ನಾ ಯಾಕ ಇರ್ಲಿ" ಅಂತ ಹುಡುಗರ ಮುಂದೆಲ್ಲಾ ಪ್ರತೀಜ್ಞೆಮಾಡಿದ್ನಂತ, ಅವನ ಮಾತನ್ನ ನಾನು ಪರಿಗಣನೆಗೆ ತಗೊಂಡಿರಲಿಲ್ಲಾ.

ಅವತ್ತ ಸಂಜಿ ಮುಂದ ನಾನು ಕುಬಸಣ್ಣ ಮಾಸ್ತರ, ಸಂಗಣ್ಣ ನವರಂಗ ಪೋಟೊಸ್ಟುಡಿಯೋ ಕೆಳಗ ನಿಂತಿದ್ವಿ, ಕುಬಸಣ್ಣನ ಖಾಸಾಸಂಬಂಧಿ ನರಪೇತಲಂತ ಮನುಷ್ಯನೊಬ್ಬ ಇದ್ದಕ್ಕಿದ್ದಂಗ ನಮ್ಮ ನಡಕ ಪ್ರತ್ಯಕ್ಷನಾದ. "ಮಾಮ ಇವನ ಏನ್ರಿ ಹೊಸ್ತಾಗಿ ನಮ್ಮೂರ ಕಾಲೇಜಿಗ ಬಂದಿರೊ ಮಾಸ್ತರ" ಅಂತ ಕೇಳಿದವನೆ ಕೆಳಗಿನಿಂದ ಮ್ಯಾಲಿನ ತನಕ ಒಂದೇ ಸಮನೆ ನೋಡತೊಡಗಿದ. ಅವನ ವಿಚಿತ್ರ ನೋಟ ನೋಡಿ ಗಾಬಾದೆ, "ಯಾಕೋ ಯಂಕಂಚಿ, ಹಿಂಗ್ಯಾಕ ಏನಾತ, ನಿನ್ನಿನ್ಯಾಗ ಪಸಂದಿದ್ಯಲ್ಲಾ" ಅಂತ ಸಂಗಣ್ಣಮಾಸ್ತರ ರೇಗ್ಸಿದ್ರು. "ಯಾಕಿಲ್ಲ ಕಾಕ, ಹುಡಗ ಪಗಡದಸ್ತಾಗೆ ಅದಾನು, ಪಾಠ ಚಲೋಮಾಡ್ತಾನಂತ, ನಮ್ಮ ಸಿಬ್ಬೇಸಿ ಇವನ ಇಸ್ಟೂಡೆಂಟು ಅಲ್ಲೇನ ನಡಿತೈತಿ ಅದೆಲ್ಲಾನು ಚಾಚುತಪ್ಪದೆ ಬಂದ ಹೇಳ್ತಾನ. ನಾನು ನೋಡಿರಾಕಿಲ್ಲ ಈ ವಯ್ಯನ ಈಗ ನೋಡಿದ್ನಲ್ಲಾ ಅದಕ್ಕೆ ಅಂದೆ" - ಕುಬಸಣ್ಣ ಮಾಮಾ ಆಟು ಈ ಕಡೀಗ ಬರ್ತಿಯಾ," ಅಂದು ಏನೋ ಸನ್ನಿ ಮಾಡಿದ. ಇಬ್ಬರೂ ಕೂಡ್ಕೊಂಡು ತಿಪ್ಪಣ್ಣ ಅಂಡ್ ಸನ್ಸ್ ಗೊಬ್ಬರದಂಗಡಿಕಡೀಗ ಹ್ವಾದ್ರು. ನಾನು ಸಂಗಣ್ಣ ಜಂಬೂರಾಗ ನಡಿಯಲಿರೊ ದೊಡ್ಡ ಕಲಾವಿದರ ಸಮಾವೇಶದ ಕುರತು ಚರ್ಚೆ ಮಾಡಿದ್ವಿ. "ನಿಮ್ಮ ಟೀಮಂ ಹುಡ್ರಿಗೆಲ್ಲಾ ಹೇಳ್ರಿ, ಇಡಿ ತಾಲೂಕಿನ

ಸುಮಾರು ಮುನ್ನೂರು ಮಂದಿ ಹುಡ್ರು - ಹುಡುಗಿಯರು ಬರ್ತಾರ ಷೋ ಸರಿಯಾಗಿ ಆಗಬೇಕು. ಇವರೇ ಇಡಿ ತಾಲೂಕಿಗೆ ಮಾದರಿ" ಅಂದ್ರು. "ನಿಮಗೆ ಗೊತ್ತೆ ಐತಲ್ಲಾ ಸಾರ್, ನಮ್ಮ ಹುಡ್ರು ಘಟನೆಯನ್ನ ಎದಿಯಾಳದಿಂದ ಅಭಿನಯಿಸ್ತಾರ, ಚಿಂತಿ ಬಿಡ್ರಿ," ಅಂತೇಳಿ ಹುಡ್ರ ಪರವಹಿಸಿ ಮಾತಾತಡಿದೆ. ಜಿಲ್ಲೆಯ ಬ್ಯಾರೆ ಬ್ಯಾರೆ ತಾಲೂಕುಗಳಲ್ಲಿ ಅಂದೋಲನ ಹ್ಯಾಂಗ ನಡದೈತಿ ಜಿಲ್ಲೆಯವರ ಅಭಿಪ್ರಾಯ ನಮ್ಮ ತಾಲೂಕ ಕುರಿತು ಹ್ಯಾಂಗೈತಿ ಅಂತೆಲ್ಲಾ ಚರ್ಚೆ ಮಾಡತೊಡಗಿದ್ವಿ. ಸಂಗಣ್ಣ ಮೇಷ್ಟ್ರಿಗ ನಾನಂದ್ರ ಬಹಳ ಪ್ರೀತಿ, ಯಾಕಂದ್ರ ಹೊಸ ಹೊಸ ರೀತಿಯ ಮಾಹಿತಿಗಳನ್ನ ಕೊಡ್ತಿದ್ದೆ. "ಸರ್, ನಮ್ಮದು ಎಲ್ಲರಿಗಿಂತ ಭಿನ್ನವಾದ ಆಂದೋಲನ ಇರಬೇಕು, ಯಾಕಂದ್ರ ನಿಮ್ಮಂತೋರು ಪ್ರೊ. ಗಟ್ಟಿಮಠ ಮತ್ತು ಕುಬಸಣ್ಣ ಇಂತಹ ಘಟನಾನುಘಟಿಗಳಿದ್ದಾಗ ಅದಕ್ಕೊಂದು ಡಿಫರೆಂಟ್ ವೇವ್ ಬೇಕೆ ಬೇಕಲ್ಲಾ" ಅಂತ ಕಿವಿ ಊದಿದ್ದೆ. ಅವರಿಗ ಹೌದ ಅನಿಸಿತ್ತು. ಅಷ್ಟೇ ಅಲ್ಲ ಅವರಿಗ ನನ್ನ ಧ್ವನಿ ಮ್ಯಾಲ ಬಹಳ ಭರವಸೆ ಇತ್ತು. ತಾನೊಬ್ಬ ಸೂಡೊ ಜನಾನುರಾಗಿ ಅಂದ್ಕೊಂಡ ತಿರಗಾಡ್ತಿದ್ದು ಒಂದ ಕಾರಣ ಆಗಿತ್ತು. ನಿಂತು ಬ್ಯಾಸರಾತು ಯಂಕಂಚಿ, ಕುಬಸಣ್ಣ ಬರಲೇ ಇಲ್ಲಾ. ನಡಿರಿ ಹೋಗಾನು ಬಸ್ಟ್ಯಾಂಡ್ ತಮ್ಮ ಮಾಮೂಲ ಜಾಗಕ ಬಂದೇ ಬರ್ತಾರ ಅಂತ ಹೆಜ್ಜೆ ಕೀಳೋದಕ್ಕೂ ಕುಬಸಣ್ಣ ಬರೋದಕ್ಕೂ ಸರಿಯಾತು.

ಅವರು ಏನು ಹೇಳಲಿಲ್ಲಾ - ನಾನು ಏನು ಕೇಳಾಕ ಹೋಗಲಿಲ್ಲಾ, ಆದ್ರ ಅವತ್ತ ರಾತ್ರಿ ಹೊಸ ಹುಡುಗ ಪಿಂಡಾರು, "ಸಾ ನಾನು ನಿಮ್ಮ ತಾವಿರ್ತೀನಿ, ನಾಕ ಅಕ್ಷರ ಹೇಳ್ಕೊಡ್ರಿ" ಅಂತ ಅಂಗಲಾಚ್ತಾ ಬಂದ. ಅವನ ಅಕ್ಕ ಸಿಂಗಮ್ಮ ಅಕಿ ಗೆಳತಿ ಪೊನ್ನಮ್ಮ ಇಬ್ಬರೆ ಪಾಠಕ ಬರತೊಡಗಿದರು. ಮೂವತ್ತ ಹುಡ್ರು ಒಬ್ಬೊಬ್ಬರಾಗೆ ಬಿಡ್ತಾ ಬಿಡ್ತಾ ಕಡೀಗ ಉಳದೋರು ಅವರಿಬ್ಬರೆ, ಹಿಂಗಾಗಿ ಪಿಂಡಾರು ಖೋಲಿಯೊಳಗ ಉಳಿಯೋ ಹಂಗಾತು. ಪಿಂಡಾರು, ಗೂಸ ಪಿಣ್ಣಿ ಮೂವರು ಒಬ್ಬರಿಗೊಬ್ಬರು ಕಿತ್ತಾಡತೊಡಗಿ ದರು. "ಸಾ ಅಂವ ಇಲ್ಲೇ ಉಳ್ಕೊಂಡ್ರ ನಾ ಮನೀಗ ಹೊಕ್ಕೀನಿ ಅನ್ನತೊಡಗಿದ. ಪಿಂಡಾರು" ಏಯ್ ಹಂಗ್ಯಾಕೋ ಪಿಂಡಾರು, ಏನಾತ ನಿನಗ ಸುಮ್ಮನಿರು" ಅಂದೆ. ಮದ್ಲೆ ತೆಪರನಂಗಿದ್ದ ಪಿಂಡಾರು ಗಂಟುಮೂಟೆ ಕಟ್ಕೊಂಡವನೆ ಜಾಗ ಖಾಲಿ ಮಾಡಿದ. ಸಾ ಪೀಡೆ ತೊಲಗ್ತು, ಬಹಳ ಲೋಫರ್ ಸಾ ಅವ್ನು, ಅಂದ ಗೂಸ". "ಹೌದು ಬಿಡು, ಯಾರ ಹೆಂಗಂತ ಗೊತ್ತೈತಿ ನನಗ" ಆಂತ ಮಾತು ಅಲ್ಲೇ ಮುಗಸಾಕ ನೋಡಿದೆ. ಪಿಂಡಾರು ನನ್ನ ಹೊರಗ ಹಾಕಬೇಕಂತ್ಲೆ ಒಳಗ ಬಂದಿದ್ದ ಗೂಸ. ಅಂವ ಹೋದಿಂದ ಒಂದೊಂದಾಗೆ ಸಣ್ಣ ಪುಟ್ಟ ಕಳ್ಳತನ ಸುರು ಹಚ್ಕೊಂಡ. ನಾನು ಯಾರ ಮೇಲೆ ಅನುಮಾನ ಪಡೋದು ಅಂತ ಸುಮ್ಮನಾದೆ. ಪಿಂಡಾರು ರೂಮಿಂದ ಹೋಗಿ ವಾರ ಆಗಿರಲಿಲ್ಲ. ಮನಿ ಮಾಲಿಕ ಮ್ಯಾಲ ಬಂದವನೆ "ಏ ಮಾಸ್ತರ, ಏನ ನಿನ್ನಗಲಾಟೆ, ಇದೇನ ಮನಿನೋ ಇಲ್ಲಾ ಅನಸತ್ರ, ಅಯ್ಯ ನೀ ಒಬ್ಬನೇ ಇರ್ತೀಯಾ ಅಂತಂದು ಪ್ರೊ. ಗಟ್ಟಿಮಠ ಹೇಳಿದ್ಕ ನಿನಗ ಖೋಲಿ ಕೊಟ್ಟೆ, ನೀ ಮಾಡೋದ ಏನು ಹೊತ್ತಿಲ್ಲದ ಹೊತ್ತ್ಯಾಗ ಹುಡುಗಿಯರು ನಿನ್ನ ಖೋಲಿಗ ಬರ್ತಾರ, ಹುಡಗರಂತು ತಿಂದು ಕುಡದು ಗಲಾಟಿ ಮಾಡ್ತಾರ, ಬ್ಯಾಡೇ ಬ್ಯಾಡ, ನೀ ಹೊಸರೂಮು

ಮಾಡ್ಕೊ, ನಾ ಬಂದ ಮಾಡ್ತೀನಿ ಒಂದ ವಾರದಾಗ ರೂಮುನೋಡ್ಕೊ ಏನಂದೆ". ಅಂತೇಳಿ ತಾಕಿತ್ತು ಮಾಡಿ ಹೋದ. ನನಗ ಸೂರಕಳಚಿ ತಲಿಮ್ಯಾಲ ಬಿದ್ಹಂಗಾತು. ಇಂವ ಇಷ್ಟು ದಿನ ಇಲ್ಲೋನು ಇವತ್ತ ಯಾಕಿಂಗ ಮಾತಾಡಿದ. ಇದ್ರಾಗ ಪಿಂಡಾರು ಕೈವಾಡ ಐತಿ ಅನ್ನೋದು ಖಾತ್ರಿಯಾತು. ಆ ಮಗ, ಮನಿಮಾಲೀಕನ ಮುಂದ ಚಾಚುತಪ್ಪದೆ ನಡದದ್ದನ್ನೆಲ್ಲಾ ಹೇಳ್ಯಾನ, ಪಿಂಡಾರು ಮಾಲೀಕನ ಹತ್ತಿರದ ಸಂಬಂಧಿ ಅವನಿಗ ರೂಮು ಬಿಡಿಸಿದ ಮ್ಯಾಲ ನಾ ಅಲ್ಲಿರಬಾರ್ದಂತ ಅವನೆ ಹೋಗಿ ಹೇಳಿ ಬಂದಿದ್ದ. ಹೊಸದಾಗಿ ಬಂದೋನು ಬೇಕಂತ್ಲೆ ಬೆಂಕಿ ಹಚ್ಚಿದ ಬಿಡು ಅನಿಸಿತು. ಏನ ಮಾಡಕಂತ ತಲಿಮ್ಯಾಲ ಕೈಹೊತ್ಕೊಂಡು ಕುಂತಿದ್ದೆ. ಡೊಣ್ಣ್ಯಾಡ, ಖಬರೂಸಾಬ್, ನಲ್ವತಪ್ಪ ನಸೀಬು, ಹಾಲ್ಗಪ್ಪ, ಹುಡ್ರಹಿಂಡಿಗಹಿಂಡೆ ಬಂದಿತ್ತು ಹುಡುಗಿಯರಿಗ ಇನ್ನೂ ಸುದ್ಧಿ ತಿಳದಿರಲಿಲ್ಲಾ. ಅಷ್ಟೊತ್ತಿಗಾಗಲೇ ಪರಿಚಯವಾಗಿದ್ದ ಗೊಂಬಿಗೌಡ, ಹೆಳ್ಳೂರಿನ ಬುಲೆಟ್ ಬಿದ್ದಪ್ಪ, ಇಬ್ಬರೂ ಬಂದಿದ್ರು, ನಾ ಅವತ್ತೆ ಬಡ್ಕೊಂಡೆ ಬಿಡ್ರಿ. ಈ ಹುಡ್ರ ಗುಂಪನ್ನ ದೂರ ಇಡ್ರಿ ಅಂತ ನನಮಾತ ಕೇಳಲಿಲ್ಲ." ಗೊಂಬಿಗೌಡ ಹುಡ್ರನೆಲ್ಲಾ ದೂಷಿಸಿದ. ಖಬರೂಸಾಬ್, ತಡಿಯಾಕ ಆಗದೆ, "ಗೌಡ್ರೆ, ನಾವೇನ ಮಾಡಿವಿ ಅಂತ ಹಿಂಗ ಅನ್ನಾಕ ಹತ್ತೀರಿ" ಅಂದ. "ಏಯ್ ಇನ್ನೇನ ಮಾಡಾಕಂತೀರಿ, ಈಗ ಮಾಡಿದ್ದ ಸಾಲದೇನ್ರೋ? ನಿಮ್ಮ ಮೇಷ್ಟ್ರಿಗ ರೂಮು ಬಿಡಸಿದ್ರಿ ಇನ್ನೇನಾಗಬೇಕು." ತನ್ನ ಎಂದಿನ ಧಾಟಿಯೊಳಗ ಗುಡುಗಿದ ಬುಲೆಟ್ ಬಿದ್ದಪ್ಪ. ಹುಡಗರೆಲ್ಲಾ ಒಬ್ಬರ ಮಕ ಒಬ್ಬರು ನೋಡತೊಡಗಿದ್ರು.

ಇಡಿ ಶಿರಗೂರ ತುಂಬ ರೂಮಿಗಾಗಿ ಹುಡಕಾಟ ನಡಸಿದ್ವಿ. ಬಿದ್ದಪ್ಪ ತನ್ನ ಬುಲೆಟ್ ಮೇಲೆ ತಿರುಗಾಡಿದ, ಹುಡುಗರೆಲ್ಲಾ ಸಂದಿಗೊಂದಿ ಅಂತ ತಿರಗಾಡಿದ್ರು ನಾನು ಅವರಿವರಿಗೆ ಕೇಳಿದೆ. ಒಂದ ಸಂಜೀಕ, ಎಲ್ಲರೂ ಸೇರಿಕೊಂಡು ಹಂಡೂರ ಸಾಬಿ ಮನಿಗ ಹೋದ್ವಿ. "ಏನ್ರಿಮಾಸ್ತರ, ಇಲ್ಲಿ ಮಟಾನು ಬಂದೀರಿ" ಅಂದ. "ಏನಿಲ್ಲಾ ಹಂಡೂರ ಸಾಬಿ, ನಿನ್ನ ಮನಿ ಪಕ್ಕ ಒಂದ ಖೋಲಿ ಖಾಲಿ ಇತ್ತಂತಲ್ಲ "ಅಂದೆ." ಅರೆ ಇಸ್ಕಿ ಮನ್ನಿನಾಗ ಆ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನ ಕ್ಲರ್ಕ್ ಬಂದಬಿಟ್ಟ, ನೀವು ನನಗೆ ಮದ್ಲೆ ಹೇಳಿದ್ರ ಪಾಡಿತ್ತು" ಆಂದ. ಸರಿ ಬಿಡು ಮತ್ತ ಹುಡಕ್ತೀವಿ. ಅಂದವರೆ ಹೊರಗ ಬಿದ್ವಿ. "ಇಂವ ಡಾಕ್ಟರ್ ಖಾಸಾ ಮನಷ್ಯ, ಇವನ ಹೇಳ್ದಂಗೆ ಅವರು ಕೇಳೋದು" ಅಂತ ಹುಡುಗರು ಮಾತಾಡಿಕೊಂಡ್ರು. ನಾನು ಲಕ್ಷಕೊಡಾಕ ಹೋಗ ಲಿಲ್ಲಾ. ಮಾಲೀಕ ಹೇಳಿದ ದಿನ ಬರಾಕ ಒಂದೇ ರಾತ್ರಿ ಉಳದಿದ್ದರಿಂದ ರೂಮಿಗಾಗಿ ಹುಡಕಾಟ ನಡೆಸಿದ್ದೆ.

ಗೂಸ, ಓಡಿ ಬರಾಕ ಹತ್ತಿದ್ದ, ನನಗ ಯಾಕಂತ ಗೊತ್ತಾಗಲಿಲ್ಲ. 'ಸಾ.... ಸಾ... ' ಏದುಸಿರು ಬಿಡಾಕ ಹತ್ತಿದ್ದ, "ಏನಾತೋ ಗೂಸ, ಯಾಕಿಂಗ ಎದುಸಿರು ಬಿಡ್ಕೊಂತಿ ಓಡಿ ಬರಾಕ ಹತ್ತಿ ಮನಿಮಾಲಿಕ ನೇನಾರ ಸಾಮಾನ ಹೊರಗಹಾಕಿದನೇನು?" ಕೇಳಿದೆ. ಅವಸರ ತಡಿಯಾಕ ಆಗದೆ, "ಹಂಗಲ್ರಿ, ನಮ್ಮ ರೂಮಿನ ಹಿಂದ, ಪಕ್ಕೀರಜ್ಜಿ ಅಂತ ಅದಾಳ, ಆಕಿ ಮನಿ ಹಿಂದೆ ರೂಂ ಖಾಲಿ ಐತಂತ ಬರ್ರಿ ಹೋಗಾನು" ಅಂದ. ನನಗ ಸಮಾಧಾನ ಆತು, ಬುಲೆಟ್ ಬಿದ್ದಪ್ಪನ್ನ ಕರ್ಕೊಂಡವನೆ ಹುಡ್ರನೆಲ್ಲಾ ಹಳೆ ರೂಮಿಗ ಬರಾಕ ಹೇಳಿ, ಹೊಂಟಬಿಟ್ಟೆ.

ಮುದಕಿ ಹೆಸರ ಹಿಡದು ಕೂಗಿದೆ. "ಬರ್‍ರಿ ಮೇಷ್ಟ್ರ ಬರ್‍ರಿ... ನಮ್ಮ ಹುಡಗ ಹೇಳಿದ ಅಂತ ನಿನಗ ರೂಮುಕೊಡ್ತೀನಿ,"ಅಂದವಳೆ ನೂರಾ ಎಂಟು ಕಂಡೀಷನ್ ಹಾಕಿದ್ಲು. "ಸಾರ್ ರೂಮಿನೊಳಗ ಕಾಲಿಡೊಮಟ ಹೂಂ ಅನ್ರಿ ಆಟೇಯ, ಆ ಮ್ಯಾಲ ಐತಲ್ಲ" ಅಂದ ಬಿದ್ದಪ್ಪ. ಮುದಕಿ ಹೇಳಿದ್ದಕ್ಕೆಲ್ಲ ಹೂಂ ಅಂದೆ. ಅಡ್ವಾನ್ಸ್ ಕೊಟ್ಟು ಚಾವಿ ಇಸ್ಕೊಂಡೆ. ಮನಿಹಿಂದ ಎಲ್ಡರೂಂ ಕಟ್ಟಿಸಿ ಬಾಡಗಿ ಕೊಟ್ಟಿದ್ಲು ಮುದಕಿ, ಅವು ಒಂದೊಂದು ಇಲಿ ಬಿಲಗಳಿದ್ದ ಹಂಗಿದ್ವು, ಒಳಗೆ ಬಚ್ಚಲು, ಬಾವಿಯಿಂದ ನೀರ ತಂದ್ಕೊಬೇಕು, ಪಕ್ಕದಾಗ ಪಾಯಿಖಾನಿ ಗುಂಡಿ ತೆರ್‍ಕೊಂಡಿತ್ತು. ಕೆಟ್ಟವಾಸನಿ ರೂಮಿಂದ ಹೊರಗ ಬಂದ್ರ ನರಕದ ಅನುಭವ. "ಏನೋ ಬಿದ್ದಪ್ಪ" ಅಂದೇ ವಾಸನಿ ಸಹಿಸಾಕ ಆಗದೆ. "ಬ್ಯಾರೆ ಕಡೀಗ ಸಿಗೋಮಟ ಸುಮ್ಮನಿರ್‍ರಿ" ಅಂದ, ಅದು ಸರಿ ಅನಿಸಿತು. ಪಕ್ಕದಾಗ ಯಾರದಾರಂತ ವಿಚಾರಿಸಿದೆ, ನನ್ನ ಸ್ಟೂಡೆಂಟ್ಸ್ ರೂಂ ಮಾಡ್ಕೊಂಡ ಅದಾರಂತ ತಿಳೀತು. ಪಾಡಾತು ಬಿಡು ಅಂದ್ಕೊಂಡು ರೂಮಿಂದ ಸಾಮಾನೆಲ್ಲಾ ತಗೊಂಡ ಬರಾಕ ಹುಡಗರಿಗ ಹೇಳಿದೆ.

ಆಳಿಗೊಂದರಂತೆ ಎಲ್ಲಾ ಸಾಮಾನು ತಂದು ಹೊಸರೂಮಿಗೆ ಹಾಕಿದ್ರು. ಗೌಡ ಮತ್ತೊಂದ ಸಲ ಎಚ್ಚರಿಸಿದ." ಮಾಸ್ತರ ನೀ ಸಣ್ಣಂವ ಓದಿನ್ಯಾಗ ದೊಡ್ಡ ಓದ ಒದ್ಕೊಂಡಿ ಆ ಮಾತಬ್ಯಾರೆ, ಆದ್ರ ಅನುಭವದಾಗ ನಾ ಬಾಳ ಅನುಭದವ ಏನ್ರಿ. ಈ ಊರಿನ ಹಕಿಕತ್ತು ನನಗ ಗೊತ್ತು ನಿಮ್ಮ ಹುಷಾರಿನ್ಯಾಗ ನೀವಿರ್‍ರಿ" ಅಂದ ಹ್ವಾದ. ನನಗ್ಯಾಕೋ ಪಾಟೀಲನ ಮಾತು ಪೇಚಿಗ ಸಿಗಸಿತು. ಹುಡ್ರನ ನನ್ನ ಗೆಳೆಯರಂತ ಹಚ್ಕೊಂಡೀನಿ. ಇಂವ ಬೇಕಂತ್ಲೆ ಅಂದನೇನ ಮತ್ತ. ಅನಿಸತೊಡಗಿತು. ಸಿಂಗಮ್ಮ, ಪೊನ್ನಮ್ಮ ಸತತ ಪಾಠಕ ಬರ್‍ತಿದ್ರು. ಹೆಚ್ಚೂಕಮ್ಮಿ ಎಲ್ಲಾ ಹುಡುಗರು , ಷೋ ಮುಗಿಸಿ ಬಂದವರೆ ರೂಮಿನೊಳಗೆ ಮಲಗಿ ಮುಂಜಾನೆ ಜಲ್ದಿ ಎದ್ದು ಮನೀಗ ಹೊಕ್ಕಿದ್ರು. ಗೂಸ ಪಿಣ್ಣ ಕಾಯಂ ಗಿರಾಕಿಗಳು. ಕುಬಸಣ್ಣನ ಚೇಲಾಗಳಾದ ಬಂಡು, ಸಂದು ಯಾವಾಗಾರ ಒಂದ ಸಲ ಅಪರೂಪಕ್ಕ ಅನ್ನೊಹಂಗ ಹಾದ ಹೊಕ್ಕಿದ್ರು. ಜೀವೂರ ತಾಂಡದ ಸಮ್ಮೇಳನ ಹತ್ರ ಬಂದಿದ್ಕ, ಹುಡುಗರು, ಹುಡುಗಿಯರು ಬಿಡುವಿಲ್ಲದೆ ತಾಲೀಮು ಮಾಡಾಕ ಹತ್ತಿದ್ರು. ಈ ನಡುವೆ ಮಲ್ಲಿಕಾ ಮಾತಾಡಾಕು ಸಿಕ್ಕಿರಲಿಲ್ಲಾ ಆಕಿ ಓಣಿಯೊಳಗ ಏನೇನೋ ಸುದ್ದಿಗಳು ಬೂದಿ ಮುಚ್ಚಿದ ಕೆಂಡದಂಗೆ ಒಳಗೊಳಗೆ ಹರಡಿಕೊಳ್ಳತೊಡಗಿದ್ವು. ದುರ್ಗೇಶಿ- ಸೂಫಿ ಉದ್ದ ಅಗಲ ಏನಂತ ನನಗ ಮಲ್ಲಿಕಾಗ ಗೊತ್ತಿರಲಿಲ್ಲಾ. ನಾನು ರೂಮು ಬದಲಿ ಮಾಡಿಂದ ದುರ್ಗೇಶಿ ಕಂಡಿರಲಿಲ್ಲಾ. ಆದ್ರ ನನ್ನ ಸುತ್ತ ಏನೋ ಸಂಚ ನಡಿಯಾಕ ಹತ್ತೈತಿ ಅನೋ ಗುಮಾನಿ ಮಾತ್ರ ಆಗಿತ್ತು. ಬಿಡುವಿಲ್ಲದ ಪರಿಶ್ರಮದಾಗ ಅದ್ಯಾವದೂ ತಿಳಿಲಿಲ್ಲಾ. ರಾತ್ರಿ ಹಗಲು ಅಡ್ಡಾಡಿ ಸುಸ್ತಾಗಿ ಒಂದ ವಾರ ಹಾಸಗಿ ಹಿಡಿದದ್ದೆ ಲಾಭ ಆಗಿತ್ತು.

ಇದ್ದಕ್ಕಿದ್ದಂಗ ಒಂದ ದಿನ ನನ್ನ ಸೂಟಕೇಷ್ ಚಾವಿ, ಸೂಟ್ಕೇಸ್ ಒಳಗಿಂದ ರೊಕ್ಕ ಮಲ್ಲಿಕಾಳ ಪತ್ರಗಳು ಗಾಯಬ್ ಆದ್ವು. ನಾನು ಏನ ಮಾಡಬೇಕಂತ ಯೋಚ್ನೆ ಮಾಡ್ತ ಕುಂತಿದ್ದೆ. ಅವಾಗ್ಲೆ ಬುಲೆಟ್ ಬಿದ್ದಪ್ಪ. ಗೌಡ, ಬಂಡು, ಸಂದು ಗುಂಪು ಅಚಾನಕ್ ಬೆಟ್ಟಿಕೊಡ್ತು. ನಡದಿದ್ದೆಲ್ಲಾನೂ ಚಾಚು ತಪ್ಪದಂಗೆ ಅವರ ಮುಂದ ಹೇಳಿದೆ. "ನಾ

ಬಡ್ಕೊಂಡೆ ನಮ್ಮೋರಂತ ಯಾರನನ ನಂಬಿರೋ ಅವರು ಒಂದ ಬಾಟಲು ಸರಾಯಿಗ ತಮ್ಮನ್ನು ತಾವು ಮಾರ್‍ಕೊಂತಾರ ನಿಷೇದಾಗಿನ ಮಾತು ಕಿಸೆದಾಗಿ ಇರೋದಿಲ್ಲಾಂತ ನಿಮ್ಮ ಹಿಂದ ನಿಮ್ಮ ಶಿಷ್ಯಂದಿರೇನದಾರಲ್ಲ ಎಲ್ಲಾ ನಂಬರ್‌ವನ್ ಹರಾಮ್‌ಕೋರ್‌ಗಳು ಅವರನ್ನ ದೂರ ಇಡ್ರಿ ಅಂದೆ. ನನಮಾತ ಕೇಳಲಿಲ್ಲಾ. "ಹುಡುಗರ ಕುರಿತು ಅವನಿಗಿದ್ದ ಬೇಜಾರ ತೋರ್‍ಪಡಿಸಿದ ಸಂದು." ಏನ್ರಿ ಹಿಂಗಾದ್ರ, ಯಾರನನ ನಂಬಬೇಕು ಯಾರನ್ನ ಬಿಡಬೇಕು, ಯಾವಾಗ ತಕೊಂಡಾರ್ರಿ... "ಗೌಡ ಕೇಳ್ದ." ಯಾವಾಗ ತಕ್ಕೊಂಡಾರೊ, ನಾನಂತು ನಿನ್ನಿನ್ಯಾಗ ನೋಡ್ದೆ. ನಿರಾಶೆಯಿಂದ ಹೇಳಿದೆ. ಬಂಡುಗ ಕುತೂಹಲ ತಡಿಯಾಕ ಆಗಲಿಲ್ಲಾ, ಏನೇನ ತಕ್ಕೊಂಡ ಹೋಗ್ಯಾರ ನೋಡಿರಿಲ್ಲಾ, ಅಂದ. "ಇನ್ನೇನ್ಲೆ ರೊಕ್ಕ ಪಕ್ಕ ತಗೊಂಡಿರ್‍ತಾರ. ಹೌದು ಯಾ ನನಮಗ ತಕ್ಕೊಂಡಿರಬೇಕ್ರಿ, ಸರ್, ನಿಮಗ ಯಾರ ಮೇಲಾರ ಅನುಮಾನ ಐತೇನ್ರಿ" ಅಂದ ಬಿದ್ದಪ್ಪ. "ಯಾರಂತ ಹೇಳ್ಲಿ ಬಿದ್ದಪ್ಪ, ಎಲ್ಲರನ್ನೂ ಒಂದೇ ದೃಷ್ಟಿಯಿಂದ ನೋಡೋನು ನಾನು. ಅಂವ ಕಳ್ಳಿದ್ರು ನನ್ನ ಶಿಷ್ಯನೆ" ಅಂದೆ. "ಅವರಮಾರಿ ನೋಡದ ತಲಿಮ್ಯಾಲ ಕುಂದ್ರಿಸಿಕೊಂಡ ಮೆರದಾಡಿದ್ರಲ್ಲಾ ಅದರ ಫಲ" ಅಂತ ಖಾರವಾಗೆ ಹೇಳಿದ ಸಂದು. "ಆದದ್ದು ಆತು, ಮುಂದಿಂದ ವಿಚಾರಮಾಡ್ರಿ ಯಾರನ್ನ ಹಿಡಿದ ಬಾಯಿ ಬಿಡ್ತಾರಂತ ಯೋಚ್ನೆ ಮಾಡ್ರಿ, ಏಯ್ ಬಿದ್ದಪ್ಪ, ಇವತ್ತ ಸಾಯಂಕಾಲ ನೀ ಇಲ್ಲೆ ಉಳ್ಕೊ ಸಂಜೀಗ ಗಮನಿಸು, ಹುಡ್ರು ಬರ್‍ತಾರ, ಎಲ್ಲಾರನ್ನ ವಿಚಾರ್‍ಸು ಸತ್ಯ ಹೊರಗ ಬಿದ್ದೆ ಬೀಳತೈತಿ." ಗೌಡ ಹೇಳಿದ. "ನೀವೇನು ಬೇಜಾರಾಗಬ್ಯಾಡ್ರಿ, ನಾವೆಲ್ಲಾ ವಿಚಾರಿಸ್ತೀವಿ ನಡಿರಿ ಚಾಕುಡ್ಕೊಂಡು ಬರಾನು" ಅಂತೇಳಿ ಬಂಡು ಬಗಲಾಗ ಕೈ ಹಾಕಿ ಎತ್ತಿ ನಿಲ್ಲಿಸಿದ. ಎದ್ದು ಪ್ಯಾಂಟ್ ತೊಟ್ಕೊಂಡವನೆ ಅವರ ಹಿಂದೆ ಹೆಜ್ಜೆ ಹಾಕ ತೊಡಗಿದೆ.

ಗೂಸಾ, ರಾತ್ರಿ ಕತ್ಲಾಗ ತಡವರಿಸಿಕೊಂತ ಓಡಿ ಬರಾಕ ಹತ್ತಿದ. ನಾನು ಕಾಂಪೌಂಡ್ ಒಳಗ ಕಾಲಿಟ್ಟಿದ್ದೆ. "ಸಾ ಬರ್‍ರಿಲ್ಲಿ," ಅಂದ ಅವನ ಧನಿಯೊಳಗ ಆಂತಕವಿತ್ತು. ಕಾಲುಕೈನಡಗಾಕ ಹತ್ತಿತ್ತು. "ಸಾ ಇಡೀ ಕಾಲೇಜ ಗ್ವಾಡಿಗಳ ಮ್ಯಾಲ, ಯಾರೋ ನಿಮ್ಮ ಮತ್ತು ಮಲ್ಲಿಕಾಳ ಹೆಸರು ಬರದಬಿಟ್ಟಾರ ಗಡಾನ ಕರ್‍ಕೊಂಡ ಬಾ ಅಂತ ಪ್ರಿನ್ಸಿಪಾಲರು ಕರದಾರ" ಅಂದ. ರಾತ್ರಿ ಹತ್ತ ಗಂಟಿಯಾಗಿರಬೇಕು. ಇಷ್ಟೊತ್ತಿನ್ಯಾಗ ಅದ್ಯಾರಬರದ್ರು, ದುರ್ಗೇಶಿ ಏನಾರ ಹೊಸ ನಾಟಕ ಆಡಾಕ ಹತ್ಯನೇನು, ಕಾಲೇಜ ಹತ್ರ ಕರಸಿ ಧಮಕಿ ಗಿಮಕಿಕೊಡಾಕ ಹೂಡಿರೋ ಉಪಾಯ ಇದ್ದಿರಬೇಕಂತ" ಖರೆ ಏನೋ ಗೂಸ" ಆಂದೆ. "ದೇವರಾಣೆಗೂ ಸಾ, ನಾ ಯಾಕ ನಿಮಗ ಸುಳ್ಳು ಹೇಳಲಿ" ಆಂದ. "ಬಿದ್ದಪ್ಪ, ಬಾ ಹೋಗಿ ಬರಾನು" ಅಂದೆ. "ನಡೀರಿ ನೋಡಾನು" ಆಂತ ನನ್ನ ಹಿಂದ ಬರತೊಡಗಿದ. ನಾನು ಹೆದರಿದ್ದೆ, ಹೆಜ್ಜಿ ಕಿತ್ತ ಇಡಾಕ ಆಗದಷ್ಟು ನಿಶ್ಯಕ್ತನಾಗಿದ್ದೆ ಇದೊಳ್ಳೆ ಪಜೀತಿ ಆತಲಪ್ಪ ನಾಯಾಕಾರ, ಆ ಹುಡುಗಿ ಹಿಂದ ಬಿದ್ದೆ ಅನಿಸಿತು. ತಲಿಯಾಗ ನಾನ ನಮೂನಿ ವಿಚಾರಗಳು ಬಂದು ಹೋಗತೊಡಗಿದವು. "ನೀವೇನು ಹೆದರಬೇಡ್ರಿ ಅದೇನು ಆಗೋದಿಲ್ಲಾ" ಅಂದ ಬಿದ್ದಪ್ಪ. "ಏಯ್ ಯಾರದು" ಆಂತ ಕೂಗಿದ್ರು ಪ್ರಿನ್ಸಿಪಾಲರು ನಾನು ಹೆದರಿ ಗೋಡಿ ಹಿಂದ ಸರದ ನಿಂತಿದ್ದೆ" ಬರ್‍ರಿ ಹಿತ್ಲಮನಿ ಏನ್ರಿ ಇದೆಲ್ಲಾ, ನಿಮ್ಮ ಬಗ್ಗೆ ನನಗ ಬಹಳ

ಗೌರವ ಇತ್ತು ಬಡಹುಡುಗ ಅಂತ ಕರುಣೆ ಇತ್ತು, ಅಲ್ರಿ, ಯಾಕ್ರಿ ಸುಕಾಸುಮ್ನೆ ಬರೀತಾರ" ಅಂತ ಪ್ರಿನ್ಸಿಪಾಲ ಬಾಯಿಗ ಬಂದಂಗ ಮಾತಾಡತೊಡಗಿದರು. ನಾನು ತೊದಲುತ್ತಾ "ನನಗೇನು ಗೊತ್ತಿಲ್ಲಾ ಸಾರ್, ಈ ಹುಡುಗಿ ಯಾರಂತಾನು ಗೊತ್ತಿಲ್ಲ. ಯಾವನೋ ಕಿಡಿಗೇಡಿ ಬೇಕಂತ್ಲೆ ಮಾಡಿರೋದಿದು" ಅಂದೆ. "ನನಗೊತ್ರಿ, ನೀವು ಚೆನ್ನಾಗಿ ಪಾಠ ಹೇಳ್ತೀರಂತ ನಮ್ಮ ಸ್ಟ್ಯಾಫಿನಲ್ಲೇ ನಿಮ್ಮ ಬಗ್ಗೆ ಹೊಟ್ಟೆಕಿಚ್ಚಿನಿಂದ ಮಾತಾಡಕೊಳ್ತಾರ, ನೀವು ಶಿರಗೂರ ಮಂದಿಗೆಲ್ಲಾ ಪರಿಚಯ ಆಗೀರಿ, ನಿನ್ನೆ ಮನ್ನೆ ಬಂದೋನು ಊರಿಂದೂರಿಗೆ' ಹೆಸರ ಮಾಡ್ಕೊಂತ. ಹಿಂಗ ಬೆಳೆಯಾಕ ಬಿಟ್ರ ಇದ್ದ ಊರಾಗಿರೊ ನಾವು ಅಪರಿಚಿತರಾಗಿ ಬಿಡ್ತೀವಿ ಅಂತ್ಲು ಮಾತಾಡ್ತಾರ ಇದೆಲ್ಲಾ ಅವರದೇ ಕೈವಾಡ ಇರಬೇಕು," ಅಂದ್ರು. ನಾನು ಬದುಕಿದೆಯ ಬಡಜೀವವೆ ಅಂತ ಸಮಾಧಾನಪಟ್ಕೊಂಡೆ. ಜವಾನ, ಬಿದ್ದಪ್ಪ, ಗೂಸ ನೀರು ಅರವಿತುಂಡ ತಗೊಂಡು ಒರಸಾಕ ಹತ್ತಿದ್ರು. ನಾನು ಪ್ರಿನ್ಸಪಾಲರು ಚಾವಿ ತಗದು ಅವರ ರೂಮಿನೊಳಗ ಕುಂತ್ಕೊಂಡ್ವಿ. "ನೀವು ಮಾತ್ರ ಬಹಳ ಹುಷಾರಾಗಿರಬೇಕು ಕಣ್ರೀ, ಮಂದಿ ಬೇಕಂತ್ಲೆ ನಿಮ್ಮ ಹೆಸರಿಗ ಮಸಿ ಬಳಿಯಾಕ ನೋಡಾಕ ಹತ್ಯಾರ, ನಾಳೆ ಯಾವಾನಾದ್ರು ಹೆಬ್ಬೆಟ್ಟು ಒತ್ತೊ ಸಂಸ್ಥೆ ಮೆಂಬರಿಗ ಗೊತ್ತಾತು ನಮ್ಮನ್ನ ಉಳಸಂಗಿಲ್ಲಾ" ಅಂದ್ರು. "ಸರ್ ನಾನಾತು ಪಾಠ ರೂಮು, ಆಂದೋಲನದ ಕೆಲ ಷೋಗಳಾತು ಬಾಕಿ ಉಸಾಬರಿ ಬೇಕಿಲ್ಲ" ಅಂದೆ. "ಅಷ್ಟೇ ಮಾಡ್ರಿ ಏನೂ ಆಗೋದಿಲ್ಲ. ನಾ ಅದೀನಿ. ನೀವೇನು ಅಂಜಬ್ಯಾಡ್ರಿ", ಅಂತ ಧೈರ್ಯ ಹೇಳಿದ್ರು. ಅಷ್ಟೊತ್ತಿಗಾಗಲೆ ಹೆಸರ ಅಳಿಸಿ ಬಿದ್ದಪ್ಪ ಗೂಸ ನನತಾಗ ಬಂದಿದ್ರು. "ಹೂಂ ಹೊತ್ತಾತು ನಡೀರಿ ಮಲಗರಿ, ನೀವೇನ ಮನ್ಸಿಗ ಹಚ್ಕೊಬ್ಯಾಡ್ರಿ, ನಾಳೆ ನಾ ವಿಚಾರ ಮಾಡ್ತೀನಿ" ಅಂತ ಮತ್ತೊಂದ ಸಲ ಕಾಳಜಿ ಪೂರ್ವಕ ಮಾತ ಹೇಳಿದ್ರು. ನಾನು ಗೂಸ-ಬಿದ್ದಪ್ಪ ತಡವರಿಸಿಕೊಂತ ರಸ್ತಿಗ ಬಂದ್ವಿ. " ಸಾ, ಯಾರೊ ಒಂದಿಬ್ಬರು ಓಡಿ ಹೋದ್ರಂತೆ, ಜವಾನ ಹೇಳಾಕ ಹತ್ತಿದ್ದ ನಮ್ಮ ಕಾಲೇಜ ಹುದ್ರೆ ಇದ್ದರಂತ" ಅಂದ. ಯಾರಿರಬಹುದು, ಯೋಚನೆ ಮಾಡ್ಕೊಂತ ಹೆಜ್ಜೆ ಹಾಕಿದೆ ಯಾರಂತ ಹೊಳಿಯಲಿಲ್ಲಾ.

ಕ್ಲಾಸರೂಮಿಗೆ ಬರೋದ್ರಾಗ ಮೇಷ್ಟ್ರುಗಳೆಲ್ಲಾ ಗುಸು ಗುಸು ಮಾತಾಡಿ ಕೊಳ್ಳತೊಡಗಿ ದರು. ನಾನು ಪಿಯುಪಿ ಎ. ತರಗತಿಗೆ ಹೊಂಟಬಿಟ್ಟೆ. ಮಲ್ಲಿಕಾ ಅವಳ ಅತ್ತಿ ಊರಿಂದ ಬಂದಿದ್ದಳು. ಪೊನ್ನಮ್ಮ ಹೇಳಿದ್ದು ನಿಜವಾಗಿತ್ತು. ಇವತ್ತ ಮಧ್ಯಾಹ್ನ ತಾಲೀಮಿಗ ಬರೋದಾಗಿ ಹೇಳಿದ್ಲಂತ, 'ಇವತ್ತ ಅದನ್ನ ಮುಗಿಸಿಬಿಡಾಕು' ಅಂತೇಳಿ ಮನಸ್ಸಿನೊಳಗ ಗಟ್ಟಿ ನಿರ್ಧಾರ ಮಾಡಿಕೊಂಡವನೆ ಪಾಠ ಮುಗಿಸಿ - ಯಾರ್ಯಾರಿಗ ಟೈಟ್ ಮಾಡಬೇಕೋ ಅವರಿಗೆಲ್ಲಾ ಟೈಟ್ ಮಾಡಿ ಬಂದಿದ್ದೆ. ತರಗತಿ ಮುಗಿಸಿ ಬರಾಕ ಹನ್ನೆರಡ ಗಂಟೆಯಾಗಿತ್ತು. ಕಾಲೇಜ ಜವಾನ ಒಂದ ಇನ್‌ಲ್ಯಾಂಡ್ ಲೆಟರ್ ತಂದಕೊಟ್ಟ. ಹಿಂದತಿರಗಿಸಿ ನೋಡಿದೆ, ಯಾರ ವಿಳಾಸ- ಹೆಸರೂ ಇರಲಿಲ್ಲಾ ಅನುಮಾನದಿಂದ. ಸ್ಟ್ಯಾಫ್ ರೂಮಿಗೆ ಹೋಗದೆ, ಟೇಬಲ್ ಟೆನ್ನಿಸ್ ರೂಂ ಕಡೀಗ ಹೋಗಿ ಪತ್ರ ಒಡೆದು ಓದಿದೆ, ಕೈಯಾಗಿ ಹಿಡದು ಮುದಡಿ ಮಾಡಿ ಬಿಸಾಡಿದೆ. ಸ್ವಲ್ಪಹೊತ್ತು ನಿಂತು ವಾಪಸ ಬಂದೆ, ದುರ್ಗೇಶಿ ಸೈಕಲ

ನಿಲ್ಲಿಸಿ ನನ್ನ ಕ್ಲಾಸಿನ ಸ್ಟುಡೆಂಟ್ ಒಬ್ಬನ ಕೂಡ ಮಾತಾಡ್ತಿರೋದು ಕಾಣ್ತು. ಓ ಇದು ಇವರದೊ ಕೆಲಸ, ಅಂದವನೆ ತಲಿಯಾಗ ಏನೋ ವಿಚಾರ ಬಂದಿದ್ವೆ ಟೆನ್ನಿಸ್ ರೂಮ್ ಕಡೀಗ ಓಡಿದೆ. ನಾನು ನಿಂತು ಪತ್ರ ಓದಿದ ಜಾಗದಾಗ ಮುದಡಿಮಾಡಿ ಬಿಸಾಡಿದ ಪತ್ರಕ್ಕಾಗಿ ಹುಡಕಾಡಿದೆ, "ಅಲಾ ಇವ್ನ, ಇಗ ಐದ ನಿಮಿಷದ ಹಿಂದ ಬಿಸಾಡಿದ ಪತ್ರ ಎಲ್ಲಿಗ ಹೋತು", ಸುತ್ತ ನೋಡಿದೆ ಯಾರು ಕಾಣಲಿಲ್ಲ. ಛೇ, ಅಲ್ಲಿಂದ ಸೀದಾ ದುರ್ಗೇಶಿ ನಿಂತ ಹತ್ರ ಬಂದೆ, ಅಲ್ಲಿ ಅವನು ಮಾತಾಡುತ್ತಿದ್ದ ಹುಡುಗ ಇಬ್ಬರೂ ಕಾಣಲಿಲ್ಲ. ಪತ್ರ ಬಿಸಾಡ ಬಾರದಿತ್ತು. ಅಲ್ಲಿ ಅಷ್ಟುಬೇಗ ಯಾರ ಬಂದಿದ್ರಲ್ಲಿ ತಲಿಹಾಳಾಗಹೋತು. ಸೀದಾ ರೂಮು ಕಡೀಗ ನಡದೆ.

ಬಿದ್ದಪ್ಪಗ ಬೇಜಾರಾತು, "ನೀವ ಹಂಗ ಮಾಡಬಾರದಿತ್ತು. ಅಲ್ರೀ ಕೈಯಾಗಿನ ಪತ್ರ ಬೇಜಾರಿಂದ ಬಿಸಾಡೀನಿ ಅಂತೀರಿ, ಐದ ನಿಮಿಷ ಬಿಟ್ಟ ನೋಡಿದ್ರ ಇಲ್ಲಾಂತೀರಿ ನಿಮ್ಮ ಹಿಂದ ಯಾರೋ ಸಂಚನಡಸ್ಯಾರ, ನೀವು ಭಾಳದಡ್ಡತನ ಮಾಡಿದ್ರಿ, ಪತ್ರ ತಂದು ನಿಮ್ಮ ಶಿಷ್ಯಂದಿರ ಪಟ್ಟಿ ತರಿಸಿ ನೋಡಬಹುದಿತ್ತು". ಅಂತ ಹಳ ಹಳಿಸಿದ. ನಾನು ಮಾತಾಡಲಿಲ್ಲ. ದಿನಕ್ಕ ದಿನಕ್ಕ ಬದಲಾಗ್ತಿರೊ ಸ್ಥಿತಿಯಿಂದ ಹೆದರಿದೆ. "ಬಿದ್ದಪ್ಪ, ಯಾಕೋ ಹೆದರಿಕಿ ಆಗಾಕ ಹತ್ತತಿ" ಅಂದೆ. "ಛೇ, ಅಷ್ಟಕ್ಕ ಹೆದರಿಕೊಂಡ್ರ ಹ್ಯಾಂಗ್ರಿ ಹೆದರಿದ್ರ ಈ ಮಂದಿ ನಿಮ್ಮ ಮ್ಯಾಲ ಕಪ್ಪಿಬಿಟ್ಟು, ಹೆದರಿಸ್ತಾರ, ಅಂಜದಂಗಿದ್ರಿ ಅಂದ್ರ ನಿಮ್ಮ ಸುದ್ಧಿಗ ಯಾವಾನು ಬರೋದಿಲ್ಲಾ ಏನೂ ಆಗೋದಿಲ್ಲ, ಸುಮ್ಮನಿರ್ರಿ, ಸಾರ್, ನೀವು ಆಕೀನ ನಿಜವಾಗೆ ಪ್ರೀತಿ ಮತಾಡಾಕ ಹತ್ತೀರಿ, ಮದವಿ ಆಗಾಕ ತಯಾರದಿರಿ ಅಂದ್ರ ಹಿಂಗ ಮಾಡ್ರಿ " ಅಂದವನೆ ಕಿವಿಯೊಳಗ ಏನೇನೋ ಹೇಳಿದ. ನನ್ನ ವಿಚಾರಾನೂ ಅದೇ ಆಗಿತ್ತು ಆದ್ರು ಹೆದರಿದೆ, "ನಾಳೆ ಹೆಚ್ಚುಕಮ್ಮಿ ಆತಂದ್ರ ಹ್ಯಾಂಗ್ರಿ" ಅಂದೆ. "ಗಪ್ಪಿರ್ರಿ ಏನೂ ಆಗೋದಿಲ್ಲಾ, ನಾನು ಊರಿಗ ಹೋಗಿ ನಾಕ ಗಂಟಿಗ ಬರ್ತೀನಿ ನೀವು ಹೂಂ..." ಅಂದವನೆ ಹೊರಟಬಿಟ್ಟ. ಹೆದರಿಕೆ ಗುಬಲನಿಂದಾಗಿ ಹೊಟ್ಟಿಹಸಿದಿರಲಿಲ್ಲ. ಪಕ್ಕದ ನನ್ನ ವಿದ್ಯಾರ್ಥಿ ಊರಿಂದ ಬಂದಿದ್ದ. "ಸಾ ಮನಿಂದ ಬುತ್ತಿ ತಂದೀನಿ ಒಂದ ರೊಟ್ಟಿ ಉಣ್ರಿ" ಅಂತೇಳಿ ಒತ್ತಾಯ ಮಾಡಿದ್ಕ ಜುಕ್ಕ ಜುಲುಮಿಯಿಂದ ಒಂದ ರೊಟ್ಟಿ ತುರುಕಿದೆ. ಬರಬಹುದಾದ ಪರಿಸ್ಥಿತಿ ನೆನಪಾದೊಡನೆ ಅಂಜಿಕೆ ದೊಡ್ಡದೊಂದು ಗಂಟಾಗಿ ಹೊಟ್ಟಿಯೊಳಗ ಉರಳ್ತಿತ್ತು.

ಬಡಬಡ ಹೋದವನೆ ಮಲ್ಲಿಕಾಳನ್ನು ಹೊರಗ ಕರದು ಅರ್ಧಗಂಟೆ ಬಿಟ್ಟು ಸೀದಾ ರೂಮಿಗೆ ಬರುವಂತೆ ತಾಕೀತು ಮಾಡಿ ಬಂದಬಿಟ್ಟೆ. ನಾ ಏನ ಮಾಡಾಕ ಹತ್ತೀನಿನನ್ನೊ ಖಬರಿರಲಿಲ್ಲಾ, ನನ್ನ ಮುಂದಿದ್ದು ಅದೊಂದೆ ದಾರಿ, ರಕ್ತ ಸಂಕರಣ. ವ್ಯವಸ್ಥೆ ಯೊಳಗಿನ ಕುಲಷಿತ ಜಾತಿ ವ್ಯವಸ್ಥೆ ಕೆಡಿಸಿಹಾಕಬೇಕಾದ್ರೆ ಇದೊಂದೆ ಸೂಕ್ತಮಾರ್ಗ ಅನಿಸಿತು. ಸೀದಾ ರೂಮಿಗೆ ಬಂದೆ ಗೂಸ ಸ್ಕೂಲಿಂದ ಬಂದಿದ್ದ "ನೀ ಮೂರ್ನಾಕಗಂಟಿ ತನಕ ಬರಬ್ಯಾಡ, ನಾ ಏನೋ ಬರಿಯಾಕ ಹತ್ತೀನಿ" ಅಂದೆ, ಬಗಲಾಗ ಪುಸ್ತಕ ಹಿಡ್ಕೊಂಡವನೆ ಹೊಂಟಬಿಟ್ಟ. ಕಿಟಕಿ ಮುಚ್ಚಿದೆ ಪರದಿ ಸರಿಸಿ ಆಕಿ ಬರೋದನ್ನ ಕಾಯ್ತಾ ಕುಂತೆ, ಮಲ್ಲಿಕಾ ಸರಿಯಾದ ಸಮಯಕ್ಕೆ ಬಂದಿದ್ಲು ನಾನು ಅಂದ್ಕೊಂಡಿದ್ದನ ಅವಳಿಗೆ ಹೇಳದೆ, ಆಕೀಗ ಇಷ್ಟ ಆತು,

ಹೂಂ ಅಂತ ಒಪ್ಕೊಂಡ್ಲು ರೂಮಿನೊಳಗೆ ನಾನು ಮಲ್ಲಿಕಾ ಇಬ್ಬರೆ ಕದ ಭದ್ರವಾಗಿ ಮುಚ್ಚಿದೆ. ಎರಡ ತಾಸು ಯಾವದೋ ಬದುಕಿನ ಹೊಸ ಲೋಕದಾಗ ಹಕ್ಕಿಯಾಗಿ ವಿಹರಿಸ ತೊಡಗಿದೆವು, ನಮ್ಮನ್ನ ನಾವು ಮರತು ಸುಂದರ ಕನಸಿನ ಲೋಕಕ್ಕೆ ಹೋಗೋದಕ್ಕು ಹೊರಗ ಯಾರೋ ದಡಬಡ ಕದ ಬಡಿಯೋದಕ್ಕೂ ಸರಿಹೋತು. ಆಕಿ ಹೆದರಲಿಲ್ಲ. ನಾನೆ ಅಂಜುತ್ತಾ, ಯಾರದು ಅಂದೆ, "ಏಯ್ ಬಾಗ್ಲತಗಿಯೋ" ಆಂತ ಜೋರಾಗಿ ಕೂಗಿದ ಒಬ್ಬ". ನಾನು ಸೊಂಟಕ ಲುಂಗಿ ಸುತ್ಕೊಂಡು ಒಂದಬಾಗಲ ಹಿಡ್ಕೊಂಡು ಒಂದನ್ನ ಒಂಚೂರ ಸರಿಸಿ, ಯಾರಪ್ಪ, ಏನಾಗಬೇಕು ಅಂದೆ. 'ಒಳಗಯಾರದಾರ' ಅಂದ. ನಾನು ತಡವರಿಸುತ್ಲೆ ಧೈರ್ಯದಿಂದ, "ಯಾಕ ಒಳಗ ಯಾರು ಇಲ್ಲಾ" ಅಂತ ಬಾಗಿಲ ಹಾಕ್ದೆ. ಅಂವ ಸ್ವಲ್ಪದೂರ ಹೋದ ನಾನು ಪರಿಸ್ಥಿತಿಯನ್ನ ಅರಿಯೋದಕ್ಕೆ ಪ್ರಯತ್ನ ಪಡುತ್ತಿದ್ದಂತೆ ಅವಳು ನನ್ನನ್ನ ಎಳ್ಕೊಂಡ್ಲು. ಅರ್ಧಗಂಟೆ ನಂತರ ಮತ್ತ ಬಾಗಿಲ ಬಡಿಯೋ ಸದ್ದು ಆತು. ಈಗ ಮತ್ತೊಬ್ಬ ಕೊಳಕ್ಯಾ ಕರಿಯಾ ಹಾಜರಾಗಿದ್ದ. ಒಂದ ಹೊಡ್ತ ಹೊಡದ್ರ ನೆಲಬಿಟ್ಟು ಮ್ಯಾಲ ಏಳಾಕ ಆಗ್ತಿರಲಿಲ್ಲಾ. "ಏನು?' ಅಂದೆ. "ಈ ಸ್ಥಿತಿಯೊಳಗ ಒಳಗ ಏನಮಾಡಕ ಹತ್ತಿದ್ದೆ" ಅಂದ. "ಏನಾರ ಮಾಡ್ಲಿ ನಿಂದೇನೀಗ" ಅಂದೆ ಅಂವ ಹೆದರಿದ, ಆದ್ರೂ ತೋರಸಿಕೊಡದೆ. "ಯಾರದಾರ ಒಳಗ ಹೊರಗತಗಿ" ಅಂದ "ಯಾರು ಇಲ್ಲ ನಡಿ ನೀನು ಆ ಕಡೀಗ" ಅಂತ ಸಾಗಹಾಕಿದೆ. ಯಾರೋ ಒಬ್ಬ ವ್ಯಕ್ತಿ ನನ್ನ ಹುಡಕಿಕೊಂಡು ಬಂದಂಗಾಗಿ, ನಾನು ನಡಗ್ತಾ, ಈಗ ಬಂದೆ ನೀವ ನಡೀರಿ ಅಂತೇಳಿ ಆತಗ ಕಳುಹಿಸಿದೆ. ಒಳಗ ಬಂದು ಬಟ್ಟೆ ತೊಡ್ಕೊಂಡವನೆ" ನೀ ಹೆದರಬ್ಯಾಡ, ನಾ ಹೊರಗ ಬೀಗ ಹಾಕಿ ಹೊಕ್ಕೀನಿ" ಅಂದೆ "ಆತು ಹೋಗಬರ್ರಿ" ಅಂತ ಧೈರ್ಯ ಹೇಳಿದ್ಲು. ಓ ಎಂಥ ಕೆಲ್ಸ ಆಗ್ಹೋತು. ಅಂದ್ಕೊಂಡು ಬಾಗಲಹಾಕಿ ಬೀಗ ಸಿಗಸಿದೆ ಏನೋ ನೆನಪಾತು ಮತ್ತ ಒಳಗ ಬಂದೆ, ಅವಳನ ಬಿಗಿಯಾಗಿ ಅಪ್ಕೊಂಡೆ, "ನಿನ್ನ ಈ ಸ್ಥಿತಿಗ ನಾನೆ ಕಾರಣ ನನ್ನ ಕ್ಷಮಿಸು" ಅಂದೆ. "ನೀವ್ಯಾಕ ಹೆದರ್ತೀರಿ ಹೋಗ್ರಿ ಏನೂ ಆಗೋದಿಲ್ಲಾ. ಇಗ್ಲೆ ಹಿಂಗಾದ್ರ ಹ್ಯಾಂಗ ನೀವು, ಇನ್ನೆಂಥೆಂಥ ಪರಿಸ್ಥಿತಿ ಬರ್ತಾವೋ ಯಾರಿಗೊತ್ತು ಎದಿಗುಂಡಿಗಿಯನ್ನು ಗಟ್ಟಿ ಮಾಡ್ಕೊಳ್ರಿ, ನಾಯಾವತ್ತು ನಿಮ್ಮ ಹಿಂದೆ ಇರ್ತಿನಿ." ಧೈರ್ಯ ತುಂಬಿದ್ಲು. ನನಗ ಅಳು ಬಂದಿತ್ತು. ಆಕೀನ ರೂಮಿನೊಳಗ ಬಿಟ್ಟು ಹೋಗಾಕ ಮನಸೆ ಬರಲಿಲ್ಲಾ. ಮಂದಿ ಕಾಯಾಕ ಹತ್ಯಾರಂತ ಗಡಿಬಿಡಿಯಿಂದ ಬೀಗ ಹಾಕಿದವನೆ ಹೊರಗೆ ಬಂದೆ ಡೊಣ್ಣಾಡ ನಿಂತಿದ್ದ. " ಡೊಣ್ಣಾಡ, ಎಡವಟ್ಟ ಆಗೈತಿ ಬರ್ರಿ ನನ್ನ ಹಿಂದ" ಅಂತ ಹೇಳಿ ಸೀದಾ ನಡದೆ "ಏನಾತು ಸಾರ್, ಯಾಕಿಂಗ ಬೆವರಾಕ ಹತ್ತಿರಿ, ಬರ್ರಿ ಹೋಟೆಲೊಳಗ ನೀರಾರು ಕುಡ್ದು ಸುಧಾರಿಸಿ ಕೊಳ್ರಿ, ಅಂದಗ ಆ ಜಿಂಡಾಲು, ಹನಮೇಶಿ ಯಾಕ ಬಂದಿದ್ರು. ಅಲ್ಲಿ ಕ್ಲಾಸಿನೊಳಗ ಕುಂತಾರ ನಡದಿದ್ದಾರ ಏನು?" ಒಂದೆ ಉಸರಿಗ ಒದರಿದ. ಹೆಂಗ ಸುರುಮಾಡಬೇಕಂತ ತಿಳಿಯದೆ ಕೈ ಕೈ ಹಿಚಕಿಕೊಳ್ಳಾಕ ಹತ್ತಿದ್ದೆ. "ಸರ್ ನೀವು ಹಿಂಗ ಹೇಳದಂಗಿದ್ರ ನನಗಾರ ಏನ ತಿಳದೀತು. ಹೇಳ್ರಿ" ಒತ್ತಾಯಿಸತೊಡಗಿದ.ಅತಿಥಿಗಳು ಬಂದಿಲ್ಲಾಂತ ಗೊತ್ತಾತು, ತಹಸೀಲ್ದಾರ್ ಆಫೀಸಿನ ಚಂಪಾಕಲಿ ಹಲ್ಲಕಿರಿತಾ "ಬಂದ್ರೇನ್ರಿ ಪ್ರೊಪೆಸರ ಸಾಹೆಬ್ರು",

ಅಂದ. " ಏ ಚಂಪಾಕಲಿ, ಹುಡ್ರು ಬೇಕಲಯ್ಯ, ಜೀಪ ಐತೇನು ಕಳಿಸು ಅಂದೆ, ತಾಸೀಲ್ದಾರ ಜೀಪ ಡ್ರೈವರ ಕರಿಯಪ್ಪ, "ನಡೀರಿ ಸಾಹೇಬ್ರ" ಅಂತೇಳಿ ಬಂದಬಿಟ್ಟ. ಡೊಣ್ಣಾಡ, "ಕೂಡನಡಿ" ಅಂದೆ. ಸೀದಾ ನನ್ನ ರೂಮಿಗ ಬಂದ್ವಿ. ಪಕ್ಕದ ರೂಮಿನ ಹುಡಗರಿಗೆಲ್ಲಾ ಗೊತ್ತಾಗಿತ್ತು. ಜಿಂಡಾಲು, ಹನಮೇಶಿ ದೂರದ ಕ್ರಾಸಿನೊಳಗ ಕಾಯ್ತಾ ಕುಂತಿದ್ರು. ಅದೇ ಹೊತ್ತಿಗ ಊರಿಗ ಹೋಗಿದ್ದ ಬಿದ್ದಪ್ಪ ಬುಲೆಟ್ ಹೊಡ್ಕೊಂಡ ಬಂದೆ ಬಿಟ್ಟ. ಹೋದ ಜೀವ ಹೊಳ್ಳಿ ಬಂದಂಗಾತು. "ಅಯ್ಯಪ್ಪ ಬದಕಿದ್ನೋ" ಅಂದೆ. "ಏನಾತ್ರಿ ಯಾಕಿಂಗ ಮಾಡಾಕಹತ್ತೀರಿ" ಅಂದವನೆ ನನ್ನ ಉತ್ತರಕ್ಕಾಗಿ ಕಾದ ಡೊಣ್ಣಾಡ. ಕೆಳಗ ಇಳಿರಿ ನಿಮಗೆಲ್ಲಾ ಗೊತ್ತಾಗತ್ತೈತಿ. ಇಳದು ಸೀದಾ ಬಿದ್ದಪ್ಪನ ಹತ್ರ ಓಡಿದೆ. "ಆತೇನ್ರಿ" -ಅಂತ ಹಲ್ಲ ತಗದು ಕೇಳಿದ. ನಿನಮರಾಯ, ನಿನ್ನ ಮಾತ ಕೇಳಿ ಎಲ್ಲಾ ಎಡವಟ್ಟಾತು, ಎಂತ ಐಡಿಯಾ ಕೊಟ್ಟೆ, ಸರೀಗ ಸಿಗಸಿಹಾಕ್ದೆ ಬಿಡು "ಬೇಸರದಿಂದ ಹೇಳಿದೆ." ನೀವು ಹೋಗಿ ಯಂಕವ್ವ, ಪೊನನಮ್ಮ ಅವರೆಲ್ಲಾ ಜಂತಾಬಜಾರಿನೊಳಗ ಪ್ರಾಕ್ಟೀಸ್ ಮಾಡಾಕ ಹತ್ಯಾರ ಕರ್ಕೊಂಡ ಬರ್ರಿ" ಅಂತ ಜೀಪು ಡ್ರೈವರಿಗೆ ಹೇಳಿ ಕಳಿಸಿದೆ "ಬಿದ್ದಪ್ಪ, ಒಂದಕೆಲ್ಸ ಮಾಡ್ರಿ, ಕಾಂಪೌಂಡ ಆ ಕಡೀಗ ಗಾಡಿ ತಗೊಂಡ ನಿಲ್ರಿ ನಾನು ಡೊಣ್ಣಾಡ ಮಲ್ಲಿಕಾ, ನ ಹೊರಗ ತಗದು ಕಳಿಸೋ ವ್ಯವಸ್ಥೆ ಮಾಡ್ತೀವಿ." ಜಲ್ದಿ ಹೋದವನೆ ರೂಂ ಚಾವಿ ತಗದೆ ಆಕಿ ಕುಂತ್ಕೊಂಡಿದ್ಲು. ನಾನು ಒಳಗೆ ಹೋದದ್ದೆ ಓಡಿಬಂದು ಕೈ ಹಿಡ್ಕೊಂಡ್ಲು. "ರೀ ನಿಮಗೇನು ಆಗ್ಲಿಲಾ, ಯಾವನ್ರಿ ಅಂವ ನಿಮಗ ಹೆದರಿಕಿ ಹಾಕ್ದೋನು," ವಿಚಾರಿಸಿದ್ಲು. "ಅದೇ ಲಕ್ಕಿ ಅದಾಳಲ್ಲ ಆಕಿ ಅಣ್ಣ ಜಿಂಡಾಲು ಮತ್ತ ಒಡ್ಡರ ಹನ್ಮೇಶಿ" ಮಾಹಿತಿಕೊಟ್ಟ ಡೊಣ್ಣಾಡ. "ಅವನ ಬೇವರ್ಸಿ ನನಮಗ ಸಾಣೂರಾಗ ಹುಡುಗಿನ ತಡವಿ ಚಪ್ಪಲಿಲೆ ಹೊಡ್ತಾ ತಿಂದ ಬಂದ್ರೂ ಬುದ್ದಿ ಬರ್ಲಿಲ್ಲಾ ಅಂವ ಏನಾರ ನನ ಕೈಗ ಸಿಗಬೇಕಿತ್ತು. ಬರಿ ಎಕ್ಕಡದಿಂದ್ಲೆ ಹೊಡಿತಿದ್ದೆ." ತನ್ನೊಳಗಿನ ರೋಷ ಹೊರಗ ಹಾಕಿದ್ಲು. "ನಿಮಗ ತೊಂದ್ರಿ ಕೊಡ್ತಾನ ಅಂವ ಸುಮ್ಮನೆ ಬಿಡೋದಿಲ್ಲಾ", ಕಣ್ಣಂಚಿನೊಳಗ ಹನಿಯೊಂದು ಹೊರಗ ಉಕ್ಕಿ ಬಂತು. "ನೋಡು ನೀ ನನ್ನ ಬಗ್ಗೆ ಕಾಳಜಿ ಮಾಡಬ್ಯಾಡ. ಈಗ ಸದ್ಯ ಪಾರೋಗೋದ ಕಲಿ ಆ ಮ್ಯಾಲ ವಿಚಾರ ಮಾಡಾನಂತೆ." ಆಕಿ ಕಡೀಗ ನೋಡದೆ ಕಾಂಪೌಂಡ ಹತ್ರ ಬಂದು ನಿಂತೆ ಭಾರವಾದ ಹೆಜ್ಜೆ ಇಟ್ಕೊಂತ ಬಂದಾಕಿನೆ ಮಾರಿ ನೋಡ್ಕೊಂತ ನಿಂತ್ಲು. ಹೂಂ ಸನ್ನಿಮಾಡಿದೆ, ಡೊಣ್ಣಾಡ ನಾನು ಹಿಡದು ಕಾಂಪೌಂಡ ಹತ್ತಿಸಿದ್ವಿ. "ಜಿಗಿ- ಹುಷಾರು" ಸುತ್ತ ನೋಡಿದೆ ಯಾರು ಕಾಣಲಿಲ್ಲ. ಮಲ್ಲಿಕಾ ಹಾರಿದಾಕೀನೆ ರಸ್ತೆಮ್ಯಾಲ ಬುಲೆಟ್ ಸ್ಟಾರ್ಟ್ ಮಾಡ್ಕೊಂಡೆ ನಿಂತಿದ್ದ ಬಿದ್ದಪ್ಪನ ಹಿಂದ ಓಡಿ ಹೋಗಿ ಕುಂತ್ಲು, ಮಧ್ಯಾಹ್ನದ ಹೊತ್ತಾಗಿದ್ಕ ರಸ್ತಿಮ್ಯಾಲ ಅಷ್ಟೊಂದು ಮಂದಿ ಇರಲಿಲ್ಲಾ. ಜೋರಾಗಿ ಬಿಟ್ಕೊಂಡ ಹೋದವನೆ ಸರ್ಕಲ್ ಇತ್ಲಾಗ ಇಳಿಸಿಬಂದ ಬಿಟ್ಟ. ಮಲ್ಲಿಕಾ, ಏನೂ ನಡದೆ ಇಲ್ಲಾ ಅನ್ನೊಹಂಗೆ ಕೆಳಗ ಮಾರಿಹಾಕ್ಕೊಂಡಾಕೀನ ಸಿದಾ ನಡದ ಬಿಟ್ಲು.

ಸಂಗಣ್ಣಮಾಸ್ತರ ನನ್ನ ದಾರಿ ಕಾಯಾಕ ಹತ್ತಿದ್ರು. ನಾನ ಹೋದದ್ದೆ ಹುಡ್ರೆಲ್ಲಾ ಸೇರ್ಕೊಂಡು ಆಂದೋಲನದ ಹಾಡು ಸುರುಮಾಡಿದ್ರು. ನಮ್ಮ ಹಾಡ ಮುಗದಿಂದ ನಾನು

ತಡಮಾಡದೆ ರೂಮ ಕಡೀಗ ಬಂದೆ. ಬಿದ್ದಪ್ಪ ಡೊಣ್ಣ್ಯಾಡ ಬಾಕಿ ಹುಡ್ರು ನನ್ನ ಹಿಂದಿಂದ ಬಂದು ರೂಮನ್ನ ಸೇರಿಕೊಂಡ್ರು. 'ಸರ್ ಚುಪ್', ಸನ್ನಿ ಮಾಡಿ ಬಿದ್ದಪ್ಪ ನಾನಂತು ಆ ಘಟನೆಯನ್ನು ಮರಿಬೇಕಂತಿದ್ದೆ. ಹಂಗಾಗಿ ಅದರ ನೆನಪಸಹಿತ ಮಾಡ್ಕೊಳ್ಳಾಕ ಇಷ್ಟಪಡಲಿಲ್ಲಾ. ಬಿದ್ದಪ್ಪ ಡೊಣ್ಣ್ಯಾಡ ಹುಡ್ರನೆಲ್ಲಾ ಒಂದಕಡೀಗ ಒಯ್ದು ನನ್ನ ಚಾವಿ ಪತ್ರ ರೊಕ್ಕ ಸುದ್ದಿ ವಿಚಾರಿಸದ. ನಾ ಅಲ್ಲ ನೀ ಅಲ್ಲ ಅಂತ ಒಬ್ಬರಿಗೊಬ್ಬರು ಜಾರಿ ಕೊಂಡ್ರು. ಪೊನ್ನಮ್ಮನ ಹಿಂದಿಂದ ಅಡ್ಡಾಡ್ತಿದ್ದ ನಸೀಬು ಹೆದರಿ ನಗತೊಡಗಿದ. ಆದ್ರ ಅವನ ನೋಡಿದ್ರ ಅಷ್ಟು ಧೈರ್ಯದವ ಅಲ್ಲ ಅನಿಸಿತು. "ಹೋಗ್ರಿ ಬಿದ್ರಪ್ಪ, ಸಾಯಿವಲ್ರು, ಆದದ ಆಗಿ ಹೋತು. ಹೋಗ್ರಿ ಸಂಜಿ ಆಗಾಕ ಬಂತು ನಾಳಿಗ ಜೇವೂರ ತಾಂಡಕ ಹೋಗೋದೈತಿ ಮದ್ಯಾಹ್ನದ ಮ್ಯಾಲ ಹೋಗೋದಕ್ಕ ತಯಾರಾಗ್ರಿ" ಹೊರಗ ಬಂದು ನಿಂತೆ. ಯಾಕೊ ಮನಸಿಗ ಸಮಾಧಾನ ಆಗಲಿಲ್ಲಾ. ಬರ್ತಿವಿ ಸಾರ್ ಅಂತ ಒಬ್ಬೊಬ್ಬರೆ ಹೇಳಿ ಹೋದ್ರು. ಯಾವ ಪ್ರತಿಕ್ರಿಯೆ ತೋರಿಸದೆ, ಇದ್ಯಾವುದೂ ಬ್ಯಾಡಆಗಿತ್ತು ಅನಿಸಿ ಸುಮ್ಮನಾದೆ. ಹೋರಾಟ, ಕೂಗಾಟ, ಎಷ್ಟೋ ನಿದ್ದೆ ಇಲ್ಲದ ರಾತ್ರಿಗಳು ಊಟವಿಲ್ಲದ ದಿನಗಳು ವ್ಯರ್ಥವಾದವೇ, ಆ ಮಂದಿನ ತಿದೊದಕ್ಕಿಂತ ಚೂರುಪಾರು ಕಲ್ತು ದಿಮಾಕ ಮಾಡ್ತಾ ಸಂಬೊಹಂಗೆ ನಯವಂಚಕತನ ಮಾಡೋ ಈ ಜೋಷಿ ತರದೋರಿಗ ಬುದ್ದಿ ಹೇಳಬೇಕು. ನನಗೂ ವೈಯಕ್ತಿಕ ಬದುಕೊಂದೈತಿ ಅಂತ ಈ ಮಂದಿ ಯಾಕ ತಿಳಿಯೋದಿಲ್ಲ. ಮುಂಚೂಣಿಯಲ್ಲಿರೋನು ಮಾತ್ರ ಆದರ್ಶಗಳನ್ನ ಮೌಲ್ಯಗಳನ್ನ ಹೆಗಲಮ್ಯಾಲ ಏರಿಸಿ ಕೊಂಡ ಸದಾ ಅವುಗಳನ್ನ ಕಿರೀಟದಂಗೆ ಧರಿಸಿಕೊಂಡೆ ಅಡ್ಡಾಡಬೇಕು. ಅವನ ಹಿಂದಿರೊ ಮಂದಿ ತಮ್ಮ ಮನ್ಸಿಗ ತಿಳಿಯೋದನೆಲ್ಲಾ ಮಾಡ್ಕೊಂಡ ಅಡ್ಡಾಡಬಹುದಾ. ಇಲ್ಲಿ ಎಡವಟ್ಟಾಗಿರೋದಂದ್ರ ನಾನೊಬ್ಬ ಹಿಂದೂ ವ್ಯವಸ್ಥೆಯೊಳಗೆ ಸಿಕ್ಕೊಂಡಿರೋ ವ್ಯಕ್ತಿ. ಅದೇ ಶುಂಠಿಗೌಡ ತಾಲೂಕಿಗೊಬ್ಬಾಕಿನ ಇಟ್ಕೊಂಡಾನ ಅವನ ಹಿಂದ ಅಡ್ಡಾಡೋ ಸಾತಪ್ಪ ಜೇಪಿನಲ್ಲೆ ಅಲ್ಲಿ ಇಲ್ಲಿ ಅಡ್ಡಾಡಿ ಸಿಕ್ಕಷ್ಟು ರೊಕ್ಕ ಎಬ್ಬಲಿಲ್ಲವೇ, ಬಾಯಿಯೊಳಗ ಗಾಂಧಿ ಮಂತ್ರ ಮಾಡೋದು. ಪ್ರೊ.ಗಟ್ಟಿಮಠ ಮಾತ್ರ ಆ ಕರಿ ಹುಡುಗಿನ ತಗೊಂಡ ಜೀಪೊಳಗೆ ಪಿ.ಬಿ. ರಸ್ತೆಯೊಳಗ ಮಜಾಮಾಡಬಹುದು. ಅದೇ ನನ್ನ ಖಾಸಗಿ ಬದುಕಿಗೆ ಬಂದಾಗ ನೈತಿಕತೆಯ ಪ್ರಶ್ನೆ ಉದ್ಭವ ಆಗಿಬಿಡತೈತಿ. ಯಾಕಿ ಹಾಳವ್ಯವಸ್ಥೆ ಹಿಂಗ. ನನ್ನ ತಲಿಯೊಳಗ ನರಗಳು ಜೋರಾಗೆ ಹೊಡೆಯತೊಡಗಿದವು. ನಾನು ಅಂತರ್ಮುಖಿಯಾಗಿದೆ, ಹೊರಗಿನ ಗೊಂದಲದ ಬುದಕುಬ್ಯಾಡ ಅನಿಸಿತು. ಹೊತ್ತು ಒಡಲೊಳಗ ಸೇರಿದೊಡನೆ ಕತ್ತಲು ಕವಿಯತೊಡಗಿತು. ಹಕ್ಕಿಗಳೆಲ್ಲಾ ಗೂಡು ಸೇರಿ ಬೀದಿ ದೀಪಗಳು ಬೆಳಗಿದವು. ಗೇಟ ತಕ್ಕೊಂಡು ಯಾರೋ ಒಳಗ ಬರ್ತಿರೋ ಹಂಗ ಅನಿಸಿತು. ಯಾರೊ ಹುಡುಗರಿರಬೇಕು ಅಂದ್ಕೊಂಡು ಸುಮ್ಮನೆ ನಿಂತೆ. ಮದ್ಯಾಹ್ನ ಬಂದಿದ್ದ ಒಡ್ಡರ ಹನಮೇಶಿ ಕತ್ಲಾಗ ನಿಂತಿದ್ದ. ಅವನು ಮಾತಾಡಿದಾಗಲೇ ನನ್ನ ಪಕ್ಕದಾಗೊಬ್ಬ ಮನುಷ್ಯ ನಿಂತಾನಂತ ಗೊತ್ತಾಗಿದ್ದು. "ಸಾ, ನಿಮ್ಮ ಕಾಲೇಜು ಗ್ರೌಂಡಿಗ ಬರಾಕಂತ, ನಮ್ಮ ಹುಡ್ರು ಕರಿಯಾಕ ಹತ್ಯಾರ "ಧಿಮಾಕಿಲೆ ಹೇಳಿದ. "ಏಯ್ ಯಾರೋ ನಿಮ್ಮ ಹುಡ್ರು, ನನ್ನ ಯಾಕ ಕರಿಯಾಕ

ಹತ್ಯಾರ", ಬಿರುಸಾಗೆ ಹಿಂದೇಟು ಕೊಟ್ಟೆ. ಅವನಿಗೆ ಏನಲಿನಸ್ತೊ "ಮಧ್ಯಾನ ಬಂದಿದ್ವಲ್ಲಾ, ನಿಮ್ಮ ಹಕೀಕತ್ತು ಗೊತ್ತಾಗ್ಯಾತಿ ಮಾತಾಡಬೇಕು ಬರ್‍ರಿ" ಬಾಲ ಮುದುರಿಕೊಂಡು ಕೊಂಯ್ ಗುಡೋ ನಾಯಿ ಹಂಗೆ ಹೇಳಿದ. ನಮ್ಮ ಸಂಭಾಷಣೆ ಕೇಳಿದ ಡೊಣ್ವಾಡ. ಬಿದ್ವಪ್ಪ ಹೊರಗೋಡಿ ಬಂದ್ರು, "ಯಾರ್‍ರಿ ಅದು, ಏನ ಒಬ್ಬರೇ ಬಡಬಡಸಾಕ ಹತ್ತಿರಿ" ಬಿದ್ವಪ್ಪ ರೂಮಿಂದ ಹೊರಗ ಬಂದ ನನ್ನ ಪಕ್ಕ ನಿಂತ್ಕೊಂಡಿದ್ವ. ಒಡ್ಡರ ಹನಮೇಶಿ ಟಾಕಿ ಸಡ್ಲಾತು.. "ನಮಸ್ಕಾರ್‍ರಿ ಬಿದ್ವಪ್ಪರ ನೀವು ಇಲ್ಲೇ ಅದಿರೇನ್ರಿ." ಎದಿ ಡವ ಡವ ಹೊಡಕೊಳ್ಳಾಕ ಹತ್ತಿತು ಹನಮೇಶಿದು. "ಹೂಂ... ಏನಾತಪ ಹನಮೇಶಿ, ಏನ್ಸಮಾಚಾರ, ಯಾಕ ಬಹಳ ಮಾತಾಡಕ ಹತ್ತಿಯಲ್ಲ ಹಲ್ಲಬಂದಾವೇನ ಬಗಲಾಗ, ಯಾಂವ ಅಂವ ಕರದೋನು, ಇಲ್ಲೆ ಬಾ ಅನ್ನು" ಗದರಿದ." ಬಿದ್ವಪ್ಪ ನೀ ಸುಮ್ಕಿರು, ಈ ಜಾಗ ಪಾಡಿಲ್ಲ, ಇಲ್ಲೆಲ್ಲಾ ಮನಿ ಅದಾವು ಪಕ್ಕದಾಗ ಓದೋ ಹುಡ್ರ ಅದಾರ, ಎಲ್ಲಂತೋ ಹನಮೇಶಿ," ಡೊಣ್ವಾಡ ಸಮಜಾಯಿಸಿ ಕೇಳಿದ. "ಕಾಲೇಜಿಗಂತ್ರಿ ಏನ ದೂರಲ್ಲ" ಮತ್ತೊಮ್ಮೆ ಕೊಂಯಿ ಗುಟ್ಟಿದ. "ಸರ್, ನೀವ ಹೋಗ್ರಿ, ಅವರೇನು ದಾದಗಳಲ್ಲ, ಪುಟಗೋಸಿ ಮಂದಿ, ನಡೀರಿ ನೀವು ಗಪ್‌ನಡೀರಿ. ಹಂಗೇನಾರ ಆದ್ರ ಜೀವಸಹಿತ ಉಳಿಯಂಗಿಲ್ಲ. ಇಲ್ಲೇನು ಮಾಡೋದಿಲ್ಲ, ಇಂತಲ್ಲಿ ಅದಾರನ್ನೋ ಸುದ್ದಿಸಹಿತ ಸಿಗೋದಿಲ್ಲ ನಡಿರಿ", ಬಿದ್ವಪ್ಪ ಆವೇಶದಿಂದ ಕಂಪಿಸತೊಡಗಿದ.

ಕಾಲೇಜಿನೊಂದು ಮೂಲಿಯೊಳಗ ಕತ್ತಲು ಗವ್ ಅಂತಿತ್ತು. ಅಪರಾದಿ ಹಂಗ ಕರ್‍ಕೊಂಡ ಹೊಂಟಿದ್ದ ಹನಮೇಶಿ. ಎಲ್ಲಾ ಮಾತಗಳನ್ನ ತಯಾರ ಮಾಡ್ಕೊಂಡೆ ಕುಂತಿದ್ದ ಜಿಂಡಾಲು, ಮತ್ತ ಅವನ ಚೇಲಾಗಳು. "ಬರ್‍ರಿ ಮಾಸ್ತರ ಬ್ರರಿ. ಏನ್ರಿ ನಿಮ್ಮ ಭಾನಗೇಡಿ, ನೀವು ಗುರುಗಳು, ಪಾಠ ಹೇಳ್ತಿರಂತ ನಮ್ಮ ಅಕ್ಕತಂಗಿಯರನ್ನ ನಿಮ್ಮ ತಾವ ಕಳಸಿದ್ರ ಪ್ರೇಮ ಪಾಠ ಹೇಳ್ಕೊಡ್ತಿರಲ್ರಿ.... "ಅವನ ಘನತೆಗೆ ತಕ್ಕಂತ ಮಾತುಗಳನ್ನೆ ಹೇಳಿದ. ನಾನು ಬಾಯಿ ತಗಿಯಾಕ ಮುಂಚೆ, "ಜಿಂಡಾಲು, ಅಂತವೆಲ್ಲಾ ಮಾತಾಡಬ್ಯಾಡ, ಹನಮೇಶಿ ಅವನ ಹತ್ರ ಹೋಗಿ ಅವನ ಬುಜ ಮುಟ್ಟಿ ಕಿವಿಯೊಳಗ ಏನೇನೋ ಹೇಳಿದ. "ಏಯ್ ಬಿಡಲೇ ಯಾರಿದ್ರ ಏನು? ಒಂದಲ್ಲ ಎರಡಲ್ಲ, ಎಂಟ ಹುಡುಗಿಯರು ನಮ್ಮೂರೋರು ಹಾಳಾಗಿರೋದು ಬಿದ್ವಪ್ಪ ಪಕ್ಕದ ಹಳ್ಳಿಯೋನು, ಅವನಿಗೇನು ಗೊತ್ತು ನಮ್ಮೂರ ಹಕೀಕತ್ತು" ಬಾಯಿಗ ಬಂದಂಗ ಬೊಗಳಿದ. "ನೋಡಪ್ಪ ಜಿಂದಾಲು, ಈ ವಿಷಯಕ್ಕೂ ನಿನಗೂ ಏನೂ ಸಂಬಂಧ ಇಲ್ಲ. ಅಷ್ಟಕ್ಕೂ ನಾ ಏನ ಮಾಡಿನಂತ ಇಲ್ಲಿಗ ಕರದಿ, ಬರಬಾರ್‍ದು ಅಂದುಕೊಂಡಿದ್ದೆ. ಬಿದ್ವಪ್ಪ ಅದಾನಲ್ಲ" ಬಿದ್ವಪ್ಪನ ಹೆಸರನ್ನ ಹೇಳಿದೆ. "ಏನ್ರಿ ಹಂಗಂತೀರಿ, ಮದ್ಯಾಹ್ನ ನಿಮ್ಮ ರೂಮಿನೊಳಗ ಇದ್ವಳಲ್ಲ ಆಕಿ ನಮ್ಮ ತಂಗಿ ಮಲ್ಲಿಕಾ ಅಷ್ಟೊತ್ತಿನ್ಯಾಗ, ಆ ಅವತಾರದಾಗ ಒಬ್ಬಳೇ ಹುಡುಗೀನ ಇಟ್ಕೊಂಡು ಏನ್ಮಾಡಕ ಹತ್ತಿದ್ರಿ" ಬಾಯಿಗ ಬಂದದ್ದ ಮಾತಾಡಿದ.

"ಹೌದ, ಆಕಿ ನಿನ್ನ ತಂಗೀನ, ಓಣಿಯೊಳಗ ಬರೋ ಮುಂದ ಬಾಯಿಗ ಬಂದಂಗ ಬೊಗಳ್ತಿಯಲ್ಲಾ ಅವಾಗ" ಅವನ ಹುಳಕನ್ನೆಲ್ಲಾ ಹೊರಗಹಾಕಿದೆ. ಜಿಂಡಾಲು -ಮೆಟ್ರಿಕ್

ಮುಗಸಾಕ ಆಗದೆ, ಆ ದೇಸಾಯಿ ದ್ಯಾಮನ ಕೂಡ ಸೇರ್ಕೊಂಡು ದಿಕ್ಕಾಪಾಲಾಗಿ ಓಡಿ ಬೆಂಗಳೂರಂತ ಬಾಂಬೆ ಅಂತ - ದಿಲ್ಲಿವರಿಗ ಅಡ್ಡಾಡಿ ಚೋಟಾ ಮೋಟಾ ಕಳ್ಳತನ ಮಾಡಿ ಸಿಕ್ಕೊಂಡು ಹೊಡ್ತಾ ತಿಂದು, ಮನಿಮಂದಿಗ ತಲಿನೋವಾದ. ಕಡೀಗ ಓಣಿ ಮಂದಿ ಬೆನ್ನ ಹತ್ತಿದ್ರು. ಅಲ್ಲಿಂದ ಬಿಡಿಸಿಕೊಂಡು ಶಿರಗೂರ ಸ್ಯಾಗ ನಾಕ ಕೊಳಕ್ಯಾ ನಂತ ಹುಡ್ರನ ಕಟ್ಕಂಡು ದಾದಾಗಿರಿ ಮಾಡಾಕ ನೋಡಿದ, ಸಿ.ಪಿ.ಐ. ರಾಥೋಡ್ ಮಣಕಾಲ ಚಪ್ಪಿ ಎಲಬು ಸಡಲಾಗೋ ಹಂಗ ಹೊಡದಿಂದ ಊರುಸಾಬರಿ ಬಿಟ್ಟ, ಹಳ್ಳಿ ಕಡೀಗ ತಿರಗಿದ, ಹಳ್ಳಿಯೊಂದ್ರಾಗ ಹಿಡದು ನಾಕ ಬಿಗದಿಂದ, ಯಾವದು ಬ್ಯಾಡಲೇ ಅಂದವನೆ ರಾಯ್ಕರ್ ರಂಗಣ್ಣನ ಲಾರಿ ಕ್ಲೀನರ್ ಆಗಿ ಸೇರ್ಕೊಂಡ. ಕ್ಲೀನರ್ ಆಗಿ ಐದಾರ ವರ್ಷ ಸರ್ವೀಸ್ ಮಾಡಿಂದ ಡ್ರೈವರ್ ಆಗಿ ಪ್ರಮೋಷನ್ ಪಡದಿದ್ದ. ಹುಬ್ಬಳ್ಳಿಯಿಂದ ಬಾಂಬೆ ಮುಟ್ಸೋ ದ್ರಾಗ ಒಂದಸಾವರ ದುಡಿಯತೊಡಗಿದ, ರೊಕ್ಕ ಕೈಯಾಗ ಆಡಾಕಹತ್ತಿಂದ, ತನ್ನ ಹಳೆ ಗೆಳೆಯರಿಗ ತಿನ್ನಿಸೋದು ಕುಡಿಸೋದು ಮಾಡತೊಡಗಿದ. ಪುಗಸಟ್ಟೆ ಸಿಗತೈತಿ ಅಂದ್ರ ಬಹಳ ಮಂದಿ ಹಿಂದಿಂದ ಸುತ್ತಾಡತಾವ. ಅವರೆಲ್ಲ ತನ್ನ ಬೆಂಬಲಿಗರು ಅಂತ ತಿಳ್ಕೊಂಡು ಎಲಬ ಕಾಣೋ ಎದಿಮೇಲಿನ ಗುಂಡಿ ತಕ್ಕೊಂಡು ಬಂಬಾಯಿ ರೌಡಿಗಳ ಹಂಗೆ ಅಡ್ಡಾಡ ತೊಡಗಿದ. ಜಿಂಡಾಲು ಇತಿಹಾಸ ಸಂಗ್ರಹಿಸಿದ ರಾಯ್ಕರ್ ರಂಗಣ್ಣಾ, ಒಂದ ಒಳ್ಳೆ ದಿನ ನೋಡಿ ಲಾರಿ ಬಿಡಿಸಿ ಓಡಿಸಿದ. ಅವತ್ತಿಂದ ಮತ್ತ ಹಳೆ ಮಂದಿ ಕೂಡಿಕೊಂಡು ತನ್ನ ಹಳೆ ಚಾಳಿ ಮುಂದವರೆಸಿದ್ದ. ಅವನ ಇತಿಹಾಸ ತಿಳಿಯದ ನಾನು ರೌಡಿನೆ ಇರಬೇಕಂತ ಹೆದರಿದ್ದೆ.

ನಮ್ಮಿಬ್ಬರ ನಡುವೆ ಮಾತ ಜೋರಾದ್ವು, "ಈ ಬೇವರ್ಸಿ ರಂಡಿಯರಿಗೆ ಇದ್ದ ಊರ ಹುಡಗರೇನಾಗ್ಯರೋ, ಎಲ್ಲಿಂದಲೋ ಬಂದ ಪರದೇಶಿ ನನಮಕ್ಕಳು ಮಜಾ ಮಾಡಾಕ ಬರ್ತಾರಲ್ಲ" ಸಾರಸಗಟು ಎಲ್ಲರನ್ನು ತಗೊಂಡು ಬಯ್ಯತೊಡಗಿದ." ಬಾಯಿ ಬಿಗಿ ಹಿಡದ ಮಾತಾಡ ಜಿಂಡಾಲು, ನಿನ್ನಷ್ಟು ನೀಚ ಕೆಲ್ಸಕ ಇಳದಿಲ್ಲ ನಾನು, ಹೌದು ನಾನ ಆಕೀನ ಮದ್ವಿ ಆಗಂವ ನೀ ಏನ ಮಾಡ್ತಿ" ಅಂದೆ. "ಏಷ್ಟೊ ಮಂದಿನ ಆಕ್ಕೀರಿ ನಿಮ್ಮ ಘನಂದಾರಿ ಕೆಲ್ಸ ದೊಡ್ಡದೈತಿ" ಯಾರೊ ಒಬ್ಬ ಬಾಯಿ ತಡಿಯಲಾರದಕ್ಕ ಮಾತಾಡಿದ. "ಯಾವನಲೆ ಅವನು ಹೆಂಗೈತಿ ಮೈಯಾಗ, ಯಾರಿಗ ಹೇಳಾಕ ಹತ್ತಿ ಅನ್ನೊ ಖಬರ ಬ್ಯಾಡ ಮೈಮ್ಯಾಲ, ಅವರು ಮೇಷ್ಟ್ರ, ಅವರಿಗೂ ನಿಮಗೂ ಒಂದೇ ಏನು, ಅವರ ಮಾತಾಡೋದಿಲ್ಲಂತ ತಿಳದು ಏನೇನಾರ ಮಾತಾಡಾಕ ಹತ್ತೀರಿ. "ಬಿದ್ದಪ್ಪ ಧ್ವನಿ ಏರ್ಸಿ ಮಾತಾಡಿದ್ದೆ ಜಿಂಡಾಲು-ಅವನ ಚೇಲಾಗಳೆಲ್ಲಾ ಮುದರ್ಕೊಂಡು "ನಮಸ್ಕಾರ ಬಿದ್ದಣ್ಣ, ಊರತುಂಬ ಮಾಸ್ತರದೆ ಸುದ್ಧಿ ಎಂಟ ಹುಡುಗಿಯರು ಹಾಳಾಗ್ಯಾರಂತ ಅಂತ ನಮ್ಮ ಓಣಿ ತುಂಬ ಮಂದಿ ಮಾತಾಡಕ ಹತ್ಯಾರ, "ತಲಿಕೆರ್ಕೊಂತ ಹೇಳಿದ ಜಿಂಡಾಲು. "ನೋಡು ಜಿಂಡಾಲು ಮೇಷ್ಟ್ರ. ಆಂದೋಲನದಾಗ ಹೆಸರ ಮಾಡ್ಯಾರ, ಹುಡುಗರ ಹತ್ರ ಛಲೋ ಸಂಬಂಧ ಇಟ್ಕೊಂಡು ಸ್ವಲ್ಪ ಬೆಳಿಯಾಕ ಹತ್ಯಾರ, ಅದು, ಇಲ್ಲಿ ಮಾಸ್ತರಿಗ ಆಗಿ ಬಾರಾಕಹತ್ತಿಲ್ಲ ಅದಕಂತ್ಲೆ ಮಾಡಿರೊ ಪಿತೂರಿ." ಬಿದ್ದಪ್ಪ ಸಮಜಾಯಿಸಿ ಕೊಟ್ಟ "ಮತ್ತ ನಿನ್ನಿನ್ಯಾಗ ಡಾಕ್ಟರ ಮಗಳು ಮಲ್ಲಿಕಾಳ ಕೂಡ ನಡಸಿದ ವ್ಯವಹಾರ, ಕಣ್ಣಾರೆ ಕಂಡೀವ್ರಿ ನಾವು, ಅಷ್ಟೇ ಅಲ್ಲಾ, ಬಹಳ

ದಿನಗಳಿಂದ ದುರ್ಗೇಶಿ, ಸೂಫಿ ಇವರು ಮಲ್ಲಿಕಾಗ ಬರದ ಪತ್ರ, ಇವರ ಕೊಟ್ಟ ಬಳಿಗಳು, ಗ್ರೀಟಿಂಗ್ಸ್ ಝೆರಾಕ್ಸ್ ಇಟ್ಕೊಂಡಾರ, ಇವರ ಹಿಂದ ಅಪ್ಪಾ ಡೋಹುದ್ರೆ ಹೇಳ್ಯಾರಂತೀನಿ" ಚಾಡಿ ಹೇಳಿದ ಜಿಂಡಾಲು. " ನೀವ ಏನ ಮಾಡಿದ್ರು ಏನು ಆಗೋದಿಲ್ಲ ಸುಮ್ನೆ ಹೋಗ್ರಿಸ್ನ ಮೇಷ್ಟ್ರು ಉಂಟು ಡಾಕ್ಟರ ಮಗಳು ಮಲ್ಲಿಕಾ ಉಂಟು ನಡಕ ನಾನು- ನೀನು ಯಾರು? ಸಾ, ನಿಮ್ಮಂತೋರಕುಡೂ ಜಾಗೇವಲ್ಲ ಮತ್ತ ಮಾತಾಡೋ ಮಂದಿನೂ ಅಲ್ಲ ಏಳ್ರಿಸ್ನ, ಜಿಂಡಾಲು ಕೆಳಗ ಹೋಗಿ ಕಾಕನ ಹೋಟೆಲಿನೊಳಗ ಚಾ ಕುಡದು ರಾಜಿ ಮಾಡ್ಕೊಂಡ ನಡದಿದ್ದೆಲ್ಲಾ ಮರಿಯೋಣ ನಡಿರಿ ಎಲ್ಲಾ" ಬಿದ್ದಪ್ಪ ಕಡ್ಡಿಮುರದಂಗ ಮಕದ ಮ್ಯಾಲ ಹೇಳಿದ. ಜಿಂಡಾಲು ಕಡವ ಪತ್ರ ತುರಿಸಿಕೊಳ್ಳುದಂಗ. "ನಪ್ರಲೇ ಅದು ಚಾ ಸಿಗೋದಿಲ್ಲ ನೋಡ್ರಿ ಮತ್ತ" ಎಲ್ಲರಿಗಿಂತ ಮದ್ಲು ಎದ್ದನಡವ ಬಿದ್ದಪ್ಪ ಪ್ರಭುನ ರೂಮಿಗೆ ಕಳುಹಿಸಿದ ತಾನೆ ಅವರಹಿಂದ ಹೋಗಿ ಚಹ ಕುಡಿಸಿ ವಾಪಾಸ ಬಂದ "ಸಾರ್, ನಾನು ಅವತ್ತೆ ನಿಮಗ ಹೇಳಿದೆ. ಮುಂದ ಒಂದ ದಿನ ನಿಮ್ಮ ಹಿಂದಿರೋರೆ ನಿಮಗ ಚೂರಿ ಹಾಕ್ತಾರಂತ ನನ್ನ ಮಾತ ಕೇಳಲಿಲ್ಲಾ, ಈಗ ನೋಡಿ ಹೆಂಗೆ ತಿರಗಿ ಬಿದ್ದಾರ." ಪ್ರಭು ಮಾತಾಡಲಿಲ್ಲಾ, ತನ್ನ ಅಸ್ಥಿರ ಭವಿಷ್ಯ ಬೆನ್ನ ಬಿಡದೆ ಕಾಡತೊಡಗಿತು.

ಮನಸಿಲ್ಲದ ಮನಸಿನಿಂದ ಕಾಲೇಜಿನ ಸಮಾರಂಭದಲ್ಲಿ ಬಾಗವಹಿಸಿ ಮನಸಿನ ತುಂಬ ಆತಂಕ ತುಂಬ್ಕೊಂಡಿದ್ರು ನಗೋರ ಕಂಡ ನಗ್ತಾ ಮಾತಾಡ್ತಾ ಹುಡುಗರು ಕಾರ್ಯಕ್ರಮ ಮುಗಸೋದನ್ನೆ ಕಾಯತೊಡಗಿದ. ಕಾಲೇಜಿನ ಹೊರಗ ಏನೋ ಗದ್ದಲ, ಪ್ರಭುಗಾಗಲೆ ದಿಗಲ ಸುರು ಆತು, ಜಿಂಡಾಲು ಗುಂಪಿನೋರೆನಾರ ಹೆಚ್ಚು ಕಮ್ಮಿ ಮಾಡ್ಯಾರೇನು, ಯೋಚಿಸಿದ ಅವನ ಕಂಡರಾಗದ ವರ್ಚಕಣ್ಣಿನ ಮೇಷ್ಟ್ರು, ಮೀಸಿಯೊಳಗೆ ನಗ್ತಿದ್ದ, ಸುಮ್ಮನೆ ಹುಡ್ರೇನಾರ ಮಾತಾಡ್ತಾವೇನಂತ ಕಿವಿಗೊಟ್ಟ ಕೇಳಿದ ಯಾವ ಸುಳಿವು ಸಿಗಲಿಲ್ಲ. ಬಿದ್ದಪ್ಪ, ಗೌಡ ಅವನ್ನ ಅಲ್ಲಿ ಬಿಡದೆ ಕರ್ಕೊಂಡೆ ಹೊಂಟ್ರು. ಮಲ್ಲಿಕಾ ಎಲ್ಲೂ ಕಾಣಲೇ ಇಲ್ಲ. ಪ್ರಭುಗ ಹುಚ್ಚು ಹಿಡಿದಂಗಾತು ಎಂಥಕ್ರೂರಿ ಈ ಸಮಾಜ? ಯಾಕ ಬೇಕು ಹಾಳ ಜಾತಿ, ಧರ್ಮ ಅನ್ನೋ ಜಂಜಡ, ಯಾರಮೇಲು ಯಾರಕೀಳು ಇದ್ವಾಗ, ಎಷ್ಟೊ ಮುಗ್ಧ ಹೃದಯಗಳು ಈ ಗೊಂದಲಲ್ಲಿ ತೊಳಲಾಡ್ತಾ ಪರಿಹಾರ ಕಾಣದೆ ಮಣ್ಣ ಪಾಲು ಆಗಿ ಹೊಕ್ಕಾರ ಇದೆಂಥ ವಿಪರ್ಯಾಸ ಸಾವಜಿ ಖಾನಾವಳಿ ಮಲ್ಲೇಶಿ ಅವನೆದುರು ಗ್ಲಾಸ್ ಕುಟ್ಟೆಂದೆ ವಾಸ್ತವಕ ಬಂದಿದ್ದ. ಪ್ರತಿಸಲದಂತೆ ಪ್ರಭುನ ಪ್ಲೇಟಿನೊಳಗೆ ಮಟನ್ ಛಾಪ್ಸ್ ಹಾಕಿದ್ದ. ಅದರೊಳಗಿನನಲ್ಲಿ ಅವನಿಗ ಇಷ್ಟ, ಅದಕ್ಕೆ ಗೌಡ ಸಾವಜಿ ಶಿವಾಜಿ ಘೋಟೆಗೆ ಹೇಳಿ ದೊಡ್ಡದಂದು ಕುರಿ ಎಲುಬನ್ನೆ ಹಾಕ್ಸಿದ್ದ. ಯಾಕೊ ಊಟಾನೆ ಬ್ಯಾಡ ಅನಿಸಿತ್ತು, ಒಂದ ಕಡೆ ಹಾಳಾನೆನಪು ಮತ್ತೊಂದು ಕಡೀಗ ಆತಂಕ. ಭಯ ಎಲ್ಲಾ ಹೊತ್ತು ಸಾಗಿದ್ದ. ಈ ದೇಶದ ಎಷ್ಟೋ ಅಸಹಾಯಕ ಬದುಕು ಹಿಂಗ, ದೇವರಿಗ ಬಲಿಕೊಡೋ ಕುರಿ ಹಂಗೆ ಜಮೀನ್ದಾರ ತ್ವಾಟದಾಗ ಚೆಂಡಬಗ್ಗಿಸಿ ದುಡಿಯೋದು ಜಾತಿ ಹೆಸರಿನ ಮೇಲೆ ಧರ್ಮದ ಹೆಸರ ಮೇಲೆ ಯಾಕೆ ಹಿಂಗ ಮಂದಿನ ಜ್ವಾಳದೊಳಗಿನ ಕಲ್ಲು ಆರಿಸಿ ಬಿಸಾಡೊ ಹಂಗ ಬೀಸಾಡ್ತಾರ ಊಟದ ಜೊತೆಗೆ ವಿಚಾರ ಲಹರಿಯ ಹೊಂಟಿತ್ತು. ಯಾರೋ ನಾಕ

ಮಂದಿ ನನ್ನ ಕಡೀಗ ಬೆಳ್ಳ ಮಾಡಿ, ನಗ್ತಾ ಇದ್ರು ಅವರ ಮಾತುಗಳು ಅಸ್ಪಷ್ಟವಾಗಿದ್ವು. "ಅವನೆ ಆ ಮಾಸ್ತರ, ಏನ್ ಛಾನ್ಸ್ ಹೊಡ್ದಾನಲ್ಲಾ ಎಂಟೆಂಟು ರುಚಿ, ಅವನ್ನ ಮಾತಾಡ್ಸಿ ಬರಾನ ನಡೀರಿ." ಒಬ್ಬ ಅವಸರದಿಂದ ಹೊರಟ. "ಲೇ ಬಿದ್ದಪ್ಪ ಗೊಂಬಿಗೌಡ ಇಲ್ಲೆ ಅದಾರ," ಮತ್ತೊಬ್ಬ ಅನುಮಾನಪಟ್ಟ. "ಅವನ್ದೆ ಏನ ಇತಿಹಾಸ ಇವತ್ತ ಕಾಲೇಜ ಗ್ವಾಡಿಮ್ಯಾಲ ಪೋಸ್ಟರ ಮಾಡಿ ಅಂಟಿಸಿದ್ದು." ಕೈ ತೊಳಿಯಾಕ ಹೋಗಿದ್ದ ಗೌಡ ಕದ್ದು ಕೇಳ್ಕೊಂಡ ಬಂದಿದ್ದ. "ಮೇಷ್ಟ್ರೆ ಗಡಾನ ಉಣ್ರಿ," ಅಂದವನೆ ಗಡಿಬಿಡಿಯಿಂದ ಬಿದ್ದಪ್ಪನ್ನ ಎಬ್ಬಿಸಿದ. ಮನಸ್ಸಿಲ್ಲದ ಮನ್ಸಿಂದ ಊಟ ಮಾಡ್ತಿದ್ದ. ಪ್ರಭು ಅರ್ಧಕ್ಕೆ ಬಿಟ್ಟು ಎದ್ದ. ಮೂವರು ಮಾತಾಡ್ದೆ ಕಾಲೇಜ ಕಡೀಗ ಹೆಜ್ಜಿ ಹಾಕಿದ್ರು. ಕತ್ಲಾಗ ವಾಚ್‌ಮನ್‌ನನ ಕೂಗದೆ ಸುಮ್ನೆ ಗ್ವಾಡಿ ಮೇಲೆ ಹಚ್ಚಿರೋ ಪೋಸ್ಟರ್ ಹುಡುಕಿದ್ರು. ಅಲ್ಲಲ್ಲಿ ಹರದಿದ್ದ ಒಂದೆರಡು ತುಂಡುಗಳು ಕಂಡವು. ಹೆದರಿಕಿ ಹೆಚ್ಚಾತು ಮೂವರು ಕತ್ಲಾಗ ತಡವರಿಸಿಕೊಳ್ತಾ ಹುಡುಕಾಟ ನಡೆಸಿದರು. ವಾಚ್‌ಮನ್ ದೂರದಿಂದ್ಲೆ ಗಮನಿಸಿ ಹತ್ರ ಬಂದವನೆ ' ಈಗ ಬಂದ್ರಿಸಾ, ಎಲ್ಲ ಮುಗದ ಹ್ವಾದ ಮ್ಯಾಕೆ ಛೇರ್ಮನ್ರು, ಸೆಕೆಟ್ರಿ, ಮೆಂಬರುಗಳೆಲ್ಲಾ ನಿಮ್ಮ ಬಗ್ಗೆ ಮತ್ತ ಅದ್ಯಾವ್ದೊ ಡಾಕ್ಟರ್ ಹುಡುಗಿ ಅಂತಲ್ಲಾ ಸಾ ಆಕಿ ಫೋಟೋನೂವೆ ಗ್ವಾಡಿಮ್ಯಾಲಂಟಿಸಿದ್ರು ಅವನೆಲ್ಲಾ ನೋಡ್ಕೊಂಡು ಹ್ವಾದ್ರು."ಕಿಸಕ್ಕನೆ ನಕ್ಕು ಹೇಳಿದ. ಪ್ರಭು ಮತ್ತೊಂದಿಷ್ಟು ಗಾಬರಿಯಾದವನೆ ಯಾರ್‍ಯಾರೇನಂದ್ರಂತ ಕೇಳಿದ. "ಸೆಕೆಟ್ರಿಗ ಮೀಟಿಂಗ ಕರಿಯಾಕ ಹೇಳಿದ್ರು, ಸಾ ಅಟೇಯ" ಅಂತಂದು ಬಾಕಿ ಮಾತನ್ನ ನುಂಗಿದ. ನಾನು ಒಳಗೊಳಗೆ ಸಣ್ಣಗೆ ನಡುಗಿದೆ. ಗೊಂಬಿಗೌಡ ಬಿದ್ದಪ್ಪ ಸಮಾಧಾನ ಮಾಡಿದ್ರು ನಾನು ಮಾತ್ರ ಹಳಿಹಳಿಸುತ್ಲೆ ಅಡ್ಡಾದೆ.

ಕಾಲೇಜಿಗ ದಸರಿ ರಜಾ ಬಿಟ್ಟಿತ್ತು ನಾನು ರಜಕಂತ ಊರಿಗ ಬಂದಿದ್ದೆ. ಅವೇ ಹಳೆಯ ಹಳ ಹಳಿಗಳು ಪ್ರಬುನ ಅಪ್ಪ ಪತ್ಲೆಪ್ಪ ನಾಯ್ಕ ಇಟಗಿ ಕೆಲ್ಸಕ ಹೊಕ್ಕಿದ್ದ. ಅವನವ್ವ ಬರಮಕ್ಕ ಉಳದಿಬ್ಬರು ಮಕ್ಕಳನ್ನ ಕರ್ಕೊಂಡು ಬಾಣೂರು, ಇಂಗಾಳಪುರ ಸುತ್ತಗಟ್ಟಿ ಕೂಲಿಮಾಡ್ತಿದ್ಲು ಮಗನ್ನ ಒದಿಸಾಕಂತ ಪಡಬಾರದ ಪಡಿಪಾಟಲು ಪಟ್ಟಳು, ಮಗದೊಡ್ಡ ನೌಕರಿ ತಗೊಂಡ ಮನಿ ಕಡೀಗ ನೋಡ್ಯಾನಂತ ಸಾವಿರ ಕನಸು ಕಂಡಿದ್ಲು. ಮಗ ರಜಕಂತ ಊರಿಗ ಬಂದೋನು ಖಾಲಿಕೈಯಿಂದಲೇ ಬಂದು ಅವರಿಗೆ ಭಾರವಾದನು ಅಂದ್ಕೊಂಡಿರ ಲಿಲ್ಲ. ಮನಿಮುಂದಿ ಪಡ್ತಿರೋ ಪಡಿಪಾಟ್ಲ ನೋಡಿದವನೆ ಮೌನವಾಗೆ ರೋಧಿಸ ತೊಡಗಿದ. ಊರಾನ ಮಂದಿದು ಏನೇನೊ ಊಹೆಗಳಿದ್ವು, ಕಲ್ಪನೆಗಳಿದ್ವು, ಅವುಗಳಿಗೆ ಕುತ್ತ ತಂದಿದ್ದೆ. ನನ್ನ ಮಂದಿ ಬದುಕಿಗೊಂದು ಅರ್ಥನಾರ ಹುಡಕಿ ಕೊಡಾಕಂತ ಅನಿಸಿತು. ಸರಾಯಿ ಕುಡ್ಕೊಂಡು ಗುದ್ದಮ್ಮನ ಗಾರಿ ಕಟ್ಟಿಗ ಅಂಡೂರಿ ಚಾವಿ ಆಡ್ತಿದ್ದ ಸಾಣು, ಸುಬ್ಬಾ, ಚೆಂಗಾಲ, ಬೋವಿರ, ನಾಣು ಮಕೋಡ ರನ್ನ ಒಟ್ಟಿಗ ಸೇರ್ಸಿ, ಅಲ್ರಣ್ಣಾ ನಿಮ್ಮ ಹೆಂಡ್ರಲ್ಲಿ ಕೂಲಿನಾಲಿ ಮಾಡ್ಕೊಂತ ಅಡ್ಡಾಡ್ತಾರ, ನೀವು ದುಡಿಯಾಕ ಹೋಗದೆ ಅವರ ದುಡಮಿಯನ್ನ ತಿನ್ನೋದಲ್ಲದೆ ಕುಡದು ಹಿಂಗ ಕೆಲ್ಸ ಬಗ್ಸಿ ಅನ್ನದೆ ಗಾರಿಕಟ್ಟಿಗ ಬಂದ ಕಾಲ ಕಳಿತಿರಲ್ಲಾ ಏನ ನಿಮ ಹಕೀಕತ್" ಸುರು ಮಾಡೊದ್ಕು ಪೋಸ್ಟ್‌ಮ್ಯಾನ್ ಪಾಂಡೇಶಿ

"ಪ್ರಭಣ್ಣ ನಿನಗೊಂದು ರಿಜಿಸ್ಟರ್ ಪೋಸ್ಟ್ ಬಂದೈತಿ". ಅಂದವನೆ ನನ ಮುಂದ ಸಹಿ ಮಾಡಾಗಕ ರಸೀದಿ ಪುಸ್ತಕ ಹಿಡಿದ. ಎದಿ ಡವಡವಾಂತ ಹೊಡ್ಕೊಳಾಕ ಹತ್ತು. ಯಾರದು? ಏನು? ಎಲ್ಲಿಂದ? ಸಾವಿರಾರು ಯೋಚನೆಗಳು ಒಮ್ಮಿಂದೊಮ್ಮೆಗೆ ತಲಿಯೊಳಗೆ ಬಿರಗಾಳಿ ಯಂಗ ಎದ್ದವು. ಸುಬ್ಬಾ ಅನ್ನೋನು ಏನೋ ಹೇಳಾಕಂತ ಬಾಯಿ ತಗಿಯಾಕು, ತಾನ ಕೆಲಸಕ್ಕಿದ್ದ ಮ್ಯಾನೇಜಮೆಂಟಿನವರು ಕಳಿಸಿದ್ದರಂತ ರಿಜಿಸ್ಟ್ರಿ ಪೋಸ್ಟ್ ನೋಡೋದಕ್ಕು ಸರಿಹೋತು. ಅವನ ಮಾತ ಅಲ್ಲಿ ಬಿಟ್ಟವನೆ ಸೀದಾ ಕೆರೆ ಏರಿ ಕಡೀಗ ಹೊಂಟೆ. ಕಾಲು ಕೈ ತಣ್ಣಗಾಗಿದ್ವು ಎದಿಯಾಗ ಹೆದರಿಕಿ ತುಂಬಿಕೊಂಡಿತ್ತು. ಕೋಡಿಸರದಾಗಿನ ದೊಡ್ಡ ಹುಣಸಿಮರದ ಹಿಂದ ಹೋದವನೆ ಪತ್ರ ಬಿಡಿಸಿ ಓದತೊಡಗಿದೆ. 'ಓ, ನಾ ಅಂದ್ಕೊಂಡಿದ್ದೆ'.... ಹುಣಸಿಮರದ ಬುಡಕ್ಕ ಮುಷ್ಠಿಯಿಂದ ಗುದ್ದಿದೆ ಸುಮಸುಮ್ನೆ ಕಣ್ಣಾಗಿಂದ ನೀರು ಕೋಡಿಯಾಗಿ ಹರದಿತ್ತು. ನನ್ನವ್ವ ಭರಮಕ್ಕನ ಕರಿಮುಖ ನೆನಪಾತು, ಅವ್ವನಾ ಮೋಸ ಮಾಡಿದೆ, ವಂಚನೆ ಮಾಡಿದೆ," ಒಬ್ಬನೆ ರೋಧಿಸತೊಡಗಿದೆ. ಬಹಳ ಹೊತ್ತು ಅಲ್ಲೆ ಕುಂತ್ಕೊಂಡು ಯೋಚನೆ ಮಾಡಿದೆ, ಒಂದ ನಿರ್ಧಾರಕ್ಕ ಬಂದವನೆ ಎದ್ದು ಮನಿಕಡೀಗ ಹೊಂಟೆ.

ಶಿರಗೂರಿಗ ಬಂದಾಗ ನನ್ನ ಕನಸುಗಳೆಲ್ಲಾ ನುಚ್ಚುನೂರಾಗಿದ್ವು, ಆಂದೋಲನ ಹುಡುಗರ ದಂಡು ಬಿದ್ದಪ್ಪ ಗೊಂಬಿಗೌಡ ಅವನು ಪ್ರೀತಿಸಿದ ಹುಡುಗಿ ಒಂದ ದಂಡಿಯೊಳಗ ಅವನು ಅವನ ನೌಕರಿ ಮತ್ತೊಂದು ದಂಡಿಯೊಳಗ ನಡುಕ್ಕ ಸಮಾಜದ ಕ್ರೂರ ಮಕಗಳು ರಾಕ್ಷಸನಂಗ ಮುಗಿಲ ಮಟ ಬೆಳಿತಾ ಇದ್ವು.....

ಬಿದ್ದಪ್ಪ ಗೊಂಬಿಗೌಡನ್ನ ಕಟ್ಕೊಂಡವನೆ ಶಿರಗೂರ ತುಂಬ. ಮ್ಯಾನೇಜ್‌ಮೆಂಟ್ ಮೆಂಬರುಗಳ ಮನಿಗಳಿಗೆ ಅಡ್ಡಾಡಿ ಹಲ್ಲಗಿಂಜಿದೆ. ಚೆಂಡಬಗ್ಗಿಸಿ ಗುಲಾಮನಂಗ ನಿಂತ್ಕೊಂಡೆ, ಕೆಲಮಂದಿ ನಾಯಿ ಗದರಿಸೋ ಹಂಗ ಗದರಿಸಿ ಓಡ್ಸಿದ್ರು, ಮತ್ತೆ ಕೆಲವರು ಒಳಗ ವಿಷ ಇದ್ರೂನೂವೆ ಹೊರಗ ಪಾಡಾಗಿ ಮಾತಾಡ್ಸಿ ಹೊರಗ ಹಾಕಿದ್ರು, ಕಮೀಟಿ ಮೀಟಿಂಗ ದಿನ ಸೆಕೆಟ್ರಿ, ಮೆಂಬರು, ಛೇರ್ಮನ್ನರುಗಳು ಮುಲಾಜಿಲ್ದೆ ನನ್ನ ತಗದ ಹಾಕೊ ನಿರ್ಣಯ ತಗೊಂಡೆ ಬಿಟ್ರು. ಯಾರೊಬ್ಬರು ನನ್ನ ಸಮರ್ಥಿಸಲಿಲ್ಲಾ ನಾನು ನಿಂತ ನೆಲ ಕಾಲ ಬುಡಕ ಕುಸದು ಪಾತಾಳಕ ಇಳಿತಿರೋ ಹಂಗಾತು, ಸುಡೋ ಬಿಸಲು ಲೆಕ್ಕಿಸದೆ ದುಡದುದುಡದು ಅವನಪ್ಪನಹೊಟ್ಟಿ ಅನ್ನೋದ ಬೆನ್ನಿಗ ಅಂಟಿಕೊಂಡಿತ್ತು. ಹರದು ಮೈ ಕಾಣೊ ಅರವಿ ಹಾಕೊಂಡಿರೊ ಅವನಪ್ಪ ತಮ್ಮ ತಂಗಿಯರು ಒಮ್ಮೆ ನೆನಪಾದರು ಜೋರಾಗಿ ಕೂಗಬೇಕಂತ ಬಾಯಿ ತಗದ ಹೊಟ್ಟಿಯೊಳಗಿಂದ ಧನಿ ಗಂಟಲಕ್ಕ ಬರಲೇ ಇಲ್ಲಾ. ಆಶಿಗಣ್ಣಿಂದ ಎಲ್ಲರನ್ನು ಒಮ್ಮೆ ನೋಡಿದೆ ಅಪರಾಧಿ ಅಲ್ಲದವನಿಗ ಗಲ್ಲು ಶಿಕ್ಷೆ ಕೊಡೋ ನ್ಯಾಯಾದೀಶರಂಗೆ ತಮ್ಮ ತೀರ್ಪು ಕೊಟ್ಟವರೆ ಎದ್ದ ಹೊಂಟಬಿಟ್ರು. ಪ್ರಭು ನಿರುತ್ತರಿಯಾಗಿ ಅಸಹಾಯಕತೆಯಿಂದ ಕಾಲ ಎಳ್ಕೊಂತ ಸೀದಾ ತಾನಿದ್ದ ರೂಮಿಗ ಹೊಂಟ. ಬಿದ್ದಪ್ಪ ಗೌಡ, ಸಮಾಧಾನ ಮಾಡಿದ್ರು ಏನ ಪ್ರಯೋಜನ ಆಗಲೇ ಇಲ್ಲಾ. ಅಷ್ಟೊತ್ತಿಗಾಗಲೇ ಸುದ್ಧಿ ಇಡಿ ಶಿರಗೂರ ತುಂಬೆಲ್ಲಾ ಹರಡಿತ್ತು. ಪ್ರಭುನ ಸ್ನೇಹಿತ

ಪಟಗಾರ ಹುಡುಕೊಂಡ ಓಡಿ ಬಂದಿದ್ದ, "ಅಯ್ಯ ಹಿಂಗೆಲ್ಲಾ ಆತಂತ ಒಂದಮಾತ ಬಂದ ಹೇಳಬಾರದಿತ್ತ, ಈಗ ಮುಂದೇನ ಮಾಡ್ತಿ." ಕೈ ಕೈ ಹಿಚುಕಿಕೊಂಡ ಪ್ರಬು ಮಾತಾಡಲಿಲ್ಲ, ಬಕ್ಕ ಬರ್ಲೆ ಮಕ್ಕೊಂಡು ಜಂತಿ ಎಣಿಸಾಕತ್ತಿದ್ದೆ. "ಏಳೊ ಮ್ಯಾಲ, ನಮ್ಮ ಹಳೆ ಜಾಗದ ಕಡೀಗ ಅಡ್ಡಾಡಿಬರಾನ ಮನಸ್ಸಿಗ ಸಮಾಧಾನ ಆಗತೈತಿ." ಅವನ ಪ್ರತಿಕ್ರಿಯೆಯನ್ನೂ ಕಾಯದೆ ತಲಿ ಅಡಿಗ ಕೈ ಹಾಕಿದವನೆ ಎಬ್ಬಿಸಿ ಕುಂದ್ರಿಸಿದ. "ನೋಡ ತಮ್ಮ ನಿನ್ನ ಜಾಗದಾಗ ನಾ ಇದ್ರು ಅಷ್ಟೆ. ಅದನ್ನೇ ನಾನು ಯೋಚನೆ ಮಾಡಾಕ ಹತ್ತೀನಿ. ನೀ ಏನ ಯೋಚನೆ ಮಾಡಬ್ಯಾಡ ಸೀದಾ ನನ್ನ ರೂಮಿಗ ನಡಿ, ಆ ಮುದಕಿ ಹತ್ರ ಉಣ್ಣಾಕ ವ್ಯವಸ್ಥೆ ಮಾಡ್ತೀನಿ. ಇಬ್ಬರೂ ಸೇರಿ ಒಂದ ದಾರಿ ಕಂಡ ಹಿಡಿಯನಂತ". ಪರಿಪರಿಯಿಂದ ಸಮಜಾಯಿಸ್ತಿದ್ದ ಪಟಗಾರ. ನಾನಾ ಮಾತ್ರ ಮಾತಾಡದಂಗೆ ಸುಮ್ಮನಿದ್ದೆ.

ಓದೋದು ಬರೆಯೋದು ಏನು ಇಲ್ಲದಂಗೆ ದಿನ ಬರಿ ಉಣ್ಣೋದು ಅಡ್ಡಾಡೋದು ನನ್ನ ಖಯಾಲಿಯೊಳಗೆ ನಾನಿರೋದು ಮಾಡತೊಡಗಿದೆ. ಬಹಳಂದ್ರ ನಾಕ ಮಾತು ಪಟಗಾರನಕೂಡ ಮಾತಾಡ್ತಿದ್ದ ಅಟೇಯ, ಬಿದ್ದಪ್ಪ ಗೊಂಬಿಗೌಡ, ಡೊಣ್ಣಾಡ ಉಳಿದ ಹುಡ್ರು ಆವಾಗೋಮ್ಮೆ ಈಗೋಮ್ಮೆ ಬಂದ ಬಂದ ಹೊಕ್ಕಿದ್ರು ಅಷ್ಟೆ ಮಲ್ಲಿಕಾ ಕಾಣದೆ ತಿಂಗಳಗಳೇ ಆಗಿದ್ದು. ಬುದವಾರದ ಸಂತಿಯೊಳಗ ಸುಕಾಸುಮ್ನೆ ಬಿಡಾಡಿದನ ಅಡ್ಡಾಡೊಹಂಗ ಅಡ್ಡಾಡ್ತಿದ್ದೆ ಆಕಿ ಏನಾರ ಬಂದಾಳೇನಂತ. ಸುದ್ದಿ ಗೊತ್ತಾಗಿದ್ದೆ ಡಾಕ್ಟರ್ ಆಕಿ ಮನಿ ಬಿಟ್ಟ ಹೊರಗ ಹೋಗದಂಗ ಬಂದೋ ಬಸ್ತ ಮಾಡಿದ್ದ. ಪ್ರಭುಗ ಏನ ಮಾಡಬೇಕಂತ ತಿಳಿಯದೆ ಮೌನದಿಂದ್ಲೆ ಎಲ್ಲಾನು ನುಂಗಿಕೊಂಡ ನಗಾಕ ಪ್ರಯತ್ನಿಸಿದ್ದ. ಪಟಗಾರಮಾತ್ರ ಪ್ರಭುನ ಜನಪ್ರಿಯತೆಗೆ ಸರಿಯಾದ ಒಂದ ಬೆಲೆ ತಗೊಬೇಕಂದು ಚುನಾವಣೆ ಅಭ್ಯರ್ಥಿಯಾಗಿ ಹೆಸರ ಕೊಡಾಕ ಅರ್ಜಿಗಳನ್ನ ತಗೊಂಡ ಬಂದೇ ಬಿಟ್ಟ. ನೋಡಯ್ಯ ಇಡೀ ಶಿರಗೂರ ಹುಡುಗರೆ, ಹಿಂದ ಅದಾರ, ನೀನೆ ಎಲ್ಲ ಸರಿಯಾಗಿ ಲೆಕ್ಕ ಹಾಕಿ ನೋಡು ನಮ್ಮ ಓಟುಗಳು ಹತ್ತಸಾವಿರ ಅದಾವ, ಇಡಿ ಶಿರಗೂರ ತಾಲೂಕಿಗ ನೀ ಪರಿಚಯ ಆದಿ, ಪ್ರತಿ ಹಳ್ಳಿಯೊಳಗ ಹತ್ತ ಪರ್ಸಂಟ್ ಓಟು ಹಾಕಿದ್ರು ಗೆದ್ದ ಬರ್ತಿಯಾ ಆಮ್ಯಾಕ ನೀ ಎಂ.ಎಲ್.ಎ." ರಾಜಧಾನಿ ಎಕ್ಸ್‌ಪ್ರೆಸ್‌ನಂಗೆ ಬಿಡ್ತಾ‌ಇದ್ದ. ಪಟಗಾರನ ಜೋಕ್ಸ್‌ಗೆ ಬಿದ್ದಬಿದ್ದನಕ್ಕಿದ್ದೆ, ಆದ್ರ ಪಟಗಾರ ಮಾತ್ರ ಸೀರಿಯಸ್ ಆಗೆ ಹೇಳಿದ್ದ.

ಚುನಾವಣೆ ಸುಳಿಯಲ್ಲಿ

ಕೈಯಾಗ ಕಾಸಿಲ್ಲ ಮೈಯಾಗ ಉಸರಿಲ್ಲದ ಪರಿಸ್ಥಿತಿಯೊಳಗ ಪಟಗಾರ ಪಟ್ಟಹಿಡದು ಎಲೆಕ್ಷನ್‌ಗೆ ನಾಮಿನೇಷನ್ ಕೊಡಿಸಿಯೇ ಬಿಟ್ಟ. ಇಪ್ಪತ್ತಮಂದಿ ಕೆಲ್ಸಕ ಬರದ ಹುಡ್ರು ಅವನ ಕುಡಸೋ ಒಂದ ಕಪ್ಪ ಖಾಲಿ ಚಹಾಕಂತ ಕಾದನಿಂತಿದ್ರು. ಮಾಜಿ ಎಂ.ಎಲ್.ಎ. ಹಾಲಿ ಎಂ.ಎಲ್.ಎ. ಗಳ ಹಣಾಹಣಿ ಸಾವಿರ ಎರಡಸಾವಿರ ಚೇಲಾಗಳ ಗುಂಪಿನ್ಯಾಗ ಬಂದು ಹೆಸರ ನೋಂದಾಯಿಸಿ ಹೊಂಟಿದ್ದ ಹಾಲಿ ಎಂ.ಎಲ್.ಎ. ಮುಂದ ಇಲಿಮರಿಯಂತೆ ನಾವು ಹೋಗಿ ನೋಂದಾಯಿಸಿದಾಗ ದೊಡ್ಡ ಅವಮಾನ ಆಗಿತ್ತು. ಹಿಂದ ಮುಂದ ದಿಕ್ಕಿಲ್ಲದೆ ದಿಮಾಕ ಮಾಡಾಕ ಹೊಂಟಿರೋ ನನ್ನ ಪಡಿಪಾಟಲು ಕಂಡು ಕುಬಸಣ್ಣಿ, ಸಂಗಣ್ಣಿ, ಪ್ರೊ. ಗಟ್ಟಿಮಠ ಒಳಗೊಳಗೆ ನಕ್ಕು ಇಡಿ ಶಿರಗೂರಿಗೆ ಸುದ್ಧಿ ಮಾಡಿದ್ರು. ಪ್ರಭು ಹೆಸರ ನೋಂದಾಯಿಸಿ ತಣ್ಣಗಖೋಲಿ ಸೇರಿದ ಚಹಕುಡಿಯಾಕ, ಸಂಜಿ ಮುಂದ ಸಾರಾಯಿ ಕುಡಿಯಾಕ ಬಿಟ್ಟಿ ಊಟ ಸಿಕ್ಕಿತಂತ ಕುತ್ಕೊಂಡೆ ಕಾಯಿತಿದ್ದ ಹುಡ್ರನ್ನ ಸಮಜಾಯಿಸಿ ಮನಿಗ ಕಳಸೋದು ದೊಡ್ಡ ತಲಿಬ್ಯಾನಿ ಆಗಿತ್ತು. ಪಟಗಾರ ಬಂದಾಗ, ಮತ್ತೊಂದು ಹೊಸ ಯೋಚನೆ ತಗೊಂಡ ಬಂದಿದ್ದ. "ನೀ ಸುಮ್ಕಿರಯ್ಯ, ನಿನಗ ನಾಳೆ ಬೆಳಗಾಗೋದ್ರಾಗ ದೊಡ್ಡ ಬೇಡಿಕೆ ಬರತ್ತೈತಿ ಯಾವನಾದ್ರು ಒಬ್ಬಾನು, ತನಗ ಸಪೋರ್ಟ್ ಮಾಡ್ರಿ ಅಂತ ಬರ್ತಾನ, ನೀ ಎಷ್ಟು ಕೇಳ್ತೀಯೋ ಅಷ್ಟು ಕೊಟ್ಟು ವಾಪಾಸ ತಗಸ್ತಾನ". ಅಂದವನೆ ಪೆನ್ನು ಹಾಳಿ ತಗೊಂಡ ಲೆಕ್ಕ ಹಾಕತೊಡಗಿದ. ಅವನ ಮಾತ ಅರ್ಥ ಆಗದೆ ಅವನನ್ನೆ ನೋಡಿದ, "ಏನೋ ಪಟಾಗರ ಹೊಸ ವಿಚಾರ ತಗೊಂಡ ಬಂದಿಯಲ್ಲ, ಮಹರಾಯ ನಿನ್ನ ಮಾತಕೇಳಿ ಹಿಂಗತಿಂದ ಮಂಗನಾದೇ ನಾನು, ಮದ್ಲೆ ನಾನು ಬಡಕೊಂಡೆ ನನ್ನತಾವ ರೊಕ್ಕ ಇಲ್ಲಾ ಬ್ಯಾಡಂತ ಎಲೆಕ್ಷನ್ ಅಂದ್ರ ಹುಡಗಾಟ ಅಂದ್ಕೊಂಡಗೈತಿ, ನಾಳೆ ಯಾವಾನೂ ಮುಂದೆ ಬರ್ಲಿಲ್ಲಾಂತಿಟ್ಕೊ ಅವಾಗೇನ ಮಾಡ್ತಿ ಸುಕಾಸುಮ್ಮನೆ ನನ್ನ ಬಲಿಪಶು ಮಾಡ್ದೆ ನೋಡ". ಬೇಜಾರಿಂದ ಹೊರಗ ನೋಡಿದೆ. "ನಿನಗೆಲ್ಲಾ ಅರ್ಥ ಆಗೋದಿಲ್ಲ. ನಿನ್ನ ವರ್ಚಸ್ಸಿಗ ಒಂದ ಹತ್ತ ಮಂದಿನಾರು ಹಿಂದ ಬೀಳ್ತಾರ ಗಪ್ಪಾಗು, ಆ ಹುಡುಗರಿಗ ಟೀ ಕುಡ್ಸಿ ಮನೀಗ ಕಳಸಹೋಗು". ಇನ್ನೂರುಪಾಯಿ ತಗದಕೊಟ್ಟ, ಅವನ ಹಾದಿಯನ್ನ ಕಾಯಿತಿರೋ ಹಂಗೆ ಹುಡ್ರೆಲ್ಲಾ ಜೈ ಕರ್ನಾಟಕ ಹೋಟೆಲಿಗ ದಾಳಿ ಹಾಕಿದ್ರು. "ಥು ಹಾಳಮನುಷ್ಯ, ಅಲ್ಲಾ ಚೂರುಪಾರು ಕಲ್ತಿರೊ ಈ ಹುಡ್ರೆ ಹಿಂಗ ಚಾ ಕಂಡಿಲ್ಲೇನೋ ಅನ್ನೋರ ಹಂಗ ಪುಕ್ಕಟ್ಟೆ ಚಾ ಕುಡಿಯಾಕ ಈ ಪರಿ ಬಡದಾಡ್ತಾರ ಇನ್ನ ವಿದ್ಯೆ ಕಲಿಯದ ಹಳ್ಳಿಮಂದಿ ದುಡ್ಡಿಗ ಓಟ ಮಾರೋದ್ರಾಗ ತಪ್ಪೇನೈತಿ" ಅಂದ್ಕೊಂಡವನೆ ಎಲ್ಲರಿಗೂ ಖಾಲಿ ಚಹಾ ಹೇಳಿ ಬಿಲ್ ತಗೊಂಡ ವಾಪಸಾದೆ. ಡೊಣ್ಣ್ಯಾಡ, ನಲ್ವತ್ತಪ್ಪ ರಾತ್ರಿ ಬಾಕಿಗಾಗಿ ಬೆನ್ನ ಬಿಡದಂಗ ಹಿಂದಿಂದ ಅಡ್ಡಾಡ ತೊಡಗಿದ್ರು. ಪ್ರಭುಗ ಅರ್ಥ

ಆಗಿದ್ವೆ ಐದ್ನೆದ ರೂಪಾಯಿ ಕೊಟ್ಟ, ಸಾಗಹಾಕಿದವನೆ ಪಟಗಾರನ ರೂಮಿಗ ಹೋಗೋಸಂದಿ ದಾಟುತ್ತಿದ್ದ ಯಾರೋ 'ಸರ್' ಅಂತ ಕೂಗಿದಂಗಾಗಿ ಹಿಂದಕ್ಕ ತಿರುಗಿದ. ಚಾಮಿ, ಯಂಕಮ್ಮ, ನಿಂತಿದ್ರು. "ಆರಾಮದಿರೇನ್ರಿ ಸರ್, ಕಾಲೇಜಿಗ ಬರೋದನ್ನ ಬಿಟ್ರಿ, ಅಪರೂಪಕ್ಕಾದ್ರು, ಕಂಡ್ರಲ್ಲಾ". ಇಬ್ಬರ ಧನಿಯೊಳಗ ಕಳಕಳಿ ಇತ್ತು. "ಹೂಂ ಕಣ್ರವ್ವ ಪಾಡದೀನಿ". ಹೆಚ್ಚು ಮಾತಾಡಿದ್ರ ಮತ್ಯರಾದ್ರು ನೋಡಿ ಈ ಹುಡುಗಿಯರಿಗ ತ್ರಾಸಾದೀತಂತ ಮಾರಿಕೆಳಗ ಹಾಕಿಕೊಂಡವನೆ ಹೊಂಟಬಿಟ್ಟ. ಏನೇನೊ ಹೇಳಬೇಕಂತಿದ್ದ ಚಾಮಿ, ಯಂಕಮ್ಮ ಮೇಷ್ಟ್ರ ಸ್ಥಿತಿ ಅರ್ಥ ಮಾಡ್ಕೊಂಡವರೇ ಹೊಂಟಬಿಟ್ರು.

ನಾಮಪತ್ರ ವಾಪಾಸ ತಗೊಳದಕ್ಕ ಕೊನೆ ದಿನ ಬಂದ್ರೂ ಯಾವ ದೊಡ್ಡ ಪಾರ್ಟಿ ಜನರು ವಾಪಾಸ ತಕ್ಕೊಳ್ಳೊ ಒತ್ತಾಯ ಮಾಡಕ ಬರ್ಲೆ ಇಲ್ಲ. ಪ್ರಬು ಯಾರಿಗೂ ಮಕ ತೋರಿಸಿದಂಗಾಗಿದ್ದ. ಅನುಮಾನದಿಂದ್ಲೆ ಪಟಗಾರನ ಮಕನೋಡಿದ. ಅಂವ ನಿರ್ಭಿಡೆ ಯಿಂದ, "ಅದದ್ದ ಆಗ್ಲಿ ತಮ್ಮ ನೀ ಪ್ರಚಾರಕ ಇಳಿ", ಮುಲಾಜ ಕಾಯದೆ ಏನೇನೊ ಹೇಳಿದ. ಮಳಿಸುರದ ನಿಂತಂಗ ಅವನ ಮಾತನಿಂತ ಮ್ಯಾಲ ಸುರುಹಚ್ಕೊಂಡ. "ಅವತ್ತೆ ನಾ ಬಡಕೊಂಡೆ ಬ್ಯಾಡಪ್ಪ ಯಾಕಬೇಕ ಎಲಕ್ಷನ್ ಸವಾಸ ಅಂತ ನನ ಮಾತಕೇಳ್ದೆ, ಹಂಗದುಡ್ಡು ಬರತ್ತೈತಿ, ಹಿಂಗ ಬರತೈತಿ ಅಂದೆ ಇವತ್ತಿನ ಮಟ ಯಾವನಾರ ಹಾದನೇನು? ಸುಳ್ಳೆ ನನ್ನ ಜೀವ ಹಿಂಡೋ ವಿಚಾರ ಮಾಡ್ವೆ ನೋಡು".

"ಪ್ರಚಾರ ಮಾಡಂತಿ, ಏನ ಹೇಳ್ಲಿ ನಿನಗ ಹತ್ತ ಕಾರಬೇಕು, ಪಾಂಪ್ಲೆಟ್ಸ್ ಬೇಕು ಮೈಕ್ ಬೇಕು. ಅಡ್ಡಾಡಕ ಮಂದಿ ಬೇಕು ಖರ್ಚಿಗ ದುಡ್ಡಬೇಕು. ಬರಿಬಾಯಿಂದ ಪ್ರಚಾರ ಮಾಡಂದ್ರ ಆದೀತೇನು", ದೊಡ್ಡ ಪಟ್ಟಿಯನ್ನೆ ಒಪ್ಪಿಸಿದ. ಎಲ್ಲಾ ಕೇಳಿದ ಪಟಗಾರ "ನಾನ ವ್ಯವಸ್ಥೆ ಮಾಡ್ತೀನಿ ಕಣಯ್ಯ ನೀ ಹೆದರಬ್ಯಾಡ ಅವರಿವರ ಕಾಲ ಕೈ ಕಟ್ಟಿ ನಾ ರೊಕ್ಕ ತರ್ತಿನಿ. ನಾಳೆ ಮುಂಜಾನೆ ನೀ ಆ ರುದ್ರೇಶಿ ಟೆಂಪೂ ತಗೊಂಡ ಸುರಹಚ್ಕೊ". ಅದಂವನೆ ಹುಡ್ರ ಹತ್ರಹೋಗಿ ಪ್ರಚಾರ ಸುರುಮಾಡಾಕ ಹೇಳಿದ. ರುದ್ರೇಶಿ ಟೆಂಪೂಗೆ ಪಕ್ಕೀರೇಶಿ ಬರದ ಚಿತ್ರ ಅಂಟಿಸಿದ್ರು. ಹುಸೇನ ಸಾಬಿಯ ಹಳೆ ಸೌಂಡ್ ಸಿಸ್ಟಂ ಕಟ್ಟಿದ್ರು ಬೋರ್‌ವೆಲ್ ಗುರ್ತಿನಾಗ ಪಾಂಪ್ಲೆಟ್ ಅಂಟಿಸಿ ಹನ್ಮಪ್ಪನ ಗುಡಿಮುಂದ ನಿಲ್ಲಿಸಿ ಕಾಯಿ ಹೊಡದು "ಮಾನ್ಯ ಮತದಾರರಲ್ಲಿ ಕಳಕಳಿ ಪ್ರಾರ್ಥನೆ. ಹೊಸ ಹುರುಪಿನಿಂದ ಹುಡ್ರು ಒದರಾಡಿದ್ದೆ ಒದರಾಡಿದ್ದು. ಪ್ರಭು ಹೆಸರ ಕೇಳಿದ ಶಿರಗೂರ ಮಂದಿ, ಮಾರಿ ಮುಚ್ಕೊಂಡ ನಗತೊಡಗಿದ್ರು. ಮಾಡೋದ ಮಾಡಿ ಕೆಲ್ಸ ಕಳ್ಕೊಂಡಿದ್ದಲ್ದೆ ಎಲೆಕ್ಷನ್ ಮಾಡಾಕ ಹತ್ಯಾನ ಮಗ ಅದೇನ ಕಿಸಿತಾನೋ ನೋಡೆ ಬಿಡಾನಂತ ಅವರಿವರತಾವ ಹೇಳ್ತಾ ತಿರಗಾಡ ತೊಡಗಿದ್ರು. ಪ್ರೊ. ಗಟ್ಟಿಮಠ, ಸಂಗಣ್ಣ ಕುಬಸಣ್ಣ ಮಾಸ್ತರ ಪ್ರಭುನ ಧೈರ್ಯ ಮೆಚ್ಚಿಕೊಂಡವರೆ, ಈ ಹುಡಗಹಿಂಗ ತಲಿಕೆಡಿಸಿ ಕೊಳ್ಳಾಕ ಅವನ ಹಿಂದ ಯಾರ್ಯಾರ ಕೈವಾಡ ಐತಂತೇಳಿ ತಿಳಿಯಾಕ ಅವನ ಖಾಸ ಮನುಷ್ಯ ಬಂಡುನನ್ನ ಅವನಹಿಂದ ಪ್ರಚಾರಕ್ಕ ನೇಮಿಸಿದ್ರು. ಹಗಲಹನೊಂದತಾಸು, ಹುಡ್ರನ್ನೆ ಪ್ರಭುನ್ನ ಪೀಡಿಸಿತೊಡಗಿದ. "ಸಾ, ನಿಮಗ ಇಲೆಕ್ಷನ್ ನಿಲ್ಲಾಕ ಯಾರ ಸಪೋರ್ಟ ಮಾಡಾಕ ಹತ್ಯಾರ ಆಟಹೇಳ್ರಿ". ಒಂದೇ ಸಮನೆ

ಪೀಡಿಸತೊಡಗಿದ. ಕುಬಸಣ್ಣ ಜೀವೂರ ತಾಂಡದಿಂದ ನೂರಮಂದಿ ಕಲಾವಿದರನ್ನ ಎಂ.ಎಲ್.ಎ. ತಡದ ಬಂದಿದ್ಕ ಅವನ ಎದ್ರಿಗೆ ಕಾರ್ಯಕ್ರಮ ಬಿಟ್ಟು ವಾಪಾಸ ಕರ್‍ಕೊಂಡ ಬಂದವನೆ ಹೀರೊ ಅನಿಸಿಕೊಂಡಿದ್ದು. ಆ ಹೆದರಿಕೆ ಎಂ.ಎಲ್.ಎ. ಗಿದ್ದಿದ್ದರಿಂದ ಕುಬಸಣ್ಣ ಈ ಸಲನಾರು ಅವನ್ನ ಸೋಲಿಸೊ ವಿಚಾರದಾಗಿದ್ದ. ಬಂಡು ಅವರ ಪ್ರತಿಹಂತದ ಬೆಳವಣಿಗೆ ಗಮನಿಸ್ತಿರೋದನ್ನ ಯಾರು ತಿಳಿಯೋ ಪ್ರಯತ್ನ ಮಾಡ್ಲಿಲ್ಲಾ. ಟೆಂಪೊ ಪಕ್ಕಿರೇಶಿ ಇದ್ದಕ್ಕಿದ್ದಂಗ ಜೀವೂರ ತಾಂಡದಿಂದ ರೊಳ್ಳಿ ತಗದ "ಸಾ, ನನಟೆಂಪೊ ಸರಿ ಇಲ್ಲ, ಬ್ಯಾರೆ ಗಾಡಿನಾನೆ ಮಾಡಿಕೊಡ್ತೀನಿ ದಯಮಾಡಿ ನನ್ನ ಸ್ಥಿತಿ ಅರ್ಥ ಮಾಡ್ಕೊಳ್ರಿಸಾ" ಅಂಗಲಾಚಿದ. ಹುಡ್ರೆಲ್ಲಾ ದುಂಡಗ ಸೇರಿ ಯೋಚ್ನೆ ಮಾಡಿದ್ರು ಜೀವೂರ ತಾಂಡದ ಮೀಸಿ ಮತ್ಯಾ ನಾಯ್ಕನದೆ ಕಿತಬಿ, ಯಾಕಂದ್ರ ಅಂವ ಎಂ.ಎಲ್.ಎ. ಚಮಚಾ, ಯಾವಾಗ ನೋಡಿದ್ರು ಅವನ ಹಿಂದಿಂದ ಮಸರೈಜ್ ಪಂಚಿ ಉಟ್ಕೊಂಡು ಕೈಯಾಗ ಚುಂಗ್ನ ಹಿಡ್ಕೊಂಡ ತಲಿಂದ ಮಕದ ಮ್ಯಾಲ ಇಳಿಯೋ ಹಂಗ ಎಣ್ಣೆ ಹಚ್ಕೊಂಡೆ ಅಡ್ಯಾಡ್ತಿದ್ದ. ಅವನೆ ಬಂದು ಪಕ್ಕಿರೇಶಿನ ಮರಿಗಕರದು ಏನೋ ಹೆದರ್‍ಕೊಂಡ ಹಿಂಗ ಮಾಡಿದ ಅಂತ ಹುಡ್ರೆಲ್ಲಾ ಸಿಟ್ಟ ಮಾಡ್ಕೊಂಡವರೆ ಅವನನ್ನ ತಡವೋ ಯೋಚನೆ ಮಾಡಿದ್ರು. ಪ್ರಭುನೆ ಸಮಧಾನ ಮಾಡಿದ.

ಯಾವಾಗ ಬಾಗಲಕಿತ್ಕೊಂಡ ಬೀಳತೈತೊ, ಯಾವಾಗ ಇಂಜನೆ ಉದರಿತೆಳಗ ಬಿದ್ದ ಟೆಂಪೊ ನಿಲ್ಲತೈತೊ ಅನ್ನೊ ಪಾಟೀಲನ ಟೆಂಪೊ ಹತ್ತಿ ಸಂಪೂರ, ಸಾಮೂರು, ಚಂಪಾಪುರ ಕಂಡಬಂಡೆ, ಕಡೇತಾಂಡ, ಖಾಸಿಂಖಂಡ, ಹಳ್ಳಿಗಳಿಗ ಅಡ್ಡಾಡಿದ್ರು, ಎಲ್ಲಿಗ ಹೋದ್ರು ಮಂದಿ ಹಿಡ್ಕಂಡ ತಿನ್ನಾಕೆ ಬರ್ತಿದ್ರು, ಎಲೆಕ್ಷನ್ ಅನ್ನೋದು ಬಡವರ ಪಾಲಿಗ ಬರೋ ಐದ ವರ್ಷದ ಚೌಡಿ ಹಬ್ಬದಂಗಿತ್ತು. ಎಷ್ಟಸಿಗತೈತೊ ಅಷ್ಟನ್ನ ಹಿಡ್ಕೊಬೇಕನ್ನೋ ವಿಚಾರ ಪ್ರತಿಯೊಬ್ಬರದಾಗಿತ್ತು. ಸಾರಾಯಿ ಕುಡಿಯಾಕ, ದ್ವಾಸಿ ತಿನ್ನಾಕ, ಜ್ವಾಳ ಖರೀಧಿ ಮಾಡಾಕ, ಆಸ್ಪತ್ರಿಗ, ಗುಡಿಗಸುಣ್ಣ ಬಳಿಯಾಕ, ಬಿದ್ದಗ್ವಾಡಿ ಕಟ್ಟಿಸಾಕ, ರಸ್ತೆ ರಿಪೇರಿಗ ಬಾಯಿಗ ಬಂದಂಗ ಕೇಳ್ತಿದ್ರು. ಸತ್ತದನದ ಮೇಲಿಂದ ಮಾಂಸ ಎಬ್ಬಿ ತಿನ್ನೋ ರಣಹದ್ದಿನಂಗ ಮಂದಿ ಮೂರನ್ನು ಬಿಟ್ಟು ಕೈಚಾಚಿ ಬಿಕ್ಷೆ ಬೇಡೋರಗತಿ ಬೇಡ್ತಿದ್ರು. ಮೇಷ್ಟ್ರ ಹಿಂದ ತಿರಗಾಡೋದಕ ಉಪವಾಸ ವನವಾಸ ಇದ್ದು ಎಲ್ಲೋ ಖಾರ ಇಲ್ಲದ ಚುರುಮುರಿ ತಿಂದು ನೀರ ಕುಡಿದು ಸುತ್ತತಿದ್ದ ಹುಡುಗರ ಹೊಸದೊಂದು ವಿಚಿತ್ರ ಲೋಕದ ಅನುಭವವಾಗಿತ್ತು.

ಹೊತ್ತ ನೆತ್ತಿಗ ಬಂದಿತ್ತು. ತರವಿನಕೊಪ್ಪಲ ತಾಂಡದಾಗ ಕಷ್ಟಪಟ್ಟ ಮಂದಿಗ ತಿಳಿಸಿ ಸೇವಾಭಾಯನ ಗುಡಿಗ ಬರಾಕ ಹೇಳಿ ಬಂದಿದ್ರು, ಇದ್ದಬಿದ್ದ ಮಂದಿ ಕಿತ್ತಬಂದಿತ್ತು. ಪ್ರಭು ಹುರುಪಿನಿಂದ್ಲೆ ಭಾಷಣ ಮಾಡಿದ್ದ. ಅವನ ಮಾತ ಕೇಳಾಕ ಯಾರ ತಯಾರಿರಲಿಲ್ಲ. ನಡಕ್ಕ ಬಾಯಿ ಹಾಕಿ ಒಬ್ಬ ಹೇಳಿದ. "ಅದೆಲ್ಲಾ ಇರ್ಲಿ ಈಗ ಎಟಕೊಡ್ತೀರಿ ಹೇಳ್ರಿ ಅಂದ. ಹುಡ್ರು ಒಬ್ಬರ ಮಕ ಒಬ್ಬರ ನೋಡಕೊಂಡ್ರು. ನಮಗ ಚುರಮುರಿಗ ರೊಕ್ಕಿಲ್ದೆ ಉಪವಾಸ ತಿರಗಾಡಾಕ ಹತ್ತೀವಿ. ಅಂತದ್ರಾಗ ದುಡದ ಕೊಟ್ಟೋರಹಂಗ ಮಾತಾಡಾಕ ಹತ್ಯಾರ" ಅಂತ ಅಂದ ಬಿಟ್ರು, ಅದನ್ನ ಕೇಳಿಸ್ಕೊಂಡ ತಾಂಡಾದವನೊಬ್ಬ, "ಯಾಕ್ರಲೇ ಹಂಗೈತಿ

ಮೈಯಾಗ, ಓಟಕೊಡೋದು ಹಂಗೆ ಪುಗಸಟ್ಟೆ ಅಂದ್ಕೊಂಡ್ರೇನು ನಾಳೆ ಗೆದ್ರ ಅಂವ ದುಡಿತಾನ ನಮಗೇನಾರ ತಂದಸುರಿತಾನೇನು ತಾಂಡ ಬಿಡೋದ ಜಡ ಆದೀತು." ಅಂದವನೆ ತೆಕ್ಕ ಮರಿಬಿದ್ದ ಬಿಟ್ಟ. ತಾಂಡದ ಮಂದಿ ಹೋ... ಅಂತ ಹೊರಿಯಾನ ಹೊಳ ಕಟಗಿ ಎಳ್ಕೊಂಡಿದ್ದೆ ಓಡಿ ಬಂದ್ರು. ಪ್ರಬು ಓಡಿಬಂದವನೆ ತಾಂಡಾದ ಮಂದಿ ಹತ್ರ ಕ್ಷಮೆ ಕೇಳಿದ ಅದನ್ನ ಯಾರು ಒಪ್ಪಾಕ ತಯಾರಿಲ್ಲ "ಅಂವ ಹ್ಯಾಂಗಂದ ಹಿಡಿರಲೆ ಆ ಮಗನ್ನ" ಯಾವನೊ ಅಂದ "ಚಾಪಾಣಿಗಾರ ಆಟರೊಕ್ಕಕೊಡ್ರಿ ನಾ ಅಲಗಪ್ ಮಾಡಿಸ್ತೀನಿ" ಅಂತ ಮತ್ತೊಬ್ಬ ಹೇಳಿದ. ದಾರಿನೆ ಕಾಣಲಿಲ್ಲ. ಟೆಂಪೊ ಸುತ್ತ ಕಲ್ಲ ಹಿಡ್ಕೊಂಡ ನಿಂತ್ರು. ಪರಿಸ್ಥಿತಿ ಸೂಕ್ಷ್ಮತೆ ಅರ್ಥ ಮಾಡ್ಕೊಂಡಿದ್ದೆ. ಊಟಕಂತ ಇಟ್ಟಿದ್ದ ರೊಕ್ಕದಾಗಿಂದ ತಾಂಡದ ನಾಯಕನಿಗೆ ಐವತ್ತರದೊಂದ ನೋಟ ಕೊಟ್ಟೆ. ನಾಯಕ ಮುಂದೆ ಬಂದವನೆ "ಎಯ್ ನಡಿರಲೆ ಹಿಂದಕ, ಯಾರಂತ ತಿಳದೀರಿ, ಮಾಸ್ತರ ಇಡಿ ಶಿರಗೂರಕ್ಕ ಗೊತ್ತು. ಆಟ ಹಚ್ಚಿರಿ ನಾಳೆ ಜಡ ಆದೀತು ಬಿಡ್ರಿ ಅವರನ್ನ ಹೋಗಾಕ," ಒಂದ ಮಾತಂದ. ಜನ ದಾರಿಬಿಟ್ಟು ತಾಂಡದೊಳಗ ಹೊಂಟಹೋದ್ರು. ಪ್ರಭು ಬಾಯಿಬಿಟ್ಕಂಡು ನೋಡ್ತಿದ್ದ. ಡೊಣ್ವಾಡ ಗೌಡನ ಹತ್ರ "ಸರ್ ಮತ್ತೇನಾರ" ಅನುಮಾನಿಸಿದ ಸತ್ನೋ ಬಿದ್ನೊ ಅಂದವನೆ ಟೆಂಪೊಹತ್ತಿದೆ. ಪಾಟೀಲ ತನಗೇನು ಆಗೋದಿಲ್ಲ ಅನ್ನೊಹಂಗೆ ಸುಮ್ನೆ ನಿಂತಿದ್ದ, ಮದ್ಲೆ ಜೀರ್ಣಾವಸ್ಥೆಯೊಳಗಿರೊ ಟೆಂಪೊಗ ಯಾರು ಕಲ್ಲ ಬಿಸಾಡದಿದ್ದಕ್ಕ ಬಹಳ ನಿರಾಶೆಯಾತು, ಬೇಕಂತ್ಲೆ ನಿಧಾನಕ ಚಾಲು ಮಾಡಿದ. ಆದ್ರ ಸ್ವಯಂ ಚಾಲನೆ ಆಗೋದು ಕಳ್ಕೊಂಡಿದ್ದ ಟೆಂಪೊ ಗುರ್ ಗುಸ್ ಹಳೇ ಕಾಲ್ದ ಉಗಿಬಂಡಿ ಹಂಗ ಸದ್ದ ಮಾಡಿ. "ತಳ್ರಲೇ ನಿಮ್ಮಾಪ್ನ " ಅಂತ ಒದರಿ ಹೇಳ್ದಂಗಿತ್ತು. ಪ್ರಬು ಗಡಾನೆ ಹುಡ್ರನ್ನ ಇಳಿಸಿದ. ಅರ್ಧ ಕಿಲೋಮೀಟರ್ ದೂರ ತಳ್ಳಿದ ಸಿಕ್ಕಂ ಪ್ಯಾಕ್ಟರಿ ಹೋಗಿ ಹೊಂಡ್ನೊ ಹಂಗ ಹೊಂಡಸ್ತಾ ಚಾಲು ಆತು.

ಪರಿಸ್ಥಿತಿ ಹದಗೆಟ್ಟಿತ್ತು. ಹುಡ್ರ ಸಂಖ್ಯೆ ಅವನ ಹಿಂದ ಬರೋದ ಕಮ್ಮಿಯಾಗಿತ್ತು. ಆದ್ರ ಜೀವೂರತಾಂಡದ ಜತ್ತನಾಯ್ಕ, ಜುಮ್ಮನಾಯ್ಕ, ಪೀಟೂ, ಸೆಣಬ, ಸಂಪಂಗಿ ಮಾತ್ರ, "ನೀ ಏನ್ ಹೆದರಬೇಡ ಸಾ, ನಾವದೀವಿ ಮುಂದನುಗ್ಗು" ಅಂತಂದ ಧೈರ್ಯ ಕೊಟ್ರು. ಜತ್ತನಾಯ್ಕ ಜೂವೂರ ತಾಂಡದ ಪಂಚಾತಿ ಮೆಂಬರು ಅಂವಗೂ ಮೀಸಿ ಮತ್ಯಾಗೂ ಆಕ್ಕಿರಲಿಲ್ಲ. ಜತ್ತನಾಯ್ಕ ಜೂವೂರಾಗೆ ಫೇಮಸ್ ಸಾಲಿ ಸೊಸೈಟಿ ತಗದಿದ್ದ ಚಂಪಗ ಸತ್ತಮ್ಯಾಲ ಅವನ ಹೆಣ್ತಿ ಸಕರಿನ ಇಟ್ಕೊಂಡಿದ್ದ, ಆದ್ರೂ ತಾಂಡದಾಗ ತಿಳವಳಿಕೆ ಇರೊ ಹುಡ್ರೆಲ್ಲಾ ಜತ್ತಾನ ಬೆಂಬಲಿಸಿದ್ರು, ಯಾಕಂದ್ರ ಜತ್ತಾ ಸಂಪನ್ನ, ಎಲ್ರಿಗೂ ಪಸಂದಾಗೆ ಮಾತಾಡಿಸ್ತಿದ್ದ ಮೀಸಿಹಂಗ ಅಕ್ಕ ತಂಗಿಯರ್ನ ಎಂ.ಎಲ್.ಎ. ಗೆ ಆಡು ಇಡ್ತಿರಲಿಲ್ಲಾ, ಮತ್ತ ತಾಂಡದ ಬಗ್ಗೆ ಚೂರಕಾಳಜಿ ಇತ್ತು ಅದಕ್ಕಂತ್ಲೆ ಹುಡ್ರು ಅವನ ಮಾತನ್ನ ತಗದ ಹಾಕ್ತಿರಲಿಲ್ಲ. ಮೀಸಿ, ಯಾವಾಗ್ಲೊ ಸಣ್ಣ ಸಾಲಿಮಾಸ್ತರ ಆಗಿ ರಿಟಾಯ್ಡ್ ಆಗಿ ಬಂದಿರೋ ಪಾಂಡು ಮಾಸ್ತರ ಶಿರಗೂರ ಕಾಲೇಜಿನ ಪಿವನ್ ಪೆಮ್ವಾನಾಯ್ಕ ಮಾತ್ರ ಜತ್ತನಾಯ್ಕಗೆ ಒಂದಗತಿ ಕಾಣಿಸಾಕ ಎಂ.ಎಲ್.ಎ. ತಾವ ಚಾಡಿ ಹೇಳಾಕ ಹೊಗಿದ್ರು. ಜತ್ತನಾಯ್ಕ ಮಾತ್ರ ಜಪ್ ಅಂದಿರಲಿಲ್ಲ. ಅಂತ ಜತ್ತನಾಯ್ಕ ಪ್ರಭುನ ಹಿಂದ ಬಿದ್ದಿದ್ದ

ಎಂ.ಎಲ್.ಎ. ಮೇಲಿನ ಸೇಡು, ಇನ್ನೊಂದು ಮೀಸಿ ಇರೋ ಪಾರ್ಟಿಯೊಳಗ ತಾನಿರಬಾರದನ್ನೊದು, ಪ್ರಭು ಸ್ಥಿತಿ ತಿಳಿದವನೆ ಉಣ್ಣಾಕ ಇಟ್ಟಿದ್ದ. ಐದ ಚೀಲ ಥಲೋ ಬತ್ತಾನೆ ಬಾಯಿಗಬಂದ ಧಾರಣಿಗ ಮಾರಿ ರೊಕ್ಕಕೊಟ್ಟ. ಮಾಟ ಮಂತ್ರ ತಂತ್ರ ಮಾಡ್ತಿದ್ದ ಪಾಂಡುಮಾಸ್ತರ ತಾವ ಹೋಗಿ ಪ್ರಭುಗೆಲ್ತಾನೊ ಹೆಂಗಂತ ಕೇಳಿದ. ಕವಡಿ ಹಾಕಿದ ಮಾಸ್ತರ ಪಾಕೀಟ ಸರಾಯಿ ನಿಶೆದಾಗ, ಕೈಬೆಳ್ಳ ಎಣಿಸಿ ಕಡೀಗ, "ಬಹಳ ದಿನದ ಹಿಂದೆ ಅನಿಸಿತ್ತು ಜತ್ತಾ ಖರೆ ಆತ ನೋಡ್ಲೆ, ನಮ್ಮ ಮಾಸ್ತರ ನಸೀಬ ಥಲೋಐತಿ, ಕಂಕಾಳಿಯಾಡಿ ಅಂತಾಳ ಮಾಸ್ತರನ ಗೆಲ್ಲೊದಂತ, ಆದ್ರ ಒಂದ ತೊಡಕೈತಿ ತಗಿಯಾಕ ಒಂದಕೋಳಿ, ಎಂಟಲಿಂಬೂ, ಎರಡಕೊಬ್ಬರಿ, ಕಾಯಿ, ಕರ್ಪೂರ ಪಟ್ಟಿ ಒಪ್ಪಿಸಾಕ ಹತ್ತಿದ್ದ". ಜತ್ತಾನಡಕ ಬಾಯಿ ಹಾಕಿದವನೆ, ಅದೆಲ್ಲಾ ಬಿಡು ಹುಡುಗನತಾವ ಒಂದ ಹ್ಯಾಟಿ ಕಳಿಸ್ತೀನಿ ಸಂಜಿ ಮುಂದ ಸರಿಮಾಡು, ಅಂದವನೆ ಅವನಕೊಟ್ಟ ಬಸ್ಮಾತಗೊಂಡ ಟೆಂಪೊಹತ್ತಿದ. ಪ್ರಭುಗ ಜತ್ತನ ಮುಗ್ಧತೆ ಕಂಡು ಅಳು ಬಂತು. ಅವನ ಮಾರಿ ನೋಡ್ತಾ ಕುಂತ ಬಿಟ್ಟ.

ಪಟಗಾರ ಕಷ್ಟಪಟ್ಟು ರೊಕ್ಕ ಕೂಡ್ಸಿಕೊಟ್ಟಿದ್ದಾಂತ ಎಲೆಕ್ಷನ್ ಮುಗಿಯೋ ಮಾಟಾನು ಶಿರಗೂರಿನ ಹಳ್ಳಿಹಳ್ಳಿಗ ಹೋಗಿ ಪ್ರಚಾರ ಮಾಡಿ ಮುಗ್ಸಿದ್ರು. ಟೆಂಪೊ ಬಾಡಿಗೆ ಮಾಡಾಕ ಆಗದಕ್ಕ ಆಟೋರಿಕ್ಷಾ ತಗೊಂಡು ಹೋಗಿ ಪ್ರಚಾರ ಮಾಡಿಬಂದ್ರು, ಸಂಗಣ್ಣ, ಗಟ್ಟಿಮಠ ಮತ್ತು ಕುಬಸಣ್ಣ ಮಾತ್ರ ಪ್ರಭುನ ಟೀಕೆ ಮಾಡ್ತ ಅಡ್ಡಾಡಿದ್ರು" ನಮ್ಮ ಹಿಂದಿಂದ ನಾಯಿ ಬಾಲ ಅಲ್ಲಾಡಿಸೋ ಹಂಗ ಅಲ್ಲಾಡಿಸ್ಕೊಂತ ತಿರಗಿದ ಮನ್ನೆ ಮನ್ನೆ ಕಣ್ಣ ಬಿಟ್ಟ ಪುಟಗೋಸಿ ಹುಡಗ ನಮ್ಮಿದ್ರಿಗ ಕ್ಯಾರೆ ಅನ್ನದಂಗ ಅಡ್ಡಾಡ್ತಾನಂದ್ರ ಯಾರ್ದೊ ಕೈವಾಡ ಇರಬೇಕಂತ ತಲೆಕೆಡಿಸಿಕೊಂಡಿದ್ರು. ಅದೇಟ ಓಟ ತಗೊಂಡಾನಂತ ನೋಡೆ ಬಿಡಾನಂತ ಕಾದಕುಂತಿದ್ರು. ಎಲೆಕ್ಷನ್ ಏನೊ ಮುಗೀತು, ಲೆಕ್ಕ ಪತ್ರಕೊಡಾಕ, ಡೊಣ್ವಾಡ, ನಲ್ವತ್ತೂರ ಕರ್ಕೊಂಡ ಪಕ್ಕದ ಕುಣ್ಣೂರಿಗ ಹ್ವಾದ ಪ್ರಭು. ಜನಂಜಾತ್ರಿ, ನೂಕುನುಗ್ಗಲು, ಹೆಂಗೂ ಸುದಾರಿಸಿ ಕೊಂಡ ಸಾಹೇಬರ ಹತ್ರ ಹೋಗಿ ಕುಂತ, "ಕೊಡ್ರಯ್ಯ ನೀವತಂದಿರೋ ಲೆಕ್ಕಪತ್ರ" ಅಂದ ಅವನ ಶಿಷ್ಯರಿಗೆ ಇಬ್ಬರೂ ಒಬ್ಬರ ಮಕ ಒಬ್ಬರು ನೋಡ್ತಾ "ಸಾ ದಾಂದ್ಲಿಯೊಳಗ ಎಲ್ಲೊ ಕಳದಾವ ಸಾ ಪೇಪರು" ಅಂದ್ರು ಪ್ರಭುಗ ದಿಕ್ಕು ತಪ್ಪಿಹೋತು. ಯಾರೊ ಹಿಂದಿಂದ ಬೆನ್ನಾಗ ಚೂರಿ ತಿವದಂಗಾತು. ಏನೊ ಹೇಳಾಕಂತ ಬಾಯಿ ತಗದ ಸಾಧ್ಯ ಆಗಲಿಲ್ಲಾ. ಕುರ್ಚಿ ಮ್ಯಾಲಕುಂತ ಗಮನಿಸುತ್ತಿದ್ದ ಆತ ಪರವಾಗಿಲ್ಲ ಮಿಸ್ಟರ್ ಮತ್ತೊಂದ ಸಲ ಕೊಡಿ, ಜಾಗ ಖಾಲಿ ಮಾಡಿ ಮತ್ತೊಬ್ಬ ಕ್ಯಾಂಡೇಟಗೆ ಕುಂದ್ರಾಕ ಜಾಗ ಮಾಡಿಕೊಡಿ. ಇವನ ಕಡೀಗ ಲಕ್ಷ ಕೊಡದೆ ಆತ ಕೆಲಸದಾಗ ತೊಡಗಿಕೊಂಡ. ಹುಡ್ರವರ್ತನೆ ಅರ್ಥ ಆಗಲೇ ಇಲ್ಲ ಯಾಕೆ ಹಿಂಗ ಮಾಡಿದ್ರು, ಶಿರಗೂರಿಗ ಬರೊಮಟಾನು ಯೊಚನೆ ಮಾಡ್ದೆ ರಹಸ್ಯದ ಪತ್ತೆ ಸಿಗಲಿಲ್ಲ. ಸೀದಾ ರೂಮಿಗೆ ಹೋದವನೆ ಪಟಗಾರನ ಮಾತಾಡಿಸದಂಗೆ ಬಿದ್ಕೊಂಡ.

ಎಣಿಕೆದಿನ ಬಂದಾಗ ಪ್ರಭುಗ ಯಾವ ಆತಂಕನೂ ಇರ್ಲಿಲ್ಲ, ಭವಿಷ್ಯದ ಚಿಂತಿ ಆವರಿಸಿಕೊಂಡಿತ್ತು, ಯಾರದೋಮಾತಿಗೆ ಹಿಂಗ ಕುಣಿಬಾರದಿತ್ತು, ನನ್ನ ಸ್ವಂತ ವಿಚಾರಕ್ಕ

ಯಾಕ ಹಿಂಗ ಮಂಕ ಕವೀತು. ಪಟಗಾರನ ಮಾತಿಗ ನಾ ಯಾಕ ಕುಣದೆ, ಛೇ, ನನ ಅಸಹಾಯಕತೆ " ಕಾಲನ್ನ ಜಾಡಿಸಿನೆಲಕ ಒದ್ದೆ. ಕಪಟ ಶಿಷ್ಯಂದಿರು ಮತ್ತದೆ ಖಾಲಿ ಚಾ ಒಂದ ಚೀಟಿ ತಂಬಾಕಿಗೆ ಪಟಗಾರನ ಬಾಗಲಕಾದು ನಿಂತಿದ್ರು. ಏನೂ ಆಗದವನಂತೆ, ಏನ್ರಿ ಎಂ.ಎಲ್.ಎ. ಸಾಹೇಬ್ರ, ಸಂಜಿಗ ಕಾರ ಕಳಿಸ್ಲೇನ" ಚುಡಾಯಿ ಸಿದ. ಪ್ರಭು ಮಾತಾಡಲಿಲ್ಲ, ಡೋಣ್ವಾಡ, "ಏಯ್ ಪಟಾಕಿ, ಹಾರದ ವ್ಯವಸ್ಥೆ ಮಾಡ್ರಿ, ಅಂತ ಬೇಕಂತ್ಲೆ ಒತ್ತಿ ಹೇಳಿದ. ಹುಡ್ರೆಲ್ಲಾ ಜೋರಾಗಿ ನಕ್ಕರು.

ಪ್ರಭು ಮನಸ ಬಿಗಿಹಿಡದು ಬಂಡೆಯಾಗಿದ್ದ, ಈ ಎಲ್ಲಾದಕ್ಕೂ ತಾನೆ ಕಾರಣ, ಮದ್ಲೆ ಇವರ ಧೂರ್ತತೆ ಅರ್ಥಮಾಡ್ಕೊಂಡು ದೂರದೂರ ಉಳಿಸಿದ್ರ ಇವತ್ತ ತಮಗ ಅಕ್ಷರ ಕೊಟ್ಟ ಮೇಷ್ಟ್ರು. ಅವಕಾಶ ಕೊಟ್ಟ ಮೇಷ್ಟ್ರು ಅನ್ನೊ ಖಬರಿಲ್ದೆ ಹಿಂಗ ಅವಮಾನ ಮಾಡ್ತಿರಲಿಲ್ಲಾ. ಪಟಗಾರನ ತುತ್ತಕೂಳಿಗ ಅವನ ಹೇಳಿದ್ದನೆಲ್ಲಾ ಒಪ್ಕೊಂತ ಆಡಿದ ಮಾತ ಸಹಿಸ್ಕೊಂಡು ಬಿದ್ಕೊಳ್ತಿರಲಿಲ್ಲಾ, ಪ್ರೊ. ಗಟ್ಟಿಮಠ ಇಟ್ಟನಂಬಿಕೆ ಹಾಳ ಮಾಡ್ಕೊಳ್ತಿರಲಿಲ್ಲಾ. ನಾ ಏನಸಾಧನೆ ಮಾಡಿದೆ? ಪ್ರಶ್ನೆ ಅವನೆದರಿಗೆ ನಿಲ್ತು, ದೊಡ್ಡದಾಗ್ತಾ ದೊಡ್ಡದಾಗ್ತಾ ದೊಡ್ಡದಾಗ್ತಾ ಇಡಿರೂಮನ್ನೆ ಆವರಿಸಿ ಅವನ ಮ್ಯಾಲ ನಿಂತು ಕುಣಿಯ ತೊಡಗಿತು. ಹುಡ್ರು ಪಾಸ್‌ಗಳೊಳಗೆ ಯಾರಿಗ ಬೇಕ ಅವರ ಹೆಸರು ತುಂಬಿಕೊಂಡ್ರು ಪಟಗಾರನತಾವ ಖರ್ಚಿಗ ಇಸ್ಕೊಂಡು ಗೆದ್ದರ ಓಡಿ ಬರ್ತಿವಿ ಅಂದವರೆ ಮತ್ತೊಬ್ಬ ಪಾರ್ಟಿ ಹತ್ರ ಕಲೆಕ್ಷನ್ ಸಲುವಾಗಿ ಓಡಿದ್ರು. "ಥು ಕಕ್ಕೂರ ಬಾಯಿ ನೆಕ್ಕೊ ಬೇವರ್ಸಿಗಳ, ನೋಡ್ರಿ, ಆ ಜತ್ತನಾಯ್ಕನ ಅನಪಡ್ ಮನಷ್ಯ ಹೃದಯ ಏಟು ಸ್ವಚ್ಛ ಐತಿ ಅನ್ನೋದ, ಇವತ್ತಿಗ ಹದಿನೈದ ದಿನಾತು ಐದ ಪೈಸದ ಚಾ ಕುಡದಿಲ್ಲಾ. ನೀಯತ್ತಂದ್ರ ಇದು" ಒದರಿ ಹೇಳಾಕ ಅನಸ್ತು ಸಾಧ್ಯ ಆಗದೆ ಸುಮ್ಮನಾದೆ.

ಅವನು ಮಾನಸಿಕವಾಗಿ ತೊಳಲಾಡ್ತಿದ್ದ. ಅನೇಕ ಸುಳ್ಳು ಸುದ್ದಿಗಳು ಅವನ ಜೀವ ಹಿಂಡ ತೊಡಗಿದ್ದು. ಸಮಾಧಾನ ಮಾಡಾಕ ಯಾರು ಇರ್ಲಿಲ್ಲಾ ಬಿದ್ದಪ್ಪ ಮುನಿಸಿ ಕೊಂಡ ಹೋಗಿದು, ಜತ್ತಾನಾಯ್ಕ ಊರ ಸೇರಿದ. ಸುದೇಶಿ ಟಾರ್ಜನ್ ಕಾಲೇಜಿ ಹೊಂಟಿದ್ದ. ಪ್ರಭು ಯಾರಿಗೂ ಕಾಣದಂಗ ಊಟ ತಿಂಡಿ ಮಾಡ್ಕೊಂಡವನ ರೂಂ ಸೇರಿ ಯಾವುದಾರ ಹಳೇ ಪುಸ್ತಕ ಇದ್ರ ಕಣ್ಣಾಡಿಸ್ತಿದ್ದು ಬೋರಾತಂದ್ರ ಮಕ್ಕೊಂಡು ಸೂರ ನೋಡ್ತಾ ಹಳೆ ವಿಚಾರಗಳನ್ನ ಕೆದರಿ ತಕೊಂಡು ಲೀನವಾಗಿ ಬಿಡ್ತಿದ್ದ. ಅವಳ ನೆನಪು ಹಿಡಿತದಿಂದ ಜಾರತಿರೋ ಹಂಗ ಅನಿಸತೊಡಗಿತು. ಅವಳ ಗೆಳತಿಯರ್‍ಯಾರೂ ಕಾಣ್ತಿರಲಿಲ್ಲಾ. ಅವಾಗ ಬರ್ತಿದ್ದೋರು ಎಲೆಕ್ಷನ್ ಭಾನಗೇಡಿ ಆದಮ್ಯಾಲಂತು ಮಕಕೊಟ್ಟು ಮಾತಾಡದೆ ಹೊಕ್ಕಿದ್ರು. ನಾನು ಪ್ರಮಾಣಿಕ, ನನ್ನ ಹಿಂಗ ಹಿಂಸಿಸ ಬ್ಯಾಡ್ರಿ ಅಂತ ಒದರ ಹೇಳಬೇಕು ಅನಿಸಿತು. ಯಾರ ಕೇಳ್ತಾರ ನನ್ನ ಮಾತನ್ನ ಹುಚ್ಚ ಅಂತ ಹೇಳಿ ಆಳಿಗೊಂದ ಕಲ್ಲ ಹೊಡದ ಹೊಕ್ಕಾರ. ನಾನು ಅಪ್ರಾಣಿಕ ಮೋಸಗಾರ ಅಂತ ನನಗ ಆಗದ ಮಂದಿ ನಿರೂಪಿಸಿ ಬಿಟ್ಟಾರ. ಮಂದಿ ತಲೆಯೊಳಗ ಎಂ.ಎಲ್.ಎ. ಹತ್ರ ಒಂದ ಲಕ್ಷ ತಗೊಂಡು ಸುಮ್ನಾಗೀನಿ ಅಂತ ತುಂಬೈತಿ. ಅದು ಸುಳ್ಳಂತ ತಿಳಿಸಿ ಹೇಳಾಕ ಆಗೋದೆ ಇಲ್ಲಾ. ದೊಡ್ಡವರು ಹೇಳಿದ ಸುಳ್ಳು ಖರೆ

ಆದ್ರ ನನ್ನಂತೋನು ಖರೆ ಹೇಳಿದ್ರೂ ಅದು ಸುಳ್ಳಾಗತೈತಿ. ಇದೇ ಪ್ರಪಂಚದಲ್ಲಿ ನಾನು ನನ್ನ ಪಾಳೆ ಬರೋವರಿಗ ಕಾಯಬೇಕು, ಹೌದು ಅದು ಬರುವುದಾದರೂ ಯಾವಾಗ ನಾನು ಸತ್ತಮ್ಯಾಲ ಎಲ್ಲಿಗಾದರೂ ದೂರ ಓಡಿಹೋಗಬೇಕು ಅನಿಸಿತು. ಎಲ್ಲಿಗೆ? ಊರಿಗೆ ಹೋದ್ರ ಕೂಲಿಮಾಡಬೇಕು, ಕಲ್ತಿರೋ ನನ್ನ ಕೂಲಿ ಮಾಡಕ ಕಳಿಸೋದಿಲ್ಲಾ ಅವರಿಗ ಹೊರೆಯಾಗಬಾರದು. ಅವಳ ಮೋಹ ಪಾಶವನ್ನು ಬಿಡಸ್ಕೊಂಡು ಎಲ್ಲಾದ್ರೂ ದೂರ ಹೋಗಬೇಕು. ಹೌದು ಅಕಿ ಮನಸನ್ನ ತಿಳ್ಕೊಳ್ಳದೆ ಹೋದ್ರ, ಪ್ರಭು ಹಗಲುರಾತ್ರಿ ಹಳೆ ನೆನಪುಗಳ ಬ್ಯಾಟಿ ಆಡತೊಡಗಿದ. ನೀನು ಯಾಕ ಕಷ್ಟ ಪಡಾಕ ಹತ್ತಿ ಅಂದ್ರ ಹಿಂದ ನೀನು ಸುಖ ಪಟ್ಟೇದಿ ಅಂತ ಓದಿದ್ದು ನೆಪ್ಪಾತು, ನಕ್ಕು, ಅದ್ಯಾವ ಸುಖಾನೋ ಅರ್ಥ ಇಲ್ಲದ್ದು ಕ್ಷಣದ ಸುಕಕ ಇಡೀ ಜೀವಮಾನ ಪರಿತಪಿಸೋ ಹಂಗಾತು.

ಒಂದು ನಿರ್ಧಾರಕ ಬಂದಿದ್ದ ದಪ್ಪ ಚರ್ಮದವನಾಬೇಕು ಆಡಿಕೊಳ್ಳೊ ಮಂದಿಗ ಹೆದರ ಬೇಕ್ಯಾಕ, ಇಲ್ಲೇ ಇನ್ನೊಂದಿಷ್ಟದಿನ ಕಾಲ ಕಳಿಯಬೇಕು. ಅಕಿಯಿಂದ ಏನು ಉತ್ತರ ಬರತೈತಿ ತಿಳ್ಕೊಂಡು. ಮುಂದಿನ ದಾರಿ ನೋಡಬೇಕು. ಅಂದ್ಕೊಂಡವನ ಅಡ್ಡಾಡ ತೊಡಗಿದ.

ರಾತ್ರಿ ಹನ್ನೆಲ್ಲಾಗಿತ್ತು. ಮಂದಿ ಅರ್ಧಬರ್ದ ಮಕ್ಕೊಂಡಿತ್ತು. ಎದ್ದವನೆ ಅಕಿ ಓಣಿಯೊಳಗ ಕಾಲಿಟ್ಟ, ಒಂದಿಷ್ಟು ಮಂದಿ ನಕ್ಕೊಂತ ಮಾತಾಡ್ತಿರೋದನ್ನ ಕೇಳಿಸ್ಕೊಂಡ, ಕಾಲು ಗಕ್ಕ್ ತ ನಿಂತವು. ನಾಯಿ ಬಗಳಾಕ ಹತ್ತಿತ್ತು. ಯಾವತ್ತು ಇಲ್ಲದ ನಾನು ಇದ್ದಕ್ಕಿದಂಗೆ ಅವಳ ಓಣಿಯೊಳಗೆ ಬಂದಿರೋದು ಮನಿಯೋರು, ಓಣಿಯವರು, ಯಾರಾದರೂ ನೋಡಿದ್ರ ಜೀವಂತ ಹುಗದ ಬಿಡ್ತಾರ ಆದ್ರು ಯಾಕ ಅಂತ ಭಂಡ ಧೈರ್ಯ ಮಾಡ್ದೆ, ಅವನಿಗ ಮುಂದಕ ಹೋಗಾಕ ಆಗಲಿಲ್ಲಾ. ಮಾತು ಜೋರಾಗ ತೊಡಗಿತು, ನಗು ವಿಕಟವಾಗಿ ಕೇಳಿಸತೊಡಗಿತು. ಒಂದು ನಿಮಿಷ, ಕಣ್ಣು ಮುಚ್ಕೊಂಡು ನಿಂತ, ಸಾಧ್ಯ ಆಗಲಿಲ್ಲಾ, ವಾಪಾಸಾಗಿದ್ದ.

ಪ್ರಭು ಉಸಿರು ಬಿಗಿಹಿಡ್ಕೊಂಡು ತದೇಕ ಚಿತ್ತದಿಂದ ಅವಳನ್ನೇ ನೋಡ ತೊಡಗಿದ. "ನೀನು, ಅದು ಹ್ಯಾಂಗ ಬಂದೆ, ಮಲ್ಲಿಕಾ ಇವತ್ತು ನೆನಪಾತ ನಿನಗ" ಸಿಟ್ಟು ಮಾಡಿದ. ಅಕಿ ಮಾತಾಡಲಿಲ್ಲಾ. ಅವನನ್ನ ನೋಡದೆ ಕೈಯೊಳಗಿನ ಒದು ಕವರ್ ಕೊಟ್ಟವಳೆ ಮರು ಮಾತಾಡದೆ ವಾಪಾಸಾದಳು. ಪ್ರಭುಗ ಏನೂ ತಿಳಿಯಲಿಲ್ಲಾ ಏನಿರಬಹುದು. ಕವರ ತೆರೆದ ಒಂದು ನಿಮಿಷ ಸುಮ್ನೆ ದಿಟ್ಟಿಸತೊಡಗಿದ. ಮೋಸ, ಎಂಥ ಮೋಸ, ನನ್ನ ಜೀವನದ ಜೊತಿಗ ಹಿಂಗ ಆಟ ಆಡಬಾರದಾಗಿತ್ತು. ಒಂದ ಮಾತ ಸಹ ಆಡದೆ, ಬ್ಯಾಡದವನ ಹಂಗ ಬಿಸಾಡಿ ಹೋದಲ್ಲಳ್ಳ, ಇವಳೊಂದು ಹೆಣ್ಣಾ, ಇಲ್ಲಾ ಖಂಡಿತ ಬಿಡಬಾರದು. ಎಷ್ಟು ಬೇಗ ಬದಲಗ್ಯಾಳ ಇಕಿ, ನಾ ಏನಾರ ನಂಬಿಕೊಂಡು ಕರ್ಕೊಂಡ ಹೋಗಿದ್ರ ಜೈಲೇ ಗತಿಯಾಗತಿತ್ತು. ಪಟಗಾರ ಮಾತನ್ನ ಕೇಳಬೇಕಾಗಿತ್ತು. ಎಷ್ಟು ಸುಲಭವಾಗಿ ಮನಸಿಂದ ತಗದು ಹಾಕ್ಯಾಳ, ಇರ್ಲಿ ನೀನಾದ್ರು ಸುಖವಾಗಿರು ಅಂದವನ ಅವಳು ಕೊಟ್ಟು ಹೋದ ಕವರ ಮತ್ತು ಕಾರ್ಡನ್ನ ಹರಿದು ಹಾಕಿದ. ಬಟ್ಟಿ ಹಾಕ್ಕೊಂಡವನೆ ನಡೆದ, ದೂರ ಬಹಳ

ದೂರದವರಿಗ ಮನಸು ತಿಳಿಯಾಗೋ ತಂಕ ನಡಿತಾನೇ ಇದ್ದ ನಾಳೆ ಮದ್ವಿ, ಅವನು ಡಾಕ್ಟರ್ ಅವನಿಗ ಎಲ್ಲಾ ತಿಳಿಸಾಕ ಸಮಯಾನು ಇಲ್ಲಾ. ಅವನ ಮುಂದ ಹೇಳಿದ್ರ ಅವನು ಕೇಳ್ತಾನ?

ಒಬ್ಬನೇ ಸಮಾಧಾನ ಪಟ್ಟುಕೊಳ್ಳತೊಡಗಿದ. ಕೊನೆಯ ಭೆಟ್ಟಿ ಎಂಥ ವಿಚಿತ್ರವಾಗಿತ್ತು. ಅದೊಂದು ಮುಗಿದು ಹೋದ ಅಧ್ಯಾಯ. ಈಗ ಅವಳು ಪರಪುರುಷನ ಹೆಂಡತಿ ಅವಳ ಕುರಿತು ಕೆಟ್ಟ ವಿಚಾರ ಸಲ್ಲ ಅಂದ ಕೊಂಡ. ಗಟ್ಟಿ ನಿರ್ಧಾರ ಮಾಡಿದ.

ಯಾರು ಬ್ಯಾಡಾಗಿದ್ರು ಪಟಗಾರ, ಹುಡ್ರು ಪ್ರೀತಿಸಿದ ಹುಡುಗಿ ಮಲ್ಲಿಕಾ ತನ್ನ ದೌರ್ಬಲ್ಯವನ್ನ ಹೆಂಗ ಉಪಯೋಗಿಸಿಕೊಂಡ್ರು ತನಗ ಬಟಬಯಲಾಗ ಅರವಿಕಳದು ಬತ್ಲೆಮಾಡಿ ಹ್ಯಾಂಗ ನಿಲ್ಲಿಸಿದ್ರು ಅನ್ನೋದ ಅರಿವಾತು, ಎಷ್ಟೋ ದೂರ ನಡದ ಆಗಿತ್ತು. ಎಷ್ಟು ದೂರಂದ್ರ ವಾಪಾಸು ಹೋಕಾಗ ಸಾಧ್ಯವೆ ಇಲ್ಲದಷ್ಟು. ಇದ್ದ ಕೆಲ್ಸ ಹೋತು, ಮಾರ್ಯದಿ ಹೋತು, ಎಲೆಕ್ಷನಿನಿಂದ ವೈರಿಗಳು ಹೆಚ್ಚಾದ್ರು. ಹೊರಗ ಹೋಗಿ ಮಂದಿಗ ಮಕತೋರ್ರೊ ತಾಕತ್ತಿಲ್ದಂಗ ಒಳಗೆ ಉಳಿಯೋ ಸ್ಥಿತಿ ಸಂಕಟ ಪಡ್ತಿದ್ದ ಮುಂಜಾನೆಯಿಂದ ಮಕ ತೊಳಿಯದೆ ಹಾಸಗಿ ಬಿಟ್ಟ ಏಳದೆ ಬಿದ್ಕೊಂಡಿದ್ದ. ಹಗಲು ಬೆಳಕ ಕಳಿಸೊರಕ್ಕಸನಂತೆ ಪ್ರಭುನನ್ನ ಕಾಡಿದ. ರಾತ್ರಿಯಾವಾಗಾದೀತು ಹೊರಗಿನ ಜಗತ್ತಿನ ಯಾವಾಗನೋಡಿಯೇನು ಅಂತೇಳಿ ತಳಮಳಿಸಿದ. ಯಾರೋ ಹಳೆ ಎಂ.ಎಲ್.ಎ ಮತ್ತ ಗೆದ್ದ ಅಂದಿದ್ದನ ಕೇಳಿಸಿಕೊಂಡ ತಕ್ಷಣ ಎದಿ ಝಲ್ ಅಂತು, ಕಿವಿಚುರಕಗೊಳಿಸಿ ಮಾತಾಡ್ತಿರೋರನ್ನೆ ಅನುಸರಿಸಿದ. "ಯಾವಾನೊ ಕಾಲೇಜ ಮೇಷ್ಟ್ರಂತ ಡಾಕ್ಟರ ಮಗಳ ಮಲ್ಲಿಕಾನ ಪ್ರೀತ್ಸಿ ಕೆಲ್ಸಕಳ್ಕೊಂಡು ಎಂ.ಎಲ್.ಎ. ನ ಸೋಲ್ಸಾಕ ಎಲೆಕ್ಷನ್ನಿಗ ನಿಂತಿದ್ನಂತ, ಎಂ.ಎಲ್.ಎ. ಚೆಲಾ ಹಸನು ಮರಿಸ್ವಾಮಿ, ಹಲಬೇಳಿ ಸೇರಿ ಮಾತಾಡ್ತಿದ್ರು. ಈಗ ಆ ಡಾಕ್ಟರು ಎಂ.ಎಲ್.ಎ. ಪಾರ್ಟಿಗ ಸೇರ್ಕೊಂಡಾನಂತ ಇವತ್ತಂತು ಎತ್ಕೊಂಡ ಹೋಗೊ ಯೋಜನೆ ಹಾಕ್ಯಾರ." ಪ್ರಭು ಹೆದರಿ ಮುದರಿಕೊಂಡ, ಹೊಟ್ಟೆತಳಸಿದಂಗಾಗಿ ಬಯಲಕಡೀಗ ಹೋಗಬೇಕ ಅನಿಸಿತು ಮೈಯೆಲ್ಲಾ ಬೆವತು ಮೈಯಾನ ಲಂಡಂಗಿ ತೋಯ್ದು ತುಪ್ಪಡಿಯಾಗಿತ್ತು ಕಣ್ಣಮುಂದ ಕತ್ಲು ಆವರಿಸಿಕೊಂಡಿತ್ತು, ಯಾರಾದ್ರು ಬರಬಾರ್ದ್ನ, ಒಳಗೊಳಗೆ ಕನಲಿದ. ತೆವಳ್ಕೊಂತ್ಲೆ ಬಾಗಲ ಹಾಕಿ ಬಾಗಿಲಿಗ ಕಾಲ ಅನಿಸಿಕೊಂಡ ಅಂಗಾತ ಮಲಗಿದ. ಹಾಳ ಸಾವು ಮನುಷ್ಯನ ನರನಾಡಿಯನೆ ಅಲ್ಲಾಡಿಸಿ ಬಿಡತೈತಿ. ಪಟಗಾರನ ಮಾತ ಕೇಳಿಹಾಳಾದೆ. ಇಲ್ಲಾ ಪಟಗಾರನೆ ನನ್ನ ಮುಗಸಾಕ ಹಾಕ್ಕೊಂಡಿರೊ ಯೋಚನೆ ಏನಾರ.. ಹೊರಗ ನಾಯಿಗಳು ಜೋರಾಗಿ ಬೊಗಳತೊಡಗಿದವು. ಯಾವ್ದೊ ಕಾರು ಬರ್ರೊ ಅಂತ ಬಂದ ನಿಂತಂಗಾತು ಗಟ್ಟಿಯಾಗಿ ಕಣ್ಣು ಮುಚ್ಚಿ ಏನೇನೊ ಯೋಚನೆ ಮಾಡಿದೆ. ಯಾರೊ ಧಡ ದಢ ಬಾಗಲ ಬಡದಂಗಾಗಿ ಹೆದರಿ ಬಾಗಲನ್ನ ಬಿಗಿಯಾಗೆ ಒತ್ತಿದೆ, ಯಾರು ಅಂತ ಕೇಳಾಕ ಬಾಯಿ ಬರದಂಗಾಗಿತ್ತು," ಲೇ ಪ್ರಭು ಇಷ್ಟೊತ್ತಿನ್ಯಾಗ ಅದೆಂತ ನಿದ್ದೆನೋ ತಗಿಯೋ ಕದಾನ ಸೋಮಾರಿ" ಅಂತ ಪಟಗಾರ ಕಿರಚಾಡ್ತಿದ್ದ. "ನಮ್ಮ ಹುಡ್ರಂತ ನಂಬಿದೋರೆ ನಮ್ಮನ್ನ ಮೋಸದಿಂದ ಮುಗಸ್ತಾರ." ಕುಬಸಣ್ಣನ ಶಿಷ್ಯ ಬಂದು ಹೇಳಿದ್ದ

ನೆಪ್ಪಾತು. ಇವನೂ ದುಡ್ಡಿಗ ಮಾರ್‍ಕೊಂಡಿರಬೇಕು ನನ್ನ ಹಿಡದ ಕೊಡ್ತಾನ" ಅಂದವನೆ ತಪ್ಪಿಸಿಕೊಂಡು ಓಡಿ ಹೋಗಾಕ ಆಲೋಚನೆ ಮಾಡಿದೆ. ಮೆಲ್ಲಗ ಕದಸರಿಸಿದೆ ಹೊರಗ ಪಟಗಾರ ಒಬ್ಬನೆ ನಿಂತಿದ್ದ ಕಾಣ್ತು, ಧೈರ್ಯದಿಂದ ಉಸರಾಡಿದೆ. ನಾನು ಕೇಳಿದ್ದನೆಲ್ಲಾ ಹೇಳಿದೆ ಪಟಗಾರಗೂ ಹೆದರಿಕಿ ಆತು, "ಹಂಗಾರ ಹಿಂಗ ಮಾಡು, ಇನ್ನೂ ಕತ್ಲಾಗಕ ಟೈಂ ಐತಿ ಊರಬಿಡು, ವಾತಾವರಣ ತಿಳಿಯಾದಾಗ ವಾಪಾಸ ಬರುವಿಯಂತೆ" ಅಂದವನೆ ನನ್ನ ಕೈಗ ಒಂದಿಷ್ಟು ಕಾಸ ಕೊಟ್ಟ. ಎಲ್ಲಿಗ ಹೋಗಾಕಂತ ತಿಳಿಲಿಲ್ಲಾ, ಊರಿಗಂತ ವಾಪಾಸ ಹೋಗಾಕ ಆಗೋದಿಲ್ಲ, ಅಂದ್ಕೊಂತ್ಲೆ ಬಟ್ಟೆ ತೊಟ್ಟ ಶಿರಗೂರ ಸ್ಟ್ಯಾಂಡಿಗ ಬಂದೆ ಪಟಾಕಿ ಆರ್ಭಟ ಆರಂಭ ಆಗಾಕ ಮದ್ಲು ಬಸ್ ಬಂದ್ರ ಒಳ್ಳೆದು ಅಂದ್ಕೊಳ್ಳೊದಕ್ಕು ಬಸ್ಸ್ ಬರಾಕು ಪಾಡಾತು, ಬಸ್ಸುಹತ್ತಿ ಕುಂತು ನೆಮ್ಮದಿ ಉರಸಬಿಟ್ಟೆ.

ಪಟಾಕಿಸದ್ದು, ಪರಾಕಿನ ಗಲಾಟಿಯೊಳಗ ಇಡಿ ಶಿರಗೂರ ಮುಳಗಿಹೋಗಿತ್ತು. ಪ್ರಭು ಅನ್ನೊ ಪರದೇಶಿ ಮಾಸ್ತರ ಅವಾಗ ಯಾರ ನೆನಪಿಗ ತಾನೆ ಬಂದಾನು, ಇಷ್ಟೆಲ್ಲಾ ಬಡದಾಡಿ ಪ್ರಚಾರ ಮಾಡಿದ್ಕ ಎಷ್ಟೊ ಹಳ್ಳಿಗಳಲ್ಲಿ ಹೊಗಳಿ ಭಾಷಣ ಕೇಳಿದ ಮಂದಿ ಈಗ ಗುರುತಿಸಿರಲಿಲ್ಲಾ. ಬರಿ ಐನೂರಾ ಅರವತ್ತು ಮೂರು ಓಟು ತಗೊಂಡಿದ್ದ. ಪಟಗಾರನ ರೂಂ ಬಾಗಲ ಕಾಯ್ತಿದ್ದ ಎಷ್ಟು ಹುಡ್ರು ಮೆರವಣಿಗೆಯೊಳಗ ಕುಡದ ಪ್ರಜ್ಞೆ ಇಲ್ದಂಗ ಜಿಗದಾಡ್ತಿದ್ರು. ಮತ್ತ ಕೆಲವರು ಮಾಸ್ತರಗ ಬುದ್ದಿ ಕಲಿಸಿದ ಕುರಿತು ಯೋಚನೆ ಮಾಡ್ತಿದ್ರು. ಪ್ರಭುಮಾತ್ರ ಎಲ್ಲಾ ಜಂಜಾಟದಿಂದ ಬಿಡಿಸಿಕೊಂಡು ಇದ್ದಕ್ಕಿದ್ದಂಗೆ ಮಾಯವಾಗಿದ್ದ.

ಕ್ಷಣದೊಳಗೆ ಅಡಗಿದ ಕಾಲ

ಅವ್ಯಕ್ತವಾಗದ ಅನೇಕ ಭಾವನೆಗಳನ್ನು ಎದಿಯೊಳಗೆ ಮುಚ್ಕೊಂಡೆ ಹೊಂಟಿದ್ದ. ಡಾಕ್ಟರ ಮಗಳು ಮಲ್ಲಿಕಾ ಕಾಲನ ಅಡಿಯಾಳಾಗುವಂತೆ ಮಾಡಿದ್ಲು. ಎಲ್ಲಾ ಕಳ್ಕೊಂಡ ಅಧಿಪತಿಯಂತೆ ಹೆದರಿ ಓಡಿಹೊಂಟಿದ್ದೆ ವಾಸ್ತವ ಭಯಾನಕವಾಗಿತ್ತು. ಶಿರಗೂರಿನಿಂದ ನಲವತ್ತು ಕಿಲೋಮೀಟರ್ ದೂರದ ದೇಗಲೂರ ಬಂದಾಗ ಇಳಿಯಬೇಕು ಅನಿಸಲಿಲ್ಲಾ ಮುಂದೆ ಎಲ್ಲಾದಾರಿಗಳು ಮುಚ್ಕೊಂಡಿದ್ದರಿಂದ ಅನಿವಾರ್ಯವಾಗಿತ್ತು. ಪಟಗಾರ ಹೇಳಿದ ವ್ಯಕ್ತಿಯನ್ನು ಬೆಟ್ಟಿಯಾದೆ. ಅವನ ಬಗ್ಗೆ ಆ ಮನುಷ್ಯ ಅಷ್ಟೇನು ಆಸಕ್ತಿ ತೋರಿಸಲಿಲ್ಲ. ಪ್ರಭುಗ ಇದ್ದಕ್ಕಿದ್ದಂಗೆ ಎಲ್ಲಿಗ ಹೋಗಬೇಕಂತ ಯೋಚನೆ ಬಂತು, ಆ ಮನುಷ್ಯನಿಗೆ ಮತ್ತೇನ ಆಲೋಚನೆ ಬಂತೊ, ನಾಳೆ ಕಾಲೇಜಿಗ ಬಂದು ಕಾಣಾಕ ಹೇಳಿದ್ರು.

ಈ ಕತ್ಲಾಗ ಹೋಗೋದಾರ ಎಲ್ಲಿಗ? ಹೊರಗ ಬಂದೆ ಇಡಿ ಮುಗಿಲತುಂಬೆಲ್ಲಾ ಚುಕ್ಕಿಗಳು ತುಂಬಿಕೊಂಡಿದ್ದವು. ಅದ್ರಾಗ ನನ್ನ ಜಾಗ ಯಾವುದು, ಹುಡುಕಿದೆ ಹುಡುಕಿದೆ ಸಿಗಲಿಲ್ಲಾ ಬೇಸರದಿಂದ ಪಕ್ಕದಲ್ಲಿದ್ದ ಖಾಲಿ ಜಾಗದಾಗ ಕುಂತೆ. ಅಪರಿಚಿತ ಊರ ಗೊತ್ತಿಲ್ಲದ ಮಂದಿ ಏನಾರ ಹೆಚ್ಚು ಕಮ್ಮಿ ಅದೀತಂತ ಎದ್ದ ಹೊಂಟೆ. ಇಷ್ಟಕ್ಕೆಲ್ಲಾ ನಾನೆ ಕಾರಣ ಆಕಿ ಸವಾಸ ಮಾಡಬಾರ್ದಿತ್ತು. ಏನೇನು ಹೊಳೆಯಲೆ ಇಲ್ಲ. ಬದುಕು ಬಂದಂಗ ಬದುಕಲೇಬೇಕು ಇದು ಬದುಕಿನ ಅನಿವಾರ್ಯತೆ ಅಂದ್ಕೊಂತ ಬಸ್ಟಾಂಡ್ ಕಡೀಗ ಹೋಗಿ ಅಲ್ಲೆ ಮಕ್ಕೊಂಡ್ರಾತು ಒಂದರಾತ್ರಿ ಕಳಿಯೋದ ಏನ ಮಹಾ ನಾಳಿಗ ಏನಾರ ವ್ಯವಸ್ಥೆ ಆಗತೈತಿ ಊರ ನೆನಪಾತು. ಒಂದ ಹೊತ್ತ ಉಪಾಸಿದ್ರು ಆ ಬದುಕೆ ಪಾಡನಿಸಿತು. ಬದುಕಾಕ ಆಗದ ಸಾಯಾಕ ಆಗದ ಖಾಲಿ ಪುಕ್ಕಟ್ಟೆ ಡಾಂಭಿಕ ಬದುಕು, ಆದರ್ಶ ಅನ್ನೊ ಸುಳ್ಳಿನ ಕೋಟೆಯೊಳಗ ಮೌಲ್ಯ ಅನ್ನೋಂದೊಂದು ಪಿಶಾಚಿ ಕೆಲವರನ್ನ ಮಾತ್ರ ಹೆದರಿಸೋದು. ನಮ್ಮ ನಾಯಕರು ರೊಕ್ಕದ ಬಲದಿಂದ ಏನ ಮಾಡೋದಿಲ್ಲಾ, ಅವರಮಾಡಿದ್ದೆಲ್ಲಾ ನಡದ ಹೊಕ್ಕೈತಿ ಭೂಮಿಮ್ಯಾಲ ಕೆಳಜಾತಿಯಾಗ ಹುಟ್ಟಬಾರದು ಹುಟ್ಟಿದ್ರೂ ಬಡವರಾಗಿ ಬದಕಬಾರದು ಹಾಳ ವ್ಯವಸ್ಥೆ ಮುಳ್ಳಿನ ತಂತಿಯಾಗಿ ನಮ್ಮಂತೋರನ್ನೆ ಸುತ್ತ ಪರಿತೈತಿ. ನಮ್ಮ ಕೈಗಳು ದೊಡ್ಡಮಂದಿ ಅಂಗಳಕ ಮುಟ್ಟಲಾರವು ಯಾಕಂದ್ರ ಅವಕ ಬಲವಿಲ್ಲ. ಎಲ್ಲಾ ಯೋಚನೆಗಳಿಂದ ಬಿಡಗಡೆ ಪಡಿಯಾಕ ಚಡಪಡಿಸ್ತಿದ್ದೆ, ಯಾರೊ ದೂರದಿಂದ ಸೈಕಲ್ ಹೊಡ್ಕೊಂಡ ಬಂದೋನ ನನ್ನ ಮೈಮಾಲ ನುಗ್ಗಿಸಿದ. ನಾನು ಹೌಹಾರಿ ಪಕ್ಕಕ ನಿಂತೆ. ಸೈಕಲ್ ಮೇಲಿನ ಮನುಷ್ಯ "ಏಯ್ ಸಾಯಾಕ ಬೇರೆಲ್ಲೂ ಜಾಗ ಸಿಗಲಿಲ್ಲೇನು?" ಅಂತ ಗದರಿಸಿದ. ಧ್ವನಿ ಎಲ್ಲೊ ಕೇಳಿದಂಗಿತ್ತು. ಕತ್ಲಾಗಿದ್ಕ ಯಾರೇನಂತ ಸರಿಗ ಗೊತ್ತಾಗ್ತಾ ಇರ್ಲಿಲ್ಲಾ. ಆದ್ರು ಅಂದಾಜಿನ ಮ್ಯಾಲ "ಸರ್ ನೀವು ಹಂಡುಪಾಟೀಲ ಅಲ್ವಾ" ಕೇಳಿದೆ. ವ್ಯಕ್ತಿ ಹೆಸರಕೇಳಿದ್ದೆ," ನೀ ಯಾರಯ್ಯ ನನ್ನ

ಹೆಸರ ಹಿಡಿದ ಕರಿತಿದ್ದೀಯ ನಡಿ ಆ ಲೈಟ್ ಕಂಬದ ಬೆಳಕಿನತಾವ" ಸೈಕಲ್ ತಳ್ಳಾತ ಮುಂದಕ ಹೊಂಟ. ಪ್ರಭುನ ನೋಡಿ ಖುಷಿಯಿಂದ " ಅರೇ ಹಿತ್ಲಮನಿ ನೀಯಾಕ್ಲೆ ಇಲ್ಲಿ ಮಗನ, ಅಲ್ಲೆಲ್ಲೋ ಕಾಲೇಜಿನೊಳಗ ಮಾಸ್ತರ ಆಗಿ ಅಂತ ಕೇಳಿದ್ದೆ. ಇದೇನ ಇಟೊತ್ತಿನ್ಯಾಗ" ಅನುಮಾನಿಸಿದ. "ಹಂಡು ಅದೊಂದ ದೊಡ್ಡ ಕತಿ ಐತಿ, ನಿಧಾನಕ ಎಲ್ಲಾ ಹೇಳ್ತೀನಿ ಮದ್ಲು ಇವತ್ತರಾತ್ರಿ ಉಳ್ಕೊಳ್ಳೊವ್ಯವಸ್ಥೆ ಮಾಡು." ನನ್ನ ಅಸಹಾಯಕತೆಯನ್ನು ತೋಡಿಕೊಂಡೆ. "ನಮ್ಮ ಸಣ್ಣಪ್ಪನ ಮನಿ ಐತಿ ನೀ ಯಾಕ ಕಾಳಜಿ ಮಾಡ್ತಿನಡಿಲೆ' ಅವರಿಗೂ ಮಕ್ಕಳಿಲ್ಲಾ ಎಲ್ಲು ಕಡೀಗ ನಾನೊಬ್ಬನೆ ಅದಕ್ಕೆ ಇಲ್ಲದೀನಿ." ಅಂದ ಹಂಡುಪಾಟೀಲ. ನಾನು ಇಡಿ ಕತೆಯನ್ನ ಹೇಳಿದ್ದೆ. ತಾಳ್ಮೆಯಿಂದ ಕೇಳಿ "ಛೇ ಎಂಥ ಅನ್ಯಾಯ ನಿನ್ನ ಜೀವನನಾನೆ ಹಿಂಗಾತು ಅಲ್ಲೋಡಿಯ ಯೂನಿವರ್ಸಿಟಿ ಮೇಷ್ಟ್ರು ಹೊಟ್ಟೆಕಿಚ್ಚಿಂದ ಫೇಲ ಮಾಡಿದ್ರು ಅಂತ ಕೇಳಿದೆ ಜಾತಿ ಹೆಸರನ್ಯಾಗ ದುರಂತ ನಿನ್ನಂತ ಎಷ್ಟೊಮಂದಿಗ ಅನ್ಯಾಯ ನಡಿತಾನೆ ಇರ್ತತಿ, ನೆಲನೋಡಿ ಬದಕೊ ನಮ್ಮಂತ ಮಂದಿ ಸಹಿಸ್ಕೊಬೇಕು ಮತ್ತೇನು ಮಾಡಾಡಕ ಆಗೋದಿಲ್ಲ" ಬೇಜಾರಿಂದ ಹೇಳಿದ ಹಂಡು ಪಾಟೀಲ. ಪ್ರಭು ಮಾತಾಡಲಿಲ್ಲ. ಒಂದ ಕ್ಷಣ ಅವನೇನಾರ ಎಚ್ಚರ ತಪ್ಪಿದ್ರು ಇಷ್ಟೊತ್ತಿಗಾಗ್ಲೆ ಹೆಣವಾಗಿರ್ತಿದ್ದ. ಈ ಹಿಂದೆ ಡಾಕ್ಟರ ಹೊಸ ಪಾರ್ಟಿ ಸೇರಿದಾಗ ಅವನ ಎಲಿಬಳ್ಳಿ ತ್ವಾಟದಾಗ ದೊಡ್ಡ ಪಾರ್ಟಿ ಇಟ್ಕೊಂಡು ಬಿದ್ದಪ್ಪಗೂ ಪ್ರಭುಗೂ ಕರದಿದ್ದ ಕುಬಸಣ್ಣ ಸುದ್ಧಿ ತಿಳದಿದ್ದೆ ಕರಿಯಾಕ ಬಂದವನಿಗೆ ಬಾಯಿಗ ಬಂದಂಗ ಅಂದು ಗದುಮಿದ್ದ. ಅವತ್ತೆ ಪ್ರಭುನ ಎತ್ಕೊಂಡುಹೋಗಿ ಸರಿಗ ಹೊಡದು ಪೂಲಮೇಲಳ್ಳಿ ಸೇತುವೆ ಹತ್ರದ ಮುಳ್ಳಕಂಟಿಯೊಳಗ ಬಿಸಾಡಬೇಕಂತ ಡಾಕ್ಟರ ಸ್ನೇಹಿತ ಲದ್ದೂ ಸಾಭಿ ತುಕ್ಕಣ್ಣಸೇರ್ಕೊಂಡ ಯೋಚ್ನೆ ಮಾಡಿದ್ರಂತ ಅದನ್ನ ಹೆಂಗೊ ತಪ್ಪಿಸಿಕೊಂಡಿದ್ದ ಪಟಗಾರ ತಲಿ ತಿಕ್ಕಿ ಎಲೆಕ್ಷನ್‌ಗೆ ನಿಲ್ಲಿಸಿ ಎಂ.ಎಲ್.ಎ. ತಲಿತಿರಗೊ ಹಂಗ ಮಾಡಿದ್ದ. ಎಂ.ಎಲ್.ಎ. ಸೇಡಿಂದ ಬುಸ್‌ಗುಡಾಕ ಹತ್ತಿದ್ದ.

ಹಂಡು ಪಾಟೀಲ ನಡಕನಿಂತು ಪಾರ್ಟ್ ಟೈಂ ಕೆಲಸ ಕೊಡಿಸಿದ್ದ. "ನೋಡಪ್ಪನಾ ಗ್ಯಾರಂಟಿ ಅದೀನಿ ಏನಾರ ಎಡವಟಮಾಡಿಯಾ" ಎಚ್ಚರಿಸಿದ. "ತಪ್ಪು ಒಂದೇ ಸಲ ಮಾಡೋದು" ಹೆಚ್ಚು ಮಾತಾಡಲಿಲ್ಲಾ. ಮದಮದ್ಲು ಪಾಡಾಗೆ ಹೊಂದ್ಕೊಂಡಿದ್ದ. ಹೊಸ ಮಂದಿ ಹೊಸ ವಾತಾವರಣ ಒಬ್ಬಿಬ್ಬರು ಪರಿಚಯ ಇದ್ರು ಅಂತಹದ್ದೇನ ತೊಂದ್ರೆ ಆಗಿರಲಿಲ್ಲ ಕುಳ್ಳಿ, ಉಮ್ಮಪ್ಪ, ಅನ್ನೊ ಇಬ್ಬರು ಮಾತ್ರ ಪ್ರುಭುನ ಕಂಡು ಅಷ್ಟಕ್ಕಷ್ಟೆ. ಕೊತಂಬ್ರಿ ಶೆಟ್ಟಿ ಅನ್ನೊ ಸ್ಟೂಡೆಂಟ್ ಇಪ್ಪತ್ನಾಕಗಂಟೆನೂ ಹುಡುಗಿಯರ ಹಿಂದ ಸುತ್ತಿ ಬರಿ ಕಾಡಿಸ್ಕೊಂತ ಮೂರವರ್ಷದ ಬಿ.ಎ.ನ ಆರವರ್ಷ ಆದ್ರೂ ಮುಗಿಸದೆ ಹೆಂಗದಾವೊ ಎಲ್ಲಾ ವಿಷಯಗಳು ಹಾಗೆ ಉಳ್ಕೊಳ್ಳೊ ಹಂಗೆ ಎಚ್ಚರಿಕೆ ವಹಿಸಿದ್ದ. ಹೊಸ ಮೇಷ್ಟ್ರು ಅಂದ್ರೆ ಹಬ್ಬ ಅವನಿಗ, ಕೊತಂಬ್ರಿಶೆಟ್ಟಿಗ ಕುಮ್ಮಕ್ಕ ಕೊಡೋರಂದ್ರು ಕುಳ್ಳಿ ಕಿತಬಿ ಉಮ್ಮಪ್ಪ, ಪ್ರಭುನ ಬಗ್ಗೆನೂ ಹೇಳಿ ಅಂವ ಬಂದಿಂದ ಸರಿಯಾದ ಸ್ವಾಗತಕ ವ್ಯವಸ್ಥೆ ಮಾಡಿದ್ದ. ಪ್ರಭು ಬಹಳ ಎಚ್ಚರಿಕೆಯಿಂದಲೆ ಕ್ಲಾಸ ತಗೊಳ್ತಿದ್ದಾ ಅವನ ಆ ಆವೇಷ ಹುಮ್ಮಸ್ಸು ಹೊಂಟಹೋಗಿತ್ತು. ಪಾಠ ಸಪ್ಪೆ ಅನಿಸ್ತಿತು, ಹೊಟ್ಟೆಪಾಡಿಗಾಗಿ ಮಾಡ್ಲೆಬೇಕಾ

ಗಿದ್ದು ಅನಿವಾರ್ಯವಾಗಿತ್ತು. ತಾಸಾಯ್ತು ಪಾಠವಾಯ್ತು ಲೈಬ್ರರಿ, ಪ್ರಿನ್ಸಿಪಾಲ್ ಇಲ್ಲಾಂದ್ರೆ ಹಂಡುಪಾಟೀಲನ ಸಣ್ಣಪ್ಪನ ಮನಿಪಕ್ಕದಲ್ಲೆ ಕೊಡಸಿದ್ದ ಒಂದುರೂಂ ಇಷ್ಟೆ ಅವನ ಜಗತ್ತು. ಒಂದ ಶನಿವಾರ ಮುಂಜಾನೆ ಕ್ಲಾಸಿಗ ಹೊಂಟಿದ್ದ ಪ್ರಭುನ ಯಾರೋ ಹಿಂಬಾಲಿಸ್ತಿರೊ ಹಂಗ ಅನಿಸಿತು, ಹಿಂದಕ ತಿರಗಿ ನೋಡ್ದಾ ದೂರದಾಗ ಶಿರಗೂರಿನವನ ಹಂಗ ಕಂಡ, ಆದ್ರ ಯಾರಂತ ಗೊತ್ತಾಗಲಿಲ್ಲ. ದಲ್ಲಾಲರ ಸಂದಿದಾಟಿ ಶೆಟ್ರ ಓಣೆಗ ಬರೋದ್ಕು ಆ ಮನುಷ್ಯ ಅವನ ಸನಿಕ ಬರೋದ್ಕು ಬರಾಬರಿ ಆತು. "ಸಾ, ನೀವ ಹೌದೊ ಅಲ್ಲಂತ ಬೆನ್ನಹತ್ತಿಬಂದೆ. ಏನ ಸಾ ಸಮಾಚಾರ ಯಾಕಿಲ್ಲಿ,?" ಅವನ ಮುಖ ಪರಿಚಯ ಇತ್ತು ಸಂಗಣ್ಣನ ಚೇಲಾಗಳ ಜೊತಿಗ ಇರ್ತಿದ್ದ, ಇವನ್ಯಾಕ ನನ್ನ ಹುಡುಕ್ತಾ ಅದಾನ ತಿಳಿಲಿಲ್ಲಾ ಏನ ಹೇಳಾಕಂತ ತಿಳಿಯದೆ ಹಿಂದ ಮುಂದ ನೋಡಿ "ಇಲ್ಲೆ ಸ್ನೇಹಿತನ ಮನಿಗ ಬಂದೀನ್ರಿ" ಅಂದವನೆ ಅವನ ಉತ್ತರಕ್ಕೂ ಕಾಯದೆ ದಾರಿ ತಪ್ಪಿಸಿ ಹೊಂಟಬಿಟ್ಟೆ. ಅಂವ ನನಗ ಕಾಣದಂಗ ಹಿಂದಿದ ಬರ್ತಿರೋಹಂಗ ಅನಿಸಿ, ಕಾಲೇಜಿಗ ಹೋಗೋದೊ ಬ್ಯಾಡೊ ಅಂತ ಅನುಮಾನಿಸಿತಾ ನಿಂತೆ ಪ್ರಿನ್ಸಿಪಾಲರು ಯಾಕ್ರಿ ಇಲ್ಲಿನಿಂತಿರಿ ಅಂದ್ರು, ಯಾಕಿಲ್ಲ ಸರ್, ಪಾಟೀಲ ಬರ್ತಿನಿ ಅಂದಿದ್ದ ಸುಳ್ಳ ಹೇಳಿ ಸೀದಾ ಕಾಲೇಜಿಗ ಹೊಂಟೆ.

ಯಾವದೊ ಒಂದು ಕವಿತೆ ಹೇಳಿ ಹೊರಗ ಬರ್ತಿದ್ದಂಗೆ ಕೊತಂಬ್ರಿಶೆಟ್ಟಿ ಎದುರಾದ, ಶನಿನೋಡದ್ನಲ್ಲಾ ಅನಿಸಿ ಮಾರಿ ಹೊಳ್ಳಸಾಕ ನೋಡ್ದೆ, "ಆಟ ಬ್ಯಾಸರ ಯಾಕ್ರಿ ಮಾಸ್ತರ ನಾಏನ ನಿಮ್ಮ ಹುಡುಗಿ ಮಲ್ಲಿಕಾ ಅಲ್ಲ," ಪ್ರಭು ಹೌಹಾರಿದ, ಬಾಯಿ ಬಿಟ್ರ ಬಣ್ಣ ಕೆಡತೈತಿ ಅಂದವನೆ ಪ್ರಿನ್ಸಿಪಾಲರ ರೂಮಿಗ ಹೋದ. ದಾರಿಯೊಳಗ ಬೆಟ್ಟಿಯಾದ ವ್ಯಕ್ತಿ" ಮನಸ್ತೆ ಸಾ ಬರ್ರಿ ನಿಮ್ಮ ಸಂಗತಿನೆ ಅನ್ನಾಕುಂತಿದ್ದೆ "ಅಂದವನೆ ವಿಚಿತ್ರವಾಗಿ ನೋಡದಾ. ಹಂಡು ಪಾಟೀಲ ಎಲ್ಲಾ ವಿಷಯ ಪ್ರಿನ್ಸಿಪಾಲರಿಗೆ ಹೇಳಿದ್ಕ ಪ್ರಭು ಬಚಾವಾದ. "ಸಾ, ಈ ಮನುಷ್ಯ ಡೇಂಜರ್ರು ಸಾ" ಇನ್ನು ಏನೇನೋ ಹೇಳಾಕ ಬಾಯಿ ತಗಿತಿದ್ದ, "ಸಾಕಯ್ಯ ನನಗ ಗೊತ್ತೈತಿ ನೀ ಜಾಗ ಖಾಲಿ ಮಾಡು, ಒಳಗ ಕಂಡಿ ಅಂದ್ರ ಜವಾನ್ರನ್ನ ಕಳಿಸಿ ಹೊರಗ ಹಾಕ್ತೀನಿ ನಡಿಮದ್ಲು" ಹೊರಗಹಾಕಿದ್ರು. ಆ ಮನುಷ್ಯಗಾಬಾದ ಬಂದ ಕೆಲ್ಸ ಆಗ್ಲಿಲ್ಲಾ ಅಂತ ಸಿಟ್ಟಿಂದ ನನ್ನ ನೋಡ್ತಾ ಹೊರಗ ಹೋದ. ಕಳ್ಳ ಕಿತಬಿ ಉಮ್ಮಣ್ಣ ಆವಾಗ್ಲೆ ಶೆಟ್ಟಿ ಸುದ್ದಿ ಮುಟ್ಟಿಸಿದ್ಕ ಸಿದಾ ಅವನ ಹತ್ರ ಬಂದ್ರು. ಆ ಮನುಷ್ಯನನ್ನ ಕ್ಯಾಂಟೀನ ಕಡೀಗ ಎಳ್ಕೊಂಡ ಹ್ವಾದ್ರು.

ಪ್ರಭುಗ ಬದುಕು ಜಡ ಅನಿಸಿತು. ಇಲ್ಲಿಗೂ ಬಂದ್ವಲ್ಲಾ ಈ ಪೀಡೆಗಳು ಯಾಕ ಹಿಂಗ ಬೆನ್ನ ಹತ್ಯಾರ, ಹಕೀಕತ್ ಏನು ತಿಳಿಯೋ ತವಕ, ಸಂಜಿಗ ಹೋದವನೆ ಪಟಗಾರಗ ಪತ್ರ ಬರದು ಶಿರಗೂರಿನಾಗ ನಾನು ಬಿಟ್ಟಮ್ಯಾಲ ಆದದ್ದಾರು ಏನು ತಿಳಿಸಾಕ ಹೇಳಿದೆ. ಮಲ್ಲಿಕಾ ಬರಿನೆನಪು ಅಂತೇಳಿ ತಿಳ್ಕೊಂಡೆ. ಹಳೆ ದಿನಗಳು ನೆನಪಿಗೂ ಸಿಗದಾದವು, ಅರೆಬೆಂದ ಹುಡ್ರನ್ನ ನಂಬಿ ಅವರೆದುರಿಗೆ ಪ್ರೇಮಪ್ರೀತಿ ಅಂತ ಪ್ರಲಾಪ ಮಾಡಿದ್ರೆ ಇನ್ನೇನ ಆದೀತು. ಅದು ಅಲ್ಲದೆ ಒಬ್ಬ ಕೆಳಜಾತಿಯವ ಮೇಲ್ಜಾತಿ ಶ್ರೀಮಂತನ ಮಗಳನ್ನ ಬುಟ್ಟಿಗ ಹಾಕ್ಕೊಂಡ್ರ ಆಗೋದೆ ಹಿಂಗ. ಆ ನೆನಪುಗಳ ಬೇರನ್ನೆ ಕಿತ್ತಬಿಸಾಡಬೇಕಂತ ಹವಣಿಸಿದೆ.

ಹೆಚ್ಚು ಕಾಲೇಜ ಚಟುವಟಿಕೆಯೊಳಗ ತೊಡಗಲು ಅನುವಾಗ್ತಿದಂಗೆ ಕುಳ್ಳಿ, ಶೆಟ್ಟಿ, ಉಮ್ಮಣ್ಣಿ, ತಮಗ ತಿಳಿದ ಅರೆಬರೆ ವಿಷಯ ತಗೊಂಡು ಬ್ಲಾಕ್‌ಮೇಲ್ ಮಾಡಾಕ ನೋಡಿದ್ರು, ಪ್ರಿನ್ಸಿಪಾಲರಿಗೆ, ಮ್ಯಾನೇಜಮೆಂಟಿನವರಿಗೆ, ಹುಡುಗರಿಗೆ ಸುದ್ಧಿ ಮುಟ್ಟಸಾಕಂತ ಪ್ರಚಾರ ಆಂದೋಲನ ಮಾಡಿದ್ರು ಪ್ರಯೋಜನ ಕಾಣದಕ್ಕ ವೈಯುಕ್ತಿಕ ವಾಗಿ ಪೀಡಿಸಾಕ ನೋಡಿದ್ರು." ಅಲ್ಲ ಪ್ರಭು ನೀ ನೋಡಿದ್ರ ನಮ್ಮ ತಾವ ಮಾತಾಡಾಕು ನಾಲಾಯಕ್, ಅಂತೋನು ಡಾಕ್ಟರ್ ಹುಡುಗಿ ಬಿಳಿ ತೊಗಲಿಗ ಮುಳ್ಳಾಗಿ ಏನೇನೊ ಅನಾಹುತ ಮಾಡಿಯಂತಲ್ಲಾ ಏನ್ಸಮಾಚಾರ ನಿಮ್ಮಂತ ಮಂದಿ ಜೀವನಾನೆ ಅಂತಹದ್ದು." ಕುಳ್ಳಿ ಕಿತ್ತತಿನ್ನೊ ಹಂಗ ನೋಡಿ ಹೇಳಿದ. ಪ್ರಭು ಮಾತಾಡದಂಗೆ ಹೋಗಿಬಿಟ್ಟ.

ಅವಳು ಮೋಸಗಾರ್ತಿ, ಇಡೀ ಜೀವನವನ್ನು ಹಾಳ ಮಾಡಿದ್ಲು, ಪ್ರೀತಿ ಪ್ರೇಮ, ಅಂತೆಲ್ಲಾ ಕನಸುಕಂಡು ಅದರಲ್ಲೆ ಮುಳುಗಿ ಹೋಗಿದವನನ್ನ ನಡು ನೀರೊಳಗ ಕೈಬಿಟ್ಟು ನೇರವಾಗಿ ನಿರಾಕರಿಸಿ ಮತ್ತೊಬ್ಬನನ್ನ ಮದವಿ ಆದ್ಲು. ಅವಳ ಮುಗ್ಧ ಪ್ರೀತಿಗಾಗಿ, ಅವಳ ಸುಂದರ ಮಕ ನೋಡಾಕ ಪರಿತಪಿಸತೊಡಗಿದ್ದ. ಅವನು ಗೊತ್ತು ಪರಿಚಯ ಹೇಳ್ದೆ ಪೀಠಿಕೆ ಆರಂಭಿಸಿದ. ಅದೇನು ಕೀಟ್ಸ್‌ನ ಪದ್ಯವೋ ಇಲ್ಲ ಅವನ ಜೀವನ್ದಾಗ ನಡದ ನಿಜ ಘಟನೆಯೋ ಬಲ್ಲೋರಾರು. ಹಿಂದಿನ ಸಾಲಿನೊಳಗ ಕುಂತಿದ್ದ ಶೆಟ್ಟಿ." ಏ ಮಾಸ್ತರ ನಿನ್ನ ಪರಿಚಯ ಹೇಳೋ ಮರಾಯ" ಅಂದಿದ್ಕ ಪ್ರಭು ಎಚ್ಚರಾದ, "ಹಾಂ, ಯಾರ, ಏನಂದ್ರಿ", ಶೆಟ್ಟಿ ಎದ್ದವನೆ, "ಸಾರ್, ತಮ್ಮ ಪರಿಚಯ?" ಅಂತ ಅತಿ ವಿನಯದಿಂದ ಕೇಳಿದ. "ಬಿಡ್ರಿ ಅದನ ತಗೊಂಡು ಮಾಡೋದಾದ್ರು ಏನು, ನನ್ನ ಹೆಸರು ಹಿತ್ಲಮನಿ ಪ್ರಭು" ಅಷ್ಟು ಹೇಳಿದವನ ಮುಂದಿನ ಸಾಲಿನೊಳಗ ಕುಂತಿದ್ದ ಹುಡುಗಿಯನ್ನ ದಿಟ್ಟಿಸಿ ನೋಡ್ದ. ಅವನಿಗ ಅನುಮಾನ ಆಯ್ತು. ಹುಡ್ರು ಏನ ತಿಳ್ಕೊಂಡಾರು ಅಂದವನ ಪಾಠ ಸುರು ಮಾಡ್ದ. ಶೆಟ್ಟಿ ಜೋರಾಗಿ ಒದರಿದ. ಪ್ರಭುಗ ಕಿರಿಕಿರಿ ಅನಿಸಿತು, "ಹಲೋ, ಯಾಕಪ್ಪ ಹಿಂದಿನ ಜನ್ಮದಾಗ ಕತ್ತಿಗಿತ್ತಿ ಆಗಿದ್ಯೋ ಹ್ಯಾಂಗ" ಅಂದಬಿಟ್ಟ. ಯಾರನ್ನೂ ಬಿಡದ ಶೆಟ್ಟಿ. "ಹೆಂಗನಸತ್ತೆತಿ, ಪಾಠ ಮಾಡಾಕ ಬಂದಿರಿ ಮಾಡ್ಕೊಂಡ ಹೋಗ್ರಿ ಅಷ್ಟೇ, ಒದರೋದ್ರ ಕಡೀಗ ಗಮನ ಯಾಕ ಕೊಡ್ತೀರಿ." ಅವನೆನೆ ನೋಡಾಕತ್ತಿದ್ದ. ಅದೇ ಹುಡುಗಿ ಯನ್ನ ಕುರಿತು "ಅಲ್ವೇನೆ ಸುಮ್ಮಿ" ಅಂದ, "ರೀ ಯಾಕ್ರಿ ಏಳ್ರಿ ಮ್ಯಾಲ, ಹೋಗ್ರಿ ಹೊರಗ" ಗದರಿಸಿದ ಪ್ರಭು." ಅಲ್ಲಿ ಕುಂತಾಳಲ್ಲ ನನ್ನ ಅಕ್ಕನ ಮಗಳು ಸುಮ್ಮಿ ಅಕೀನ ಕಳಸಬಿಡ್ರಿ ನಾ ಹೊಂಟೆ ಯಾವನಿಗ ಬೇಕ್ರಿ ನಿಮ್ಮ ಕೀಟ್ಸ್, ನೀವೆ ಕೇಳ್ರಿ" ಅಂದವನ ನೇರವಾಗಿ ಆ ಹುಡುಗಿ ಕುಂತ ಹತ್ರ ಬಂದ. ಪ್ರಭು ಗಾಬರಿಯಾಗಿದ್ದ. ಅಂವ ಕಲ್ಸಿದ್ದು ಪಿ.ಯು.ಸಿ. ಹುಡ್ರಿಗ. ಡಿಗ್ರಿ ಹುಡ್ರು ಹಿಂಗಾಡ್ತಾರಂತ ಗೊತ್ತಿರಲಿಲ್ಲಾ ಅವನಿಗ, "ಅಪ್ಪ ಮಹರಾಯ ನಿನಗ ಕೈ ಮುಗಿತೀನಿ, ನಾನು ಹೊಟ್ಟಿ ಪಾಡಿಗಂತ ಪಾರ್ಟ್ ಟೈಂ ಆಗಿ ಕೆಲ್ಸಕ ಸೇರ್ಕೊಂಡೀನಿ ಅದಕ್ಕು ಸಂಚಕಾರ ತರೋದ ಬ್ಯಾಡ, ನೀನು ಸಾವುಕಾರನೇ ಇರಬಹುದು. ನಮ್ಮಂತ ಬಡವರು ಬದುಕ್ಯಾರ ಅನ್ನೋದನ್ನ ಮರಿ ಬ್ಯಾಡ" ಅಂತ ಅವನ ಹತ್ರ ಬಂದವನ ಅವನ ಕೈ ಹಿಡ್ಕೊಂಡ. ಶೆಟ್ಟಿಗ ಏನು ಅನಿಸಿತೋ ತಿರಗಿ ಹಿಂದಲ ಬಾಗಲಿನಿಂದ ಹೊರಗ ಹೋದ.

ಕ್ಲಾಸ್ ಬಿಟ್ಟಾಗ ಪ್ರಭು ಹಿಂಜರಿಯುತ್ತಲೇ ಹೊರಗ ಕಾಲಿಟ್ಟ. ಅಲ್ಲೇ ನಿಂತಿದ್ದ ಶೆಟ್ಟಿ ಬಂದವನೆ " ಸರ್, ನನ್ನ ಕ್ಷಮಿಸಿ ಬಿಡಿಸರ್, ನೀವು ತಿಳ್ಕೊಂಡ ಹಂಗ ನಾನು ಶ್ರೀಮಂತನೂ ಅಲ್ಲಾ, ಶೋಕಿ ಮಾಡಾಕೂ ಬಂದಿಲ್ಲಾ, ನೀವು ನನ್ನ ತಪ್ಪನ ತೋರ್ಸಿ ನನಗ ದಾರಿ ತೋರಿಸಿದ್ರಿ" ಶೆಟ್ಟಿ ನಿಜವಾಗಿಯೂ ಪಶ್ಚಾತಾಪದಿಂದಲೆ ಹೇಳಾಕತ್ತಿದ್ದ. "ಮತ್ತ ಹಿಂಗ್ಯಾಕ ಮಾಡಿದ್ರಿ" ಕೇಳ್ದ ಪ್ರಭು. "ಏನ ಮಾಡೋದ ಸಾರ್, ಸಾವುಕಾರ ಹುಡ್ರು. ಚೆಂದನ ಹುಡುಗಿರಯನ್ನ ಹಾರ್ಸಿಕೊಂಡು ಹೋಗಿ ಮಜಾ ಮಾಡ್ತಾರ. ಅವರ ಹತ್ರ ಇರೋ ಬೈಕು, ರೊಕ್ಕ, ಮಳ್ಳ ಮಾಡಸ್ತಾವೆ. ಫೀ ಕಟ್ಟಾಕೂ ಲಾಟ್ರಿ ಹೊಡೆಯೊ ನಮಗ ಈ ಹುಡಗಿಯರು ಹೀಯಾಳಿಸಿ ಮಾತಾಡ್ತಾರ. ಅವರಿಗ ಪಾಠ ಕಲ್ಸಬೇಕನ್ನೋದೆ ನನ್ನ ಉದ್ದೇಶ" ಕಳವಳದ ಧನಿಯೊಳಗ ಹೇಳಿದ ಶೆಟ್ಟಿ. 'ನೋಡ್ರಿ ಮೀ||', "ಶೆಟ್ಟಿ" ಸರ್ "ಕೊಟ್ರಶೆಟ್ಟಿ" ಅಂದ ಕೊಟ್ರೇಶಿ ಒಬ್ಬರನ್ನ ನೋಡಿಕಲಿಯೋದು, ವಿನಯ, ವಿದ್ಯೆ, ಶ್ರದ್ಧೆ' ಅಂದವನೆ, ಪ್ರಿನ್ಸಿಪಾಲರ ಕಡೆಗೆ ಹೊರಟ ಪ್ರಭು.

ಅವನನ್ನ ಕಾಡಾಕತ್ತಿದ್ದು ಶೆಟ್ಟಿ ಹೇಳಿದ ಹುಡುಗಿ, ಮಲ್ಲಿಕಾಳ ಹೋಲಿಕೆಯ ಸುಮ್ಮಿ, ಆದ್ರೆ ಅವಳಂತೆ ಬುದ್ಧಿ ಮಾತ್ರ ಈಕೀಗ ಇಲ್ಲದಿದ್ರ ಸಾಕು. ನಾನು ಕಳದ ಪ್ರತಿಯೊದು ಕ್ಷಣಗಳು ಅಕೀಯ ನೆನಪಿನೊಳಗ ಕಳದೆ, ಬುದುವಾರದ ಸಂತಿಗ ಅಕಿ ಬಂದಾಗ ದೂರದಿಂದ ಅದೇ ಎದಿ ಹಿಂಡೋ ವಿಚಿತ್ರ ನಗಿ, ಕ್ಷಣ ಮಾತ್ರದಲ್ಲಿ ಕೊಂದು ಬಿಡುತ್ತಿದ್ದ ಮೋಹಕ ನೋಟ. ಪದೇ ಪದೆ ಕಾಡ್ತಿದ್ದು, ಪಟಗಾರ ಖೋಲಿ ಒಂದು ಜೈಲಾಗಿತ್ತು. ಗೋಡಿ ಮ್ಯಾಲ ಅಕಿ ಚಿತ್ರಗಳೊಂದೊಂದ ಸಾರಿ ಮೂಡಿ ಮಾಯ ಆಗಿದ್ದು, ಒಂದೊಂದು ನಿಮಿಷಗಳು ಯುಗಗಳಾಗಿದ್ದು. ಕಾಲೇಜಿನಾಗಿದ್ದಾಗ ಹುಡುಗಿಯರು ಎಷ್ಟು ಸಾರಿ ಪ್ರಪೋಜ್ ಮಾಡ್ಲಿಲ್ಲಾ, ಅವಾಗ ನನಗಿದ್ದ ತೆವಲು ಆಮ್ಯಾಲ ಯಾಕ ಕಳ್ಕೊಂಡೆ? ಎಲ್ಲಾ ಜವಾಬ್ದಾರಿಯಿಂದ ಹೊರಗ ಬಂದಿದ್ನೇ? ನನ್ನ ಕಾಲ ಮ್ಯಾಲ ನಾನ ನಿಂತೀನಿ ಅಂತ ತಿಳ್ಕೊಂಡ ಮಾಡಿದ್ನೆ? ಎಳ್ಳಾಪುರದ ಬುಡ್ಡಜ್ಜನ ಹೊಲ್ದಾಗ ಮಣ್ಣು ಪುಟ್ಟಿ ಹೊತ್ತಿದ್ದು ಬಗ್ಗಿ ಕಳೆತಗಿಯಾಕಗದೆ ಎಲ್ಲರಿಗಿಂತ ಹಿಂದಿದ್ದದ್ದು. ಕಿಟ್ಟಣ್ಣ ಕೊಟ್ಟಿದ್ದ ಸಿಗರೇಟ ರೊಕ್ಕ ದಾಗ ಉಳಿದಿದ್ದನ್ನ ಹೊಟ್ಟಿ ಹಸದಿದ್ದಕ್ಕ ಅಂಗಡಿಯೊಳಗ ತಿಂದು, ಬೊಯ್ಯಿಸಿಕ್ಕೊಂಡಿದ್ದ. ಯಾಕ ನೆನಪಾಗಲಿಲ್ಲಾ ನನಗ.

ಪ್ರಭು ಮದಲಿನ ಸಾಲು ನೋಡ್ದ, ಆ ಹುಡಗಿ ಬಂದಿರಲಿಲ್ಲಾ, ಶೆಟ್ಟಿ ಎಲ್ಡನೆ ಸಾಲಿನೊಳಗ ಕುಂತಿದ್ದ. ಪದ್ಯದ ಸನ್ನಿವೇಶಗಳನ್ನ ಬಿಡಿಸಿ ಹೇಳ್ತಿದ್ದ. 'ಸಾರ್' ಬಾಗಿಲ ಕಡೀಗ ನೋಡ್ದ. ಬನ್ನಿ, ಅಕಿ ಕುಂಟ್ಕೊಂತಾ ಒಳಗ ಬಂದ್ಲು 'ಓ', ಪ್ರಭು ಒಳಗೆ ಮರಕ ಪಟ್ಟ, ವಿಷಾದದ ನಗು ನಕ್ಕಿದ್ಲು. ಪ್ರಭುಗ ಮಾತು ನಿಂತಂಗಾತು. ಸುಧಾರಿಸಿಕೊಂಡವನ ಪಾಠದೊಳಗ ಪ್ರವೇಶ ಮಾಡಾಕ ನೋಡ್ದ ಸಾಧ್ಯ ಆಗ್ಲಿಲ್ಲಾ, ಪರಿಸ್ಥಿತಿ ಕೈ ಮೀರಿ ಹೋಗ ಬಾರ್ದು ಅಂದವನೆ ಹುಡ್ರ ಡೆಸ್ಕ್ ಕಡೀಗ ಬಂದು ತನ್ನ ಹಳೇ ಶೈಲಿಯೊಳಗ ಪಾಠ ಆರಂಭಿಸಿದ.

ಕುಂಟ ಹುಡುಗಿಯ ಪರಿಚಯ

ಪಾಠ ಮುಗಿಸಿಕೊಂಡು ಹುಡಗ್ರನೆಲ್ಲಾ ಮನಿಗ ಕಳಿಸಿ. ಯಾಕೋ ತಲಿ ನೋಯಿತ್ತಿದಕ್ಕ ಒಂದ ಗ್ಲಾಸ್ ಚಾ ಕುಡಿಯಾಕಂತ ಹೊಟೇಲೊಳಗ ಹೋದ. ಕುಂತು ಟೇಬಲ ಮ್ಯಾಲಿದ್ದ ಪೇಪರ ತಗೊಂಡು ಬಿಡಿಸಿದ. 'ಸಾರ್' ಅಂತ ಯಾರೊ ಕೂಗಿದಂಗಾಗಿ ಹಿಂದಕ ತಿರಗ್ದ, ಸುಮ್ಮಿ, ಮಾತಾಡ ಬಾರ್ದು ಅನಿಸಿತು. "ಗುರ್ತು ಸಿಗಲಿಲ್ಲಾ "ನಿಮ್ಮ ಶಿಷ್ಯೆ;" "ಕಾಲೇಜಿಗೆ ಹೋಗಿದ್ದೆ ಎಲ್ಡ ದಿನ, ಗೊತ್ತೆಲ್ಲಿ ಸಿಗಬೇಕು, ಅಂತ ಗೊಣಗಿಕೊಂಡ, ಏನು ಹೇಳಬೇಕೋ ತಿಳಿಯದೇ "ಹೌದಾ", ಅಷ್ಟಕ್ಕೇ ಬಿಡೋ ಲಕ್ಷಣ ಕಾಣಲಿಲ್ಲಾ,"ಎಲ್ಡ ಕ್ಲಾಸ್ ಹೇಳಿರಿ ಎಷ್ಟೊಂದು ಪಾಪ್ಯುಲರ್ ಆಗೀರ ಸರ್" ನಕ್ಕು, "ನಮ್ಮ ಹುಡುಗಿಯರು ಬರಿ...," ನಿಮ್ಮ ಹುಡುಗಿಯರಿಗ ಬ್ಯಾರೆ ಕೆಲ್ಸ ಇರಂಗಿಲ್ಲೇನು ಮಾಡಾಕ" ಸಿಟ್ನಿಂದ್ಲೆ ಹೇಳಿದೆ. "ಯಂತ ಸರ್, ನಿಮ್ಮ ಬಗ್ಗೆ ಅಷ್ಟೊಂದು ಅಭಿಮಾನ, ಆದರ ನೀವು ಸ್ತ್ರೀ ವಿರೋಧಿನಾ" ಮಕ ಸಣ್ಣಗ ಮಾಡ್ಕೊಂಡ್ಲು. ಅವನಿಗ ಮಾತಾಡಕ ಆಸಕ್ತಿ ಉಳದಿರಲಿಲ್ಲಾ. ನಾಳೆ ಇದೇ ವಿಷಯ ಗೊತ್ತಾದ್ರ, ಆಸಕ್ತಿಯಿಂದ ಕೇಳೋ ಪಾಠ ಹಾಳಾಗತೈತಿ ಅಂದ್ಕೊಂಡವನೆ ಹಲ್ಲಕಿರದು "ಹಾಗೇನಿಲ್ಲಾ, ಹಾಗೇನಿಲ್ಲಾ, ಎರಡೇ ಕ್ಲಾಸಿಗ ಮಾತ ಶುರು ಆಯ್ತು ಅಂತ ಅಂದೆ ಅಷ್ಟೇ. ಬನ್ನಿ ಚಾ ಕುಡಿಯೋಣ," ಯಾರಾದ್ರು ನೋಡಿದ್ರ ಹೆದರ್ಕಿ ಶುರು ಆತು. ಆಕಿ ನಿಜವಾಗ್ಲೂ ಅವನ ಮುಂದಿನ ಕುರ್ಚಿಮ್ಯಾಲ ಕುಂತ್ಲು. ಅವನಿಗ ಇರಿಸುಮುರುಸಾಗ ತೊಡಗಿತು. ಹಿಂದ ಮಾಡಿದ ತಪ್ಪೇನಾರ ಮತ್ತೆ ಆರಂಭ ಮಾಡಿದ್ನೆ ಅನುಮಾನತು ಅವನ ಮ್ಯಾಲ. ಹುಡುಗ ಬಂದವನ, "ಅಕ್ಕ ಬಿಲ್ಲ ತಗೊರ್ರಿ ಗಲ್ಲಾದ ಮ್ಯಾಲ" ಅಂದ, ಪ್ರಭುಗ ಒಂದು ತಿಳಿಲಿಲ್ಲಾ, "ಹೋಟ್ಲು ನಮ್ದು", ಅಂದವಳ ಎದ್ದ ಹೋದ್ಲು. ದೊಡ್ಡ ಹೋಟ್ಲು. ಗಿರಾಕಿನೂ ಚಲೋ ಐತಿ, ಇನ್ನೂ ತನಗ ಬಿಡುಗಡಿ ಇಲ್ಲಾ ಅಂದವನ ಆಕಿ ಹೇಳಿದ್ದನೆಲ್ಲಾ ತಿಂದು ಮುಗ್ಸಿ ಬಿಲ್ಕೊಡಾಕ ಹೋದ. ತಗೊಳಲಿಲ್ಲಾ. ಕೈ ಬಿಟ್ಟಿದ್ದು ಸಾಕಂದ್ಕೊಂಡವನೆ, ಸರಸರನೆ ನಡೆದ.

ಪ್ರತಿ ಪ್ರಶ್ನೆಗೂ ಆಕಿ ಉತ್ತರಿಸುತಿದ್ಲು. ಅಭಿಮಾನ ಉಂಟಾಗಿತ್ತು ಆಕಿ ಮ್ಯಾಲ, ಶೆಟ್ಟಿ ಸ್ವಲ್ಪ ಬದ್ಲಾಗಿದ್ದ, ಬ್ಯಾರೆ ಕ್ಲಾಸಿನೊಳಗ ತನ್ನ ಹಳೆ ಚಾಳಿ ಆರಂಭಿಸಿದ್ದ ಪ್ರಿನ್ಸಿಪಾಲರು, ಪ್ರಭು ತನ್ನ ಬಹಳ ಹಚ್ಕೊಂಡಿದ್ರು. ತನ್ನ ಹಳೆಯ ಜೀವನಾನ ಸ್ವಲ್ಪ ಸ್ವಲ್ಪ ಮರಿಯ ತೊಡಗಿದ. ಯಾವ ಕಾರ್ಯಕ್ರಮದೊಳಗು ಭಾಗವಹಿಸುತ್ತಿರಲಿಲ್ಲಾ ತಾನಾಯ್ತು ಕೊಟ್ಟಿದ ದಿನಕ್ಕೊರಡರಂತೆ ತರಗತಿ ಮುಗಿಸಿಕೊಂಡವನೆ, ಫೇಲಾಗಿದ್ದ ಹುಡುಗರಿಗೆ ಪಾಠ ಹೇಳಿ ಕೊಡೋದು ಬಿಟ್ರೆ. ಹಾಯಾಗಿ ದೂರದವರಿಗ ನಡದು ಹೋಗ್ತಿದ್ದ. ಹಂಡು ಪಾಟೀಲ ಅವಾಗವಾಗ ಭೆಟ್ಟಿಯಾಗಿ ಎಲ್ಲಾ ವಿಚಾರ ಮಾಡ್ಕೊಂಡು ಹೋಗ್ತಿದ್ದ. ಮನಸು ತಿಳಿಯಾಗ ತೊಡಗಿತು. ತಾನಿದ್ದ ಖೋಲಿ ಪಕ್ಕದಲ್ಲಿ ಬಾಡಿಗೆಗಿದ್ದ ವಸಂತ ಅನ್ನೋ ಸರ್ಕಾರಿ ಕಾಲೇಜು

ಮೇಷ್ಟ್ರು ಆವಾಗವಾಗ ಭೆಟ್ಟಿಯಾಗಿ ಸಂಜಿ ಮುಂದ ಅಡ್ಡಾಟಕ ಕಂಪನಿ ಕೊಡ್ತಿದ್ರು. 'ನೀವ್ಯಾಕ ಹಿಂಗಮಾಡಾಕ ಹೋದ್ರಿ' ಅಂದ್ರು ತಲಿಬುಡಾ ಅರ್ಥ ಆಗದೆ ಅನಿರೀಕ್ಷಿತ ಬಂದ ಪ್ರಶ್ನಿಗ ಉತ್ತರಿಸಾಕ ಏನೂ ಇರ್ಲಿಲ್ಲಾ." "ಇವತ್ತಿನ ಸ್ಥಿತಿಯೊಳಗ ವಿದ್ಯಾರ್ಥಿ ಶಿಕ್ಷಕರ ಸಂಬಂಧ ಬಹಳ ಸೂಕ್ಷ್ಮ ಆ ಗೈತಿ." ತನ್ನ ಹಿಂದಿನ ವಿಚಾರಗಳು ಇರ್ವಿಗ ಹ್ಯಾಂಗ ಗೊತ್ತಾತು, ಪ್ರಭು ತಡಬಡಿಸಿ' "ಅದೊಂದು ಕೆಟ್ಟ ವ್ಯಾಳೆ ಸರ್" ಅಂದ. "ಆ ಶೆಟ್ಟಿ ಹೋದ ವರ್ಷ ಬಂದಿದ್ದ ಹಿಂದಿ ಪ್ರಾಧ್ಯಾಪಕರಿಗೂ ಹಾಗ ಮಾಡಿ ಓಡಿಸಿದ್ದ." ಅಂದಾಗ ಪ್ರಭು ಉಸಿರು ಬಿಟ್ಟಿದ್ದ. "ಓ ಅವನ ವಿಚಾರಾನ ಸರ್, ನಾನ ನೋಡ್ಕೊಂತೀನಿ ಬಿಡ್ರಿ, ಎಂಥೆಂಥಹ ಘಟಾನುಗಟಿಗಳಿಗ ನೀರ ಕುಡಿಸೀನಿ ಇವನೇನ ಮಹಾ "ಅಂದೆ." ನೀವು ತಪ್ಪು ತಿಳ್ಕೊಂಡೀರಾ ಪ್ರೊಫೆಸರ್. ಅವನು ಎಲ್ಲಾ ನಾಟ್ಕನೂ ಬಲ್ಲಾ. ನಿಮ್ಮ ಹತ್ರ ತಪ್ಪು ಒಪ್ಪೊಂಡಂಗ ನಾಟ್ಕ ಮಾಡ್ಯಾನ. ನಮ್ಮ ಕಾಲೇಜಿಗ ಆವಾಗವಾಗ ಬರೋ ಕುಂಬಾರ ಅವನ ಬಗ್ಗೆ ಹೇಳ್ತಾ ಇರ್ತಾರ. ಆ ಕಾಲೇಜಿನ್ಯಾಗ ಎಷ್ಟು ವರ್ಷದಿಂದ ಅದಾನಂತ ತಿಳ್ಕೊಂಡೀರಾ, ಸುಮಾರು ಆರು ವರ್ಷಗಳಾದ್ರು ಆಗಿರಬೇಕು. ಯಾವುದಕ್ಕೂ ಅವನಿಂದ ದೂರ ಇರೋದು ಒಳ್ಳೆಯದು" ಅವರ ಮಾತು ಕೇಳ್ತಿದ್ದಂಗೆ ಸಾರ್ ನಂದು ತಪ್ಪಾತು ಅಂತ ವಿನಯದಿಂದ ನಾಟ್ಕ ಆಡಿದ ಶೆಟ್ಟಿ ನೆನಪಾತು

ಆ ಹುಡುಗಿಯನ್ನ ಗೋಳು ಹೊಯ್ಕಂತ್ತಿದ್ದ ಶೆಟ್ಟಿ. ಯಾರೊಬ್ರು ಅವನ ಉಸಾಬರಿಗ ಹೋಗ್ತಿರಲಿಲ್ಲಾ ಖುದ್ದಾಗಿ ಪ್ರಭು ಪ್ರಿನ್ಸಿಪಾಲರ ಹತ್ರ ಹೇಳಿದ್ದ "ನೋಡಪ್ಪ ನೀನು ಹೊಸಬ ನಿನಗ ಕಿರಿಕಿರಿ ಅನ್ನಿಸಿರಬೇಕು ಅವನನ್ನ ಆರವರ್ಷದಿಂದ ನೋಡ್ತಾನೆ ಆದೀನಿ ಏನ ಮಾಡ್ಲಿ ಹೇಳು. ಯಾರಿಂದ್ಲೂ ಬುದ್ದಿ ಕಲಿಸಾಕ ಆಗಿಲ್ಲ, ಅವನಿಗ ಬುದ್ಧಿ ಹೇಳಾಕ ಹೋದೋರೆಲ್ಲಾ ತಾವೆ ಅವನ ಸುದ್ದಿಗ ಹೋಗ ಬಾರ್ದಂತ ಬುದ್ಧಿ ತಿಳ್ಕೊಂಡಾರ ನೋಡಿದ್ದನ್ನ ನೋಡ್ದಂಗ, ಕಂಡದನ್ನ ಕಾಣದಾಂಗ ಇದ್ದು ಬಿಡು" ಪ್ರಭುಗ ಯಾಕೋ ಸರಿ ಅನಿಸಲಿಲ್ಲಾ, ಹಾಗಂತ ಏನು ಮಾಡಾಕೂ ಆಗದ ಅಸಹಾಯಕ. ಪ್ರತಿಭಟನೆ ಬ್ಯಾಡ ಅನ್ನಿಸ್ತು. ತನ್ನ ನೆಲೆ ಅಭದ್ರ ಆಗಿರೋ ಸಂದರ್ಭ ದೊಳಗ ಯಾರ ಕೂಡ ಜಗಳ ಆಡಿದ್ರು ಪ್ರಯೋಜ ಏನು ಅಂದ್ಕೊಂಡ. ಎಲ್ಲರೂ ಸುಮ್ಮನಿರೋವಾಗ ನನ್ದೇನು ಹೂಕೈತಿ ನಾನು ಸುಮ್ಮನಿದ್ರಾತು. ನಿರ್ಧರಿಸಿದ.

ಪಾಠದ ಹುಡ್ರೆಲ್ಲಾ ಕಾಯಾಕತ್ತಿದ್ರು. ಅವಸರದಿಂದ್ಲೆ. ತಯಾರಾಗಿದ್ದೆ. ಆಸಕ್ತಿ ಇರ್ಲಿಲ್ಲಾ ಕಾಲೇಜಿನೊಳಗ ನಡದ ಘಟನೆಗಳೆಲ್ಲಾ ಒಂದೊಂದಾಗೆ ಮರುಕಳಿಸಾಕ ಹತ್ತಿದ್ವು. ಕುಂಟ ಹುಡುಗಿಯ ಅಸಹಾಯಕತೆಯನ್ನ ಹಿಂಗ ದುರುಪಯೋಗ ಪಡ್ಕೋ ಬಾರದಾಗಿತ್ತು. ನಾನು ಅಕಿ ಹಂಗ ಅಸಹಾಯಕ ಉಸಿರು ಬಿಟ್ಟೆ. ಎಂಥ ವಿಪರ್ಯಾಸ. ಒಬ್ಬ ಹುಡುಗಗ ಎಲ್ಲರೂ ಹೆದರೋದಂದ್ರೇನು? ಮುತ್ಯಾಳ ಛಲೋ ಹುಡುಗಿರಿಯರಿ ಗಾದ್ರು ಕಾಡಿಸಿದ್ರು ಪರವಾಗಿಲ್ಲಾ ಆ ಕುಂಟಿಯ ಹಿಂದ ಯಾಕ ಬೆನ್ನು ಹತ್ಯಾನೋ. ಬಹಳ ಹೊತ್ತು ಅವನಿಗ ಸಮಾಧಾನ ಆಗ್ಲಿಲ್ಲಾ, ನಾ ಯಾಕ ಅಕಿ ಬಗ್ಗೆ ವಿಚಾರ ಮಾಡಬೇಕು. ಅಕೀಗೂ ನನಗೇನು ಸಂಬಂಧ ಇವತ್ತಿಗ ನಾಲ್ಕನೇ ಕ್ಲಾಸು. ಅಷ್ಟೇ, ಹಿಂದಕ ತಿಂದ

ಪೆಟ್ಟು ದೊಡ್ಡದು. ಹುಡ್ರಿಗೆಲ್ಲಾ ಮದ್ಲೆ ಕಳಿಸಿದ, ಅವನಿಗ ಗೊತ್ತಿಲ್ಲಂದಂಗಾ ಮನಸು ಆ ಹುಡುಗಿಯ ಹೊಟೇಲ ಕಡೀಗ ಹೊಂಟಿತು. ಬ್ಯಾಡ ಅನಿಸಿತು ಚಾ ಕುಡಿಯೋ ಚಟ, ಖೋಲಿಗ ಚಾವಿ ಹೊಕ್ಕೊಂಡವನೇ ಹೊಂಟೆ ಬಿಟ್ಟ.

ಚಾ ಕುಡಿದವನೆ ಬಿಲ್ಲು ಕೇಳ್ದ. "ಅಕ್ಕ ಯಾವಗ ಬಂದ್ರು ಬಿಲ್ಲು ಕೊಡೋದು ಬ್ಯಾಡ ಅಂದಾರ ಸಾರ್" ಅಂದ ಹುಡುಗ, "ನೋಡಯ್ಯಾ ನನಗೆ ಅವರ ಋಣದಾಗ ಇರಾಕ ಇಷ್ಟ ಇಲ್ಲಾ ಸುಮ್ನೆ ಕೊಂಡಂತ" ಗದರಿಸದೆ. ಬಿಲ್ಲು ಟೇಬಲ್ ಮ್ಯಾಲಿಟ್ಟು ರೊಕ್ಕ ತಗಿಯಾಕ ಕೈ ಹಾಕ್ದ. ಅವನನ್ನೇ ದಿಟ್ಟಿಸಿ ನೋಡಾಕ ಹತ್ತಿದ್ದ. ವ್ಯಕ್ತಿ ಎದ್ದು ಬಂದ, "ನೀವು ಪ್ರಭುಸರ್ ಅಲ್ಲಾ" ಅಂದ, ಇವನಿಂದ್ಲೆ ಜೀವನ ಹಾಳಾಗಿದ್ದು ಸುಳಿವು ಸಿಗ್ತಂದ್ರ ಏನಾದ್ರು ಕಡ್ಡಿ ಮಾಡ್ತಾನ ಅಂದವನೆ "ಹೌದಪ್ಪ" ಅಂತ ಹೆಚ್ಚಿಗೆ ಮಾತನಾಡದೆ ಜಾಗ ಖಾಲಿ ಮಾಡಿದ. ದುರ್ಗೇಶಿಗ ನಿಧಿ ಸಿಕಷ್ಟು ಖುಸಿಯಾಗಿತ್ತು. ಯಂಕಾ ನನ್ನ ಕರ್ದ. "ಅವನಲೇ ನಮ್ಮ ಡಾಕ್ಟರ್ ಹುಡಗಿ ಮಲ್ಲಿಕಾಳ ಮಾಜಿ ಪ್ರಿಯತಮ. ಈಗ ಕೈಯಿಂದ ತಪ್ಪಿಸ್ಕೊಂಡು ಮಾಯ ಆದ "ಅಂದ" ಎಲ್ಲೋ ಒಂಚೂರು ನಮ್ಗು ಕರಿ ಬಾರದಾಗಿತ್ತು." ಅಂದ ಯಂಕ್ಯಾ. ಗಲ್ಲಾದ ಮೇಲೆ ಕುಂತಿದ್ದ. ನಡು ವಯಸ್ಸಿನ ವ್ಯಕ್ತಿಯನ್ನು ಪ್ರಭು ಬಗ್ಗೆ ಕೇಳಿದ್ರು.

ಪ್ರಭುಗ ಯಾಕೋ ಮೈಮುಳ್ಳಾದಂತಾಗಿತ್ತು. ದುರ್ಗೇಶಿಗ ಮೂತಿ ತೊರ್ಸ ಬಾರದಾಗಿತ್ತು ಅನ್ಕೊಂಡ. ಮತ್ತೇನ ಗದ್ಲಾ ಮಾಡ್ತಾನೋ, ಎಲೆಕ್ಷನ್‌ದಾಗ ಎಂ.ಎಲ್.ಎ. ವಿರುದ್ಧ ಒದರಾಡಿದ್ದು ದುರ್ಗೇಶಿನಪ್ಪ ಎಂ.ಎಲ್.ಎ. ಚೇಲಾ. ಹಂಡುಪಾಟೀಲಗ ತಿಳಿಸಬೇಕು ಅಂದವನ, ಅವನು ಮನಿಕಡಗ ಹೊರಟ. ಅವನ ಕೂಡ ಯಾರ‍್ಯಾರಿದ್ರೋ. ಶನಿನನ ಮಕ್ಕಳು ಇಲ್ಲೂ ಗಂಟ ಬಿದ್ರ. ಶಿರಗುರನೊಳಗ ಮಕ ತೊರ್ಸಾಕ ಲಾಯಕ್ ಇಲ್ದಿಂಗ ಮಾಡಿ ಬಿಟ್ರು. ಇವತ್ತೇನಾದ್ರು ಕಿತಬಿ ಮಡೇ ಮಾಡ್ತಾರನ್ನೋದು ಖಾತ್ರಿ ಆತು. ಇಲ್ಲಾ ನೌಕರಿ ಕಳದ್ರ? ಉತ್ತರ ಸಿಗದಾತು. ಅವಸರದಿಂದ್ಲೆ ಹೊರಟ. ಪಾಟೀಲನ ಮನಿಗ ಬರೋದ್ರಾಗ ನೂರು ಎಂಟ ವಿಚಾರ ಮಾಡಿದ. "ಹಂಡು ಅದಾನೇನ್ರಿ" ಒದರಿದ. "ಯಾರು? ಪ್ರಭು ಏನ" ಚಿಗಪ್ಪ ಹೊರಗ ಬಂದಿದ್ರು." ಇಲ್ಲೇನ್ರಿ ಹಂಡು" ಅಂದ. ಇಲ್ಲ ಹಳ್ಳಿಗ ಹೋಗ್ಯಾನ. ಹೊಲ ನೋಡಾ ಕಂತ. ಬಾ ಕುಂದ್ರು. ಯಾಕೋ ಅವಸರದಾಗ ಇದ್ದಂಗ ಕಾಣತೈತಿ. ಏನಾರ ಕೆಲ್ಸಿತ್ತೇನು ಅವನತಾವ."

"ಏನು ಇಲ್ಲೇಳ್ರಿ ಹಂಗ ಭಾಳಿ ದಿನಗಳಾಗಿದ್ವಲ್ರಿ, ನನ್ನ ಖೋಲಿ ಕಡೀಗ ಬಂದಿದ್ದಿಲ್ಲಾ ಅದಕ್ಕ ನೋಡಿ ಹೋಗಾನಂತ ಬಂದೆ" ಅಂದವನ ಮೆಟ್ಲಿಳಿದು ಮಾರ ದೂರ ಹೋಗಿದ್ದ. ಖಾಲಿ ಅನ್ಸಾಕಹತ್ತಿತು ತಲಿ ಭಾರ ಆಗಿತ್ತು. ಒಂದ ಸಲ ಒತ್ಕೊಂಡ. ಏನ ಮಾಡಾಕೋ ತಿಳಿಲಿಲ್ಲಾ. ಖೋಲಿಗ ಹೋಗೋದು ಬ್ಯಾಡ ಅನಿಸಿತು. ಹೊರಟ ರಸ್ತೆಗುಂಟು, ಎಲ್ಲಗೆ? ನಿಶ್ಚಿತ ಗುರಿ ಇರ್ಲಿಲ್ಲಾ.

ಊರಿಂದ ಹೊರಗ ಬಂದಿದ್ದ, ಯಾರದೋ ತ್ವಾಟದ. ಮುಂದಿದ್ದ ಕಟ್ಟಿ ಮ್ಯಾಲ ಕುಂತ. 'ಸರ್, ದೂರ ಬಂದಿರಿ' ಬೆಚ್ಚಿ ಹಿಂದಕ ತಿರಗಿದ. ಸುಮ್ಮಿ, 'ನೀವು? ಹುಬ್ಬೇರಿಸಿದ"

ತೋಟ ನಮದ್ದು, ವರ್ಷ ಆತು ಅಪ್ಪ ಖರೀದಿಸಿ, ಒಳಗ ಬರಹುದಲ್ಲಾ' ಅಂದ್ನು "ಪರವಾಯಿಲ್ಲ ಬಿಡ್ರಿ ಇಲ್ಲೆ ಸ್ವಲ್ಪ ಹೊತ್ತು ಕುತ್ಕೊಂಡು ಹಾಯಾದ ಸಂಜಿ ತಂಪಾದ ಗಾಳಿ ಮನಸಿಗ ಆಹ್ಲಾದ ಅನ್ಸಾಕ ಹತ್ಯತಿ." "ನಡುವೆ ಬಾಯಿ ಹಾಕಿದ್ನು, "ನೀವು ತಪ್ಪು ತಿಳ್ಕೊಳೊಲ್ಲಾಂದ್ರ ಒಂದ ಮಾತ ಕೇಳ್ಲಿ ಸರ್" ಆಕಿ ಮಕ ನೋಡ್ದೆ, ಮುಗ್ದ ಮಗು ವಿನಂತಹುದು. "ಕೇಳ್ರಿ" ಅಂದವನ ಮತ್ತೆ ಆ ಬದಿಯ ಬಿದ್ದ ಮರವನ್ನೇ ದಿಟ್ಟಿಸ ತೊಡಗಿದ "ನಿಮ್ಮ ಭೂತವನ್ಯಾಕ ನೀವು ಮರಿಬಾರ್ದು" ಅವನಿಗ ಸಿಡ್ಲು ಬಡದಂಗಾತು. ಯಾರೋ ಕಪಾಳಕ ರಪಂತ ಬಾರ್ಸಿದಂಗಾಗಿ, ತೀಕ್ಷ್ಣ ನೋಟದಿಂದ ಅಕಿ ಕಡಿಗ ನೋಡ ತೊಡಗಿದ." ನನಗೆಲ್ಲಾ ಆ ಹುಡಗ ಹೇಳಿದ. "ಅವತ್ತು ನೀವು ನನ್ನ ಬಹಳ ಹೊತ್ತು ಗಮನಿಸಿದ್ದನ್ನು ನೋಡಿದ್ದೆ. ಅವನ್ಯಾರೋ ಬಂದಿದ್ನಲ್ಲಾ ಅವನು ನನಗ ಮಲ್ಲಿಕಾ ಅಂತ ತಿಳ್ಕೊಂಡು ತಪ್ಪಾಗಿ ಊಹೆ ಮಾಡಿದ್ದ ನಾನು ಕುಂಟ್ಕೊಂತ ನಡೆದಾಗಲೇ ಅಲ್ಲ ಅಂದ" ಅಕಿ ಏನೇನೋ ಮಾತಾಡ ತೊಡಗಿದಳು. ಪ್ರಭು, ಹೌ ಹಾರಿದ. ಏನೂ ಮಾತಾಡಾಕ ಹೋಗಲಿಲಲ್ಲಾ" "ಬೇಜಾರಾಯ್ತು ಸರ್ ಹಿಂಗ ಕೇಳಿದ್ದು ನಾನು ಸಣ್ಣಾಕಿ ಅಂದಿದ್ದು ತಪ್ಪಾತು" ಅಂತ ನೊಂದ ಕೊಂಡ್ಲು" ಇಲ್ಲಾ ಹಂಗೇನು ಇಲ್ಲಾ. ಈಗ ನಾನು ಅದೋ ಅಲ್ನೋಡಿ, ಯಾವಗೋ ಬಿರುಗಾಳಿ ಬೀಸಿ ಉರಳೈತಲ್ಲಾ ಆ ಹೆಮ್ಮರ ಹಂಗ ಆಗೀನಿ. ಬೀಸಿದ ಆ ಬಿರುಗಾಳಿಗ ಅಡ್ಡಲಾಗಿ ನಿಂದ್ರಾಕ ತಾಕತ್ತಿಲ್ದೆ. ನೆಲ್ದ ಮ್ಯಾಲ ಬಿದ್ದು ಅಸ್ತಿತ್ವಕ್ಕಾಗಿ ಹಪಹಪಿಸಾಕ ಹತ್ತೀನಿ. ಏನ್ಮಾಡ್ಲಿ ಹೇಳಿ, ಹೊಟ್ಟಿ ತುಂಬಕೊಳ್ಳಾಕ ಒಂದ ಕೆಲ್ಸ ಬೇಕಲ್ಲ ಅದಕ್ಕ ಎದಿಯೊಳಗಿನ ಖಾಲಿ ಭಾವನೆಗಳಗಿ ಸುಳ್ಳನ ಗಿಲೀಟ್ ಮಾಡಿ ಹೇಳಿ, ಹೊಟ್ಟಿ ಹೊರ್ಕೊಳಾಕತ್ತೀನಿ" ಆಳದೊಳಗ ನೋವಿತ್ತು. ಸುಮ್ಮಿ ಆತನ ಅಂತರಾಳದೊಳಗ ನಡಿತಿರೊ ಕಳವಳ ಗಮನಿಸಿದ್ನು "ನನ್ನ ನೋಡಿ, ಒಂದ ಕಾಲು ಕುಂಟು ಆದ್ರೂ ಜೀವನಾನ ಒಂದು ಪಣವಾಗಿ ತಗೊಂಡೀನಿ, ಶೆಟ್ಟಿ ಪ್ರತಿದಿನ ನನ್ನ ಕಾಡ್ಸಿಕಾಡ್ಸಿ ಹಿಂಡಿ ಹಿಪ್ಪೆ ಮಾಡ್ತಾನ ಯಾಕ ಗೊತ್ತ. ನಮ್ಮಪ್ಪಗ ನಾನೊಬ್ಬಳೇ ಮಗಳು ಗಂಡಿಲ್ಲಾ, ಹೆಣ್ಣಿಲ್ಲಾ, ಆಸ್ತಿ ಪೂರ್ತಿ ನನಗ ದಕ್ಕತೈತಿ ಅಂತೇಳಿ ಯಾರೋ ಹೇಳ್ಯಾರ, ನಾನಿರೋದು ಒಬ್ಬಳೇ. ಅವನು ನನ್ನ ಬುಟ್ಟಿಗ ಹಾಕ್ಕೊಳ್ಳಾಕ ಪ್ರಯತ್ನ ಪಡ್ತಾ ಅದಾನ." ಹೊಟ್ಟೆಯೊಳಗಿದ್ದ ಸಂಕಟ ಉಸರಾಗಿ ಹೊರಗ ಬಂತು. ಪ್ರಭು ಅಕಿಯನ್ನ ಗಮನಿಸತೊಡಗಿದ.

ಬಹಳ ಹೊತ್ತು ಮಾತಾಡ್ಲಿಲ್ಲಾ ಆಕಿ ಅಳಾಕತಿದ್ಲು. ಅವನು ನಿರ್ಲಿಪ್ತನಾಗಿ ಕುಂತಿದ ಕೆಲಸದ ಹುಡಗ 'ಅಕ್ಕ' ಅಂತ ಕೂಗಿದ. ಅವಸರದಿಂದ ಕಣ್ಣು ಒರೆಸಿಕೊಂಡು "ನಮ್ಮೊಟ್ಟಿಗ ಬರ್ರಿ ಸಾರ್ ಜೀಪಿನ್ಯಾಗ "ಒತ್ತಾಯ ಮಾಡಿದ್ಲು"ಇಲ್ಲಾ ನಾನು ನಡದು ಬರ್ತೀನಿ ನೀವು ಹೊರಡ್ರಿ" ನಿರಾಕರಿಸಿದ. ಎಲ್ಲಾ ಆರಂಭಗಳು ಹಿಂಗೆ ಆತ್ಮೀಯಿ ಆರಂಭ ಆಗ್ತಾವ. ಅಂತ್ಯಮಾತ್ರ ದುರಂತ. ಅವನಿಗ ಸಿಟ್ಟು ಬಂದಿತ್ತು. 'ದುರಂತ' ಬಾಯಿಬಿಟ್ಟು ಒದರಿದ್ದ." ನಾನು ಗ್ರಹಿಸಬಲ್ಲೆ ಸರ್, ನಿಮ್ಮ ಮನಸಿನ ಏರಿಳಿತಗಳನ್ನ ಆದ್ರ ಪ್ರತಿಯೊಂದು ಘಟನೆಗಳು ದುರಂತ ಮಯ ಆಗಿರೊಲ್ಲಾ." ನಕ್ಕಳು ಅವನಿಗೆ ಸಿಟ್ಟು ಬಂತು. "ನಿನ್ನ ಮಾತಿನರ್ಥ" "ನಾಳೆ ಈ ಕಡೆ ಬನ್ನಿ ಹೇಳ್ತೀನಿ." ಒಂದ ಸಲ ನಕ್ಕಳು ಕುಂಟುತ್ತ ಓಡಿದಳು. ಹುಚ್ಚ

ಹುಡುಗಿ ಪರಿಚಯವಾಗಿ ಒಂದು ವಾರವಾಯ್ತು ಆಗಲೇ ಸಲಿಗೆ ಶುರು ಮಾಡ್ಯಾಳ ಎದ್ದವನೆ ಊರ ಕಡಿಗ ಹೊರಟ.

ಹಂಡು ಪಾಟೀಲ ನಿಂತಿದ್ದ. "ಬಹಳ ಹೊತ್ತಾತ" ಕೇಳಿದ "ಇಲ್ಲಾ ಈಗ ಬಂದೆ ಮನೀಗ ಬಂದಿದೆ ಅಂತ ಚಿಗವ್ವ ಹೇಳಿದ್ಲು ಕುಂದ್ರು ಅಂತ ಹೇಳಿದ್ರು ಕುಂದ್ರಲಿಲ್ಲಾ ಅಂದ್ಲು ಯಾಕೋ ಏನ ವಿಷಯ "ಕೇಳಿದ." ಏನು ಇಲ್ಲೊ ಶಿರಗೂರನೊಳಗ ಬ್ಲಾಕ್ ಮೇಲ್ ಮಾಡಿದ. ಎಂ.ಎಲ್.ಎ. ಚೇಲಾನ ಮಗ ಇವತ್ತು ಅಚಾನಕ್ ಬೆಟ್ಟಿಯಾಗಿ ಬಿಟ್ಟ. ಅವನು ಇಲ್ಲೂ ನನ್ನ ಬೆನ್ನು ಹತ್ತತಾನ ಯಾಕೋ ಹೆದರಿಕೆ ಆತು. ಅದಕ ಬಂದಿದ್ದೆ "ಅಂದೆ" ನಿಂದೇನು ಪರ್ಮನೆಂಟ್ ನೌಕರಿ ಅಲ್ಲಾ, ಕೆಲ್ಸ ಹೋದ್ರೇನಂತ ಮನಿಪಾಠ ಹೇಳ್ತಿಯಲ್ಲ ಬೇರೆ ಏನಾದರೂ ನೋಡೋಣ. ಹೆದರ ಬ್ಯಾಡೋ ಒಂದ ಸಲ ಸಣ್ಣ ತಪ್ಪಾತು ಅಂದ್ರ ನಿನ್ನ ದೌರ್ಬಲ್ಯ ತಿಳ್ಕೊಂಡು ಅದರ ಉಪಯೋಗ ಪಡಕೊಳ್ಳೋ ಜನ ಭಾಳ ಅದಾರ" ಪಾಟೀಲ ವಿಚಾರ ಮಾಡ ತೊಡಗಿದ" ಅವನು ಬಿಡೋದಿಲ್ಲಾ ಏನಾದ್ರು ಮಾಡ್ತಾನ. ನೀ ಒಂದಿಷ್ಟು ದಿನ ಹಳ್ಳಿಗ ಹೋಗಿ ಬೇಗ ಬಂದು ಬಿಡು" ಅಂದ ಪ್ರಭು, "ಸರಿ ನಾನು ಒಂದಷ್ಟು ದಿನ ನಿನ್ನ ಸಂಗಡ ಇರ್ತೀನಿ ನಾಳೆ ಬರ್ತೀನಿ ಖೋಲಿ ಚಾವಿ ಕೊಡು" ಅಂದ. ತೆಗದುಕೊಟ್ಟ ಪ್ರಭು.

ಆ ಕಡೆ ಈ ಕಡೆ ನೋಡ್ಕೊಂತ್ಲೆ ಹೊಂಟಿದ, ಶಿರಗೂರು ದೇಗಲೂರು ನಲವತ ಕಿಲೋ ಮೀಟರ್. ಅವನಿಗ ಬರಾಕೇನು ದೂರಲ್ಲ. ಅಂಜಿಕೆಯಿಂದ್ಲೆ ಪ್ರಿನ್ಸಿಪಾಲರ ಕೋಣೆಗ ಹೋದ. ಪ್ರಬು ಹೆದರಿ ಹೊರಗ ಬರಾಕ ಹೆಜ್ಜಿ ಕಿತ್ತ ಮುಂದಿಂದ ದುರ್ಗೇಶಿ ಬಂದೇ ಬಿಟ್ಟ. ಮಕ ಸಣ್ಣದಾತು. ಮಿಸಕಾಡಾಕ ದಾರಿ ಇಲ್ದೆ ಡಾಕ್ಟರ ಸಾಮಿ ಪಕ್ಕದ ಕುರ್ಚಿ ಮ್ಯಾಲ ಕುಂತ. ಪ್ರಿನ್ಸಿಪಾಲರು ಮಾತನಾಡಲಿಲ್ಲ ನನಗ ಪಾತಾಳಕ್ಕೆ ಇಳಿತಿರೋ ಅನುಭವ ಆಗಿ ಉಸಿರುಕಟ್ಟಾಕತ್ತಿತ್ತು. "ಸರ್ ನನಗ ಕ್ಲಾಸ್ ಐತಿ" ಅಂದೆ, ಪ್ರಿನ್ಸಿಪಾಲ 'ಹೋಗಿ' ಅಂದ್ರು. ಬಿಡುಗಡೆಯಾದ ಅನುಭವ. ಗಂಭೀರವಾಗೆ ಒಳಗ ಹೋದ. ಶೆಟ್ಟಿಗ ಅವಾಗ್ಲೆ ಸುದ್ದಿ ತಲುಪಿತ್ತು. ಎಲ್ಲಾ ಹುಡುಗರಿಗೂ ಹೇಳಿದ್ದ ಅವನ ಮಾತನ್ನ ಯಾರು ಕೇಳದೆ ಪಾಠ ಕೇಳ್ತಿದ್ರು. ಎಂದಿನ ಆಸಕ್ತಿ ಇಲ್ಲದೆ ಸಾಗಿತ್ತು. ಹುಡುಗರಿಗೆ ಬ್ಯಾಸರ ಬರ ಬಾರ್ದಂತೇಳಿ ಎಲ್ಲವನ್ನೂ ಮರತಿದ್ದೆ, ಅಕಿ ಗಮನಿಸಿದ್ಲು ಅವನ ಎಲ್ಲಾ ವಿಷಯ ಆಕೀಗ ತಿಳಿದಿತ್ತು. ಅವರದೇನು ತಪ್ಪಿಲ್ಲಾ. ಅವರ ಪಾಠ ಕೇಳಿದ ಈ ಹುಡುಗಿಯರು ಅವತ್ತೆ ಮಾತಾಡಿದ್ದು ಕೇಳಿದ್ರ. ಆ ಮಲ್ಲಿಕಾಳ ಇವರ ಹಿಂದ ಬಿದ್ದು ಕೈ ಕೊಟ್ಟಿರಬೇಕು, ಪಾಪ ನೌಕರಿ ಕಳ್ಕೊಂಡ್ರು, ಕೊನೆಗ ಅಕಿನೂ ದಕ್ಕಲಿಲ್ಲಾ ಎಷ್ಟು ನೊಂದಿರಬೇಕು. ನಾನು ಯಾವಾಗೋ ಹೋಗಿದ್ದೆ ತರಗತಿಯಿಂದ.

"ನೀವು ಅಂಜೋದು ಬ್ಯಾಡ ಡಾಕ್ಟರ ಹೇಳಿದ್ರು ಆ ಹುಡುಗ ಹೇಳಿದ ಹೂಂ ಅಂದು ಕಳಿಸೀನಿ. ಎಂ.ಎಲ್.ಎ. ಡಾಕ್ಟರಿಗ ಹೇಳಿ ಕಳಿಸ್ಯಾರ. ಹುಡ್ರು ನಿಮ್ಮನ್ನ ಒಪ್ಕೊಂಡಾರ, ಇಂಗ್ಲೀಷ್‌ಗೆ ಯಾರು ಬರೋದಿಲ್ಲಾ ಹುಡುಗರ ಭವಿಷ್ಯ ಮುಖ್ಯ. ಹಿಂದೆ ಮಾಡಿದ ತಪ್ಪು ಮತ್ತೊಂದ ಸಲ ಪುನರಾವರ್ತಿಸೋದಿಲ್ಲಾ ಅನ್ನೋ ಗ್ಯಾರಂಟಿ ಐತಿ ನನಗ

ಯಾಕಂದ್ರ. ನೀವು ಪಾಠ ಚೆಂದಾಗಿ ಮಾಡ್ತೀರಾ, ಒಳ್ಳೆಯ ಡ್ರೆಸ್ ಮಾಡ್ತೀರಾ, ನಿಮ್ಮ ಎತ್ತರದ ನಿಲವು ಸಹಜವಾಗಿಯೇ ಹುಡುಗಿಯರ ಮನಸಿನೊಳಗ ನಾಟಿತೈತಿ ಹಾಗಂತ ನೀವು ದಾರಿತಪ್ಪಬಾರದು." ಉಪದೇಶ ಸಾಗಿತ್ತು. "ಖಂಡಿತಾ ಇಲ್ಲಾ ಸರ್ ಅನ್ನ ಬೆಂದ್ಯೆತೋ ಇಲ್ಲಾಂತ ಒಂದ ಸಲ ನೋಡ್ಡೋದು ಹಗಲ್ಲೆಲ್ಲಾ ಅಲ್ಲಾ" ದೃಢವಾಗಿ ಹೇಳಿದ ಒದು ಹಂತ ದಾಟಿ ದಂಗಾತು. ಆದ್ರ ಅವರು ಅಷ್ಟಕ್ಕೆ ಬಿಡೋ ಮಂದಿಯಲ್ಲ ಮತ್ತೆ ಹೆಂಗಾದ್ರು ಕಿರಿಕಿರಿ ಕೊಟ್ಟೆ ಕೊಡ್ತಾರ. ಬೋಳಿಮಕ್ಕಳು ಅವಾಗ ಮಾನಸಿಕವಾಗಿ ಹಿಂಸೆ ಮಾಡಿದ್ದು ಸಾಕಾಗಲಿಲ್ಲಾಂತ ಕಾಣತೈತಿ. ನಾನೇನಾದ್ರು ತಕರಾರು ಮಾಡಿದ್ನೆ. ಅವನ ಮಗಳ ತಪ್ಪನ ಹೇಳ್ತಾನೇನು ನೋಡು. ನಂದೆ ತಪ್ಪನ್ನ ತಗಿತಾನ, ಎಷ್ಟು ಕಾಡತ್ತಾರ ನೋಡೋಣ ಗಟ್ಟಿ ಮನಸು ಮಾಡಿದೆ.

ನಾನು ನಿರ್ಧಾರ ತಗೊಳೋದರಲ್ಲಿ ಬಹಳ ದುರ್ಬಲನಾಗಿದ್ದೆ ಡೋಲಾಯಮಾನ ಸ್ಥಿತಿಯಲ್ಲಿ ಸರಿಯಾಗಿ ನಿಶ್ಚಯಿಸುವ ಗೋಜಿಗ ಹೋಗ್ತಿರಲಿಲ್ಲಾ. ಅವಳ ತೋಟ ಹತ್ತಿರ ಆಗ್ತಿದ್ದಂಗ ಹೋಯ್ದಾಟ ಶುರು ಆಗಿತ್ತು. ಬೇಡ-ಬೇಕುಗಳ ನಡುವೆ ಕಟ್ಟೆ ಮ್ಯಾಲ ಕುಂತಿದ್ದೆ. ಸುಮ್ಮಿಯ ಸುಳಿವೆ ಇರ್ಲಿಲ್ಲಾ. ನಾನು ಹೇಳಿದ ಮ್ಯಾಲ ನನ್ನ ಗುಣ ತಿಳ್ಕೊಂಡು ಈಕೀಗೂ ಬ್ಯಾಡ ಆಗಿರಬೇಕು. ನಾನು ಮೂರ್ಖ ಹಂಡುಪಾಟೀಲನ ಕಣ್ಣು ತಪ್ಪಿಸಿ ನನ್ನ ದುರ್ಬಲ ಮನಸಿನ ಮಾತು ಕೇಳ್ಕೊಂಡು ಬಂದ್ನಲ್ಲಾ ನಾನು ಬರಬಾರದಾಗಿತ್ತು. ಯಾಕ ಬಂದೆ? ಊಹೂಂ.... ಅವನಿಗ ತಿಳಿಲಿಲ್ಲಾ. ಆ ಹುಡುಗಿ ಹೇಳಿದಕ್ಕೆ ಬಂದನ್ನೆ? ಇಲ್ಲಾ ನಡಿಯೋ ದಿನದ ಅಭ್ಯಾಸದಿಂದ. ಊಹಿಸದಾದೆ. ಮತ್ತೊಂದು ತಪ್ಪು ಮಾಡ್ತಿದ್ದಿನೇನು?

ಕೈಗ ಏನೋ ತಾಗಿದಂಗಾಗಿ ಸರಿಸ್ಕೊಂಡೆ. "ಯಾವಗ ಬಂದಿ" ಕೇಳಿದೆ "ಈಗ ಬಂದೆ ಸರ್ ನೀವು ಬರ್ತೀರಿ ಅಂದ್ಕೊಂಡಿರಲಿಲ್ಲಾ, ನಿನ್ನೆ ಬಂದಿದ್ದ ಅವನು ಕಾಲೇಜಿನ ಹತ್ರ ಇದ್ದ. ನಿಮಗ್ಯಾಕ ಗಂಟಬಿದ್ದಾನ." ಹುಬ್ಬೇರಿಸಿದ್ಲು. "ಅದೆಲ್ಲಾ ನನ್ನ ಕರ್ಮ ನಾನು ಮಾಡಿದ ಜೀವನದ ಮದ್ಲ ತಪ್ಪಿನ ಫಲ ಅದೆಲ್ಲಾ" ಸುಮ್ಮನಾದೆ "ನೀವು ಸಾಹಿತ್ಯ ಓದಿಕೊಂಡು ಎಲ್ಲಾ ಕಳ್ಕೊಂಡೋರ ತರಹ ಆಡಬಾರದು ಕೀಟ್ಸ್‌ನ ಬಗ್ಗೆ ಹೇಳೋ ನೀವೆ ಕೀಟ್ಸ್ ಆಗಬಾರದು. ಆಶಾವಾದಿಯಾಗಬೇಕು" ಜ್ಞಾನಿಹಂಗ ಉಪದೇಶ ಆರಂಭಿಸಿದ್ಲು. ಅವನಿಗ ಆಶ್ಚರ್ಯ ಆಯ್ತು ವಯಸ್ಸಿಗ ಮೀರಿದ ಯೋಚನೆ. "ನನ್ನ ದುರ್ಬಲ ಮನಸ್ಸು ನನ್ನ ಆಶಾವಾದಿ ಗುಣಾನ ನುಂಗಿ ಹಾಕಿದೆ" ನನ್ನೆ ನೋಡಿದ್ಲು. ನಾನು ನೆಲಾನೋಡ್ತಿದ್ದೆ. ಬಡತನ ಕೂಲಿ ಮಾಡೊ ತಂದೆ ತಾಯಿ. ಕಲಿಯೋದನ್ನ ಬಿಟ್ಟು ಅವರನ್ನ ನೋಡ್ಕೊಳ್ಳಾಕ ಹತ್ತಿರೋ ತಮ್ಮ, ಒಪ್ಪತ್ತಿನ ಊಟಕ ಗತಿ ಇಲ್ದೆ ಎಂ.ಎಂ. ದೊಳಗ ಫೇಲಾಗಿ ನೌಕರಿ ಕಳ್ಕೊಂಡು. ಯಾರದೋ ಮಾತ ಕೇಳಿ ಎಲೆಕ್ಷನ್‌ನಲ್ಲಿ ಸೋತು. ಅವಮಾನಿತನಾದೆ. ಒಂದ ದಿನ ಅಕಿ ಅಪರಿಚತರ ಹಂಗ ಮದವಿ ಕಾರ್ಡು ಎಸದು ಹೋಗಿದ್ಲು. ಇವೆಲ್ಲ ಆದ ಮ್ಯಾಲ ಯಾವ ನಂಬಿಕೆಯಿಂದ ಆಶಾವಾದಿಯಾಗಿ ರಲಿ ಹೇಳಿ "ಅಕಿಯನ್ನ ನೋಡಿದೆ." ಇಷ್ಟೇನಾ ನಾನು ಹುಟ್ಟಿದಂದಿನಿಂದ ಬಡತನ ಅನುಭವಿಸಿ ಈಗ ಏನೋ ಅಪ್ಪ ದುಡಿದು ಈ ಮಟ್ಟಕ ಬಂದಾರ. ನನ್ನ ಹಿಂಸಿಸುತ್ತಿದ್ದದು ನನ್ನ ಕಾಲು, ಶಾಲೆಯ ದಿನಂದಿಂದಲೂ

ಕಾಡೋ ಹುಡ್ರು ಕುಂಟಿ ಅಂತ ಹೀಯಾಳಿಸುತಿದ್ರು ನಾನು ಕುಂಟಿಯಾದ್ರು ನನ್ನ ನೋಡಿ ಹಾಳು ಮಾಡಾಕ ಬೆನ್ನು ಹತ್ತಿದವರು ಕೆಲವರು. ಅಸಹಾಯಕಳಾದ್ರು ನೀನೇ ಧೈರ್ಯವಾಗಿ ಪರಿಸ್ಥಿತಿ ಹೆದರಿಸ್ತಾ ಅದೀನಿ. ನೀವು, ಸುರದ್ರೂಪಿ ಗಂಡಸು. ನಮ್ಮಂತ ಎಷ್ಟೋ ಹುಡುಗಿಯರು ನಿಮ್ಮ ಜೊತಿಗ ಮಾತಾಡಕ ಹಾತೊರಿತಾ ಅದೀವಿ." "ಸಾಕು ಸಾಕು ಹೆಚ್ಚು ಹೇಳ ಬ್ಯಾಡ್ರಿ" ಅವನು ಬೇಸರದಿಂದ್ಲೆ ಹೇಳಿದ್ದ. 'ತಪ್ಪಾಯ್ತು ನಿಮ್ಮ ಮನಸಿಗ ನೋವು ಉಂಟು ಮಾಡಾಕ ಹೇಳ್ಲಿಲ್ಲಾ ಇರೋದನ್ನ ಇದ್ದಂಗ ಹೆಳ್ದೆ ಅಷ್ಟೆ. "ಕನಿಕರದಿಂದ ನೋಡಿದ್ನು." ನಾನು ಏನು ಮಾಡ್ಲಿ ಹೇಳು ಬಡತನದಲ್ಲಿ ಹುಟ್ಟಿದ್ರು ಹಾಳ ಸೌಂದರ್ಯ ಬಳವಳಿಯಾಗಿ ಬಂದೈತಿ. ಈ ಹುಡುಗಿಯರಿಗೆ ಮಾಡಾಕ ಬ್ಯಾರೆ ಕೆಲ್ಸ ಐತೋ ಇಲ್ಲೋ. ಓದೋದನ್ನ ಬಿಟ್ಟು ಇದೇ ಕೆಲ್ಸ ಮಾಡ್ತಾರ ನಾನು ಹೇಳ್ತಾ ಹೊಂಟಿದ್ದೆ. "ಅವರೊಳಗ ನಾನು ಒಬ್ಬಳು ನಿಮ್ಮನ್ನ ನೋಡಾಕ ತಪ್ಪಸ್ಸು ಮಾಡ್ತಾ ಇರ್ತೀನಿ." ನನ್ನ ನೋಡಾಕ ಧೈರ್ಯ ಇಲ್ದೆ ತೋಟದ ಕಡಿಗ ನೋಡ್ತಿದ್ನು. ಪ್ರಭು ಗೊಂದಲ ದಲ್ಲಿದ್ದ. 'ನೋ' ಕೂಗಿದ 'ಬೇಡಾ' ಆ ಭಾವನೆ ಬೆಳಸಿಕೊಂಡ್ರೆ ಮತ್ತೆಂದು ನಿನ್ನ ಜೊತೆಗ ಮಾತಾಡೋದಿಲ್ಲಾ' ಓಡ ತೊಡಗಿದ.

"ಯಾಕ್ಲೆ ಗಾಬರಿ ಆಗಿ" ಕೇಳ್ದ ಪಾಟೀಲ. ನಾನು ಇಲ್ಲೂ ಅಂತ ತಪ್ಪು ಮಾಡಲ್ಲ' ಹಲುಬಿದ ಪ್ರಭು "ಯಾ ತಪ್ಪು ಏನಾತೋ ನಿನಗೆ ಯಾಕ ಹಿಂಗ ಹುಚ್ಚುಚ್ಚಾರ ಮಾತಡಾಕ ಹತ್ತಿ" ಅಂದ ಪಾಟೀಲ "ಇಲ್ಲೂ ಒಂದ ಹುಡುಗಿ ಗಂಟಿ ಬಿಳೊ ವಿಚಾರ ಇಟ್ಕೊಂಡಾಳ ನಾ ಏನಮಾಡ್ಲಿ ಹೇಳು" ಪ್ರಭು ನಿರಾಸೆಯಿಂದ ಹೇಳಿದ ಮನ್ಮಥ ಕಣಯ್ಯ ನೀನು ಕಾಲೇಜಲ್ಲೇ ಹುಡುಗಿಯರು ಮುಗಿಬಿಳ್ತಿದ್ರು ನೀನು ಅಂದ್ರ ಇಲ್ಲೂ ಅದೇ ಕೆಲ್ಸ ನೀನು ಯಾಕೆ ಯಾವುದಾದರೂ ಹುಡುಗಿಯನ್ನ ನೋಡಿ ಮದಿವಿ ಆಗ ಬಾರ್ದು? ಸಲಹೆ ಹೇಳ್ದ ಪಾಟೀಲ. "ನಾನೊಬ್ಬನೆ ಬದಕೋದು ಕಷ್ಟ ಐತಿ ಅಂತಾದ್ರಾಗ ಎಂಥ ಒಳ್ಳೆ ಸಲಹೆ ಕೊಟ್ಟೆ?" ಸಿಡುಕಿದೆ. "ಮತ್ತೇನು ಅವರಿಂದ ತಪ್ಪಿಸಿಕೊಳ್ಳಾಕ ಉಳದಿಕೋದೊಂದೆ ದಾರಿ ಇಲ್ಲಿ ಯಾವಾಳ ಹೇಳಿದ್ಲೊ ಅಕೀನ ನೀನೆ ಕಟ್ಕೊ ಅನ್ನು" ಅಂದ "ಸುಮ್ನಿರಪ್ಪ ಆ ಹಲ್ಕಟ್ ಡಾಕ್ಟರ್ ಮತ್ತೇನು ವಿಚಾರ ಮಾಡ್ಯಾನೋ ಅವನೇನು ನನ್ನ ಹಂಗೆ ಬಿಡೋದಿಲಾಂತ ಕಾಣತೈತಿ ಇನ್ನೂ ನಾನು ಮದ್ವಿ ಆದ್ರ ಮುಗೀತು. ಸದ್ಯ ಆರಾಮದೀನಿ ಸರಿಕಾಣವಲ್ದೇನು ನಿನಗೆ 'ನಕ್ಕ ಪ್ರಭು' ಹಿಂಗೆ ಬ್ರಹ್ಮ ಚಾರಿ ಇದ್ದ ಬಿಡು ಪಾಪ ಆ ಹುಡುಗಿಯರು ಕನಸು ಕಟ್ತಾ ಕುಂತ್ಕೊಳ್ಳಿ" ಹಿಯಾಳಿಸಿದ ಪಾಟೀಲ.

ಮುಸುಕಿನೊಳಗಿನ ಗುದ್ದಾಟ

ಅವನು ಹೊರಗ ಬರಾಕ ಒದ್ದಾಡ್ತಿದ್ದ. ನಾನು ಗುರು ಅಕಿ ಶಿಷ್ಯೆ ಅಷ್ಟೇ ಸುಮ್ಮ ಹುಚ್ಚು ಹುಡುಗಿ ಪಾಪ ಯಾವ ಯಾವ ಕನಸು ಕಟ್ಟಾಕ ಹತ್ಯಾಳೋ ಒಂದ ದಿನ ಅಕೀಗ ಹೇಳಬೇಕು. "ಏನ್ರಿ ರಸಿಕರೆ" ಉಮ್ಮಣ್ಣ ಕೂಗಿದ್ರು. ಪ್ರಭುಗ ನೋವಾದ್ರು ಸುಮ್ಮನಾದ. "ಅಲ್ಯಾವುದೋ ಕಾಲೇಜಿನೊಳಗ ಏನೋ ಬಾನಗೇಡಿಮಾಡಿ ಬಂದಿರಂತಲ್ಲ" ದಾಟಿ ಬಿಟ್ಟಿದ ಹಿಂದಿ ಉಪನ್ಯಾಸಕ ಬೆಂಡಿ ಬಸವ ಕಾಡಿಸಿದ. ಪರನಾರಿ ಅಂದ್ರ ಸೋದರಿ ಅಂತ ತಿಳ್ಕೊಳ್ಳೋ ಕಾಲ ಅವಾಗಿತ್ರಿ. ಈಗ ಎಲ್ಲಾ ಅಕ್ಕನ ಮಕ್ಕಳೇ ಕುಳ್ಳಿ ಬೆಂಡಿಗ ಹೇಳ್ದ. "ಹಾಳ ವಯಸ್ಸು ಅವನಾರ ಏನ್ಮಾಡ್ತಾನ ಮದ್ವಿ ಆಗಾಕ ಟಿಕಾಣಿ ಇಲ್ಲಾ ಸಿಕ್ಕಿದ್ದೆ ಶಿವಾ ಅಂದ" ಉಮ್ಮಣ್ಣ ನಗ ತೊಡಗಿದ. ಪ್ರಭು ತಾಳ್ಮೆಗೆಟ್ಟು. "ಏ ಹಿಂಗ್ಯಾಕ ನೋಡ್ತಿ ನಾಕ ದಿನ ಒದರಾಕ ಬಂದೋನು, ನಾವಿಲ್ಲಿ ಪರ್ಮೆಂಟ್ ತಿಳ್ಕೊ. ನಾ ಮನಸ ಮಾಡಿದ್ರ ಅದು ಇಲ್ದಂಗ ಓಡಿಸಿ ಬಿಟ್ಟೇನು ಹುಷಾರಿರು ಇಲ್ಲೂ ಬಾಲ ಬಿಚ್ಚಾಕ ಹತ್ತಿ ಅಂತ ಸುದ್ದಿ ತಿಳಿದೈತಿ" ಒದರಿದ ಉಮ್ಮಣ್ಣ 'ಯಾವಾಕೀನ' ಕೇಳ್ದ ಕುಳ್ಳಿ "ಇನ್ಯಾವಾಕಿ ಅದಾಳಲ್ಲ ಕುಂಟಿ" ಹಂಗಿಸಿದ ಕುಂಬಾರ "ಸರ್ ನೀವು ತಿಳಿದೋರು ಹಿಂಗ ಸುಮ್ನೆ ಅಪಪ್ರಚಾರ ಮಾಡ ಬಾರ್ದು ಅಲ್ಲೂ ಆದದ್ದು ಹಿಂಗೇ" ಅಂದ, "ಸಾಕ ಬಾಯಿ ಮುಚ್ಚಯ್ಯ ಕಂಡೀನಿ. ನಿಮ್ಮ ಜಾತಿನೆ ಅಂಥದ್ದು ಬ್ಯಾರೆ ಜಾತಿಯೊಳಗ ಮದ್ವಿ ಆದ ತಕ್ಷಣ ನೀನು ಮೇಲ್ಜಾತಿಯವನ ಅಂತ ತಿಳ್ಕೊಂಡಿದ್ರ ದೇವರಾಣೆ ಅದು ತಪ್ಪು ಅದೆಂಗ ತಗೊಂಡನೋ ಪ್ರಿನ್ಸಿಪಾಲ ನಿನ್ನ, ನನಂಥೋನೇನಾರ ಆಗಿದ್ರ ಜಾಡ್ಸಿ ಒದ್ದು ಓಡಿಸ್ತಿದ್ದೆ." ರಾಂಗ್ ಆಗಿದ್ದ ಕುಳ್ಳಿ "ನೀವು ಜಾತಿಗಿತಿ ಸುದ್ದೀಗ ಬರಬ್ಯಾಡ್ರಿ. ನಿಮ್ದೇಷ್ಟ ಕೆಲ್ಸ ನೋಡ್ರಿ ಸಂಸ್ಥೆ ನಿಮ್ದಲ್ಲಾ ನೀವೂ ನನ್ನ ಹಂಗ ದುಡಿಯಾಕ ಬಂದೋರು. ಏನೋ ಹುಡ್ರು ನನ್ನ ಬಗ್ಗೆ ನಾಕ ಒಳ್ಳೆ ಮಾತಾಡಿದ ತಕ್ಷಣ ನಿಮಗ ಯಾಕ ಸಂಕಟ" ಪ್ರಭು ನೋವಿಂದ ಹೇಳಿದ. ಒಳಗ ಬಂದ ಪ್ರಿನ್ಸಿಪಾಲರು. "ಯಾಕ್ರಿ ಬಾಯಿ ಮಾಡಾಕ ಹತ್ತೀರಿ, ಇದು ಕಾಲೇಜು ಸಂತಿ ಪ್ಯಾಟಿ ಅದ್ಕೊಂಡ್ರೋ ಹ್ಯಾಂಗ" ಕೇಳಿದ್ರು. ಯಾರೊಬ್ಬರು ಮಾತಾಡಲಿಲ್ಲಾ. ಹಿತ್ಲಮನಿ ಬರ್‍ರಿ ನನ್ನ ಹಿಂದ.

'ನೋಡು ಅವರು ಬೇಕಂತ್ಲೆ ನಿನ್ನ ತಗಸಾಕ ಹಿಂಗ ಮಾಡಾಕ ಹತ್ಯಾರ, ಮನ್ನೆ ಬಂದೋರು ಇವರೆಲ್ಲಾ ಒಂದೇ ಕುಲಸ್ಥರು ಜಾತಿ ಅನ್ನೋದ ಏನೈತಲ್ಲಾ ಒಂದ ರೀತಿ ವಿಷ ಇದ್ದಂಗ ಹಾಲನಲ್ಲಿ ಒಂದ ತೊಟ್ಟೇನಾರ ಬಿತ್ತಂದ್ರ ನಿಮಿಷದೊಳಗ ಕರಗಿ ಒಂದಾಗಿ ಬಿಡತೈತಿ.

ಅಷ್ಟಕ್ಕೂ ನಿಂದೇನು ಖಾಯಂ ಅಲ್ಲ ಹೋದ್ರ ಹೋತು ಅನ್ನಬಹುದಾಗಿತ್ತು ನಿನ್ನ ಹಳೆ ಘಟನೆ ಮರಿಯಾಕ ಈ ಕೆಲ್ಸ ನಿನಗ ಬೇಕು." ಪ್ರಿನ್ಸಿಪಾಲ ನೇರವಾಗೆ ಹೇಳಿದ್ರು. "ಸರ್ ನಿವ್ಯಾಕ ಸರ್ ನನ್ನ ಬಗ್ಗೆ ಇಷ್ಟೊಂದು ಕಾಳಜಿ ಮಾಡ್ತಾ ಅದೀರಿ ನಾನು ಇಲ್ಲಿಗ

ಬಂದ ದಿನದಿಂದ ನೋಡ್ತಾ ಅದೀನಿ ನನ್ನ ಬಗ್ಗೆ ಯಾರೇ ನಂದ್ರು ನನ್ನ ಪರವಹಿಸ್ತಾ ಅದೀರಿ ಹಿಂದಿನ ಜನ್ಮದಾಗ ನಾನೇನಾದ್ರು ತಮ್ಮ ಮಗನಾಗಿದ್ನೆ."

ಕಣ್ಣು ತುಂಬಿದ್ವು, "ಮನುಷ್ಯ ದೊಡ್ಡೋನದಂಗ ವಿಶಾಲ ಮನಸು ಹೊಂದ ತಾ ಹೋಗ ಬೇಕು, ನಾನು ಬೇರೆ ಜಾತಿಯವನಿರಬಹುದು, ಬೆಳದಂಗ ನನಗ ಯಾವ ಜಾತಿನೂ ಮುಖ್ಯ ಅಲ್ಲ ಕಣಯ್ಯ ಮನುಷ್ಯ. ಅವನ ಮನಸು-ಗುಣ ವ್ಯಕ್ತಿತ್ವ ಮುಖ್ಯ ಯಾರು ತಾನೇ ಶುದ್ಧ ಅದಾರ ಹೇಳು." ಸ್ವಲ ಹೊತ್ತು ಸುಮ್ಮನಿದ್ರು. "ನಾನು ಹೋದಲೆಲ್ಲಾ ಬಡತನ-ಜಾತಿ ಬೂತದ ಹಂಗ, ಬೆನ್ನು ಹತ್ಯಾವ, ಸರ್, ನಾನೇನು ಮಾಡ್ಲಿ" ಅಸಹಾಯಕ ನಂತ ಕೈ ಚೆಲ್ಲಿ ಕುಂತ." ಇಲ್ಲಾ ಹಂಗೆ ಹೇಳಬ್ಯಾಡ, ನಿನಗೂ ಒಳ್ಳೆ ದಿನ ಬರತೈತಿ ನಿರೀಕ್ಷೆ ಮಾಡು, ಬಂಡೆ ಕಲ್ಲಾಗ ಬೇಕಪ್ಪ, ಆಲದ ಮರದಂಗ ಎಂಥ ಬಿರುಗಾಳಿಗೂ ಜಪ್ ಅನದೆ ನಿಲ್ಲಬೇಕು, ಹುಮ್ಮಸು ತುಂಬಿದರು.

"ಅವರು ಹಿಂಗೆ ಹೇಳಿದ ತಕ್ಷಣ ಕೆಲ್ಸ ಬಿಡ್ತೀಯಾ, ಅಲ್ಲೋ ಹುಡುಗರ ಜೊತೆಗೆ ಬೆರತು ನಿನ್ನ ಹಳೆ ಜೀವನ ಮರಿತಿ ಅಂದ್ಕೊಂಡಿದ್ದೆ. ಪಾಠ ಹೇಳಿ ಎಟ ಗಳಿಸ್ತೀಯಾ. ನೂರಿನ್ನೂರು. ಭಾಡಗೀಗ ಆಗೋದಿಲ್ಲಾ ವಿಚಾರ ಮಾಡು" ಪಾಟೀಲ. ಸುಮ್ನೆ ಕುತ್ಕೊಂಡು ವಿಚಾರ ಮಾಡತೊಡಗಿದ. 'ಏಳೇಳು ಹಿಂಗ ಕುಂತಿ ಹುಚ್ಚ ಆಗ್ತಿ, ಸುತ್ತಾಡಿ ಬರಾನು. ಚಿಗಪ್ಪ ಮನಿಗ ಊಟಿಕ ಕರ್ದಾನ" ಅಂದ. "ಬ್ಯಾಡ, ಅಡ್ಡಾಡಿ ಬರೋಣ. ನನಗ ಹಸಿವಿಲ್ಲ ನೀನು ಅಮ್ಮ್ಯಾಲ ಮನಿಗ ಹೋಗು" ಅಂದ ಪ್ರಭು. ದೇಗಲೂರಿಗೆ ಬಂದು ಇಷ್ಟದಿನ ಆತು ಒಂದ ದಿನಾನು ಮನಿಗ ಬಂದು ಉಂಡಿಲ್ಲಾ ಹಿಂಗ್ಯಾಕ ಬ್ಯಾರೆ ಅನ್ನೋ ವಿಚಾರ ಮಾಡ್ತಿ." ಆಕ್ಷೇಪಿಸಿದ. "ನೋಡಯ್ಯ ಅವರಿಗ ಯಾಕ ತೊಂದ್ರೆ ಕೊಡಬೇಕು. ಐತಲ್ಲಾ ನಿನ್ನ ಮುದ್ವಿ ಊಟ ಆವಾಗ ಉಣ್ತೇನಂತ" ಅಂದ.

ದುಗುಡಿತ್ತು, ಬ್ಯಾಡ ಅಂದ್ರು ಪರಿಸ್ಥಿತಿ ತಾನಾಗೆ ಸುತ್ತಿ ಕೊಳ್ಳಾಕ ಹತ್ತಿತ್ತು. ಮಂದಿ ಎಲ್ಲಾ ಪ್ರಿನ್ಸಿಪಾಲರ ಹಂಗ ಯಾಕ ವಿಚಾರ ಮಾಡಾಗಿಲ್ಲಾ. ಹೊರಗ ಪರಿಸ್ಥಿತಿ ಎಂಥ ಭಯಾನಕ ಐತಂದ್ರ. ಪ್ರತಿಯೊಂದು ಹಂತದೊಳಗು ರೊಕ್ಕ, ಜಾತಿ, ಧರ್ಮ ಪಂಗಡದ್ದೆ ಪ್ರದಾನ ಸ್ಥಾನಮಾನ. ರಾಜಕೀಯ ಕೊಳಕು ಮನಸುಗಳು. ಹತ್ತು ವರ್ಷ ಬೋಧನೆ ಮಾಡಿರೋ ಕುಳ್ಳಿ - ಉಮ್ಮಣ್ಣ ಈ ರೀತಿ ವಿಚಾರ ಮಾಡ್ತಾರಂದ್ರ ಹಳ್ಳಿಗಳೊಳಗ ನಮ್ಮ ಗುಡಿಸಲು ಸುಡೋದು ಸಹಜನೆ. ನಾನು ಮಾಡಿದ ತಪ್ಪು ನನ್ನ ಹಿಂದೆ ನೆಳ್ಳಿನ ಹಂಗ ಗಂಟು ಬಿದ್ಯೆತಿ. ಎಲ್ಲಗ ಹೋದ್ರು ಬಿಡವಲ್ಲದು. ಅವಾಗ ಒಂದು ಸಣ್ಣ ತಪ್ಪಾಗಿ ಕಂಡಿತ್ತು. ಇವತ್ತು ಸುಡ್ತಿರೋ ಬೆಂಕಿ ಹಂಗ ನನ್ನ ಸುಡಾಕ ಹತ್ಯತಿ. ಕಾಲೇಜಿ ನೊಳಗ ನಾನು ಕಲ್ತಿದ್ದಾದರೂ ಏನು? ಸಂಯಮ ಮೇಲ್ಜಾತಿಯವರು ನಡೆಸೋ ದಬ್ಬಾಳಿಕೆ ಊರೊಳಗ ಎಷ್ಟು ಹೆಂಗಸರನ್ನ ತಡವಿ ಅತ್ಯಾಚಾರ ಮಾಡಿಲ್ಲ. ಕಾಲ ಬದಲಾಗಿ ಕಾನೂನು ಬಂದ್ರು ಕೂಲಿಗ ಹಚ್ಚಂಗಿಲ್ಲಾ ಅಂತ ಹೆದರಿಕೆ ಹುಟ್ಟಿಸೋದು ನಿಂತಿಲ್ಲಾ ನಾನು ಇಡಿ ತರಗತಿ ಯೊಳಗ ಫಸ್ಟ್ ಬಂದಾಗ ಆ ಕರಿ ಟೋಪಿಯ ಮೇಷ್ಟ್ರು ಕೀಳು ಜಾತಿಯ ಕಾರಣದಿಂದ ತಾತ್ಸಾರ. ತಿರಸ್ಕಾರದಿಂದಲೇ ಅಸಹ್ಯ ಮಕ ಮಾಡಿಕ್ಕೊಂಡು ದೂರಿಂದಿದ್ದೆ ಬ್ಯಾಡದ

ಮನಸಿಂದ ಹರಸಿದ್ದು. ಕೊನೆ ಇಲದ ಗುದ್ದಾಟ. ಕ್ರಾಂತಿ ಅಂತ ರೂಢಿಸಿಕೊಂಡ ಒಣ ದಿಮಾಕಿನ ಹೋರಾಟವೆಲ್ಲಾ ಪ್ರಚಾರಕ ಮಾಡಿದಂಗಿತ್ತು. ಅದರಿಂದ ಫಲ ಸಿಕ್ಕಿದ್ದು ಯಾರಿಗ? ಮಂಚೂಣಿಯೊಳ ಗಿದ್ದ ನಾಯಕ ಯಾರಿಗೂ ನಿಷ್ಠೂರ ನಾಗಾಕ ತಯಾರಿಲ್ದೆ ಎಲ್ಲರ ಬಾಲ ಬಡಕೊಂತ ತನ್ನ ಬ್ಯಾಳಿ ಬೇಯಿಸ್ಕೊಂಡ. ಕೊನೆ ಮುಟ್ಟದ ಹೋರಾಟ.

ಪಾಠ ಹೇಳಿಸ್ಕೊಳಾಕ ಬರ್ತಿ ದ್ದ್ಯೋರ ಪರೀಕ್ಷ ಹತ್ರ ಬರಾಕ ಹತ್ತಿದ್ದರಿಂದ ಅವರ ವ್ಯಾಕರಣ. ಪಾಠ ಮುಗಿಸಿಕೊಡಾಕ ಹೆಣಗಾಡ ತೊಡಗಿದೆ. "ಎಲ್ಲರೂ ಈ ಸಲ ಪಾಸಾಗಲೇ ಬೇಕು. ನೀವು ಪಾಸಾದ್ರ ಮುಂದ್ಕ ಹೆಚ್ಚ ಹುಡ್ರು ಬರ್ತಾರ. ನನ್ನ ಹೊಟ್ಟೀಗು ಒಂದಿಷ್ಟು ಅನ್ನ ಸಿಗ್ತತಿ" ಅಸಾಯಕತೆ ತೋಡಿಕೊಂಡಿದ್ದೆ ಕಾಲೇಜಿನೊಳಗ ಎರ್ಡನೆಯ ಅವಧಿ ಇದ್ದಿದ್ದ ರಿಂದ ತಯಾರಿ ನಡೆಸಿದ್ದೆ. ಯಾವದೋ ಕಾರ್ಯಕ್ರಮ ಇದ್ದಿದ್ದರಿಂದ ಎರ್ಡನೆಯ ಅವಧಿಯ ತರಗತಿಗಳನ್ನು ರದ್ದು ಮಾಡಿ ಕಾರ್ಯಕ್ರಮಕ್ಕ ಕುತ್ಕೊಳಾಕ ಹೇಳಿದ್ದರಿಂದ ಪ್ರಭು ತರಗತಿಗ ಹೋಗದೆ ಎಲ್ಲರಿಗಿಂತ ಹಿಂದ ಹುಡುಗರ ಜೊತಿಗ ಕುಂತು ಭಾಷಣ ಕೇಳಿದ.

ಭಾಷಣ ಮುಗಿತ್ತಿದ್ದಂಗ, ಶೆಟ್ಟಿ ಎದ್ದವನ, ಡಯಾಸ ಮ್ಯಾಲ ಹೋದವನ ನಮ್ಮ - ನಿಮ್ಮೆಲ್ಲರ ನೆಚ್ಚಿನ ಗುರುಗಳಾದ ಶ್ರೀಯುತ ಹಿತ್ಲಮನಿ ಪ್ರಭು ಸರ್, ಹಾಡು ಹೇಳ್ತಾರ ಕೆಳ್ಕೊಂಡೆ ಹೋಗಬೇಕು ಅಂತ ಹೇಳೆಬಿಟ್ಟ. ಅತಿಥಿಗಳು ಪ್ರಿನ್ಸಿಪಾಲರು. ಅವನ ಮಕ ನೋಡ ತೊಡಗಿದ್ರು. ಕುಳ್ಳಿ - ಉಮ್ಮಣ್ಣ ಜೋರಾಗಿ ನಗತೊಡಗಿದ್ರು. ಪ್ರಭುಗ ಏನು ತಿಳಿಯಲಿಲ್ಲಾ, ಎದ್ದು ಪ್ರಿನ್ಸಿಪಾಲರನ್ನ ನೋಡ ತೊಡಗಿದ. ವಂದನಾ ರ್ಪಣೆ ಮಾಡ್ತೀನಂತ ಹೇಳಿ. ಇಂಥ ಕೆತ್ತಾಬಾಜಿ ಮಾಡಿರೋ ಶೆಟ್ಟಿ ಮ್ಯಾಲ ಸಿಟ್ಟು ಬಂತು. ತೋರಗೊಡದೆ ತಾವೇ ಎದ್ದು. "ಪ್ರಭು ಅಸಾಧಾರಣ ವ್ಯಕ್ತಿ, ಪ್ರತಿಭಾವಂತ, ಒಳ್ಳೆಯ ಹಾಡಗಾರ. ಅಂತಹ ಪ್ರಾಧ್ಯಾಪಕ ಮಿತ್ರ ಸಿಕ್ಕಿರೋದು ನಮ್ಮ ಪುಣ್ಯ, ಅಂಥವರು ನಿಮ್ಮ ಗುರುಗಳಾಗಿರೋದು ನಿಮ್ಮ ಪುಣ್ಯ, ದಯವಿಟ್ಟು ಅವರು ವೇದಿಕೆಗೆ ಆಗಮಿಸಿ ಒಂದು ಹಾಡನ ಹಾಡಲೆ ಬೇಕಂತ ನಮ್ಮ ನಿವೇದನೆ" ಅಂದವರೆ ಕುಂತ್ರು. ಒಂದೂ ಅರ್ಥ ಆಗ್ಲಿಲ್ಲಾ. ಎದ್ದು ಬಂದವನೆ, ಯಾವದೋ ಹಳೆಯ ಭಾವಗೀತೆ ಹಾಡಿದೆ.

ಉಮ್ಮಣ್ಣ-ಕುಳ್ಳಿ "ಅವನಿಗ ಅವಮಾನ ಆಗ್ಲಿ ಅಂದ್ರ ಅವನು ಮಿಂಚಿ ಬಿಟ್ನಲ್ರಿ." ಅಂತ ತವ್ಮೊಳಗೆ ಮಾತಾಡಿಕೊಳ್ಳ ತೊಡಗಿದ್ರು. 'ಪರವಾಯಿಲ್ಲ ಹಾಡಚಲೋ ಹೇಳಿದ'ಅಂದ ಉಮ್ಮಣ್ಣ "ಕಾಲೇಜಿನಾಗಿದ್ದಾಗೂ ಹಿಂಗೆ ಅಂತ್ರಿ ಆದ್ರ ಇಲ್ಲಿ ಬಂದು ಕೂಳಿಗೂ ಗತಿ ಇಲ್ದಂಗಾಗ್ಯಾನ" ಕುಳ್ಳಿ ಜೋರಾಗಿ ನಗ ತೊಡಗಿದ. ಶೆಟ್ಟಿ ಹೌಹಾರಿ ಓಡಿ ಬಂದಿದ್ದ' ಏನ್ಸಾರ ನಿಮ್ಮ ಮಾತ ಕೆಳ್ಕೊಂಡು ಅವನ ಹೀರೋ ಮಾಡ್ಬಿಟ್ಟೆ. ಹುಡುಗ್ಯಾರೆಲ್ಲಾ ಅವನ ಸುತ ಗಟ್ಯಾರೆ" ವರದಿ ಒಪ್ಪಿಸಿದ" ಮಾಡಲಿ ಹೇಳ್ಳೋ, ಅವನ್ದು ಕಾಲ ತುಂಬಿ ಬಂದೈತಿ." ಕುಳ್ಳಿ ಹೊಟ್ಟೆ ಉರಿತಾಳದೆ ಹೇಳಿದ. "ಏನ ಮಾಡ್ಲಿರಿ ನಾನು ಡೌ ಹೊಡಿತ್ತಿದ್ನಲ್ಲಾ ಕುಂಟಿ ಅವನಿಗ ಅಂಟ್ಕೊಂಡು ನಿಂತು ಮಾತಾಡ್ತಾಳ, ಹಿಂಗಾದ್ರ ನನ್ನ ಕೈ ಬಿಟ್ಟಂಗ." ತನ್ನ ನೋವನ ತೊಡಕೊಂಡ. "ಲೇ ಶೆಟ್ಟಿ ಪಾಪ ಹೋಗಿ ಹೋಗಿ ಕುಂಟಿಗ ಯಾಕ ಗಂಟಬಿದ್ದಿ ಯಲೇ ಬ್ಯಾರೆ ಯಾರು ಸಿಗಲಿಲ್ಲೇನು ನಿನಗ ಮಗಾನ ಅಕಿ ಹತ್ರ ಅಂತದೇನೈತಿ ಅಂತ"

ಬೆಂಡಿ ಅಣುಕದ ಧನಿಯೊಳಗ ಕೇಳ್ದ "ಅದಕ್ಕರಿ ಸರ್ ನಿಮಗ ಪಾಠ ಹೇಳಿ ಹೇಳಿ ಬುದ್ದಿ ಹಾಳಾಗೈತಿ ಅನ್ನೋದು. ಏನಿಲ್ಲಾ ಹೇಳ್ರಿ. ರೊಕ್ಕ ಕೊಳಿಯಾಕ ಹತ್ಯತಿ, ನಾಳೆ ನಾನೆ ರಾಜ." ದೇಗಲೂರ ತಾಲೂಕ ಮಿನಿಷ್ಟ್ರು, ಕನಸ ಕಾಣ ಹತ್ತಿದ.

"ಜವಾಬ್ದಾರಿಯುತ ವ್ಯಕ್ತಿಗಳಾಗಿ ಹಿಂಗ ಏನ್ರಿ ನೀವು ಹುಡ್ರ ಹತ್ರ ಮಾತಾಡೋದು. ಮತ್ತೊಬ್ಬರ ಬಗ್ಗೆ ಮಾತಾಡ ಬೇಕಾದ್ರ ಮೈ ಮ್ಯಾಲ ಕಬರಿರಬೇಕ್ರಿ. ಕುಂಬಾರ ನೀವು ಸಿನೀಯರ ಆದ್ರೂ ಯಾಕ್ರಿ ಹುಡುಗ ಆಗ್ತೀದ್ದಿರಾ, ಮ್ಯಾನೇಜ್ ಮೆಂಟ್‌ನವರಿಗೆ ಗೊತ್ತಾದ್ರ ಏನಾಗತೈತಿ ಗೊತ್ತೈತಲ್ಲಾ. ಅಲ್ಲಾ ನಿವೇನು ಭಾರಿ ಸಾಚಾ ಅಂತ ಮತ್ತೊಬ್ರ ಗುಣದ ಬಗ್ಗೆ ಮಾತಾಡ್ತೀರಿ" ಅಂತ. ಪ್ರಿನ್ಸಿಪಾಲರು ಸಿಟ್ಟಿಗೆದ್ದಿದ್ದರು. "ಸರ್ ನಾನು" "ಮುಚ್ಕೊಳ್ರಿ ಬಾಯಿ, ಪ್ರತಿ ವರ್ಷ ನಿಮದೊಂದು ಹಗರಣ ಇದ್ದೆ ಇರ್ತಾವ. ಗೊಂಗಡಿ ಯವರ ಹುಡುಗಿ. ಹಿರೇಮಠ ಅನ್ನೋ ಹುಡುಗಿ. ಸಾಕೇನ್ರಿ ನಿಮ್ಮ ಕ್ಯಾರೆಕ್ಟರ್ ಸರ್ಟಿಫಿಕೆಟ್, ಅವನು ನಿಮ್ಮ ಜಾತಿಯವನಲ್ಲ ಅನ್ನೋ ಒಂದೇ ಕಾರಣಕ್ಕ ನಿಮಗಿಂತ ಪ್ರತಿಭಾವಂತ ನನ್ನ ತುಳಿಬಾರ್ದು "ಕಳಕಳಿ ಇತ್ತು" ಏನ್ಸಾರ್ ನೀವು ಒಬ್ಬ ಪಾರ್ಟೈಂ ಉಪನ್ಯಾಸಕನ ಸಲವಾಗಿ ನಮಗೆ ದಬಾಯಿಸ್ತಾ ಅದೀರಿ. "ಉಮ್ಮಣ್ಣ ನಡುವೆ ಬಾಯಿ ಹಾಕಿದ. ಅವನಿಗ ಹೆಣ್ಣು ಕೊಟ್ಟಮಾವ. ಮ್ಯಾನೇಜ್ ಮೆಂಟಿನಲ್ಲಿ ಪ್ರಭಾವಿತ ವ್ಯಕ್ತಿ ಆದ್ದರಿಂದ ತನ್ನ ಬ್ಯಾಳಿ ಬೇಯಿಸ್ಕೋತಿದ್ದ "ನಾನು ಮನಸು ಮಾಡಿದ್ರ" " ಏನ್ರಿ ಮಾಡ್ತೀರಾ ನನ್ನ ಪ್ರಿನ್ಸಿಪಾಲ ಕುರ್ಚಿಯಿಂದ ಇಳಿಸ್ತಿರೇನ್ರಿ." ಏ, ಕಂಡೀನಿ ಹೋಗಯ್ಯ" ಸಿಟ್ಟಿಂದ ನಡಗತೊಡಗಿದರು.

"ನನ್ನ ಸಲವಾಗಿ ತಾವು" "ಖಂಡಿತಾ ಇಲ್ಲಾ, ನ್ಯಾಯಕ್ಕಾಗಿ ನಿಮಗಾಗ್ತಿರೋ ಅನ್ಯಾಯವನ್ನು ಖಂಡಿಸ್ತಾ ಅದೀನಿ ವಿನಃ ನಿಮಗ ಉಪಕಾರ ಮಾಡ್ತಿಲ್ಲಾ" ಅವರ ಧನಿಯೊಳಗ ಏನೋ ಒಂದ ರೀತಿಯ ನೋವಿತ್ತು. "ಹಾಳು ಮ್ಯಾನೇಜ್‌ಮೆಂಟ್ ನೌಕರಿ ಅಂದ್ರೆ ಹಿಂಗೆ ಕಣಪ್ಪ. ಒಬ್ಬ ಅವಿದ್ಯಾವಂತ ಮೋಸಗಾರ. ಒಂದಿಷ್ಟು ಹಣ ಹ್ಯಾಂಗೋ ಗಳಿಸಿ ದೇಣಿಗೆ ಕೊಟ್ಟು ಮೆಂಬರ್ ಅದ್ನಂದ್ರ ಮುಗಿತು. ಆಟ ಆಡಸ್ತಾನ." ಬ್ಯಾಸರ ದಿಂದಲೇ ಹೇಳಿದರು." ನಾನು ಹುಟ್ಟನಿಂದಲೇ ಅನ್ಯಾಯಕ್ಕೊಳಗಾಗೆ ಸಹಿಸ್ಕೊಂತ ಬಂದೀನಿ. ಇದೆಲ್ಲಾ ನನಗ ಸಹಜ ತಾವು ನನ್ನ ಪರವಾಗಿ" ಏನೋ ಹೇಳಾಕ ಹೊಂಟಿದ್ದೆ. "ನಾನು ಮನುಷ್ಯ ಕಣಯ್ಯ ಒಂದೀಟು ಒದ್ಕೊಂಡೀನಿ. ತಪ್ಪು. ಸರಿ ತಿಳ್ಕೊಳ್ಳೊ ಶಕ್ತಿ ಐತಿ" ನನ್ನ ಮಾತಿಗ ಬೇಜಾರುಗೊಂಡಂತಿತ್ತು. ಪ್ರಭುಗ ಪರಿಸ್ಥಿತಿ ಅರಿವಾಯ್ತು. ಸುಮ್ನೆ ಕುತ್ಕೊಂಡ. ಪ್ರಿನ್ಸಿಪಾಲರು ಹೊರಗ ಹೊಂಟ್ರು. ಕಿಸೆಯೊಳಗಿ ನಿಂದ ಸಿಗರೇಟು ಪ್ಯಾಕ ಬೆಂಕಿ ಪೆಟ್ಟಿಗೆ ತಗೊಂಡು ಹಚ್ಕೊಂಡ್ರು. ಸಿಗರೇಟಿನ ಪ್ರತಿಯೊಂದು ಎಳೆತಗಳನ್ನ ಎಳೆಯು ವಾಗ ನಿಜವಾದ ಅನುಭವ ಪಡೆಯುತ್ತಿದ್ರು. ಕಿಟಕಿಯಿಂದ್ಲೆ ಗಮನಿಸಿದ ಪ್ರಭು. ಎಂಥ ಚಟವಿರಬೇಕು. ತಲ್ಲೀನರಾಗಿ ಸೇದ್ತಾ ಅದಾರ. ಪ್ರತಿಯೊಂದು ಎಳೆತಕ್ಕೂ ಸ್ಪಂದಿಸ್ತಾರ. ಅವರನ್ನ ನೋಡಿದ್ರೆ ಜೀವನದೊಳಗ ಒಂದ ಸಾರಿಯಾದ್ರೂ ಸೇದಲೇ ಬೇಕು ಅನ್ಸುತ್ತೆ. ಕುತೂಹಲ ತಡಯಾಕ ಆಗದೆ. "ಸರ್ ನಿಜವಾಗಿಯೂ ಅದ್ಭುತ" "ಏನಯ್ಯ ಅದು" ಅಂದ್ರು

ಪ್ರಿನ್ಸಿಪಾಲರು. "ನೀವು ಸೇದುವ ಪರಿ ನಿಮ್ಮನ್ನು ನೋಡಿ ಜೀವನದಾಗ ಹೀಗೆ ಅನುಭವಿಸಿ ಒಂದ ಸಲಾನಾದ್ರು ಸೇದ ಬೇಕು ಅನಿಸ್ತಾ ಇದೆ ಸರ್" ಅಂದ ಪ್ರಭು. "ಹಾಗೇ ಮಾಡು ನೀನು ನನ್ನ ಹಂಗ ಕ್ಯಾನ್ಸರ್ ರೋಗಿ ಆಗ್ತೀಯಾ" 'what' ಪ್ರಭು ಕೂಗಿದ. "ಇಲ್ಲಾ ನಾನು ನಂಬೋದಿಲ್ಲ" ಅವನಿಗೆ ರೋಗ ಬಂದಿರೋ ಹಂಗ ನೋವಿನಿಂದ ಕಳವಳಿಸ ತೊಡಗಿದ. ಹತ್ತಿರ ಹೋದವನೆ ಅವರ ಕೈಗಳನ್ನ ಹಿಡ್ಕೊಂಡು ಭಾವೋದ್ವೇಗದಿಂದ ಕ್ಷಣಕಾಲ ನಿಂತ. ಅವರ ಕಣ್ಣುಗಳು. ತೇವ ಗೊಂಡಿದ್ವು. ಅವನ ತಲಿಯೊಳಗ ಕೈಯಾಡಿಸಿ. ಸಮಾಧಾನ ಪಡಿಸಿದ್ರು.

ಒಳಗೊಳಗೆ ಬೇಯ ಹತ್ತಿದ. ಯಾರು ಒಳ್ಳೆಯವರಿರ್‍ತಾರ. ಯಾರ ಹೃದಯ ನಿಷ್ಕಳಂಕವೋ ಅವರ ಆಯಸು ಕಮ್ಮಿ. ಬಹಳ ಹೊತ್ತಿನ ತಂಕ ಹಾಗೆ ಕುಡ್ಕೊಂಡ. ವಸಂತ ಒಳಗ ಬಂದು ಎಚ್ಚರಿಸಿದಾಗ್ಲೆ ಎಚ್ಚರಾದ. "ಏನು ಬಹಳ ದೂರ ಹೋದ ಹಂಗೈತಿ, ಮಲ್ಲಿಕಾಳ ನೆನಪ" ನಕ್ಕರು" ತಮಗೆ ವಿಷಯ" "ಮಧ್ಯಾಹ್ನ ಯಾವನೋ ಒಬ್ಬ ಬಂದಿದ್ದ. ನಮ್ಮ ಮನಿಯೊಳಗ ಕುಂತು ನಿಮ್ಮ ಬಗ್ಗೆ ಕೇಳ್ದ ನಿಮ್ಮ ಹಾಗೂ ಮಲ್ಲಿಕಾ ಪ್ರೀತಿ, ನಿಮ್ಮ ಎಲೆಕ್ಷನ್, ನಿಮ್ಮನ ಕಾಲೇಜಿನಿಂದ ಹೊರಗ ಹಾಕಿದ್ದು ಎಲ್ಲಾನೂ ಹೇಳಿದ." ಅವನನ್ನೆ ನೋಡಿದ್ರು, ಪ್ರಭು ಮಾತಾಡಲಿಲ್ಲಾ. "ಪ್ರಭು ಬಹುಶಃ ಅವನು· ಖೋಲಿ ಮಾಲಿಕನನ್ನ ಬೆಟ್ಟಿಯಾಗಿ ನಿಮ್ಮ ಬಗ್ಗೆ ಹೇಳಿರಬೇಕು ಅನ್ಸುತೆ. ಅವನು ಮದ್ಲೆ ವಿಚಿತ್ರ ವ್ಯಕ್ತಿ ಮುನ್ಸೂಚನೆಯಂತೆ ನೀವು ಬೇರೆ ಖೋಲಿ ನೋಡ್ಕೊ ಳೋದು ಒಳ್ಳೆಯದು ಅನ್ಸುತೆ" ಪ್ರಭುಗ ಏನೊಂದು ತಿಳಿಯಲಿಲ್ಲಾ. ಯಾಕ ಹಿಂಗ ಮಾಡಾಕ ಹತ್ಯಾನ ಅವನು ಅನ್ನೋದೆ ತಿಳಿಯಲಿಲ್ಲಾ. ಅವನ ಮಗಳ ಬಾಳಿಂದ ದೂರ ಅದೀನಿ. ಆದ್ರೂ ಬೇವರ್ಸಿ ಡಾಕ್ಟರ್. ಎಂ.ಎಲ್.ಎ ಕೂಡ ಸೇರ್‍ಕೊಂಡು ನನ್ನ ಮ್ಯಾಲ ಸೇಡು ತೀರಿಸ್ಕೊಳ್ಯಾಕ ಹತ್ಯಾನ ಅಂದ್ಕೊಂಡ. ಬಂದವನ ಬಗ್ಗೆ ಕೇಳಾಕ ಆಸಕ್ತಿ ಉಳಿಲಿಲ್ಲಾ ವಸಂತ ಹೊರಟು ಹೋಗಿದ್ರು.

"ಇದೇನ ಸಮಾಚಾರ, ದೊಸ್ತಾ ನೀ ವಿಚಾರ ಮಾಡಬ್ಯಾಡ. ಒಂದ ರೂಂ ಐತೇಳು. ಅವನು ಬಿಡಸೋದ್ರಾಗ ನಾವೇ ಬಿಡಾನಂತ ಅವನ ಯಾವ ಯಾವ ನಾಟಕ ಮಾಡ್ತಾನ ನೋಡೆ ಬಿಡಾನು" ಅಂದ ಹಂಡು ಪಾಟೀಲ. ಪ್ರಭುಗ ಸಿಟ್ಟ ಬಂದಿತ್ತು. "ಅವರು ನನಗ ಹಿಂಸೆ ಕೊಡಾಕ ಹತ್ಯಾರ ಪಾಟೀಲ ನಾನು ಮನಸ ಮಾಡಿದ್ರ ಚಿಟಕಿ ಹೊಡಿಯೋದ್ರೊಳಗಾಗಿ ಪ್ರತ್ಯುತ್ತರ ಕೊಡಬಹುದು. ಅಕಿ ಬಾಳು ಹಾಳಂಗ ಬಾರ್‍ದಂತ ಸುಮ್ನದೀನಿ" ಅಂದೆ "ಮತ್ತೊಂದ ಸಲ ಏನಾರ ನಿನ್ನ ಸುದ್ದಿಗ ಬಂದ್ರ ತೊರ್‍ಸೆ ಬಿಡಾನಂತ ಈಗ ಗಪ್ಪಿರು. ರೂಂ ನೋಡಿ ಬರಾನು ನಡಿ. ಅದು ಕ್ರಿಶ್ಚಿಯನ್ ಮನಿ ಮೇರಿ ಅಂತ ಆಂಟಿ ಅದಾಳ ಗಂಡ ಎಲ್ಲೋ ದುಬಾಯಿಯೋ ಇಂಗ್ಲೆಂಡಿನೊಳಗ ಅದಾನಂತ ಹೇಳಿದ್ಲು, ಅಂದ ಪಾಟೀಲ ಭಾಡಗಿ ಹೆಚ್ಚೇನು ಇಲ್ಲ ಅಲ "ಕೇಳ್ದ ಪ್ರಭು" ಎ ಅವರು ಹಂಗೆಲ್ಲಾ ಸಿಕ್ಕಾಪಟ್ಟೆ ಹೇಳೊ ದಿಲ್ಲಾ. ನಿಜವಾಗಿ ಹೇಳಾಕಂದ್ರ ಒಂದೀಟು ಮನುಷ್ಯರ ಬಗ್ಗೆ ಕನಿಕರ ತೋರಿಸೋರಂದ್ರ ಅವರು." ಹೇಳಿದ ಹಂಡು ಪಾಟೀಲ ಪ್ರಭು ಹೋಗಾಕ ಒಪ್ಕೊಂಡಿದ್ದ.

ಹೊಸ ಖೋಲಿಗ ಬಂದಾಗ ಹುಡ್ರಿಗೆಲ್ಲಾ ಜಾಗದ ಪರಿಚಯ ಹೇಳಿದ. ವಸಂತ, ಅವರ ಹೆಂಡ್ತಿ ಮಗನಿಗೆ ಹೇಳಿ ಬಿಟ್ಟ ಬಂದಿದ್ದ. ಈಗಲಾದ್ರು ಅವರ ಕಾಟ ತಪ್ಪೀತು

ಅಂದ್ಕೊಂಡ. ಎಂ.ಎಲ್.ಎ ಸಪೋರ್ಟಿಂದ್ನೆ ಹಾರಾಡಾಕ ಹತ್ಯಾನ. ಎಟದಿನ ನೋಡೋಣ. ಅಕೀಗಂತು ನನ್ನ ನೆನಪಿರಲಿಕ್ಕಿಲ್ಲಾ. ಎಂಥ ವಿಚಿತ್ರ ಹುಡಗಿ ನಾನೇ ತಪ್ಪು ಮಾಡ್ದೆ, ಆ ವಯಸ್ಸಿನ ಉದ್ವೆಗವನ್ನ ಪ್ರೀತಿ ಅಂಥ ಭಾವಿಸಿದೆ ಅದಕ್ಕ ಅರ್ಥನೇ ತಿಳಿಯದ ವಯಸ್ಸು. ನಾನು ಬಿಟ್ರು ಅವಳಪ್ಪ ಕೈತೊಳ್ಕೊಂಡು ಹಿಂದ ಬಿದ್ದಾನ. ನನಗ ಆಕಿಯ ನೆನಪು ಬ್ಯಾಡ ಆಗಿತ್ತು. ರೊಕ್ಕ ಇರೋ ಮಂದಿ ಸಮಯ ಕಳಿಯಾಕ ಹಿಂಗ ಮಾಡ್ತಾರ. ನಾವು ಎರಡು ಹೊತ್ತು ಹೊಟ್ಟಿ ತುಂಬಿದ್ರ ಸಾಕಪ್ಪ ಅಂತ ದಿನ ಕಳಿಯೋದನೇ ನೋಡ್ತಾ ಇರ್ತೀವಿ. ಒಂದ ಚಾ ಕುಡದ್ರೂ ಅದರ ಹಿಂದ ಮುಂದೆಲ್ಲಾ ಲೆಕ್ಕ ಹಾಕೋ ಸ್ಥಿತಿ. ಪಟಗಾರ, ಬಿದ್ದಪ್ಪ ನಾನು ರೊಕ್ಕ ತಗೊಂಡು ಗಪ್ಪಾದೆ ಅನ್ಕೊಂತಿರಬೇಕು. ಹಂಗ ತಗೊಂಡಿದ್ರ ನಾಯಾಕ ಇಲ್ಲಿ ಎರಡ ಹೊತ್ತಿನ ಊಟಕ ಲಾಟರಿ ಹೊಡಿತ್ತಿದ್ದೆ. ಈ ಬದುಕೆ ಹಿಂಗ ಎಲ್ಲೋ ಆರಂಭ ಮತ್ತೆಲೋ ತಿರಗಾಟ. ಏಲೋ ಕೊನೆ. ಪ್ರಾರಂಭ ಆಗಿದ್ದೆ ಕೊನೆಗೊಳ್ಳಲಿಕೆ. ನಡುವೆ ಬಂದ ಹೋಗೋ ಗೆಳತನ, ಪ್ರೇಮ ಎಲ್ಲವೂ ಆವಾಗವಾಗ ಕೊಂಡಿ ಕಳಿಚೊಕೊಂಡು ಏಕಾಂಗಿಯನ್ನಾಗಿ ಮಾಡ್ತಾವ. ಪ್ರಭು ದೊಡ್ಡ ವಿಚಾರವಂತನ ಹಂಗ ಯೋಚ್ನೆ ಮಾಡತೊಡಗಿದ. ಪಕ್ಕನೆ ಪ್ರಿನ್ಸಿಪಾಲರು ನೆನಪಾದ್ರು. ಅವರು ನೆನಪಾದ ತಕ್ಷಣ ಅವನಿಗ ಏನೋ ಕಳ್ಕೊಳ್ತೀರೋ ಅನುಭವ ಆಗ ತೊಡಗಿತು. ಅಂತಹವರಿಗ ಹಿಂಗ ಆಗಬಾರದಿತ್ತು. ಅವರು ಸುಳ್ಳೆ ಹೇಳಿರಬೇಕು. ತನ್ನ ಮನಸಿಗ ನಂಬಸಾಕ ನೋಡ್ದ ಸಾಧ್ಯ ಆಗಲಿಲ್ಲಾ. ಕ್ಯಾನ್ಸರ್. ಸಾವಿನ ಜೊತಿಗ ಬದಕಿರೋ ಮನುಷ್ಯ ಕ್ಷಣಗಳ ಜೊತೆಗ ಸಾವನ್ನ ಆಹ್ವಾನಿಸ್ತಾ ನಿದ್ದೆ ಬಂದು ದುಸ್ವಪ್ನ ದಂಗ ಅನುಭವಿಸ್ತಾ ಸಾವಿನ ಹಾದಿಕಾಯುತ್ತಿರೋ ಅವರ ಮಾನಸಿಕ ತುಮುಲ ಹ್ಯಾಂಗಿರ ಬಾರ್ದು. ವಿಚಾರದಿಂದ ತಲೆ ಸಿಡಿಯುತ್ತಿರೋ ಅನುಭವ. ಮನಿಗ ಪತ್ರ ಬರೆದಿಲ್ಲಾ. ತಾನು ಬದುಕಿದ್ದೀನಿ ಅನ್ನೋದು ಅವರಿಗ ತಿಳಿದಿ ರಲ್ಲಿಲ್ಲಾ. ತಿಳಿಸೋ ಮನಸು ಆಗಲಿಲ್ಲಾ. ಕೊನೆಗಾಲದಲ್ಲಿ ನನ್ನಿಂದ ಸಹಾಯ ಬಯಸೋ ತಂದೆ ತಾಯಿಗ ನೆರವಾಗದ ಸ್ಥಿತಿಯಲ್ಲಿರೋ ನಾನು ಅವರಿಗ ಜಗತ್ತಿಗ ಭಾರವಾಗಿ ಬದುಕೀನಿ ಅಂತ ತಿಳಿಸೋದಕಿಂತ ಸುಮ್ಮನಿದ್ರ ಅವರು ಮರತು ಸುಮ್ಮನಿರ್ತಾರ. ತಲಿ ನೋವಿಗ ಮದ್ದಾಗಿ ಒಂದಿಷ್ಟು ಚಾ ಕುಡಿಯೋ ಚಟದಿಂದ ಅದೇ ಹೊಟೇಲಿಗೆ ಹೋದೆ.

ಕೌಂಟರಿಗೆ ಬೆನ್ನು ಮಾಡಿ ಅಕಿ ಬಂದ್ರೂ ಕಾಣಬಾರ್ದು ಅಂತೇಳಿ ಕುಂತ್ಕೊಂಡೆ. ಅವಳು ಬಂದವಳೆ ನನ್ನ ನೋಡಿ, "ನಾಲ್ಕು ದಿನ ತ್ವಾಟದ ಕಡೀಗ ಬರ್ಲೇ ಇಲ್ಲಾ?" ಅಂದ್ಲು "ಯಾಕ ಬರ್ತೀನಂತ ಏನಾದ್ರ ಹೇಳಿದ್ನೇನು.?" ನಕ್ಕೆ. "ಹಿಂಗ ನಗಬ್ಯಾಡ್ರಿ ಮಾಡೋದ ಮಾಡಿ ಮತ್ತಿದು ಬ್ಯಾರೆ ನೀವು ನಕ್ಕರ ನನ್ನ ಎದಿಯೊಳಗ ಇರದ ಹಂಗ ಆಕೈತಿ" ಅಕಿ ಹೋಗಿದ್ಲು ಚಾ ವಿಷ ಅನಿಸಾಕ ಹತ್ತು. ಮತ್ತೆ ಯಾವಾಗಲೂ ಈ ಕಡೆ ಹಾಯ ಬಾರದು ಅಂತ ನಿರ್ಧಾರ ಮಾಡಿಕೊಡಂವನೆ ಬಿಲ್ಲು ಇಸ್ಕೊಂಡು ರೊಕ್ಕ ಇಟ್ಟು ಚಿಲ್ಲರೆ ಕೇಳ್ದೆ ಹೊಂಟೆ. ಹಾಳಮನಿ ಹುಡುಗಿ ನಾನೊಬ್ನೆ ಅದೀನೋ ಹ್ಯಾಂಗಂತ. ಯಾಕೊ ಅಸಹ್ಯ ಭಾವನೆ ಬರಾಕಹತ್ತು. ನಾನು ಎಷ್ಟು ಬ್ಯಾಡ ಅಂದ್ರು ಇವರೆಲ್ಲಾ ನನ್ನ ಹತ್ರ ಬರ್ತಾರ. ಪಾಟೀಲ ಹೇಳಿದಂಗ ಯಾವಾಕಿನಾರ ಗಂಟೆ ಹಾಕ್ಕೊಬೇಕು. ಆವಾಗ್ಲೆ ಬಿಡುಗಡೆ.

ಆ ಒಂದು ರಾತ್ರಿ

ಪ್ರಭು ಹುಡ್ರಿಗ ಪಾಠ ಹೇಳಿ ಮನೀಗ ಕಳಿಸಿದ್ದ. ಆಂಟಿ ಮನಿಗ ಯಾರೋ ಹೊಸಬರು ಬಂದಂತಿತ್ತು. ಅವನ ಖೋಲಿ ಮನಿಯೊಳಗೆ ಇದಿದ್ದರಿಂದ ಮಾತಾಡೋದೆಲ್ಲಾ ಕೇಳಿಸ್ತಿತ್ತು. ಬಂದೋರು ಹುಡುಗಿ ಅಂತ ಅಕಿ ಧನಿಮ್ಯಾಲ ಅಂದ್ಕೊಂಡೆ. ಅವರದೆ ಮನಿಯೊಳಗ ನಾನು ಎಲ್ಲಾನೂ ಮಾಡಬೇಕಿತ್ತು, ಸ್ನಾನ. ಗೀನ ಎಲ್ಲಾ ಒಬ್ಬಿಳಿಗೆ ಬೇಜಾರು ಯಾರಾದರೂ ಬಂದ್ರ ಹೆದರಿಕೆ ಆಗೋದಿಲ್ಲಾ ಅಂತ ಆಂಟಿ ಬಾಡಿಗೆ ಕೊಟ್ಟಿದ್ದಳು. ನಲ್ವತ್ತು ದಾಟಿರಬಹುದು. ಅಕಿ ಹಿಂದ ಮುಂದ ಏನೂ ವಿಚಾರ ಮಾಡ್ದೆ ಹಂಡು ಪಾಟೀಲ ಹೇಳಿದಕ ಒಪ್ಕೊಂಡಿದ್ದೆ. ಇಲ್ಲಾಂದ್ರ ಆ ಮನಿಹಾಳ ಮುದಕನ ಕೂಡ ಜಗಳ ಆಡಿ ರೂಂ ಬಿಡಬೇಕಾಗಿತ್ತು. ಅವನು ಬಂದಾಗಿ ನಿಂದ ಐದಾರ ಸಲ ಬೆಟ್ಟಿಯಾಗಿರಬಹುದು. ತನ್ನ ತಾಯಿವಯಸ್ಸು ಅದಕ್ಕೆ ಅವನು ಮದರ್ ಅಂತ್ಲೆ ಹೇಳ್ತಿದ್ದ.

ಅವನು ಬಾಗಿಲ ತಗದು ಹೊರಗ ಹೊಂಟಿದ್ದ ಹೊಸ ಹುಡುಗಿ ಅಪರಿಚಿತಳು ಅವನ ಎದ್ರಿಗ ನಿಂತಿದ್ಲು. ಪ್ರಭು ಸುಮ್ನೆ ನಿಂತ ಬಿಟ್ಟ ಬಹಳ ಹೊತ್ತಿನ ತನಕ. "ಹಲೋ ನಾನು ರೋಜಿ ಆಂಟಿಯ ಅಣ್ಣನ ಮಗಳು ಬೆಂಗಳೂರಲ್ಲಿ ಇರ್ತಿನಿ ಆಂಟಿ ನಿಮ್ಮ ಬಗ್ಗೆ ಹೇಳಿದ್ಲು" ಅವನ ಉತ್ತರಕ್ಕಾಗಿ ಕಾಯ್ತಿರೋ ಹಂಗಿತ್ತು. ಗಲಿಬಿಲಿಗೊಂಡಿದ್ದ ಸುದಾರಿಸ್ಕೊಂಡು. "ಹಾಯ್" ಅಂದ. "ಕಾಲೇಜಲ್ಲಿ ಪಾಠ ಹೇಳ್ತಿರಂತೆ." ಗುಲಾಬಿ ಕೆನ್ನೆಗಳನ್ನ ಅಲುಗಾಡಿಸಿ ಮುದ್ದು ಮುದ್ದಾದ ತುಟಿಗಳನ್ನ ಅರಳಿಸಿ ಮುಗಳ್ ನಕ್ಕಳು. "ಆಂ ಹೂಂ ಪಾರ್ಟ್ ಟೈಂ" ಸುಮ್ನಾದ ಎಂಥ ಹುಡುಗಿ ಇಕಿ, ತಾನೇ ಪರಿಚಯ ಮಾಡ್ಕೊಂಡು ಎಲ್ಲಾನು ತಾನೆ ಕೇಳ್ತಾ ಅದಾಳಲ್ಲ ಕಾಫಿಗೆ ನಮ್ಮಲ್ಲಿ ಬರ್ತಿರಾ ಅಂತ ಆಂಟಿ ಹೇಳ್ತಿದ್ರು "ಸುಳ್ಳು ಹೇಳಿದ್ಲು" ಇಲ್ಲಾ ನೀನು ಹೊರಗಡೆ ಹೊಗ್ತೀನಿ" ಕರದ್ರ ಹೋಗೋ ಮನಸಿತ್ತು. ಏನೋ ಸೆಳತ ಉಕ್ಕಿನ ಹಂಗ ಇರಬೇಕು ಅಂದ್ಕೊಂಡಿದ. ಆದ್ರ ರೋಜಿ ಅಯಸ್ಕಾಂತದಂಗ ಸೆಳಿಯಾಕ ಹತ್ಯಾಳ. "ಇವತ್ತು ನಮ್ಮೊಟ್ಟಿಗ ಯಾಕ ಕಾಫಿಗ ಬರಬಾರ್ದು ನಿಮಗ ಮನ್ಸಿಲ್ಲಾಂದ್ರೆ ಬೇಡಾ" ಅವನನ್ನೆ ನೋಡ ತೊಡಗಿದ್ಲು ಹೂಂ ಅಂದು ಬಿಡ್ಲೇನು. ಮನಸನ ಗಟ್ಟಿ ಮಾಡ ನೋಡಿದ ಸಾಧ್ಯ ಆಗ್ಲಿಲ್ಲಾ ಮುಷ್ಠಿಯೊಳಗಿನ ಮರಳಿನ ಹಂಗ ಹುಸದು ಹೊಂಟಿತ್ತು. "ಆಂ ಹೂಂ" ಯಾಕೆ ಮಿಸ್ಟರ್ ಪ್ರಭು ನಮ್ಮೊಟ್ಟಿಗೆ ಕಾಫಿ ಕುಡಿಯೊದಕ್ಕೆ ಇಷ್ಟಾ ಇಲ್ವಾ ಬೇಡಾ ಬಿಡಿ ನಾವು ಕ್ರಿಶ್ಚಿಯನ್ನರು ನೀವು ಹಿಂದೂಗಳು" ಧನಿಯೊಳಗ ಬೇಸರ ಇತ್ತು. ಪ್ರಭುಗ ನೋವು ಅನಿಸಿತು. "ನೋ ಮಿಸ್ ರೋಜಿ ನಾನು ಹಾಗಂತ ಯಾವಾಗಲೂ ಭೇದ ಮಾಡೋದಿಲ್ಲಾ ನಾನು ನಿಮ್ಮ ಹಂಗ ಮನುಷ್ಯ ನಾನು ಗಂಡು ನೀವು ಹೆಣ್ಣು ಅಷ್ಟೇ ವಿನಃ ಧರ್ಮ ಜಾತಿ ಮ್ಯಾಲ ನಂಗೆ ನಂಬಿಕೆ ಇಲ್ಲಾ." ತನ್ನ ತಾನು ಡಿಪೆಂಡ್ ಮಾಡ್ಕೊಳ್ಳಾಕ ನೋಡ್ದ. ಅಕಿಮ್ಯಾಲ ಯಾವ ರೀತಿ ಪ್ರಭಾವ ಆಗೈತಿ ಅನ್ನೋದನ್ನ

ಗಮನಿಸಿದ. ರೋಜಿ ಹೊರಟಳು. "ಇಲ್ನೋಡಿ ಇಪ್ಪತ್ತು ನಿಮಿಷ ಬಿಟ್ಟು, ಕಾಫಿಗೆ ಬರ್ತಾ ಇದ್ದೇನೆ" ನಾನು ಹೇಳಿದೆ ಅವಳು ನಕ್ಕಳು.

ಇದ್ಯಾವ ರೀತಿಯ ಆಕರ್ಷಣೆ ನಂಗೊತ್ತಿಲ್ಲ ಹಂಗ ಅಕಿ ವಶ ಆಗ್ತಾ ಹೋಗ್ತಾ ಅದೀನಿ. ಇಲ್ಲಾ ಅದರಿಂದ ಹೊರಗ ಬರಬೇಕು. ಇಪ್ಪತ್ತು ನಿಮಿಷಗಳಲ್ಲಿ ಒಂದು ಸೆಕೆಂಡು ವ್ಯರ್ಥ ಮಾಡದೆ ರೋಜಿಯ ಹುಸಿನಗುವಿನದೆ ವಿಚಾರ ಮಾಡ್ತಿರಲಿಲ್ಲಾ ಎಷ್ಟೊಂದು ಸರಳ ನಡೆ. ನಾನು ಅಪರಿಚಿತ ಅನ್ನೋದನ ಒಂದೇ ನಿಮಿಷದೊಳಗ ದೂರ ಮಾಡಿ ಬಿಟ್ಲು. "ಮದರ್ ನಾನು ಬರ್ಲಾ ಒಳಗೆ" ಪ್ರಭು ಹೆಜ್ಜೆ ಇಟ್ಟಿದ್ದ. "ಒಳಗೆ ಬಂದು ಬರ್ಲಾ ಅಂತಿಯಾ ಮೈಸನ್ ಇದು ನಿಂದೆ ಮನೆ you can come any time" ತಾಯಿಯ ಮಮತೆಯಿಂದಲೇ ಹೇಳಿದ್ಲು. ರೋಜಿ ಒಂದಿಷ್ಟು ಕೇಕ್ ಬ್ರೆಡ್. ಬಿಸ್ಕತ್ತು ಕಾಫಿ ಟೇಬಲಿನ ಮ್ಯಾಲಿಡ್ತಿದ್ಲು ಪ್ರಭು ರೋಜಿಯನ್ನೆ ಗಮನಿಸತೊಡಗಿದ. ಮಂಡಿ ಮ್ಯಾಲ ಏರಿದ ಸ್ಕರ್ಟ್ ತೆಳುವಾದ ಟೀ ಷರ್ಟ್ ಒಳ್ಳೆಯ ಜಿಂಕೆಯಂತ ನಡಿಗೆ ಅಂದ್ಕೊಂಡೆ. ಒಂದೆಳೆ ಚೈನಲ್ಲಿ ಇಳಿ ಬಿಟ್ಟಿದ ಏಸು ಶಿಲುಬೆಯನ್ನ ಗಮನಿಸ ತೊಡಗಿದೆ. ನೆನಪಾದದ್ದು ಡಿಕನ್ಸ್‌ನ ಗ್ರೇಟ್ ಎಕ್ಸಪೆಕ್ಟೇಷನ್ ಕಾದಂಬರಿಯ ಪಿಪ್. ವಿರಾಗಿ ಮಹಿಳೆಯ ಕೋಣೆಯಲ್ಲಿ ಅವಳ ಸಾಕುಮಗಳನ್ನು ಪ್ರೀತಿಸುತ್ತಿದ ಪಿಪ್ ಅಕಿಯನ್ನ ನೋಡಲು ಹೋಗುತ್ತಿದ್ದ ಅಲ್ಲಿಯ ಸನ್ನಿವೇಷವೂ ಹೀಗೆಯೇ ವರ್ಣಿಸಿದ್ದ. ಕೇಕ್ ಬ್ರೆಡ್ ಸರಿಸಿ "Have it," ಅಂದ್ಲು ರೋಜಿ. ಪ್ರಭು ಮಾತಾಡ್ಲಿಲ್ಲಾ ಕೇಕ್ ತಗೊಂಡು ತಿನ್ನ ತೊಡಗಿದ. ರೋಜಿ ಅವನ ಪಕ್ಕದಾಗ ಬಂದು ಕುಂತ್ಲು. "ನೀವು ಎಷ್ಟು ಬೇಗ ಪರಿಚಿತರಾಗಿ ಬಿಡ್ತಿರಾ, ನಿಮ್ಮ ಜೊತಿಗ ವ್ಯವಹರಿಸೋ ವ್ಯಕ್ತಿಯ ಬಗ್ಗೆ ತಿಳ್ಕೊಳ್ಳೊದೇ ಇಲ್ಲಾ" ಪ್ರಭು ಬ್ರೆಡ್ ಎತ್ಕೊಂಡ. "ಯಾಕ ತಿಳ್ಕೊಬೇಕು? ಮನುಷ್ಯ ಅಲ್ಲಾ ಅವನು ಮನುಷ್ಯನ ಬಗ್ಗೆ ನನಗೆ ಅನ್ನೊದಕ್ಕಿಂತ ನಮಗೆ ನಂಬಿಕೆ ಇದೆ." ರೋಜಿ ದೊಡ್ಡವರಂತೆ ಮಾತಾಡ ತೊಡಗಿದ್ಲು. "ಇದೆ ನಮ್ಮ ಹಿಂದೂಗಳಿಗೂ ನಿಮಗೂ ಇರೋ ವ್ಯತ್ಯಾಸ. ನಾವು ಪ್ರತಿಯೊಬ್ಬ ವ್ಯಕ್ತಿಯನ್ನೂ ಸಂದೇಹದಿಂದ್ಲೆ ನೋಡ್ತೀವಿ.ಯಾರಮ್ಯಾಲೂ ನಂಬಿಕೆ ಇಡೋದಿಲ್ಲಾ ಒಂದು ಹಂತದೊಳಿಗ ನಮ್ಮ ಮ್ಯಾಲೆ ನಮಗ ನಂಬಿಕೆ ಇರೊದಿಲ್ಲಾ" ಒಂದು ಗುಟಕು ಕಾಫಿ ಕುಡ್ದ. "ನಂಬಿಕೆ ವಿಶ್ವಾಸಗಳಿಲ್ಲದಿದ್ರೆ ಮನುಷ್ಯನ ಜೀವನ ವ್ಯರ್ಥ. ಜಿಸಸ್ ಅದಕ್ಕೆ ಹೇಳಿಕೊಂಡು. ಶತ್ರುವನ್ನು ಪ್ರೀತಿಸು ಅಂದಿದ್ದು" ಆಂಟಿ ಹೇಳಿದ್ಲು. "ಮತ್ತೊಂದಿಷ್ಟು ಕಾಫಿ?" ಕೇಳಿದ್ಲು ರೋಜಿ. "No thanks" ಅಂದ ಪ್ರಭು. "ಕಾಲೇಜ್ನಲ್ಲಿ ಏನ ಕಲಿಸ್ತಿರಾ?" ರೋಜಿ. ಕಪ್ಪುಗಳನ್ನ ಬಾತ್‌ರೂಂಗೆ ಸಾಗಿಸುತ್ತಾ ಕೇಳಿದ್ಲು "ಲಿಟರೇಚರ್" "ಕನ್ನಡ" "No English" "ವಾ ಹಂಗಾದ್ರೆ ನಾನು ನಿಮ್ಮ ಕ್ಲಾಸನ್ನ ಕೇಳಲೇ ಬೇಕು" ಕೈ ತೊಳ್ಕೊಂತ ಹೇಳಿದ್ಲು. "ಅಯ್ಯೊ ಬೇಡಾರಿ ನಾನೇನು ಅಂಥ ಪ್ರತಿಭಾವಂತ ಶಿಕ್ಷಕನಲ್ಲಾ ಹೊಟ್ಟೆಪಾಡಿಗಂತ ಏನೋ ಹೇಳ್ತಿನಿ. ಹುಡಗ್ರಿಗ ಅರ್ಥ ಆಗೋದಿಲ್ಲಾ ಹೆದರಿ ಪ್ರಶ್ನೆ ಕೆಳೋದಿಲ್ಲಾ ನಾನು ಹೇಳಿದ್ದೆ ಸರಿ ಅಂತ ತಿಳ್ಕೊಂತಾರ ಮುಗಿತು ನನ್ನ ತಪ್ಪು ತಪ್ಪಾಗೆ ಉಳ್ಕೊಳ್ಳಕತೈತಿ" ಪ್ರಭು ತನ್ನ ಸ್ಥಿತಿಯನ್ನ ವಿವರಿಸಿದ. "ಇಲ್ಲಾ ನಾನು ಕೇಳಬೇಕು. ನಿಮ್ಮ ಜೊತೆಗೆ ಬರ್ಲಾ ಆಂಟಿ ನಿವಾದ್ರು ಹೇಳಿ" ಕೂಗಿದಳು.

ಪ್ರಭುಗೆ ಪೇಚಿಗಿಟ್ಕೊಂಡಿತ್ತು. ಈ ಇಂಗ್ಲೀಷ್ ಹುಡುಗಿ ಮುಂದ ಆಕಿ ಭಾಷೆಗೆ ಅನ್ಯಾಯ ಮಾಡಿದ್ರೆ? "ಸರಿ ಆದ್ರೆ ಒಂದು Condition ನಾ ಏನು ತಪ್ಪು ಹೆಳ್ತೀನಿ ನನಗೆ ಆ ಮ್ಯಾಲ ಹೇಳಬೇಕು ಆಯ್ತು" "O.K. sure" ರೋಜಿ ಅವನ ಕೂಡ ಹೋಗೋ ತಯಾರಿ ನಡಸಿದ್ಲು.

ಪ್ರಭು ತಾನು ತಪ್ಪು ಮಾಡ್ತಿರಬೇಕು ಅಂದ್ಕೊಳತೊಡಗಿದ. ರೋಜಿ, ಬೆಟ್ಟಿಯಾದದ್ದೆ ಒಂದೆರಡು ಗಂಟೆ ಎಷ್ಟೊಂದು ಆತ್ಮೀಯತೆ "ಹೋಗಣ" ತಿರುಗಿ ನೋಡ್ದ ಪ್ರಭು. "what a pretty" ಅವನ ಹಲ್ಲುಗಳಿಗೂ ಜಗ್ಗದೆ ಹೊರಗ ಬಂದಿತ್ತು ರೋಜಿ "ಧನ್ಯವಾದ" ಅಂದ್ಲು ಇದೇನು ತದ್ವಿರುದ್ಧ ಅಂದ. "ಏಕಂದರೆ ನಾನು ಪ್ರಥಮ ವರ್ಷದ ಕನ್ನಡ ಎಂ.ಎ. ವಿದ್ಯಾರ್ಥಿನಿ" "ಹೌದಾ, ಅದಕ್ಕೆ ಕನ್ನಡ ಇಷ್ಟೊಂದು ಚೆಂದಾಗಿ ಮಾತಾಡ್ತೀರಾ" ಅಂದ ಪ್ರಭು. "ಇಲ್ಲಾ ನಿಮ್ಮಷ್ಟು ಚೆನ್ನಾಗಿ ಯಂತು ಖಂಡಿತಾ ಇಲ್ಲಾ. ನಿಮ್ಮ Accent ತುಂಬಾ ಚೆನ್ನಾಗಿದೆ ಅದು ನನಗೆ ಬಹಳ ಇಷ್ಟ." ಪ್ರಭು ಮಾತಾಡಲಿಲ್ಲಾ. "ನೀನು ಹೇಳಿದ್ದು ತಪ್ಪಾಯ್ತು" ಇಲ್ಲಾ ಹಾಗೇನು ಇಲ್ಲಾ" ಅಂದ.

ಕಾಲೇಜ ಹತ್ರ ಬಂದಾಗ ಹೆದರಿದ್ದ "ರೋಜಿ ನೀವು ನನ್ನ ಹಿಂದ" ಸ್ವಲ್ಪ ದೂರ ನಡ್ಕೊಂತ ಬರ್ತೀರಾ ದಯವಿಟ್ಟು "ಅಂದ" ಯಾಕೆ? ನಿಮಗೆ ಅಂಜಿಕೆ ಯಾಗುತ್ತಾ ಒಬ್ಬ ಉಪನ್ಯಾಸಕ ರಾಗಿ "ಇದು ನಿಮ್ಮ ಬೆಂಗಳೂರಲ್ಲಿ ಯಾವಾನಾದ್ರು ನೋಡಿದ ಅಂದ್ರು ನನ್ನ ಕತಿ ಮುಗೀತು" ಅಂತಿದ್ವಂಗೆ ಶೆಟ್ಟಿ ಪ್ರತ್ಯಕ್ಷ ನಾಗೆ ಬಿಟ್ಟ. ರೋಜಿಯನ್ನ ಒಂದ ಸಲ ಕೆಳಗಿಂದ ಮ್ಯಾಗಿನ ವರಿಗ ನೋಡ್ದ. ಕೈ ಸನ್ನೆ ಮಾಡಿ ಬೊಂಬಾಟ್ ಅಂದವನೆ ಅವನ ನೆಚ್ಚಿನ ಕುಳ್ಳಿಗೆ ಸುದ್ದಿ ಮುಟ್ಸಿ ಕಾಲೇಜಿನ ತುಂಬ ಸುದ್ದಿ ಮಾಡಾಕ ಹೊಂಟ. ಪ್ರಭು ಬೆವತೆದ್ದ "ಯಾಕ್ರಿ ಹೆದರಬೇಕು, ನಿವೇನು ತಪ್ಪುಮಾಡಿರಾ, ಒಬ್ಬ ಹುಡುಗಿ ಸಂಗಡ ಕಾಲೇಜಿಗ ಬಂದ ತಕ್ಷಣ ನಿಮ್ಮ ಬಗ್ಗೆ ಸಂಶಯ ಪಟ್ರೆ ಅವರು ಮನುಷ್ಯರ" ಜೋರಾಗೆ ಹೇಳಿದ್ಲು "ಇದೊಂದು ತಾಲೂಕು ಇಲ್ಲಿ ಜನರ ಬುದ್ಧಿಮಟ್ಟ ಅಷ್ಟಕಷ್ಟೇ ಇದೆ ಸಂಪ್ರದಾಯ ಅಂತ ಹೆಳ್ಕೊಂಡು ಒಳಗೊಳಗೆ ಮಜಾ ಮಾಡೋ ಹೈಕ್ಲಾಸ್ ಮಂದಿಗ ನಾವು ಏನು ಮಾಡಿದ್ರು ಸರಿಕಾಣೋದಿಲ್ಲಾ" ಮುಂದಾಗ ಬಹುದಾದ ಅನಾಹುತವನ್ನ ಕಲ್ಪಿಸಿಕೊಂಡು ಹೇಳ ತೊಡಗಿದ. "ನೀವು ಹೆದರೋದು ಬ್ಯಾಡ. ಪರಿಸ್ಥಿತಿಯನ್ನ ನಾನು ನೋಡಿಕೊಳ್ಳುವೆ ನೀವು ಮುಂದೆ ಹೊರಡಿ." ಹಿಂದೆ ಬರ್ತಿದ್ದ ಹುಡುಗಿಯ ಸಂಗಡ ಸೇರಿಕೊಳ್ಳಾಕ ನಿಂತ್ಲು. ಶೆಟ್ಟಿ ಗಾಬಾದ, ರೋಜಿ ಅವನನ್ನ ನೋಡಿ ನಕ್ಕಳು. ಶೆಟ್ಟಿ ಎಲಿ ಅಡಕಿ ತಂಬಾಕು ಹಾಕ್ಕೊಂಡು ಹಾಕೊಂಡು ಕೊಳತು ಹೋಗಿದ್ದ ಹಲ್ಲುಗಳನ್ನು ಪ್ರದರ್ಶಿಸ ಬಾರದು ಅಂದ್ಕೊಂಡಿದ್ರು ಅವನಿಗ ಅರಿವಿಲ್ಲದೆ ಹಲ್ಲು ಕಿರಿದ. ರೋಜಿ ಮಕ ಸಿಂಡರಿಸಿದ್ಲು. ಶೆಟ್ಟಿಗ ಅವಮಾನ ಆದಂಗಾಗಿ ಸ್ಟಾಪ್ ಕಡಿಗ ಓಡಿದ.

"ಸುಳ್ಯಾಕ ಹೇಳಿದ್ರಿ. ನೀವು ಒಳ್ಳೆಯ ಅನುಭವ ಇರೋ lecturer ಗಿಂತ ಅದ್ಭುತ ಪಾಠ ಮಾಡ್ತೀರಾ. ಶೆಲ್ಲಿಯನ್ನ Teach ಮಾಡೋದು ಸುಲಭ ಅಂದ್ಕೊಂಡ್ರಾ. ನೀವು ಇಷ್ಟು ಸರಳವಾಗಿ ಹೇಳ್ತಿರಾ." ಅವನೊಂದ ಸಲ ನೋಡಿದ್ಲು. "ಆವಾಗ್ಲೆ ಹೇಳಿನಿ ನಿಮಗೆ

ತಪ್ಪುಗಳನ್ನು ಮಾತ್ರ Piont out ಮಾಡಿ" ಅಂತ! "ಪ್ರಭು ಮುನಿಸ್ಕೊಂಡಿದ್ದ. ಇದ್ರೆ ತಾನೆ ಮಾಡಾಕ" You are a real genius," "ಸಾಕು ರೈಲು ಹತ್ಸೊದು" ಅವಳ ಕಡಿಗ ನೋಡ್ದಾ" ಇಲ್ಲಪ್ಪ ನಾನು ಯಾವಾಗ್ಲೂ ಸುಳ್ಳ ಹೇಳೊಲ್ಲ" ಅಂದಳು. ಯಾರಾದ್ರೂ ನೋಡ್ಯಾರಂತ ಪ್ರಭು ಅಕಿಯನ್ನ ಪ್ರಿನ್ಸಿಪಾಲರ ಛೇಂಬರಿ ಕರ್ಕೊಂಡ ಹೊಂಟ.

'ರೋಜಿ ಡಿಕಾಸ್ಟ' ಪರಿಚಯ ಮಾಡಿಸ್ದಾ "ಒಳ್ಳೆದಮ್ಮ" ಪ್ರಿನ್ಸಿಪಾಲರು ಮೃದುವಾಗೆ ಮಾತಾಡಿದ್ರು. "ಸರ್ ನಿಮ್ಮ ಆರೋಗ್ಯ" ಪ್ರಭು ಅವರ ಹತ್ರಕ ಹೋದ. ಮಾತಾಡ ಲಿಲ್ಲಾ. "ಚೆನ್ನಾಗ ಅದೀನಿ ಕಣಯ್ಯ ಕಲ್ನಂಗ ನಂಗೇನು ಆಗಿಲ್ಲಾ" ನಕ್ಕರು. "ಹೆಚ್ಚ ಮಾತಾಡ ಬ್ಯಾಡ್ರಿ ಸರ್ ನಿಮಗ ತ್ರಾಸ ಆಕೈತಿ ನಾನು ಬರ್ತೀನಿ "ಅಂದವನ ಹೊಂಟ. ಕುಳ್ಳಿ ಉಮ್ಮಣ್ಣ ಅವನ್ನ ನೋಡಿ ನಗಾಕತ್ತಿದ್ರು. ಶೆಟ್ಟಿ ಮುಂದ ಬಂದವನೆ. "ಭಾರಿ ಐತಲ್ರಿ ಪೀಸು ಮತ್ತೊಂದಕ ಕೈ ಹಾಕಿದ್ರೇನು." ಶೆಟ್ಟಿ ಮುಂದ ಬಂದವಳೆ ನಾನು ಇವರ ಮಾವನ ಮಗಳು ಆಯ್ತು, ತಗೋ ಈ ಹತ್ತು ರೂಪಾಯಿ ಕೋಲ್ಗೇಟ್ ತಗೊಂಡು ಬ್ರಸ್ ಮಾಡು" ಅಂದವಳೆ ಪ್ರಭುನ ಹತ್ರ ಬಂದ್ಲು. ಅವನು ಬೆವತಿದ್ದ. ಶೆಟ್ಟಿ ಮಕ ನೋಡ್ತಾ ನಿಂತಿದ್ದ. ಪ್ರಭು ರೋಜಿ ಕೂಡ ಹೆಜ್ಜಿ ಹಾಕ ತೊಡಗಿದ.

"ಹಿಂಗ ಹೇಳ್ಬಾರದಿತ್ತು. ನಾಳೆಯಿಂದ ಅವನು ಅದನ್ನೆ ದೊಡ್ಡ Issue ಮಾಡ್ತಾನ" ಅಂದ ಪ್ರಭು "ಬೆಂಗಳೂರಿನಲ್ಲಿ ಆಗಿದ್ರ ಅವನನ್ನ ಚಪ್ಪಲಿಯಿಂದ್ಲೆ ಹೊಡಿತಿದ್ರು ಹುಡುಗಿಯರು ಇಲಿಯಂತ ಬದುಕಿದ್ದಾನೆ, Idiot. ಸ್ನಾನ ಮಾಡಿ ಕಾಲೇಜಿಗ ಬರಲ್ಲ ದಿಮಾಕ ನೋಡಿ" ರೋಜಿಯ ಕೆಂಪು ಕೆನ್ನೆಗಳು ಸಿಟ್ಟಿಂದ ಮತ್ತೊಂದಿಷ್ಟು ಕೆಂಪಾದ್ವು. "ರೋಜಿ ಈ ಬದುಕೆ ಒಂದರೀತಿ ವಿಚಿತ್ರ ಸಿಕ್ಕಿದ್ದುದಕ್ಕೊಲ್ಲಾ ಹಾಗಿಲ್ಲಾ ದಕ್ಕಿದ್ದು ಉಳಿಯೋದಿಲ್ಲಾ" ಕೆಳಗ ಚಂಡ ಹಾಕೊಂಡು ಹೊಂಟಿದ್ದ. ಅರ್ಥ ಆಗ್ಲಿಲ್ಲದಂಗ ನೋಡಿದ್ಲು, "ಪ್ರಿನ್ಸಿಪಾಲರು, ಆ ಕುಂಟ" ಹುಡುಗಿ, ನಾನು ಎಲ್ಲರೂ ಒಂದ ರೀತಿ ಯಾವುದಕ್ಕೂ ಒಂದಕ್ಕ ಬಡದಾಡಾಕ ಹತ್ತೀವಿ "ಸುಮ್ನಾದ" ಏನೋ ನಿಮ್ಮ ವಿಚಾರಗಳಿಗ ಮುಟ್ಟಾಕ ನನ್ನಿಂದ ಆಗ್ತಾ ಇಲ್ಲಾ ಆದ್ರೂ ನೀವು ಅದ್ಭುತ. ಅಲ್ಲಾ ನಿಮ್ಮ ಪಾಠಕ್ಕೆ ಮರುಳಾಗಿರೋ ಹುಡುಗಿಯರು "........ಮಾತಾಡಲಿಲ್ಲಾ.." ನಿಂಗೆಲ್ಲೋ ಭ್ರಮೆ. "ನಾನಂತು ನಿಮ್ಮ ಫ್ಯಾನ್ ಆಗೀನಿ" ಅವನಿಂದ ಉತ್ತರ ಬರಲಿಲ್ಲಾ. ಅವಸರದಿಂದ್ಲೆ ಹೆಜ್ಜೆ ಹಾಕತೊಡಗಿದ.

ವಾಕ್ಯ ಜೋಡಣೆಯ ಕುರಿತು ಹೇಳ್ತಿದ್ದ ಬಾಗಿಲೊಳಗ ರೋಜಿ ಪ್ರತ್ಯಕ್ಷಳಾದ್ಲು. ಒಳಗ ಬರಬಹುದಾ ಅಂತ ಸಂಜ್ಞೆ ಮಾಡಿದ್ಲು. ಬೇಡಾ ಅಂತ ಹುಸಿಕೋಪದಿಂದ ಹೇಳಿದ. ಅಕಿ ಬರೋದಿಲ್ಲಾಂತ ಅವನಿಗ ಗೊತ್ತಿತ್ತು. ಹಿಡತ ತಪ್ಪಿತ್ತು ಮನಸಿಂದು ರೋಜಿಗ ಅದು ತಿಳಿತು ಒಳಗೊಳಗ ಖುಷಿ ಪಟ್ಲು. ಒಬ್ಬ ಗಂಡಸಿನ ಚಿತ್ತ ಕೆಣಕೋ ಸ್ತ್ರೀ ನಿಜವಾಗ್ಲೂ ಭಾಗ್ಯವಂತೆ, ಅವನ ಮನಸಿನ ತುಮುಲ ಅರಿಯಾಕ ಹವಣಿಸಿದ್ಲು. ಯಾವ ಪ್ರಕಾರದ ಭಾವನೆಗಳು ಎದ್ದಾವ ಅವನ ಮನಸಿನ್ಯಾಗಂತ ಗ್ರಹಿಸಲು ಹವಣಿಸಿದ್ಲು.

ಬಹಳ ದೂರ ಬಂದಿದ್ರು. "ರೋಜಿ ಹಿಂಗ ಬಬ್ಬ ಗಂಡಸಿನ ಜೊತಿಗ ಏಕಾಂತದಲ್ಲಿ

ಆದಿಯಲ್ಲ ಹೆದರಿಕೆ ಆಗೋದಿಲ್ವಾ" ನೇರ ಪ್ರಶ್ನೆ. "ನಾನು ಮನುಷ್ಯನನ್ನ ನಂಬುತ್ತೇನೆ." ಮೊಟಕು ಉತ್ತರ" ಅಲ್ಲ ನಿನೇನೂ ನಂಬ್ತಿಯಾ ಪುರುಷನೊಟ್ಟಿಗೆ ಒಬ್ಬ ಮಹಿಳೆ ಏಕಾಂತ ದೊಳಗಿದ್ರ ಅವರ ಮನಸ್ಥಿತಿ ಏನಾಗುತ್ತೆ ಅನೋದು ಗೊತ್ತಾ ನಿನಗೆ" ಕೇಳ್ದ ಪ್ರಭು. "ಮನೋ ವಿಜ್ಞಾನ ಗೊತ್ತಿಲ್ಲ, ರಕ್ತದ ಒತ್ತಡ ಹೆಚ್ಚಾಗುತ್ತೆ ಹೃದಯ ಡವಗುಡುತ್ತೆ. ಯಾವ ಒಂದು ಕಡೆಯಿಂದ ಘರ್ಷಣೆ ಶುರು ಆದ್ರು ಅನಾಹುತ ಆಗುತ್ತೆ. ಇಷ್ಟು ಮಾತ್ರ ಗೊತ್ತು Even then I belive you! "ಅವನ ಮಕ ನೋಡಿದ್ಲು "ನಿನ್ನ ನಂಬಿಕೆಯನ ಯಾವತ್ತು ಕಳಕೊಳ್ಳೊದಿಲ್ಲಾ" ಆಕಿಯನ್ನ ದಿಟ್ಟಿಸಿದ. ಯಾವ ಬದ್ಲಾವಣೆ ಇರ್ಲಲ್ಲಾ. ಇಂತ ನೂರಾರು ಸನ್ನಿವೇಷಗಳೊಳಗ ಆಡಿ ಪಾರಾದಂತಿತ್ತು. ಬೆಂಗಳೂರಿನಂತ ಗಿಜಗನ ಗೂಡನೊಳಗ. ಘರ್ಷಣೆಯ ಹಪಹಪಿತನ. ಸುಖದ ಅಲದಾಟ. ಎಲ್ಲಾ ಅನುಭವ ಐತಿ ನಾವೆ ಹಳ್ಳಿ ಪೆದ್ರು ಅಂದ್ಕೊಂಡ. "ಪ್ರಭು ಇಲ್ಲಿ ಕುಡೋಣ ಹುಲು ಚೆನ್ನಾಗಿದೆ" ಕುಂತ್ಲು, ಅವಳಿಂದ ದೂರ ಕುಂತ. "ಅಷ್ಟೊಂದು ದೂರನಾ ನಾನು ನಂಬ್ತನಿ O.K. ನೀವು ಅಷ್ಟೊಂದು ದುರ್ಬಲ ಮನಸ್ಸಿನವರು ಅಲ್ಲ ಸಂಯಮಶೀಲರು ಅಂತ ನನಗೆ ಗೊತ್ತು ಬನ್ನಿ ಹತ್ರ" ಅಂದ್ಲು. ಅವನು ಎದ್ದು ಬಂದು ಪಕದೊಳಗ ಕುಂತ್ಕೊಂಡ. "ನಾವು ಕಲ್ತಿದ್ದ Lord Jessus ರಿಂದ ಶಾಂತ ಚಿತ್ತರಾಗಿ. ಸದಾ ಪರರ ಕುರಿತು ಯೋಜನೆ ಮಾಡ್ತಾ ಶತ್ರುಗಳ ಬಗ್ಗೆನೂ ಯಾವುದೇ ತಪ್ಪು ಕಲ್ಪನೆ ಇರದೆ ಸಾಯುವಾಗ ದೇವರೆ ಅವರು ತಿಳಿಯದೆ ತಪ್ಪು ಮಾಡಿದ್ದಾರೆ ಕ್ಷಮಿಸು ಅಂತ ಪ್ರಾರ್ಥಿಸಿದರು. ಅವರು ನಿದರ್ಶವೆ ಪ್ರತಿಯೊಬ್ಬ ಕ್ರಿಶ್ಚಿಯನರಲ್ಲೂ ಇದೆ. ಮನುಷ್ಯ ಮನುಷ್ಯ. ಜಾತಿ. ಧರ್ಮ ಯಾವುದಾದರೇನು. ಬಡವರು ಕೈಲಾಗದವರು. ಸಹಾಯಕೆ ಅರ್ಹರು, ಇದು ನಮ್ಮ ಸಿದ್ಧಾಂತ." ಅವಳ ಮಾತುಗಳು ಸಾಗಿದ್ದವು ಅವಳೆನಾದರೂ ಒತ್ತಡ ಹೇರ್ತಿದ್ದಾಳೆಯೇ, ಅನುಮಾನಿಸಿದ ಇಲ್ಲಾ ರೋಜಿ ಅಂತ ಹುಡುಗಿ ಅಲ್ಲ. ಅಕಿ ಹೇಳೋದು ಸರಿ, ಅವನು ಮಾತನಾಡಲಿಲ್ಲಾ ರೋಜಿಗ ಏನು ಅನಿಸಿತು ತನ್ನ ಭಾಷಣ ನಿಲ್ಲಿಸಿದ್ಲು. ಗಾಳಿ ತಣ್ಣಗ ಬೀಸಾಕ ಹತ್ತಿತ್ತು. ಹಕ್ಕಿಗಳೆಲ್ಲಾ ಗೂಡ ಸೇರಾಕ ಹೊಂಟ ಹೊತ್ತು. "ಪಶ್ಚಿಮಕ್ಕೆ ಸೂರ್ಯ ಅವಸರದಿಂದ್ಲೆ ಮುಳಗ ತೊಡಗಿದ್ದ. ಬೆಂಗಳೂರಿನ ಗಡಿಬಿಡಿಯೊಳಗೆಂದು ನೋಡದ ವರ್ಣರಂಜಿತ ಸಂಜೆಯನ ಸವಿಯತೊಡಗಿದ್ಲು. ಪ್ರಭುನನ್ನ ತದೇಕ ಚಿತ್ತದಿಂದ ನೋಡ ತೊಡಗಿದ್ಲು. ಎತ್ತರದ ನಿಲುವು ಸೂರದ್ರೂಪಿ ಅವಳಿಗ ಗೊತ್ತಿಲ್ದಂಗ ಅಕಿ ಕೈ ಅವನ ಕೈ ಮ್ಯಾಲಿತು. ಗಾಬರಿ ಯಿಂದ ಸರಿಸಿಕೊಂಡ. ಅವನ ನೋಡಿ ಅದೇ ಮೋಹಕ ನಗೆ ನಕ್ಕಳು. ಪ್ರಭುಗ ತಲಿ ತಿರುಗಿದಂಗಾತು. ಸಾವರಿಸಿಸ್ಕೊಂಡ. ಮತ್ತೊಂದ ಸಲ ಪ್ರಯತ್ನಿಸಿದ್ಲು. What is this nonsense ಅನ್ನ ಬೇಕು ಅಂತ ಬಾಯಿತಗದ ಶಬ್ದಗಳೆಲ್ಲಾ ಗಂಟಲಲ್ಲೆ ಉಳ್ಕೊಂಡು ಉಸರು ಮಾತ್ರ ಹೊರಗ ಬಂತು. ಎದ್ದ, "ಯಾಕ್ರಿ ನಾನು ಸುಂದರವಾಗಿಲ್ವಾ ರೋಜಿ" ಅನಮಾನ ದಿಂದಲೇ ಕೇಳಿದ್ಲು. "ಒಂದ ದಿನದೊಳಗ ನನ್ನ ಹಿಂದೆ ಮುಂದ ಆರ್ಥಿಕ ಸ್ಥಿತಿ ಅರಿಯದೆ ಹಿಂಗೆ ಆಡ್ತಿಯಲ್ಲಾ, ಯಾಕ ಬ್ಯಾರೆ ಎಷ್ಟು ಮಂದಿ ಅದಾರ ಅವರ‍್ಯಾರು ಬ್ಯಾಡ ಆದ್ರೇನು." ನಾಟೋ ಹಂಗ ಹೇಳಿದ. "ಅಂದ್ರೆ ನಾನು ಬೇಕು ಬೇಕಾದವರಿಗ ಪ್ರಯತ್ನ ಮಾಡ್ತೀನಿ.

ಅಂತ ನಿಮ್ಮ ಅರ್ಥನಾ, ಇಲ್ಲಾ ಜೀವನದಾಗ ಎಂದೂ ಈ ರೋಜಿ ಆ ಕೆಲ್ಸಕ ಕೈ ಹಾಕಿಲ್ಲಾ" ಸಮರ್ಥಿಸಿಕೊಂಡ್ಳು. "ನಾನು ನಂಬೋದಿಲ್ಲಾ ಬೆಂಗಳೂರಿನಂತ ಮಹಾನಗರದೊಳಗ ನನಗಿಂತ ಚೆಂದ- ಅಂದ ಇರೋ ಗಂಡಸರು ಸಾವಿರಾರು-ಲಕ್ಷ- ಕೋಟಿ, ಅವರನ್ನು ಬಿಟ್ಟು ಹಳ್ಳಿ ಹುಂಬನ್ನ ಹಿಂದ ಬಿದ್ದಿಯಲ್ಲಾ ನಂಬಿಸಿ ನಾಳೆ ಬೆಂಗಳೂರಿಗ ಹೋದ ಮ್ಯಾಲ ಟಾಟಾ ಹೇಳಾಕಂತನSS"ಕೇಳಿದ. "ಛಿ ನಾಚಿಕೆ ಆಗೋದಿಲ್ವಾ ಒಬ್ಬ ಹುಡುಗಿಗ ಹಿಂಗ ಹೇಳಾಕ, ಹೆಣ್ಣಿನ ಮನಸು ಸೂಕ್ಷ್ಮ ನಿಮ್ಮಂತ ಗಂಡಸರ ಹಾಗಲ್ಲಾ ಪ್ರತಿಯೊಂದು ಸುಂದರ ಚಿಟ್ಟೆಯನ್ನ ಬೇಟೆಯಾಡೋದು ನೀವು. ಹೆಣ್ಣು ಹಾಗಲ್ಲ ಮನಸು ಕೊಡೋದು ಒಂದೇ ಸಾರಿ, ಮನಸು ಸೋತರೆ ಮುಗಿತು ಬೇರೆ ಎಂತ ಗಂಡಸು ಬಂದ್ರು ಸಪ್ಪೆಯಾಗಿ ಕಾಣ್ತಾರ. ನಿಮ್ಮನ್ನ ನೋಡಿದ ತಕ್ಷಣ ಮೊದಲ ನೋಟದಲ್ಲೇ ಅದು ಹೆಂಗೆ ಸೋತೆ ನಂಗೆ ಗೊತ್ತಿಲ್ಲಾ" ಅಕಿ ಮಾತಾಡ್ತಾನೆ ಇದ್ಲು. ಅವನು ಮತ್ತೇನನೋ ಯಾಚಿಸತೊಡಗಿದ. "ಎಲ್ಲಿಗ ಹೋದ್ರಿ ನಾ ಒಬ್ಬಳೆ ಮಾತಾಡುತ್ತಿದ್ದೇನೆ ನಿಮಗೆ ಇಷ್ಟ ಇಲ್ಲಾ ಅಂದ್ರೆ ಬೇಡಾ ಆದರೆ ಚೆಲ್ಲು ಚೆಲ್ಲಾದ ಹುಡುಗಿ ಅಂತ ಮಾತ್ರ ತಿಳ್ಕೊಬೇಡಿ" ಮುನಿಸಿಕೊಂಡ್ಳು. ಪ್ರಭು ಮುಗಿಲನ್ನ ನೋಡ್ತಿದ್ದ. "ನಾನು ಕಾಲೇಜಿನಲ್ಲಿ ಕಲಿಯೋ ಮುಂದ ಹುಡುಗಿಯರು ಬೈಕು. ಕಾರಿನ ಹುಡ್ರು. ಶ್ರೀಮಂತ ಟಿಪ್ ಟಾಪ್ ಹುಡಗರಿಗ ಮಾತ್ರ ಪಟಾಯಿಸ್ತಿದ್ರು ನಮ್ಮಂತಹ ವರಿಗ ಕ್ಯಾರೆ ಅಂತ ಕೂಡ ಹೇಳ್ತಿದ್ದಿಲ್ಲಾ ಈಗ ನೋಡು ನಾನು ಬ್ಯಾಡ ಅಂದ್ರೂ ಗಂಟಿಬಿಳಾಕ ಹತ್ಯಾರ "ಅಕಿ ಕಡಿಗ ನೋಡ್ದ." ನಿಮ್ಮ ಹತ್ರ ಅಂತ ಮೋಡಿ ಐತಿ "ನಿಮ್ಮ ಕಂಡ ಆ ಕ್ಷಣದಿಂದಲೇ ನಿಮ್ಮ ಕೂಡ ಮಾತಾಡಬೇಕು. ನಿಮ್ಮ ಜೊತೆ ಕಾಲ ಕಳಿ ಬೇಕಂತ ಹಪಹಪಿಸ ತೊಡಗಿದೆ. ಕಾಲೇಜಿನಲ್ಲಿ ನಿಮ್ಮ ಶಿಷ್ಯೆಯರ ಮಾತಾಡಿಸಿದಾಗ ಯಾಕೋ ಹಿಡಿಸಲಿಲ್ಲಾ" ಒರೆಗಣ್ಣಿಂದ ನೋಡ್ತಾ ಹೇಳಿದ್ಲು. "ನನ್ನ ಭೂತ ಕಾಲದ ಬಗ್ಗೆ ನಿಂಗ ಗೊತ್ತಾದ್ರ ಖಂಡಿತ ನೀನು ಇಷ್ಟ ಪಡೋದಿಲ್ಲಾ" ಕ್ಷಣದಲ್ಲಿ ಮುಳಗಲಿದ್ದ ಸೂರ್ಯನನ್ನ ನೋಡ್ತಾ ಹೇಳಿದ. "ಕಳ್ಳ, ಕೊಲೆ ಗಡುಕ, ಇನ್ನೇನು?" ಕೇಳಿದ್ಲು "ಮಲ್ಲಿಕಾ ಅನ್ನೋ ಹುಡುಗಿಯನ್ನ ಪ್ರೀತಿಸ್ತಾ ಅದೀನಿ" ಅಕಿ ಮಕ ನೋಡಿದ. ಮುದಡಿಕೊಂಡಿತ್ತು. ಮಾತಾಡ ಲಿಲ್ಲಾ. ಅವನು ಆ ಹಿಂಸೆ ಸಹಿಸದಾದ. "ಆದ್ರ ಈಗ ಅಕಿ ಮದ್ವಿಯಾಗಿ ನನ್ನ ಮರ್ತು ಹಾಯಾಗಿ ಅದಾಳ" ಅಂದ. ತುಟಿ ಅಲುಗಾಡಿದವು. ಹತ್ತಿರ ಬಂದವಳೆ ಅವನ ಕೈ ಹಿಕ್ಕೊಂಡ್ಲು.

ರಾತ್ರಿ ಹನ್ನೆರಡ ಗಂಟೆಯಾಗಿತ್ತು. ಪಾಠದ ತಯಾರಿ ಮುಗ್ಸಿ ಇನೇನು ದೀಪ ಆರಿಸಬೇಕು ರೋಜಿ ಅವನ ಖೋಲಿಯೊಳಗ ನುಸುಳಿದ್ಲು ಪ್ರಭು ಗಾಬರಿಗೊಂಡ. "ಏ ಏನ್ಮಾಡ್ತಿದ್ದಿ ಆಂಟಿ ನೋಡಿದ್ರೆ" "ಶು" ಆಂಟಿ ಮಕ್ಕೊಂಡಾರ. ಸುಮ್ನಿರು" ಅಂದ್ಲು ಪ್ರಭುಗ ಏನು ಮಾಡಬೇಕೊ ತಿಳಿಲಿಲ್ಲಾ. "ರೋಮಿಯೋ ಜೂಲಿಯೆಟ್'ಳ ಮನಿಗ ಹೋಗ್ತಿದ್ದ ಆದ್ರ ಜೂಲಿಯಟ್ ರೋಮಿಯೋನ "ಖೋಲಿಗೆ ಬಂದಾಳಂದ" "ಮಾತಾಡ ಬ್ಯಾಡ. ಆಂಟಿಗ ಎಚ್ಚರ ಆಗಬಹುದು." ಅಂದ್ಲು. "ಇಷ್ಟೋತ್ತಿ ನ್ಯಾಗ ಏನ ಕೆಲ್ಸ" ಅಂದ "ಇಲ್ಲ ಮರಾಯ ನಾಳೆ ಬೆಂಗಳೂರಿಗ ಹೊಂಟಿನಿ" ಅಂದ್ಲು. ಇಷ್ಟ ಬೇಗ? ಬೇಸರಿಸಿಕೊಂಡ. "ನಾನು ಒಂದ

ದಿನದ ಮಟ್ಟಿಗೆ ಮಾತ್ರ ಬಂದಿದ್ದೆ. ಆಂಟಿಗೆ ಅನಾರೋಗ್ಯ ಅಂತ, ಒಂದು ತಿಂಗಳ ಹಿಂದೆ ಪತ್ರ ಬರೆದಿದ್ದರು. ಈಗ ಆರೋಗ್ಯ ಸುಧಾರಿಸಿದೆ, ತಂದೆ ಮಂಗಳೂರು ಕಾಫಿ ಎಸ್ಟೇಟಿಗೆ ನಾಳೆ ಹೋಗ್ತಾರೆ ಅದಕ್ಕೆ ನಾಳೆ ಸಂಜೆಯೊಳಗ ಮನೆ ಮುಟ್ಟಬೇಕು." ಸುಮ್ಮನಾದಳು. ಬಹಳ ಹೊತ್ತು ಮಾತಾಡ ಲಿಲ್ಲಾ. ಅವನಿಗ ಅಂಟಿಕೊಂಡೆ ಕುಂತ್ಲು, "ಸರಿ ಮಕ್ಕೊ ಹೋಗು ಬೇಗ ಏಳಬೇಕಲ್ಲ." ಅಂದ "ಇಲ್ಲಾ ಇನ್ನೂ ಬಾಕಿ ಇರೋದು ಐದಾರು ಗಂಟೆ ಅದನ್ನೂ ನಿಮ್ಮ ಜೊತಿಗ ಕಳಿತೀನಿ. ಇನ್ನೂ ಭೆಟ್ಟಿಯಾವಾಗಲೋ" ಅವನ ಕೈ ಹಿಡಿಕೊಂಡ್ಲು. ಅವನ ಉಸಿರಾಟ, ಹೆಚ್ಚಾಗ ತೊಡಗಿತು. ಅಕಿ ಎದ್ದು ದೀಪ ಆರ್ಸಿ ಬಂದ್ಲು. ಅವನು ಊಹಿಸಾಕು ಸಾಧ್ಯ ಇಲ್ಲದ ಕ್ಷಣ ಅವನ ಜೀವನದಾಗ ಬಂದು ಹೋಗಿತ್ತು.

ಐದು ಗಂಟಿಗ ರೋಜಿ ಎದ್ದು ತನ್ನ ಪಾಡಿಗೆ ತಾನು ಹೋಗಿದ್ಲು ಅವನಿಗ ಏನೋ ಕಳ್ಕೊಂಡ ಅನುಭವ ಆಗಾಕ ಹತ್ತಿತ್ತು. ರೋಜಿಯ ಹುಚ್ಚು ನೆತ್ತಿಗೇರತೊಡಗಿತ್ತು. ಚಡಪಡಿಕೆ ಶುರು ಆತು. ಕಳದ ಪ್ರತಿಯೊಂದು ಕ್ಷಣಗಳು ಮರಳಿ ನೆನಪು ಮಾಡಿಕೊಳ್ಳ ತೊಡಗಿದ ಈಗ ಇದೊಂದೆ ಆಸರೆ ಅಂತ ಕಣ್ಣು ಮುಚ್ಚಿದ.

ಬೆಂಗಳೂರು ಬಸ್ ಹತ್ತಿದಾಗ ಅಕಿ ಮನಸು ಭಾರ ಆಗಿತ್ತು. ಪ್ರಭುನ ಒಂದ ಸಲ ನೋಡಿದ್ಲು. ಆಂಟಿ ಪಕ್ಕದಾಗ ನಿಂತಿದ್ದರಿಂದ ಸೂಕ್ಷ್ಮವಾಗೆ ಸಂವೇದಿಸ ತೊಡಗಿದ್ಲು ಪ್ರಭುಗ ಅರ್ಥವಾಗಿತ್ತು. ಅವನು ಕೆಳಗ ಇಳಿಯೋವಾಗ ಅವನ ಕೈ ಹಿಡಿದು ಒಂದು ಕವರ ಕೊಟ್ಲು. ಕಾಣದಂಗ ಕಿಸೆಯೊಳಗ ಇಟ್ಕೊಂಡು ಕೆಳಗ ಇಳದ. ಅವನ ಚಲನವಲನವನ್ನೆ ಗಮನಿಸ್ತಿದ್ದ ಜಿಂದಾಲು ನೋಡಿದಾಗ ಪ್ರಭುಗ ಯಾಕೊ ಹೆದರ್ಕಿ ಆತು. ಬಸ್ ಬಿಟ್ಟಾಗ ಕಾಲೇಜ ಕಡೀಗ ಹೊಂಟ.

ಪೊಲೀಸ್ ಸ್ಟೇಷನ್ ದಾಟಿದ. ಹಿಂದಿಂದ ಬರಾಕಹತ್ತಿದ ಜಿಂದಾಲು ನಿಗವಹಿಸದೆ ಮುಂದಕ ನಡಿತ, ಅವನು ದೌಡಾಯಿಸಿದ. "ಏ ನಿಂತ್ಕೊಳೋ ಬೋಳಿ ಮಗ್ನೆ" ಅಂದ ಪ್ರಭುಗ ಪಿತ್ತ ನೆತ್ತಿಗೇರಿತು, "ಯಾಕಲೆ ಮೈಯಾಗ ನೆಟ್ಟ ಗೈತಿಲ್ಲಾ" ಅಂದ. "ಯಾರು ಆ ಹುಡುಗಿ ಆಕೀನು ನಿನಗ ಏನ ಸಂಬಂಧ" ಎದಿಮ್ಯಾಲ ಬಂದಿದ್ದ. ಹಿಂದಿಂದ ಹನಮೇಶಿ ಸೇರಿಕೊಂಡ." ಓ ಇದು ನಿಂದಾ ಕೆಲ್ಸ ಲೇ ಜಿಂದಾಲು ಹುಡುಗಿಯರ ಸುದ್ಧಿಗ ಹೋಗಿ ಚಪ್ಪಲೀಲೆ ಏಟ ತಿಂದ್ರು ಬುದ್ದಿ ನೆಟ್ಟಗಾಗಲಿಲ್ಲಾ. ಈಗ ಯಾಕಿ ಹಿಂಗ ನನ್ನ ಹಿಂದ ಬಿದ್ದಿ"ಅಂದ." ಎಷ್ಟು ಹುಡುಗಿಯರ ಜೀವನ ಹಾಳ ಮಡಾಬೇಕು ಅಂದ ಕೊಂಡಿಯೋ ಮಾಸ್ತರ" ಅಂದ, "ನೋಡು ನನ ವೈಯಕ್ತಿಕತೆಗ ಕೈ ಹಾಕ ಬ್ಯಾಡ ಪರಿಸ್ಥಿತಿ ನೆಟ್ಟು ಆಗೋದಿಲ್ಲಾ, ಅಕಿಯೇನು ನಿನ್ನ ತಂಗಿಯಲ್ಲ. ಶಿರಗೂರು ಅಲ್ಲ ತಮ್ಮ ಇದು ಸುಮ್ನೆ ಹೋಗು" ಅಂದ. ಜಿಂದಾಲು ಪ್ರಭುವ ದಬ್ಬಿ" ಏನ್ಮಾಡ್ತೀರಿ ಆಂ, ಶಿರಗೂರು ಅಲ್ಲ ದೇಗಲೂರು ಆದ್ರ ಏನಾತು" ಅವನ ಅಂಗೀಗ ಕೈ ಹಾಕ್ದ. "ಕೈ ಬಿಡಲೇ" ಅಂದವನ ಎಲ್ಲೂ ಕೈ ಹಿಡದು ಬಿಡಸಿ ಒಂದ ಸಲ ದೂಕಿದ ಕಡ್ಡಿ ಪೈಲ್ವಾನ ಜಿಂದಾಲು ಮಾರ ದೂರ ಹೋಗಿ ಬಿದ್ದ. ಆ ಹನಮೇಶಿ ಅವನ ಕೈ ಹಿಡದು ಎತ್ತತ್ತಿದ್ದ ಬಂಡು ಪಾಟೀಲ ಅಚಾನಕ್ ಬಂದ. "ಏನಾತೋ ಯಾರಿವರು" ಅಂದ. "ನನ್ನ ಹೊಡಿಯಾಕ ಬಂದ ಗೂಂಡಾಗಳು

ಶಿರಗೂರಿಂದ ಇಲ್ಲಿಗೂ ಬಂದಾರ. ಭಾರಿ ಗಂಡ್ಸು." ಅಂತ ತನ್ನ ಅಂಗಿಯನ್ನ ಸರಿಮಾಡ್ಕೊಳ ತೊಡಗಿದ. ಅದೇ ದಾರಿ ಮ್ಯಾಲ ಹಾದೂ ಹೊಂಟಿದ್ದ ಪ್ರಿನ್ಸಿಪಾಲರು ಪ್ರಭುನ ನೋಡಿದವರ ಓಡಿಬಂದ್ರು. "ಏನ್ರಿ ಗಲಾಟೆ" ಅಂದ್ರು "ಏನೂ ಇಲ್ಲ ಸರ್, ರೋಜಿನ ಕಳಿಸಿ ಬರ್ತಾ ಇದ್ದೆ ಇವರು ಬಂದು ಕೊಳ ಪಟ್ಟಿ ಹಿಡದು ಹೊಡಿಯಾಕ ಬಂದ್ರು" ಅಂದ ಪ್ರಭು" ಹೌದ. ಯಾಕ್ರಪ್ಪ ಆ ಹುಡುಗಿ ಏನಾಗಬೇಕು ನಿಮ್ಗ "ಅಂದ್ರು." ನಮ್ಮ ತಂಗಿ ಸರ್' ಅಂದ ಜಿಂದಾಲು "ಯಾವುರಲೇ ನಿಂದು" ಪಾಟೀಲ ಕಪಾಳಕ ಬಾರ್ಸಿದ. "ತಂಗಿಯಂತ ಯಾವಾಗಿಂದ? ಅಕಿ ಬೆಂಗಳೂರು ನಿಂದು ಯಾವುದು" ಪ್ರಿನ್ಸಿಪಾಲರು ಕೇಳಿದ್ರು. "ಶಿರಗೂರು" ಹಿಸಮೇಶಿ ಅಂದ. "ಪಾಟೀಲ ಕರೀರಿ ಪೊಲೀಸರನ್ನ ನಾಳೆ ಹಿಂಗೆ ಮಾಡಿದ್ರ ಪಾಪ ಹುಡುಗ ಏನ್ಮಾಡ್ತನ" ಅಂದ್ರು ಪ್ರಿನ್ಸಿಪಾಲರು. "ಸರ್, ಪೊಲೀಸ್ ಗಿಲೀಸ್ ಏನೂ ಬ್ಯಾಡ ಇಷ್ಟು ಆದದ್ದೆ ಸಾಕು. ಮತ್ತೊಂದ ಸಲ ಈ ಕಡಿಗ ತಲಿ ಹಾಕೋದಿಲ್ಲಾ" ಅಂದ ಪಾಟೀಲ 'ನೀವು ಕಾಲೇಜಿ ಹೋಗ್ರಿ" ಅಂತ ಕಳಿಸಿದ ಪಾಟೀಲ.

ಆ ಘಟನೆಯ ನಂತರ ಪ್ರಭು ಮಂಕಾಗಿದ್ದ. ಇಲ್ಲೂ ನೆಮ್ಮದಿಯಿಂದ ಇರಾಕ ಬಿಡ ವಲ್ರು ಹಾಳಮನಿಯೋರು, ನಾನು ಎಲ್ಲಿ ಹೋದ್ರು ಅವರ ತಂಗಿಯರೇ ಇರ್ತಾರೇನೊ. ಕುಳ್ಳಿ ಉಮ್ಮಣ್ಣ ಅವನನ್ನೆ ಕಾಯಾಕ ಹತ್ತಿದ್ರು. "ಏನ್ಸಾರ ಕ್ರಿಶ್ಚಿಯನ್ ಜಾತಿಗ ಸೇರಿದ್ರಂತ." ಅಂದ ಉಮ್ಮಣ್ಣ "ಹೌದಯ್ಯ ನಿಮ್ಮ ಕಾಲ ಕಸ ಆಗಿರೋದ ಕ್ಕಿಂತ ಮನುಷ್ಯತ್ವ ಇರೋ ಆ ಜಾತಿಗ ಸೇರಿಸಿ" ಅಂತ ಒದರಿ ಹೇಳಬೇಕು ಅನಿಸಿತು ಕೆಳಗ ಚೆಂಡ ಹಾಕೊಂಡು ಕುಂತೆ." ಮತ್ತಿನೇನು, ಅಂತ ಹುಡುಗಿ ಸಿಗ್ತಾಳಂದ್ರ ನಾನು ಒಂದ ಕೈ ನೋಡೆ ಬಿಡ್ತಿದ್ದೆ." ಅಂದ ಕುಳ್ಳಿ "ನೋಡಿ ಸಾರ್ ದಯವಿಟ್ಟು ನಿಮ್ಮ ಕೆಲ್ಸ ನೀವು ನೋಡ್ತಿರಾ. ನಾನು ಕ್ರಿಶ್ಚಿಯನ್ನದಾರೇನು ಬೌದ್ದನಾದರೇನು, ನಿಮ್ಮಂತ ಕೀಳು ಭಾವನೆ ಯಂತು ಬರಂಗಿಲ್ಲಾ" ಅಂದೆ. "ಯಾರ್ರಿ ಕೀಳು ಭಾವನೆಯವರು, ನಾವು ಸಿನೀಯರ್ ಕಣ್ರಿ. ಪರ್ಮನೆಂಟು, ಪಾರ್ಟ್ ಟೈಂ ಗತಿ ಇಲ್ದ ಬಂದು ಬೊಗಳಾಕ ಹತ್ತಿಲ್ಲ" ಅಂತ ಎತ್ತರದ ಧನಿಯೊಳಗಂದ ಉಮ್ಮಣ್ಣ ಛೆಂಬರಿನಿಂದ ದೌಡಾಯಿಸಿದ ಪ್ರಿನ್ಸಿಪಾಲರು, ಪ್ರಭು ನನ್ನ ಹೊರಗ ಕರ್ಕೊಂಡು, ಬಂದ್ರು. "ಪ್ರಭು ಈ ಮಂದಿ ನಿನ್ನ ಬದಕಾಕ ಬಿಡೋದಿಲಾಂತ ಕಾಣುತ್ತೆ ಹಾಳಾದೋರು ಅವರಪ್ಪನ ಮನಿ ಕಾಲೇಜಂತ ತಿಳ್ಕೊಂಡಾರ ನಾನು ಮ್ಯಾನೇಜ್‌ಮೆಂಟಿಗ ತಿಳಿಸ್ತೀನಿ. ನೀನು ಕ್ಲಾಸಿಗ ಹೋಗು. ಕ್ಲಾಸ್ ಮುಗ್ಸಿ ನೆಟ್ಟಿಗ ನನ್ನ ಛೆಂಬರಿಗ ಬಾ, ತಾಳ್ಮೆ ತಗೋ ಬರೋದೆಲ್ಲಾ ಒಳ್ಳೆಯದಕ್ಕೆ ಇಲ್ಲಿಂದ ಬಿಟ್ಟು ಹೊಂಟೆ ಅಂತ ತಿಳ್ಕೊ ಅವಾಗ ಈ ಜನ ಆಡಿಕೊಳೋದು ಬಿಡೋದಿಲ್ಲಾ ಶತ್ರುಗಳ ಕುಟಾಗ ಬಾಳಿದ್ರೇನೆ ಬದುಕಿಗೊಂದಿಷ್ಟು ಬೆಲಿ ಬರೋದು. ಹೆದರ ಬ್ಯಾಡ ನಾ ಅದೀನಿ." ಸಮಾಧಾನ ಪಡಿಸಿದ್ರು. ಮನಸು ಕಲಕಿತು, ಕ್ಲಾಸು ಬ್ಯಾಡ ಅನ್ಸಿತು, ಸುಮ್ಮಿ "ಸರ್ ನಿಮ್ಮ ಕ್ಲಾಸು" ಅಂದ್ಲು ಸುಮ್ಮಿ ಪ್ರಿನ್ಸಿಪಾಲರು ಪ್ರಭುನ ಮಕ ನೋಡಿದ್ರು. " ಹೂಂ ಬಂದೆ" ಅಂದ.

" ನೀನು ದೊಡ್ಡ ಮನುಷ್ಯ ಕಣಯ್ಯ" ಅವರ ಕಂಠದೊಳಗ ನೋವಿತ್ತು. "ಸರ್

ಭದ್ರವಾಗಿ ನಿಂತಿರೋ ಆಲದ ಮರದಂಗಿರೋ ನಿಮ್ಮ ಮುಂದ ಒಂದು ಬಿಳಲು ನಾನು ಎಂಥ ನೋವನ ನುಂಗಿಕೊಂಡ ನಗ್ತಾ ಇರ್ತಿರಾ ನಾ ಯಾವ ದೊಡ್ಡ ಗುಣ ಪಡ್ಕೊಂಡೀನಿ" ಮಾತಾಡದಾದ. ಕಣ್ಣು ಒರೆಸಿಕೊಂಡು ಹೊಂಟ.

ಹುಡ್ರ ಮುಂದ ನಿಂತಾಗ ಅವನ ನೋವು ಮಾಯ ಆಗಿತ್ತು. ಒಂದ ಗಂಟೆ ಕಾಲ ಎಲ್ಲಾನೂ ಮರ್ತಿದ್ದ ಹುಡ್ರ ನಗು - ಗದ್ದಲದಾಗಿ ಕ್ಲಾಸ ಮುಗದಿದ್ದೆ ತಿಳಿಲಿಲ್ಲಾ. ಹೊರಗ ಬಂದಾಗ ಮದ್ಲು ಭೆಟ್ಟಿಯಾದದ್ದು ಹದ್ದಿನ ನೋಟದ ಶೆಟ್ಟಿಯನ್ನ "ಕಳಿಸಿದ್ರಲ್ರಿ ಅಕೀನ ದೇವರಾಣೆಗೂ ಭಾರಿ ಪೀಸ್‌ರಿ ಅದು" ಅಂದ. "ಏನೋ ಶೆಟ್ಟಿ ಶಿಕ್ಷಕರ ಹತ್ರ ಹಿಂಗ ಮಾತಾಡೋದು. ವಯಸ್ಸಿಗ ಹೋಗ್ಲಿ ವಿದ್ಯೆಗಾದ್ರು ಗೌರವ ಕೊಡಯ್ಯ" ಮುಂದ ಹೊಂಟ. ಅವನ ಹುಳಕು ಹಲುಕಿರಿತ ಕುಂಟಿ ಸುಮ್ಮಿ ಹಿಂದ ಹೊಂಟ. ಪ್ರಭು ಬಂದಾಗ ಪ್ರಿನ್ಸಿಪಾಲರು ಸುಸ್ತಾಗಿ ಕುಂತಿದ್ರು. "ಯಾಕ ಸರ್ ಏನಾತು" ಅಂದ "ಯಾಕಿಲಪ್ಪ ಏನೋ ಒಂದ ತರ ನೋವು" ಸುಮ್ನಾದ್ರು. "ಸರ್ ನಾನು ವಯಸಿನೊಳಗ ಕಿರಿಯ ನಿಮ್ಮ ಮಟ್ಟಿಕ ವಿಚಾರ ಮಾಡಲಾರೆ, ಆದ್ರು ನನಗ ನಿಮ್ಮ ಜೀವನದ ಬಗ್ಗೆ ತಿಳ್ಕೊ ಬೇಕು ಅಂತ ಆಸಕ್ತಿ ಹುಟ್ಟಿದೆ ಅದು ತಪ್ಪು ಅಂತ ಗೊತ್ತು ಸಾರ್ ನಿಮಗೆ ಬೇಸರ ಆಗದಿದ್ರೆ ತಿಳ್ಕೊ ಬಹುದಾ" ಅವರನ್ನ ನೋಡ್ದ. ಮಾತಾಡಲಿಲ್ಲಾ ಕಿಸೆಗ ಕೈ ಹಾಕಿದ್ರು "ದಯವಿಟ್ಟು ಸಿಗರೇಟ ತಗಿಬೇಡಿ ಸರ್ ನಾನು ಇನ್ನೇನನ್ನು ಕೇಳೋದಿಲ್ಲಾ" ಸುಮ್ಮನಾದ. ನೋವಿನ್ಯಾಗು ಒಂದು ಕಿರುನಗಿನಕ್ಕು. "ನೀನು ನನ್ನ ಮಗನ ವಯಸ್ಸಿ ನವನು ಕಣಯ್ಯ. ನನಗ ನಿನ್ನಂತ ಒಬ್ಬ ಮಗ ಇರ್ಬಾರದಾಗಿತ್ತಾ ಎಲ್ಲಾ ನಮ್ಮ ಕರ್ಮ." ಒಂದ ಸಾರಿ ಕೆಮ್ಮಿದ್ರು. "ಸರ್ ನೀರು" ಒಂದ ಗುಟಕು ಕುಡ್ದು ಲೋಟ ಕೆಳಗಿಟ್ರು. ಶೂನ್ಯವನ್ನೆ ದಿಟ್ಟಿಸ ತೊಡಗಿದ್ರು. "ಬದುಕಿ ನೊಳಗ ಕನಸು ಕಾಣಾಕ ಮಾತ್ರ ಪಾಡು ಕಣಪ್ಪ ಬದುಕನಿ ಒಳಗ ಎಂದೆಂಥ ಕಠಿಣ ಪ್ರಸಂಗಗಳಿರ್ತಾವ ಯೋಚಿಸಿದಾಗ ಎದಿನಡಗತೈತಿ. ನಿನ್ನ ವಯಸ್ಸು ನಾನು ಮದ್ವಿ ಆದಾಗ ಆರಂಭದಿಂದ್ಲೆ ಜಗಳ. ನರಕ ಆಗಿತ್ತು ಮನಿ. ಮೂರ ಜನ ಮಕ್ಕಳು ಹುಟ್ಟಿದ್ರು ದೊಡ್ಡ ಮಗಳು ಚಿಕ್ಕ ಮಗ ಮತ್ತೊಬ್ಬಳು ಮಗಳು ಆದ್ರೂ ಹೊಂದಾಣಿಕೆ ಆಗ್ಲಿಲ್ಲಾ. ಕೊನೆಗ ಒಂದ ದಿನ. ಅದ್ಯಾವನ ಕಟ್ಕೊಂಡು ಓಡಿ ಹೋದ್ಲೊ ನಾಪತ್ತೆ ಆದ್ಲು" ಸ್ವಲ್ಪ ಹೊತ್ತು ಮಾತಾಡ ಲಿಲ್ಲ. ಪ್ರಭು ಅವರ ಮಕದ ಮ್ಯಾಲಿನ ಗೆರಿಗಳನ್ನ ಎಣಿಸತೊಡಗಿದ. ಅವರು ಸುಸ್ತಾಗಿದ್ರು. ಸ್ವಲ್ಪ ಹೊತ್ತು ತಡಕೊಂಡು. ಶುರು ಮಾಡಿದ್ರು. "ಅಕೀ ಹೋಗಿದ್ದು ಬೇಜಾರಿಲ್ಲ ನಂಗ, ನನ್ನ ಮರ್ಯಾದಿ ಹಾಳಾಯ್ತಿಲ್ಲಾ ಆ ಮ್ಯಾಲ ಶುರು ಆತು ವಿಚಾರ, ಸಿಗರೇಟು, ಕುಡಿತ. ಅವುಗಳ ನಡುವೆ ಕ್ಯಾನ್ಸರ್ ಯಾವಾಗ ಮನಿಮಾಡಿ ಕೊಂಡಿತೋ ನಂಗ ಗೊತ್ತೆ ಆಗ್ಲಿಲ್ಲಾ "ಕಣ್ಣೊಳಗ ಎಂಥದ್ದೋ ಹೆದರಿಕೆ ಇತ್ತು ಬಹುಶಃ ಸಾವಿನದೇ ಇರಬೇಕು. ಪ್ರಭುಗ ಹ್ಯಾಂಗ ಸಮಾಧಾನ ಹೇಳಾಕೊ ತಿಳಿಲಿಲ್ಲಾ. "ಕ್ಷಮಿಸಿ ಸರ್ ನಿಮ್ಮ ಮನಸಿಗ ಬ್ಯಾಡ ಆಗಿದ್ದು ನಿಮ್ಮ ಹಳೆ ನೆನಪಿಗ ನಿಮ್ಮನ್ನ ಒಯ್ದು ನೋಯಿಸಿದೆ" ಅವರ ಕೈ ಹಿಡ್ಕೊಂಡಿದ್ದ." ಸ್ವಲ್ಪ ಹಗರಾತು ಕಣೋ ಮನಸ್ಸು. ಉಮ್ಮಣ್ಣಿ, ಕುಳ್ಳಿ, ಮೇಸ್ತ್ರಿ, ಗಣಿಯಾರ ಬಹದ್ದೂರ, ಎಲ್ಲಾ ನನ್ನ ಸಹದ್ಯೋಗಿಗಳು, ನಮ್ಮೆಲ್ಲರಿಗೂ ಅದೇನೋ

ಒಂದ ರೀತಿಯ ಇರ್ಷೆ, ಒಬ್ಬನ್ನ ಕಂಡ್ರ ಒಬ್ಬನಿಗ ಆಗೋದಿಲ್ಲಾ ಕಾಲೇಜು, ಆರಂಭ ಮಾಡಿದೋರು ನೀವು. ಕಷ್ಟ ಪಟ್ಟು ಸರ್ಕಾರದ ಅನುದಾನ ತಂದೋರು ನೀವು ಅದಕ್ಕ ನನಗ ಈ ಕುರ್ಚಿ ಗೌರವ" ತಿರಸ್ಕಾರ ಇತ್ತು ಅವರ ಧನಿಯೊಳಿಗ ಪ್ರಭುಗ ಅವರು ಹೆಚ್ಚು ಮಾತಾಡಿ ಆಯಾಸ ಮಾಡಿಕೊಳ್ಳೋದು ಬ್ಯಾಡ ಆಗಿತ್ತು. "ಪಾಠದ ಹುಡ್ರು ಕಾಯ್ತಿರ್ತಾರ ಸರ್" ಅಂದ "ಹೋಗಪ್ಪ ಮದ್ಲು ಹೋಗು. ಕೆಲಸ ಮದ್ಲು" ಅಂದ್ರು.

ಬಾಗಿಲು ತಗದಾಗ ರೋಜಿ ನೆನಪಾದ್ಲು. ಹುಡ್ರು ವಿಚಾರ ಮಾಡಾಕು ಟೈಂ ಕೊಡ್ದೆ ಒಳಗ ಬಂದಿದ್ರು. ಆಂಟಿ ಒಂದ ಸಾರಿ ಬಂದು "ಒಂದ ಲೋಟ ಕಾಫಿ ಮೈ ಸನ್" ಅಂದ್ರು. ಬ್ಯಾಡ ಹೇಳ್ದೆ 'ಹೂಂ' ಅಂದಿದ್ದ ರೋಜಿ ಕೂಡ ಕಳದ ಆ ರಾತ್ರಿ ನೆನಪಾತು. ಕಾಫಿ ರೋಜಿ ವಿಚಾರ ಒಂದೇ ಸಲ ನುಗ್ಗಿದವು. ಹುಡ್ರು ದಾಂದ್ಲಿ ಎಬ್ಬಿಸಿದ್ರು. ಪಾಠ ಮುಗಿಸಿದ. ಆಂಟಿಗಾಗಿ ಕಾದು ಕುಂತ, ಹೊರಗ ಹೋಗಾಕ ಚಾವಿ ಇರ್ಲಿಲ್ಲಾ, ಹಂಡು ಪಾಟೀಲ ಬಂದಿದ್ರ ಪಾಡಿತ್ತು. ಕುಂಬಿಸುತ್ಯಾ ಚಾಳಿಸ ರಾಜಾನ ಪತ್ರ ಬಂದಿತ್ತು. ಯಾರಿಗೂ ಹೇಳ್ದೆ ಬಂದಿದ್ದೆ ಅವರಿಗ ವಿಳಾಸ ಹೆಂಗೊ ಸಿಕ್ಕಿತ್ತು ಮಾಬ್ಬಾ ಒಂದೆಲ್ಡ ಸಲ ಬಂದ ಹೋಗಿದ್ದ. ಮಲ್ಲಿಕಾ ಕೈ ಕೊಟ್ಟಿದ್ದ ಕೇಳಿ ಬೇಜಾರಾಗಿತ್ತು. ಅವನಿಗ, ಕಾಲೇಜಿನ್ಯಾಗ ಒದೋ ಮುಂದ ಅವನು ನನ್ನ ಕೂಡ ಸ್ಪರ್ಧಿಸಿದ್ದ. ಸೋತು ಸೋಲು ಒಪ್ಕೊಂಡು ಗೆಳತನ ಮಾಡಿದ್ದು, ಪ್ರಭು ಯೋಚಿಸತೊಡಗಿದ್ದ. ಆಂಟಿ ಬಂದು "ಮೈ ಸನ್ ಕತ್ಲಾಗಿದೆ ದೀಪ ಯಾಕೆ ಹಾಕಲಿಲ್ಲಾ" ಅಂದಾಗ್ಲೆ ಎಚ್ಚರಾಗಿತ್ತು. "ಮದರ್ ಅದು ಹಂಗೇ ಕುಂತೆ ಗೊತ್ತಾಗಲಿಲ್ಲಾ" ಪರವಾಯಿಲ್ಲಾ ಬಿಡು ಈಗ ಹಾಕೋಣ ಬಜಾರಲ್ಲಿ ಪವರ್ ಇರಲಿಲ್ಲಾ" ಆಂಟಿ ಸ್ವಿಚ್ ಹಾಕಿದ್ಲು.

ಅವರು ಊಟಕ ಕರಿಯೋದಕ್ಕಿಂತ ಮದ್ಲು ಹೊರಗ ಹೊರಟ. ಕತ್ಲಾಗಿದ್ರಿಂದ ಬಹಳ ದೂರ ಹೋಗೋದು ಬ್ಯಾಡ ಅಂದಕೊಂಡವನೇ ಸ್ವಲ್ಪ ದೂರ ನಡದು ಹೊಂಟ. ಕರ್ಜಗಿ ಕತ್ರಿಯೊಳಗ ಯಾರು ಇರ್ಲಿಲ್ಲಾ ಬಳ್ಳಾರಿ ಜಾಲಿ ದಟ್ಟವಾಗಿ ಬೆಳದಿತ್ತು. ಕತ್ಲು ಗವ್ss ಅನ್ನೋ ಹಂಗಿತ್ತು. ಅವನು ನಿಜವಾಗಿಯೂ ಹೆದರಿದ ದೊಡ್ಡ ಹೆಜ್ಜಿ ಹಾಕತೊಡಗಿದ. ಯಾರೋ ಅವನ ಹಿಂದಿಂದ ಬಂದಗಾತು ತಿರುಗಿ ನೋಡಿದೆ ನನ್ನ ವಯಸ್ಸಿನ ವ್ಯಕ್ತಿಯೊಬ್ಬ ನನ್ನ ಹಿಂದಿಂದ ನಡದು ಬರ್ತಿದ್ದ. ಪ್ರಭು ಗಾಬರಿಯಿಂದ ಅಂದು ನಡದ ಘಟನೆ ನೆನಪಾತು. ಅದೇ ಅಪರಿಚಿತ ನಿರಬಹುದೆ? ಮಾರ ದೂರ ನಡದ ಬೀದ ದೀಪ ಇತ್ತು. ಮಕ ನೋಡಾನಂತ ತಿರಗಿದ. ಅವನೇ. ಹೆಜ್ಜೆ ದೊಡ್ಡದಾಗಿ ಹಾಕ ತೊಡಗಿದ. ಹಿಂದಿಂದ ಅವನು ಓಡಿಬಂದವನೆ ಪ್ರಭುನ ಹಿಡ್ಕೊಂಡ. ಬಲೂನಿ ನಂಗೆ ಉಬ್ಬಿ ಕೊಂಡಿದ್ದ ಅವನನ್ನ ಕೆಳಗ ಹಾಕಿದೆ ಕೊಸರಿಕೊಂಡು ಓಡತೊಡಗಿದೆ.

ಪಾಟೀಲ ವಿಚಾರ ಮಾಡಿದ. "ಸರಿಯಾಗಿ ನೋಡ್ದೆ ಅವತ್ತಿದ್ನಲ್ಲ ಅವನೇ" ಕುತೂಹಲ ದಿಂದ ಕೇಳ್ದ" ಹೂನೋ ಅವನೆ ದಡಿಯಾ ಕತ್ಲಾಗ ಹಿಂದಿಂದ ಬಂದು ಬಿಗಿಯಾಗಿ ಹಿಡ್ಕೊಂಡ, ಅವನ ತಾವ ಚಾಕು ಇತ್ತು ಅಂತ ಕಾಣತೈತಿ" ಪ್ರಭು ಹೆದರ್ಕೊಂತಲೇ ಹೇಳಿದ. "ಅವನಜ್ಜಿ ಅವನೇನು ಮಾಡ್ತಾನ. ಜೀವ ತಗಿಯೋದಂದ್ರ ಕುರಿ ಕೋಳಿ ಅಂದ್ಕೊಂಡಿ ಯೇನೋ" ಸಮಾಧಾನ ಪಡಿಸಿದ. "ನೀನು ಹುಷಾರಾಗಿರಬೇಕು, ಆ ದಾರಿಗ ಎಂದೂ

ಹೋಗ ಬ್ಯಾಡ, ಕತ್ಲು ಆತಂದ್ರ ಹೊರಗ ಹೋಗ ಬ್ಯಾಡೋ ಮರಾಯ, ಕಾಲ ಕೆಟ್ಟೈತಿ ನಿನಗ ಯಾರದಾರ ಹೇಳು ಇಲ್ಲಿ ನನ್ನ ಮ್ಯಾಲ ಹೆಚ್ಚೈತಿ ನಿನ್ನ ಜವಾಬ್ದಾರಿ" ಪಾಟೀಲ ತನ್ನ ಕಾಳಜಿ ತೋಡಿಕೊಂಡ. "ನೀ ಏನೇ ಹೇಳು ಪಾಟೀಲ ಆ ಡಾಕ್ಟರ್ ಸುಧಾರಿಸೋದಿಲ್ಲಾ ಅವನ್ನ ಏನ ಮಾಡಬೇಕು ಅಂತೀನಿ" ಅಂದ ಪ್ರಭು. "ಅವನ ಮಗಳ ಜೀವನ ಹಾಳ ಮಾಡಬೇಕು ಅಷ್ಟೆ" ಪಾಟೀಲ ಸಿಟ್ನಿಂದ ಹೇಳ್ದ. "ಛೇ, ಅವನ ಮೂರ್ಖ ಅಂತ ನಾವು ಆಗಬಾರ್ದು ಅವನು ನನಗ ಎಷ್ಟೆ ಕೆಟ್ಟ ಮಾಡಿದ್ರು ಸುಮಗ ನಾನೇನು ಮಾಡೋದಿಲ್ಲಾ ಇದ್ರಾಗ ಅಕಿದೇನೋ ತಪ್ಪಿಲ್ಲಾ" "ಪ್ರಭು ನೊಂದಿದ್ದ ಹೇಳೊ ಮುಂದ, ನೋವಿತ್ತು ಧನಿಯೊಳಗ ತಡದು ತಡದು ಹೇಳಿದ. "ನಿಂದೇನ ತಪ್ಪೈತಿ ಅಕಿ ಮ್ಯಾಲ ಬಿದ್ದಿಂದ ತಾನೇ ನೀನು ಮುಂದಾಗಿದ್ದು. ಆದ್ರ ಅವಳಪ್ಪ ನಿನ್ನನ್ನೇ ಧೂಷಿ ಅಂತ ಹೊಡಸಾಕ ನೋಡಾಕ ಹತ್ಯಾನಲ್ಲಾ. ನೀನು ಎಲ್ಲಿಗ ಹೋದ್ರು ಬಿಡದಂಗ ಬೆನ್ನು ಬಿದ್ದಾನ" ಒದರಿದ ಪಾಟೀಲ. ಪ್ರಭು, ಮಾತಾಡಲಿಲ್ಲಾ. ಏನೂ ಹೊಳಿಯಲಿಲ್ಲಾ "ಹಿಂಗ ಬಿಟ್ರ ಕೆಲ್ಸ ಆಗೋದಿಲ್ಲಾ ತಮ್ಮ ಏನಾರ ಒಂದ ಗತಿ ತಾಣಿಸ್ಲೆ ಬೇಕು" ನಿರ್ಧಾರದ ಧಾಟಿಯೊಳಿಗ ಹೇಳಿದ ಪಾಟೀಲ. ಅವನ ಮಕ ನೋಡ್ದೆ" ನಾಳೆ ನಿನಗ ಹೆಚ್ಚುಕಮ್ಮಿ ಆದ್ರ?" "ಆಗೋದೇನು ಮಂದೆ ಮಾಡ್ತಾರ ಇವತ್ತಿನ ಸ್ಥಿತಿ ನೋಡಿದ್ರ ನಂಗ್ಯಾಕೋ ಹೆದರ್ಕಿ ಆಗಾಕ ಹತ್ತೈತಿ" ಅಂದ ಪ್ರಭು. "ಏನು ಆಗೋದಿಲ್ಲಾ ನಾ ಅದಿನಲ್ಲಾ ಇದೇ ಊರಾಂವ, ಬ್ಯಾರೆ ಊರಿಂದ ಬಂದು ಅವನೇನು ಮಾಡ್ಯನು ಆದ್ರೂ ನಾನು ಇಪತ್ನಾಕ ತಾಸು ನಿನ್ನ ಕೂಡ ಎಲ್ಲಿರ್ತಿನಿ ಹೇಳು" "ಪ್ರಿನ್ಸಿಪಾಲರಿಗ ಒಂದ ಮಾತ ಹೇಳಲೇನು" ಕೇಳ್ದ ಪ್ರಭು. "ಏ ಬ್ಯಾಡ ಅವರದೇ ಅವರಿಗ ಆಗೈತಿ ನೋಡಾನು ಇನ್ನೊಂದ ಎಲ್ಡ ದಿನ, ನೀನು ಸಂಜಿ ಆತಂದ್ರ ಖೋಲಿ ಬಿಡಬ್ಯಾಡ ಅಂದ." ಪ್ರಭುನ ಕಳಸಾಕ ಆಂಟಿ ಮನಿ ಮಟ ಬಂದ.

ಒಂದ ವಾರದಿಂದ ಖೋಲಿ ಬಿಡ್ಲಿಲ್ಲಾ. ಕಾಲೇಜಿಗ ಹೋಗೊ ಮುಂದ ಯಾರಾದ್ರೂ ಹುಡ್ರ ಜೋಡಿ ಹೋಗ ತೊಡಗಿದೆ. ಬದುಕು ದುಸ್ತರ ಅನಿಸಿತು. ನಾನು ಮಾಡಿದ್ದಾದರೂ ಏನು? ಯಾರು ಮಾಡದ್ದನ್ನ ಮಾಡಿದ್ನೆ, ಅಕಿ ಮದ್ವಿ ದಿನ ಹೋಗಿ ದಾಂದ್ಲಿ ಮಾಡಿದ್ನೆ. ಅಷ್ಟು ಶಕ್ತಿ ನನ್ನ ಹತ್ರ ಇತ್ತೆ? ಈ ಮಂದಿ ಯಾಕ ಹಿಂಗ ಮಾಡಾಕ ಹತ್ಯಾರೋ ತಿಳಿವಲ್ದು, ಎಲೆಕ್ಷನಿಗ ಸುಮಾರು ಜನ ನಿಂತಿದ್ರು. ನನ್ನ ಮ್ಯಾಲ ಯಾಕ ಸೇಡ ತೀರಿಸ್ಕೋ ಬೇಕು? ಒಂದು ತಿಳಿದೆ ತಲಿ ಕೆಡಿಸ್ಕೊಂಡಿದ್ದ. ಮಕ ಸಣ್ಣಗ ಮಾಡ್ಕೊಂಡ ಕುಂತಿದ್ದ. 'ಪ್ರಭು' ಆತ್ಮೀಯತೆಯಿಂದ ಕೈ ಇಟ್ಟಿದ್ರು ಪ್ರಿನ್ಸಿಪಾಲರು. "ಯಾಕಪ್ಪ ಒಂದ ವಾರದಿಂದ ನೋಡ್ತಾ ಅದೀನಿ ಸಪ್ಪಗ ಅದಿ, ಹೆಚ್ಚ ಮಾತಾಡ್ತಿಲ್ಲಾ ಏನೋ ಒಬ್ಬನೇ ಅನುಭವಿಸ್ತಾ ಇದ್ದೀಯಾ ನನ್ನ ಹತ್ರನೂ ಹೇಳ ದಂತಹದ್ದೆ?" ಅವರ ಕಳಕಳಿಯನ್ನ ಸಹಿಸದಾದ ಪ್ರಭು. "ಸರ್ ನಿಮ್ಮ ಹತ್ರ ಅಲ್ದೆ ಮತ್ಯಾರಿಗ ಹೇಳ್ಲಿ. ನಾನೆಲ್ಲಿ ನೀವೆಲ್ಲಿ, ನೀವು ತೊರ್‍ಸೊ ಆತ್ಮೀಯತೆ ಒಂದರಿಂದ್ಲೆ ನಾನು ಎಲ್ಲವನ್ನೂ ಮರಿತಾ ಇದ್ದೀನಿ. ಅವತ್ತು ಇಬ್ರೂ ದಾರಿಮ್ಯಾಲ ನನ ಕೂಡ ಜಗಳಕ್ಕ ಬಂದಿದ್ರಲ್ಲಾ. ಆದ್ರಾಗ ಒಬ್ಬ ಒಂದ ವಾರದ ಹಿಂದ ಕರ್ಜಗಿ ರೋಡಿ ನೊಳಗ ನನ್ನ ಹಿಂದಿಂದ ಹಿಡಕೊಂಡು ಹೊಡೆಯಾಕ ಪ್ರಯತ್ನಿಸಿದ" ಪ್ರಭು ನಿಟ್ಟುಸಿರು

ಬಿಟ್ಟ. "ಓ ಅದೋ ವಿಷಯ ಅವತ್ತೆ ನಾನು ಬಡಕೊಂಡೆ ಪೋಲೀಸರಿಗೆ ಹಿಡದ ಕೊಡಾನು ಅಂತ ನನ್ನ ಮಾತು ಕೇಳಲಿಲ್ಲಾ." ಅವನನ್ನೇ ನೋಡಿದ್ರು.

ಪ್ರಭು ಯೋಚಿಸತೊಡಗಿದ, "ಒಂದ ವಾರದ ನಂತರ ಬರ್‍ಲಿಲ್ಲಾ,ಹೆದರ ಬ್ಯಾಡ. ಅವನು ಹೆದರಿಕೊಂಡಾನ ಇನ್ನೂ ನಿನ್ನ ಸುದ್ದಿಗ ಬರೋದಿಲ್ಲಾ" ಅವನ ಮನಸಿಂದ ಹೆದರಿಕೆ ಹೋಗಲಾಡಸಾಕ ಹೇಳಿದ್ರು ಪ್ರಭು ಅವರ ಮಾತಿಂದ ನಕ್ಕ "ಹಾಂ ಅಂದಂಗ ನಿನ್ನ ಹೆಸರಿಗ ಈ ಕಾಗದ ಬಂದಿತ್ತು ಯಾವಾನಾದ್ರೂ ತಗೊಂಡಾನು ಅಂತ ನಾನೇ ಇಸ್ಕೊಂಡೆ ತಗೋ" ಅಂತ ಕೊಟ್ರು.

ಅವನ ದುಗಡೆಲ್ಲಾ ಇಳದಿತ್ತು. ಮತ್ತೊಂದ ಸಲ ಓದಿದ ಪ್ರತಿಯೊಂದು ಸಾಲುಗಳು ಮನಸಿನಾಳಕ ಇಳಿಯತೊಡಗಿದವು. ಏನ ಹುಡುಗಿ ಅಂತೀನಿ ನಕ್ಕ. ಹೋಗಿ ಇಷ್ಟು ದಿನದ ಮ್ಯಾಲ ಹಾಕ್ಯಾಳ ಪತ್ರ. ಮಡಿಚಿ ಕಿಸೆಯೊಳಗ ಇಟ್ಕೊಂಡೆ. ಸುಮ್ಮಿ ಕುಂಟ್ಕೊಂತ ಒಳಗ ಇಣುಕಿ ನೋಡಿದ್ನು ಪ್ರಿನ್ಸಿಪಾಲರು ಇಲ್ಲದನ್ನ ಖಾತರಿ ಮಾಡ್ಕೊಂಡು ಒಳಗ ಕಾಲಿಟ್ನು ಹಿಂದಿಂದ ಪ್ರಿನ್ಸಿಪಾಲರು ಬಂದೇ ಬಿಟ್ರು. ಹೆದರಿಕೊಂಡ್ನು "ಯಾಕ ಏನಬೇಕಿತ್ತು." ಕೇಳಿದ್ರು, "ಅದು ಸರ್, ಪ್ರಭು ಸರ್ ಬೇಕಿತ್ತು." ತೊದಲಿದ್ನು. 'ಅಲ್ಲೆ ಕುಂತಾರಲ್ಲ' ನನ ಕಡೀಗ ತೋರ್‍ಸಿದ್ರು. 'ಏನ್ರಿ ಏನ ಬೇಕಿತ್ತು' ಪ್ರಭು ಕೇಳಿದ. "ಸರ್ ನೀವು ಒಂದ ಶಬ್ದ ಹೇಳಿದ್ರಲ್ಲಾ ಅದರ ಅರ್ಥ ಬೇಕಿತ್ತು" ಅಂದ್ನು ಯಾವ ಶಬ್ದ" ಕೇಳಿದ. "ಅದು ಮರತ ಹೋತ್ರಿ ಆ ಮ್ಯಾಲ ನೋಡಿ ಹೇಳ್ತಿನಿ" ಅಂತ ಅವನನ್ನೆ ನೋಡ ತೊಡಗಿದ್ನು. "ಸರಿ ನೋಕ್ಕೊಂಡ ಬರ್‍ರಿ" ಕಳಿಸಿದ. ಮತ್ತೊಂದ ಸಲ ಓದಬೇಕು ಅನಿಸಿತು ಬಿಡಿಸಿ ಓದಿದ. ಅವ್ಯಕ್ತವಾಗದ ಭಾವನೆ ಉತ್ತರ ಬರಿಬೇಕು ಅಂದ್ಕೊಂಡನೇ ಮಡಚಿ ಕಿಸಿಯೊಳಗ ಇಟ್ಕೊಂಡವನೆ ಪ್ರಿನ್ಸಿಪಾಲರಿಗ ಹೇಳಿ ಹೊರಟ.

ಇದೆಲ್ಲಾ ಹಿಂಗ್ಯಾಕಂತ ಅವನಿಗ ಹೊಳಿಲಿಲ್ಲಾ ನೀನ ಬಿಟ್ರು ಸಮಸ್ಯೆಗಳು ತಾವಾಗೆ ಬಂದು ಕಾಲಿಗ ಸುತ್ತಿಕೊಂತಾವ. ಉಮ್ಮಣ್ಣಾ, ಕುಳ್ಳಿ ಒಂದ ಕಡಿ ಆದ್ರ ಶಿರಗೂರ ಎಂ.ಎಲ್.ಎ ತಾಕತ್ತಿನಿಂದ ಎಗರಾಡ್ತಿರೋ ಮಲ್ಲಿಕಾಳ ಅಪ್ಪ. ನನ್ನ ಹತ್ರ ಇರೋ ಎಲ್ಲಾ ಪತ್ರಗಳ ಝೆರಾಕ್ಸ್ ಪ್ರತಿ, ಪೋಟೋಗಳನ್ನ, ಬಿಲ್ಲುಗಳನ್ನ ಕೂಡಿಸಿ ಅಕಿ ಗಂಡಗ ಕಳಸಿದೆ ಅಂದ್ರ ಪರಿಸ್ಥಿತಿ ನೆಟ್ಟಗಾಗತೈತಿ. ಆದ್ರ. ಅವರು ಮುರ್ಖರಾಗ್ಯಾರಂತ ನಾನು ಆದ್ರ ಅವರಿಗೂ ನಂಗೂ ವ್ಯತ್ಯಾಸ ಏನು? ನಾನು ವಿಚಾರ ಮಾಡಾಕ ಹತ್ತಿದ. ಏನು ಮಾಡಾಕು ಮನಸಾಗಲಿಲ್ಲಾ, ಒಂದು ದೌರ್ಬಲ್ಯ ಸಿಗ್ತು ಅಂದ್ರ ಮಂದಿ ಹೆಂಗ ಪಾಯ್ದೆ ತಂಗೊಂತ್ತಾರ, ಆ ಮನಿನೂ ಬಿಡಿಸಿದ್ರು. ಪ್ರಿನ್ಸಿಪಾಲರು ಯಾರ ಮಾತು ಕೇಳ್ತಿಲ್ಲಾ ಸರಿ, ಇಲ್ಲಾಂದ್ರ ಯಾವಗ್ಲೂ ಇಲ್ಲಿದೂ ನೌಕರ ಕಳ್ಕೊಂಡು ಕೂಲಿ ಮಾಡಾಕ ಹೋಗಬೇಕಾಗಿತ್ತು. ತನ್ನ ಸುತ್ತ್ಲು ನಡಿತಿರೋ ಘಟನೆಗಳು ವಿಚಿತ್ರ ತಿರುವು ಪಡ್ಕೊಳ್ತಿರ ದನ್ನ ಗಮನಿಸಿದಾಗ ಗಾಬರಿ ಆತು. ಬಹಳ ಹೊತ್ತು ಹಂಗೆ ಕುಂತಿದ್ದ ಗ್ವಾಡಿ ಮ್ಯಾಲ ಬಿದ್ದಿದ್ದ ಒಂದು ನೆಳ್ಳನ್ನ ಕುತೂಹಲ ದಂದ ಗಮನಿಸ ತೊಡಗಿದ. ಎಷ್ಟೋ ಹೊತ್ನಿಂದ ಅಲ್ಲೆ ಇತ್ತು. ಸೂರ್ಯ ಚಲಿಸ್ತಿರೋ ಹಾಗೆ ಚಲಿಸ್ತಾ ಇತ್ತು. ನನ್ನ ಬದುಕಿಗ ಹಿಂಗ ಚಾಲನೆ ಇದಿದ್ರು.

ಆಂಟಿ ಕೂಗಿದಕ್ಕ ಗಡಬಿಡಿಯಿಂದ ಎದ್ದ. "ಏನು ಮೈಸನ್, ಮೈಯಲ್ಲಿ ಹುಷಾರಿಲ್ಲಾ", "ಯಾಕೋ ಮನಸು ಸರಿ ಇಲ್ಲಾ" ಪಾರಾಗಕ ನೋಡಿದೆ. "ನಿನ್ನ ಶಿಷ್ಯರು ಬರ್‍ತಾ ಅದರ" ಅಂದ್ರು ಆಂಟಿ. ಅವನು ಸುಮ್ನಿದ್ದ. "ಕಾಫಿ ಕೊಡ್ಲಾ" ಕೇಳಿದ್ಲು "ಬೇಡಾ ಮದರ್ ಬೇಡಾ ಅನಿಸ್ತಾ ಇದೆ." ಅದ್ರ "ನೋಡು ಮೈಸನ್ ನಾನು ನೀನು ಬಂದಾಗಿ ನಿಂದ ಗಮನಿಸ್ತಾ ಇದ್ದೀನಿ. ಈ ವಯಸಿನೊಳಗ ನೀನು ಇರಬೇಕಾದ ಹಾಗೆ ಇಲ್ಲಾ. ಯಾವಾಗ್ಲೂ ಮುಗಿಲು ತಲಿಮೇಲೆ ಬಿದ್ದಿರೋ ಹಾಗೆ ಮಂಕಾಗಿರ್‍ತಿಯಾ, ನೀನು ನಿನ್ನ ತಾಯಿಯ ಹಾಗೆ ನನ್ನ ಹತ್ರ ಹೇಳ ಬಾರದೇ"ಅವನನ್ನೆ ನೋಡ ತೊಡಗಿದರು. "ಮದರ್ ಮನುಷ್ಯ ಬಡವನಾಗಿ ಹುಟ್ಟ ಬಾರ್‍ದು. ಹುಟ್ಟಿದ್ರೂ ಈ ಕೀಳ ಜಾತಿಯೊಳಗ ಹುಟ್ಟ ಬಾರದು." ಅವನು ಮಾತಾಡಲಿಲ್ಲಾ ಧ್ವನಿ ಹೊರಡಲಿಲ್ಲಾ. ಕಣ್ಣು ನೀರು ತುಂಬಿಕೊಂಡಿದ್ವು. "ನಾನು ಹುಟ್ಟಿದ ಘಳಿಗೆಯಿಂದ್ಲೆ ಶುರುಆಯ್ತು ಕಷ್ಟ. ಹೊಟ್ಟೆತುಂಬ ಉಣ್ಣದ ಮನಿಯವರು, ಇವತ್ತಿಗೂ ಹೋರಾಡ್ತಿರೋ ನಾನು ಯಾರಿಗ ಬೇಕು ಈ ಬದುಕು, ಯಾಕ ಬೇಕು? ಒಂದೊಂದ ಸಲ ಸಾಯೋ ವಿಚಾರ ಮಾಡ್ತೀನಿ, ಆದ್ರ ಹೇಡಿಯಾಗ ಬಾರದು, ಬದುಕಿಗ ಬೆನ್ನು ತೋರಿಸಿ ಓಡಬಾರ್‍ದು ಅಂತ ಬದುಕೀನಿ" ಒಂದ ಸಲ ಆಂಟಿ ಕಡಿಗ ನೋಡಿದೆ. "ಛೇ ಹಾಗೆಲ್ಲಾ ವಿಚಾರ ಮಾಡಬಾರದು, ಕಷ್ಟ-ಸಂಕಷ್ಟ ಬರುವಾಗ ಹಿಂಡಿಂಡಾಗಿ ಒಂದರ ಮೇಲೆ ಒಂದು ಬರ್‍ತಾವ, ಇನ್ನಾ ಯುವಕ ಅವುಗಳಿಗೆಲ್ಲಾ ತಲಿಕೆಡಿಸ್ಕೊ ಬೇಡಾ, ನೀನು ಏನೂ ನೋಡಿಲ್ಲಾ ಮೈ ಬಾಯ್, ನನ್ನ ಹಿಂದಿರೋ ಒಂದೊಂದು ಘಟನೆಗಳು ಒಂದೊಂದು ಅದ್ಭುತವಾದ ನೋವಿನ ಅನುಭವಗಳು" ಒಳಗ ಹೋದಳು. ಹುಡುಗರೆಲ್ಲಾ ಒಳಗ ಬಂದಿದ್ರು. ಮನಸು ಇರ್ಲಿಲ್ಲಾ ಅನಿವಾರ್ಯ ಆಗಿತ್ತು.

ಪ್ರಿನ್ಸಿಪಾಲರು ಎದ್ದು ಓಡಾಡ್ತಿದ್ರು. ಒಂದರ ಮ್ಯಾಲೊಂದು ಸಿಗರೇಟು ಹಚ್ಚಿ ಹೊಗೆ ಬಿಡ್ತಿದ್ರು. ಪ್ರಭು ಬಂದಾಗ ಅವರಿಗ ಏನು ಹೇಳಾಕು ಆಗಲಿಲ್ಲಾ. "ಸರ್ ಯಾಕೋ ಗಂಭೀರವಾಗಿರಿ, ಏನಾಯ್ತು ಸರ್, ಪ್ರಭು ಅವರ ಮಕ ನೋಡಿದ. ಒಂದ ಸಲ ನಕ್ಕರು." ಇರ್‍ತಾರಲ್ಲಪ್ಪ ಶಕುನಿಯಂತಹವರು, ಅದೇ ನಿನ್ನ ಹಳೇ ಲವ್ ಕೇಸ್, ಆ ಹುಡುಗಿ ಅಪ್ಪ ಮತ್ತು ಆ ಎಂ.ಎಲ್.ಎ. ಸೇರ್‍ಕೊಂಡಾರ, ಶಿರಗೂರಿಂದ, ಇಲ್ಲಿಗ ಬಂದು ನೀನು ಇಲ್ಲೂ ಕೆಲ್ಸ ಮಾಡ ಬಾರ್‍ದು, ಅಂತ ಅವರ ಅಂದ್ರು" ಅವನನ್ನೆ ನೋಡಿದ್ರು. ಪ್ರಭು ಮಾತಾಡಲಿಲ್ಲಾ. "ನಾನು ಹೇಳಿನಿ, ಆದ್ರ ಅಮೇರಿಕಕ್ಕಾ ಹೋಗಿರೋ ಚೆನ್ನಬಸಪ್ಪನ ಹಾದಿಕಾಯಾಕ ಹತ್ಯಾರ, ಆತ ಬರೋದು ಈ ವರ್ಷದ ಕೊನೆಗೆ, ಅಲ್ಲಿವರಿಗ ತೊಂದ್ರೆ ಇಲ್ಲಾ ನೀ ಹೆದರ ಬ್ಯಾಡ" ಅಂದ್ರು. ಪ್ರಭು ತಾನು ಮಾಡಿದ ಒಂದು ಸಣ್ಣಾ ತಪ್ಪಿಗ ಇಷ್ಟೊಂದು ಪರಿತಪಿಸಬೇಕು ಅಂತ ಅಂದ್ಕೊಂಡಿರ ಲಿಲ್ಲಾ, ಅವನಿಗ ಸಿಟ್ಟು ನೆತ್ತಿಗೇರಿತು, ಒಂದ ಸಾರಿ ಗ್ವಾಡಿಗ ಗುದ್ದಿದ, ಪ್ರಿನ್ಸಿಪಾಲರು ಅವನನ್ನ ಗಮನಿಸಿದ್ರು. "ನೀ ಬ್ಯಾರೆ ಏನ್ ಮಾಡಿದ್ರು ನಡದು ಹೊಕ್ಕಿತ್ತು. ಹಣಕದ್ದಿದ್ರ ಜನ ಇಷ್ಟೊಂದ್ರು ತಲಿಗ ತಗೊಂತಿರಲಿಲ್ಲಾ, ಇದೇ ನಿದೆಯಲ್ಲ ಇದೊಂದು ವಿಚಿತ್ರ ಸಂಗತಿ, ಪ್ರಿನ್ಸಿಪಾಲರು ಅವನ ಭಾವನೆಗ ಮುಟ್ಟಾಕ ಪ್ರಯತ್ನಿಸಿದ್ರು. "ನಿನ್ನ ಹಂಗ ಇದ್ದೋಳು ಹೊದ ಸಲ ಪ್ರಥಮ

ದರ್ಜೆ ತಗೊಂಡಾಳ, ಅಂತ ಅವಳ ಮನಸಿನಾಳಕ್ಕಿ ಳಿದು ಪ್ರಭುತ್ವ ಸಾಧಿಸೋ ಕೆಲ ನೀಚ ಮೇಷ್ಟ್ರುಗಳ ಹಂಗ, ಪ್ರತಿವರ್ಷ ಗೋಸುಂಬೆ ಹಂಗ ಬಣ್ಣ ಬದಲಿಸೋ ಕೆಲ್ಸ ಏನಾರು ಮಾಡೀನ ಸರ್" ತೊದಲಿದೆ. "ನಿಮ್ಮ ಜಾತಿಯೊಳಗ ಹುಟ್ಟಿದ್ರ ನಾನು ಮಾಡೋ ಎಲ್ಲಾ ತಪ್ಪುಗಳು ಮುಚ್ಕೊಂಡು ಹೋಗ್ತಿದ್ವು" ಪ್ರಿನ್ಸಿಪಾಲರು ಅವನ ಮಾರಿ ನೋಡ್ತಿದ್ರು. ಅವನು ಹೇಳಿದ್ದು ಸರಿ ಅನಿಸಿತು. ಎಲ್ಲಾ ಘಟನೆಗಳು ಘಟಸಿದ ಮೇಲೆ ರೂಪ, ಆಕಾರ ಪಡ್ಕೊಂತಾವ. ಕೆಲ ಘಟನೆಗಳು ಹೊರ ಬರೋದಿಲ್ಲಾ, ಕೆಲವು ಮಾತ್ರ ರಂಗುರಂಗಾಗಿ ಒಂದಿಷ್ಟು ದಿನ ಗುಂಗು ಹಿಡಿಸಿ ಬಿಡ್ತಾವ. ಪಾಪ ಬಡಪಾಯಿ ಹುಡಗ, ಆ ಹುಡುಗಿ ಬಲಾತ್ಕಾರಕ ಬಿದ್ದು ಸುಳಿಯೊಳಗ ಸಿಕ್ಕೊಂಡಾವ ಇವತ್ತಿಗೂ ಹೊರಾಗ ಬರಾಕ ಹೆಣಗಾಡ್ತಾ ಅದಾನ. ಜಗತ್ತಿನ ಲೆಕ್ಕಾಚಾರನ ಹಿಂಗ, ನಾನು ಎಷ್ಟೋ ಘಟನೆಗಳನ್ನು ನೋಡಿನಿ, ಕೇಳಿನಿ. ಅವುಗಳಿಗ ಬೆಲೆನೆಬರಲಿಲ್ಲಾ, ಪ್ರಿನ್ಸಿಪಾಲರಿಗೆ ಏನ ಮಾತಾಡಾಕು ಹೊಳಿಲಿಲ್ಲಾ.

ನಡದದ್ದೆಲ್ಲಾ ಸವಕಲು ನಾಣ್ಯದಂಗ, ನೆಲದೊಳಗ ಹೂತ ಹೊಕ್ಕಾವ ಹಿಂದಿನ ನೆನಪು ಮಾಡಿಕೊಳದ ಹಂಗ, ನನ್ನ ಮನಸಿನೊಳಗಿಂದ ನಾನು ಎಲ್ಲಾ ಅನುಭವದ ಕ್ಷಣಗಳನ್ನೂ ಕಿತ್ತು ಬಿಸಾಕಿ ಎಲ್ಲರ ಹಂಗ ನಗಬೇಕು ಅಂದ್ಕೊಂತೀನಿ, ನಾನು ನಕ್ಕರ ಈ ಮಂದಿಗ ಅದೇನ ಆಗತೈತೊ ಪ್ರಭು ಯೋಚಿಸತೊಡಗಿದ. ಅಷ್ಟೇ ವಿದ್ಯೆ ಪಡ್ಕೊಂಡೀನಿ, ಅನುಭವ ದಲ್ಲೂ ಕಡಿಮೆ ಎನೆಲ್ಲಾ ಆದ್ರೂ ಈ ಮಂದಿ ನನ್ನ ಬಗ್ಗೆ ಮಾತಾಡೋದು ಕೇಳಿದಾಗ ತಳಮಳಿಸ್ಕೊಂಡು ವ್ಯಕ್ತ ಪಡಿಸಾಕ ಆಗದೆ ಸುಮ್ಮನಕ್ಕೀನಿ. ನಂಬಿಕೆ ಅನ್ನೋ ಶಬ್ದ ನನ್ನ ಜೀವಮಾನದೊಳಗ ಕಾಣಲೇ ಇಲ್ಲಾ. ಯಾರು ನನ್ನ ಆ ಶಬ್ದದ ಪರಿಚಯ ಮಾಡಿಸಲೇ ಇಲ್ಲಾ. ಶ್ರೇಣಿಕೃತ ವ್ಯವಸ್ಥೆಯೊಳಗ ನಾನು ಎಲ್ಲಿದ್ದೀನಿ, ಯಾವ ಶ್ರೇಣಿಯೊಳಗ ಅದೀನಿ, ಆರ್ಥಿಕವಾಗಿ ಶೂನ್ಯ, ನನ್ನ ತಾವ ದಿಮ್ಮಗ ರೊಕ್ಕ ಏನಾದ್ರು ಇದಿದ್ರ ಅದರ ಪ್ರಭಾವ ದೊಳಗ ಜಾತಿ ಅನ್ನೋ ಶನಿ ಮುಚ್ಕೊಂಡು ಹೊಕ್ಕಿತ್ತು, ರೊಕ್ಕಾನೇ ಮುಖ್ಯ. ಅದು ಯಾವ ಮಾರ್ಗದಿಂದ ಬಂದಿದ್ರೇನು? ಶೆಟ್ಟಿ ಕ್ಯಾಕರಿಸಿದ. "ಏನ್ಸಾರ ಏನೋ ಇಚಾರ ಮಾಡ್ತಂಗೈತಿ" ಅಂದ, "ನಿಮ್ಮಪ್ಪನ ಗಂಟ ಎಂಟಣಿ ಮಾಡೋ ವಿಚಾರ ಮಾಡ್ತೀದ್ದಿ" ಅನ್ನಬೇಕು ಅನಿಸಿತು. ಅವನ ಜೊತಿಗ ಬಾಯಿ ಹಚ್ಕೊಂಡ್ರ ಕೆಸರಾಗ ಕಲ್ಲು ವಗದಂಗ ಅಂದ್ಕೊಂಡು ಸುಮ್ನಾದೆ, "ಆ ಕುಂಟಿ ನಿಮ್ಮನ್ನ ಯಾಕೋ ಕೇಳ್ತಿದ್ಲು"ವ್ಯಾಲ ನೋಡತೊಡಗಿದ. ಇದೆಲ್ಲಾ ಕುಳ್ಳಿ, ಉಮ್ಮಣ್ಣ ಕೆಲ್ಸ ಅಂದ್ಕೊಂಡೆ, "ಲೇ ಶೆಟ್ಟಿ ಮಾಡಾಕ ಬೇರೆ ಕೆಲ್ಸ ಇಲ್ಲೇನೋ ಹೋಗ್ರಿ ಕ್ಲಾಸಿಗೆ ಅಂದೆ" "ಏ ಯಾಕ್ರೆ, ನಂಗ ಲೇ ಅಂತ ಕರೀತಿರಿ, ನೀವು ಪಾರ್ಟೈಂ, ಹಂಗೆಲ್ಲಾ ಮಾತಾಡ ಬ್ಯಾಡ್ರಿ, ನಮ್ಮ ಕುಳ್ಳಿ ಸಾರ್ ರೇ ಯಾವಾಗ್ಲೂ ಹಿಂಗ ಕರಿಯಂಗಿಲ್ಲಾ" ಜೋರ ಬಾಯಿ ಮಾಡಿದ. ಇದರ ಹಿನ್ನಲೆ ಏನೋ ಇರಬೇಕು ಅಂದ್ಕೊಂಡ ಪ್ರಭು. "ತಪ್ಪಾತಪ್ಪ ದೊಡ್ಡ ಮನ್ಸ್ಯಾ, ಗುರುಗಳು ಅಂದ್ರ ನೀ ಏನೆ ತಿಳ್ಕೊಂಡಿ ಅಂತ ತಿಳ್ಕೊಂಡಂಗಾತು" ಅಂತ ಅವನ ಬಾಯಿ ಮುಚ್ಚಿಸಾಕ ನೋಡಿದ. ಅವನು ಜೋರಾಗೆ ಮಾತಾಡತೊಡಗಿದ. ಪ್ರಭುಗ ಏನು ತಿಳಿತೋ ಪುಸ್ತಕ ತಗೊಂಡು ಕ್ಲಾಸಿಗ ಹೊಂಟ.

ಕ್ಲಾಸಿನೊಳಗ ನುಸುಳಿ ಮೇಷ್ಟ್ರು ಪಾಠ ಲೆಕ್ಕಿಸದೆ ಹುಡುಗಿಯರ ಹತ್ರ ಬಂದವನೆ

ಏಡವಟ್ಟಾಗಿ ವರ್ತಿಸತೊಡಗಿದ ಶೆಟ್ಟಿ, ಪ್ರಭು ಗಾಬರಿಯಾದ, ಏನು ಹೇಳ ಬೇಕೊ ತಿಳಿಲಿಲ್ಲಾ, ಅವನ ಗುರುಗಳು ಪ್ರೇರಪಿಸಿಕಳಿಸಿದ ಹಾಗಿತ್ತು. ಚಕಾರ ಎತ್ಲಿಲ್ಲಾ, ಆ ಹುಡುಗಿ ಹತ್ರ ಬಂದು, ಏನೇನೋ ಮಾಡಿದ, ಯಾರೂ ಯಾವ ರೀತಿಯ ಪ್ರತಿಕ್ರಿಯೆ ವ್ಯಕ್ತಪಡಿಸ ಲಿಲ್ಲಾ ತಾನೆ ಅವಮಾನ ಆದಂಗಾಗಿ ಹೊರಗ ಹೊರಟ. ಪ್ರಭು ಒಂದ ಕ್ಷಣ ತಳಮಳಿಸಿದ, ತನ್ನ ಅಸಾಯಕ ಸ್ಥಿತಿಯನ್ನ ನೆನದು ಒಳಗೊಳಗ ನೊಂದ ಕೊಂಡ. "ನಾನೊಬ್ಬ ಮನುಷ್ಯ ವ್ಯವಸ್ಥೆಯ ವಿರುದ್ಧ ಏನ್ಮಾನೇ ಮಾಡಬಲ್ಲೇ?ವಿಚಾರ ಶೂನ್ಯರು, ಹಣವಂತರೂ ಬೇಕಾದ್ದು ಮಾಡಬಹುದು. ನನಗ ಸಿಗ್ತಿರೋ ಹನೆಲ್ಡ ನೂರು ರೂಪಾಯಿ ಕಳ್ಕೊಳ್ಳೋ ಮನಸು ನನಗಿಲ್ಲಾ, ನಿಮಗೇನಾದ್ರು ಹೇಳಬೇಕು ಅಂದಿದ್ರೆ ನೇರವಾಗಿ ಪ್ರಿನ್ಸಿಪಾಲರಿಗೆ ಹೋಗಿ ಕಂಪ್ಲೆಂಟ್ ಮಾಡಿ" ಅಂದವನೆ ಹೊರ ನಡೆದ. ಕುಳ್ಳಿ ಮುತ್ತ ಉಮ್ಮಣ್ಣ ಜೋರಾಗಿ ನಗ್ತಿದ್ರು.

"ನೋಡ ಪ್ರಭು, ಏಲ್ಲಾ ಕಡಿಗೂ ನಡಿಯೋದು ಸಹಜ, ಯಾರು ಏನ ಹೇಳಿದ್ರೇನು ಪ್ರಿನ್ಸಿಪಾಲರು ನಿನ್ನ ಕಡಿಗ ಅದಾರಲ್ಲ ಮುಗಿತು, ಆ ಶೆಟ್ಟಿ ಸಿಕ್ರ ನಾ ಅಲ ಹೆಳ್ತೀನಿ ನೀನು ಕೆಲ್ಸ ಬಿಡೊ ವಿಚಾರ ಮಾಡ ಬ್ಯಾಡ" ಅಂದ ಹಂಡು ಪಾಟೀಲ, ಪ್ರಭು ಸುಮ್ಮ ನಾದ, ಮಾತು ಬ್ಯಾಡ ಅನಿಸಿತು. ಹೊರಗ ಹೋಗಿ ಅಡ್ಡಾಡೋದು ಕಡಮಿ ಮಾಡಿದ್ದ. ಅವತ್ತು ಆ ಧಡಿಯ ಅವನ ಬೆನ್ನು ಹತ್ತಿಂದ. ಹೊರಗ ಹೋಗಾಕ ಹೆದರಿಕ ಹುಟ್ಟಿತ್ತು. ಜೊತಿಗ ಪಾಟೀಲ ಇದ್ರ ಮಾತ್ರ ಹೊಗ್ತಿದ್ದ. ಹುಡ್ರ ಕೂಡ ಒಂದಿಷ್ಟು ಹೊತ್ತು ಕಳಿತ್ತಿದ್ದ ಒಂದಿಷ್ಟು ಪುಸ್ತಕ ಓದಿ ಏನೇನೋ ಬರ್ಕೊಂತ ಕಾಲ ಕಳಿಯೋದನ್ನ ರೂಢಿಸಿ ಕೊಂಡ.

ಆ ಮನುಷ್ಯ ದೊಡ್ಡ ಹೆಜ್ಜಿ ಹಾಕ್ಕೊಂತ ಬರ್ತಿರೋದನ್ನ ಗಮನಿಸಿದ. ಅವನು ಯಾರಿರ ಬಹುದು ಯಾಕ ತನ್ನ ಕಡೀಗ ಹಿಂಗ ಬರ್ತಾ ಅದಾನಂತ ತಿಳ್ಕೊಳ್ಳೋ ಕುತೂಹಲ ಪ್ರಭುಗ ಇರ್ಲಿಲ್ಲಾ, ದಿನಕೊಂದು ಘಟನೆಗಳು ಪರಿವರ್ತನೆ ಪಡಿಯೋದು ನೋಡಿದ್ರ ಯಾರ ಸ್ನೇಹ ಬ್ಯಾಡ ಅನಿಸಿ, ಒಂದು ಮೂಲಿಯೊಳಗ ಸರದು ನಿಂತ. "ಅರೇ ಪ್ರಭು, ಯಾಕ ಸರ್ ನನ್ನ ನೋಡಿ ಇಷ್ಟೊಂದು ಗಾಬರಿಯಿಂದ ಸಾಲಗಾರನ ಹಂಗ ತಪ್ಪಿಸ್ಕೊಂಡು ಓಡಿ ಹೋಗಾಕ ನೋಡ್ತಿದ್ರಿ" ಅಂದ ಕುಬಸಣ್ಣ ಮಾಸ್ತರ," ನೀವಾ ಕುಬಸಣ್ಣ ನನಗ ಇತ್ತಿತ್ತಲಾಗ ನನ್ನ ಮ್ಯಾಲ ಸಂಶಯ ಶುರು ಆಗೈತಿ ನೋಡ್ರಿ, ಯಾರನ್ನ ನೋಡಿದ್ರು ನನ್ನ ಬೆನ್ನ ಹತ್ತಿ ಬರ್ತಿರೋ ಹಂಗಾಗಿ ಯಾರು? ಏನು? ಅಂತ ವಿಚಾರನೇ ಮಾಡೋದಿಲ್ಲಾ" ಅಂದವನೆ, ಹೋಗಾಕ ನೋಡಿದ," ಎಲ್ಲಿದಿರಿ? ಏನ್ಮಾಡ್ತಿದ್ದಿರಿ. ಮೋಸ ಮಾಡಿ ಬಿಟ್ರು ಕಣ್ರೀ, ನಿಮ್ಮಂತಹ ವಿಚಾರವಂತ ವ್ಯಕ್ತಿ ಬೇಕಿತ್ತು ನಮ್ಮ ಶಿರಗೂರಿಗ ಮೋಸ ಮಾಡಿದ್ರು. ಸಾಹೇಬ್ರ ನಿಮಗೂ ಒಂದ ಕಾಲ ಬಂದೇ ಬರತೈತಿ, ವಿಚಾರ ಮಾಡ ಬ್ಯಾಡ್ರಿ, ಆಗಾಗ ಬರ್ತಿರ್ರಿ, ಶಿರಗೂರಿಗ "ಅಂದ, ಅವನ ಮುಂದ ವಿಷಯ ಹೇಳಾಕ ಮನಸಾಗದೆ" ನಾನು ಬರ್ತೀನಿ ಕುಬಸಣ್ಣ, ಹೊತ್ತಾತು" ಅಂದ, "ಹೊಂಟ್ರಿ, ಎಲ್ಲದೀರಿ, ಯಾವಾರ ಕಾಲೇಜ ಸೇರ್ಕೊಂಡಿರೋ ಹ್ಯಾಂಗ" ಅಂತ, ಅವನು ಇರೋ ಕಾಲೇಜಿನ ವಿಳಾಸ ಪಡಿಯಾಕ ನೋಡಿದ. ಪ್ರಭು ಸೂಕ್ಷ್ಮವಾಗೆ ಆತನಿಗೆ ಸುಳಿವು ಕೊಡಬಾರದು ಅಂದ್ಕೊಂಡ, ಅಷ್ಟರೊಳಗ, ಆತನೆ

ಶುರುಮಾಡ್ದ. "ನೀವು ಅದೇನೋ ಪಾಠ ಹೇಳ್ತಿದ್ದಿರಿ ಅಂತ ಸುದ್ದಿ ಬಂತು, ಇಲ್ಲೆಲ್ಲೋ ಕಾಲೇಜಿನೊಳಗ ಪಾಠ ಹೇಳ್ತಿರಿ ಅಂತಿದ್ರು"ಅಂದವನೆ ಪ್ರಭುನ ಮಕ ನೋಡಿದ, ಹೂಂ ಅನ್ನಬೇಕೋ ಊಹೂಂ ಅನ್ನ ಬೇಕಂತ ತಿಳಿಯದೆ ಕುಬಸಣ್ಣ ಮಕ ನೋಡಿದೆ, ಅವನ ಕಣ್ಣಿನೊಳಗ ಕುತೂಹಲ ಇತ್ತು. "ಗೊತ್ತಿದ್ದು ನನ್ನೆ ಕೇಳ್ತಿರಲ್ಲಾ" ಅಂದೆ. "ನೀವು ಶಿರಗೂರ ಬಿಟ್ಟ ಮ್ಯಾಲ, ನನ್ನ ವಿಚಾರಗಳಿಗ ಚಾಲನೆಗೆ ಬಂದಿಲ್ಲಾ, ಈಗ ನೋಡಿ, ನಾನು ದೊಡ್ಡ ಯೋಜನೆ ಹಾಕಿನಿ, ಇಂಡಿಯಾದಲ್ಲೇ ಇಲ್ಲದಂತಹ ಒಂದು ಅದ್ಭುತ ಕೇಂದ್ರ ಪ್ರಾರಂಭ ಮಾಡಬೇಕಂತ ನನ್ನ ಹೊಲವನ್ನ ಸರ್ಕಾರಕ ಬರ್ಕೊಟ್ಟು. ಎಲ್ಲಾ ರೀತಿಯ ತಯಾರಿ ಮಾಡೀನಿ, ಇನ್ನೇನು ಸರ್ಕಾರದಿಂದ, ಅಥವಾ ವಿದೇಶದಿಂದ ಒಂದಿಷ್ಟು ರೊಕ್ಕ ಸಿಗ್ತಂದ್ರ, ಮುಗದು ಹೊಕೈತಿ." ಅಂತ ಪುರಾಣ ತರ್ಕೊಂಡು ನಿಂತ, ಪ್ರಭುಗ ಬಿಡಸಿಕೊಂಡು ಹೋಗಬೇಕು ಅನಿಸಿತು. ಕುಬಸಣ್ಣ ಮತ್ತೊಂದು ಟಾಪಿಕ್ ತಗಿತ್ತಿದಂಗ, ಪ್ರಭು ತನಗ ಕಾಲೇಜಿಗ ಹೊತ್ತಾತು ಅಂದವನೆ ಹೊಂಟು ಬಿಟ್ಟ.

ಮತ್ತೆ ಏನಾದ್ರು ಯೋಜನೆ ಹಾಕೊಂಡ ಬಂದಾನೋ ಏನೋ ಮನುಷ್ಯ. ನೋಡಾಕ ಸಾಚಾಕಂಡ್ರು. ಮಹಾ ಜಾತಿವಾದಿ. ಪ್ರಗತಿ ಪರ ಅನ್ನೋ ಕವಚ ಹಾಕೊಂಡು ಒಳಗೆಲ್ಲಾ ಬರಿ ಜಾತಿ ಪೋಷಣೆ ಮಾಡೋ ಇಡಿ ಶಿರಗೂರ ಜಿಲ್ಲೆಯೊಳಗ ಕುಬಸಣ್ಣ ಮಾಸ್ತರ ಹೆಸರು ಟಾಂ ಟಾಂ ಮಾಡಿದ ರಜನಪ್ಪ, ಯಾವಾಗ ಕೇಳಿದ್ರು ಕುಬಸಣ್ಣ ಮಾಸ್ತರ ಹಂಗ, ಹಿಂಗ, ದೊಡ್ಡ ಮನುಷ್ಯ ಅಂತೆಲ್ಲಾ ಹೇಳ್ತಿದ್ದ, ಅಂತಹವನನ್ನ ಸರಿಸಿ, ಅವನ ಜಾತಿಯ ಕೊಟೇಶಿಯನ್ನು ಎಲ್ಲಾ ಕಡಿಗೂಗು ಕರ್ಕೊಂಡು ಪರಿಚಯ ಮಾಡ್ತಾ ಹೊಂಟಾನ. ಪ್ರಭುಗ ಗಾಬರಿ ಆತು. ಯಾಕಾದ್ರೂ ಅವನ ಕಣ್ಣೀಗ ಬಿದ್ದೆ, ಅಂದ್ಕೊಂಡ. ಅವನ ನಡಿಗೆ ಜೋರಾತು. ಹಿಂದಿಂದ, "ಸರ್" ಅಂತ ಕೂಗಿದಂಗಾಗಿದ್ಕ ಹಿಂತಿರುಗಿದ, ಸುಮ್ಮಿ, ಏನ್ರೀ ಏನಾಗಬೇಕು" ಅಂದ, "ಹೊಂಟೀರಿ, ಬರ್ರೀ ಚಾ ಕುಡದು ಹೋಗ್ರಿ" ಗೊಗರದಳು, "ಕಾಲೇಜಿ ಹೊತ್ತಾತು. ಮತ್ತೊಂದ ಸಲ ಬರ್ತೀನಿ,"ಅಂದವನ ಅಕಿ ಮಾತು ಕೇಳದೆ ಹೊಂಟೆ, ಹುಚ್ಚ ಹುಡುಗಿ, ಮಲ್ಲಿಕಾಳ ಹೊಲತಾಳಂತ ಮಾತಾಡಿಸಿದೆ ತಪ್ಪಾತು. ಈ ಹುಡುಗಿಯರಿಗ ಮಾಡಾಕ ಬ್ಯಾರೆ ಕೆಲ್ಸ ಇಲ್ಲೇನೋ, ಓದಿ ಪಾಸಾಗೋದನ್ನ ಬಿಟ್ಟು, ಏನೇನೋ ಮನಸಿಗ ಹಚ್ಕೊಂಡು ಏನಾದ್ರು ಒಂದುಮಾಡ್ಕೊಂತಾವ, ಒಂದು ಅನುಭವವೇ ಸಾಕು, ಆ ಹುಂಬ ಹುಡುಗಿ ರೋಜಿ ಅರ್ಧ ಮನಸು ಕೆಡಿಸಿ ಹೋದ್ಲು, ಬೆಂಗಳೂರು ಮಂದಿ, ಸಿಕ್ಕಾಗಷ್ಟೆ ನಮ್ಮ ನೆನಪಿರೋದು, ಅವನ ವಿಚಾರಗಳಿಗ ಕೊನೆ ಇರ್ಲಿಲ್ಲಾ.

ಮೂರು ನಾಲ್ಕು ಬಾರಿ ಓದ್ಕೊಂಡು ಅರ್ಥ ಬರ್ಕೊಂಡು ಎಲ್ಲಾ ರೀತಿ ಸರ್ಕಸ್ ಮಾಡ್ತಿದ್ದ. ಒಂದಿಷ್ಟು ಮಂದಿ ಕೇಳ್ತಿದ್ರು. ಕೆಲವರು ದಾಂಧ್ಲಿ ಮಾಡಿ ಕೇಳೊರ ಮೂಡ್ ಹಾಳ್ ಮಾಡಿ ಕೆಳ್ದಂಗ ಮಾಡಿ ಬಿಡ್ತಾರ. ಯಾರ ತಪ್ಪು ಅಂತ ಹೇಳಬೇಕು. ಕಾಲ ಬದಲಾಗಾಕ ಹತ್ಯೆತಿ. ಮನಿಯೊಳಗ ತಂದಿತಾಯಿ ಜವಾಬ್ದಾರಿ ತಗೋಳೋದಿಲ್ಲಾ, ಹೇಳ್ದಂಗ ಕೇಳ್ತಾರ, ಕೇಳಿದ್ದು ಕೊಡಸ್ತಾರ. ಒಂದ ಮಾತ ಹೇಳಿದ್ರ" ನಿನ್ನ ಕೆಲ್ಸ ಎಷ್ಟು ಪಾಠ ಹೇಳೋದು ಅಷ್ಟ ಮಾಡು" ಅಂದ ಮ್ಯಾಲ ನಮ್ಮದೇನು ಉಳೀತು ಇದು ಯಾರ ಮಾತು

ಯಾರು ಕೇಳೋ ಕಾಲ ಅಲ್ಲ, ಮನಸಿಗ ಬಂದ ಹಂಗ ಮಾಡೋ ಕಾಲ. ಅನುಕರಣೆಯಿಂದಲೇ ಎಲ್ಲಾನೂ ನಡಿತಿರೋದು, ಮೇಷ್ಟ್ರನ್ನ ಅನುಸರಿಸೋ ಹುಡ್ರಿಲ್ಲಾ ಸಿನಿಮಾ ನಟರು ಮಾಡೋದು ಮಾರನೇ ದಿನ ಕಾಲೇಜಿನ್ನೊಳಗ ನಡಿತೈತಿ. ರೊಕ್ಕ ಇದ್ದೋನು, ಮೇಷ್ಟ್ರ ಮನಿಗ ಹೋಗಿ ಪಾಠ ಹೇಳಿಸ್ಕೊಂತಾನ, ಇಲ್ದೋನ ಸ್ಥಿತಿ ಏನು? ಎಡವಟ್ಟು ಹುಡ್ರ ಕೂಡ ವ್ಯವಹರಿಸೋದು ಬೆಂಕಿ ಮಟ್ಟದಷ್ಟೆ ಬಿಸಿ ಕೆಲ್ಸ, ಪ್ರಭು ತನ್ನ ಹಿಂದಿನ ದಿನಗಳೊಂದಿಗ ಹೊಲಿಕೆ ಮಾಡ್ದ. ಐದಾರು ವರ್ಷಗಳಲ್ಲೇ, ಇಷ್ಟೊಂದು ಬದ್ಲಾವಣೆ, ಮೇಷ್ಟ್ರು ಅಂದ್ರ ಹುಡ್ರಿಗ ಭಯ ಇಲ್ಲಾ ಭಕ್ತಿ ಇಲ್ಲಾ, ಯಾರೋ ಅಂತಿದ್ರು, ಶೆಟ್ಟಿ ಕುಳ್ಳಿ ಹೆಗಲ ಮ್ಯಾಲ ಕೈ ಹಾಕೊಂಡು ಸಿಗರೇಟು ಸೇದಿ ಅರ್ಧ ಅವನಿಗ ಕೊಡ್ತಾನಂತ ಹಿಂಗಾದ್ರ, ಮತ್ತೇನಾದೀತು. ಮೇಷ್ಟ್ರ ಹುಡ್ರನ ದಾರಿ ತಪ್ಪಸಾಕ ಹತ್ತಿದ್ರ, ತಮ್ಮ ಬ್ಯಾಳಿಬೇಯಿಸಿಕೊಳ್ಳಾಕ, ತಾನೇ ಶ್ರೇಷ್ಠ, ತಾನು ಬುದ್ಧಿವಂತ ಅನ್ನಿಸಿಕೊ ಬೇಕಂತ ಏನೆಲ್ಲಾ ಮಾಡ್ತಾರಂದ್ರ ಹೇಳ ಬಾರದು. ಪ್ರಭು, ಒಬ್ಬನೆ ವಿಚಾರ ಮಾಡ್ತಾ ಕುತ್ಕೊಂಡಿದ್ದ. ಪಾಟೀಲ ಬಂದದ್ದೆ ತಿಳಿಲಿಲ್ಲಾ. ಅವನ ಅನಿಸಿಕೆಗಳನ್ನ ಅವನಿಗ ಹೇಳಿದ. ಬದ್ಲಾವಣೆ ಪ್ರಕೃತಿಯ ಸಹಜ ನಿಯಮ, ಈಗ ನೋಡು ಆವಾಗೆಲ್ಲಾ ಪಲ್ಟಿ ಆಗೈತಿ, ಮುಂಗಾರು ಯಾವಾಗೋ ಆರಂಭ ಆಕೈತಿ, ಒಂದೊಂದ ವರ್ಷ ಅಂತು, ಛಳಿಗಾಲದಾಗ ಮಳಿ, ಬ್ಯಾಸಗಿಯೊಳಗ ಛಳಿ, ಇದೊಂದು ರೀತಿ ಪ್ರಕೃತಿಯೊಳಗಿನ ಬದಲಾವಣೆ, ಹುಡುಗರು, ಹುಡುಗಿಯರಲ್ಲಿ ಆಗಿರೋ ಬದಲಾವಣೆ ಒಂದು ಸಾಮಾನ್ಯ ವಿಷಯ ಹೊಸದೇನು ಅಲ್ಲಾ." ಪಾಟೀಲ, ಹೇಳಿದ. "ಬದಲಾವಣೆ ಸಹಜ ಆದ್ರ ಯಾವ ಮಟ್ಟದಾಗ ಎಟ ಇರಬೇಕು ಆಟ ಇದ್ರ ಛಲೋ, ಪಾಠವೇ ಬೇಡಾ, ಹುಡ್ರ ಹುಡಗಿಯರು ಸೇರಿಕೊಂಡು ದಾಂದ್ಲಿ ಮಾಡಿ ಮನೀಗ ಹೊಕ್ಕೀವಿ ಅಂತಂದ್ರ ಹ್ಯಾಂಗ ಹೇಳು" ಅವನ ಕಡೀಗ ನೋಡ್ದ, "ಈಗ ನಿನಗೇನಾಗ ಬೇಕು, ಯಾರ ಕೇಳಿದ್ರೇನು ಯಾರ ಬಿಟ್ರೇನು, ನಿನ್ನ ಮನಸಿಗ ಹಿಡಸೋ ಹಂಗ ತಯಾರು ಮಾಡಿಕೊಂಡು ಹೋಗಿ ಪಾಠ ಮಾಡು ಒಣ ಉಸಾಬರಿಗ ಯಾಕ ತಲಿಹಾಕ್ತಿ." ಅಂದ ಹಂಡು ಪಾಟೀಲ- "ನಾನು ಯಾರ ಸುದ್ದಿಗೂ ಹೋಗೋದಿಲೋ ಮರಾಯ, ಅವರೇ ನನ್ನ ಸುದ್ಧಿಗ ಬರ್ತಾರ, ಬೇಕಂತ್ಲೆ ಕಾಲತುಳದು ಜಗಳ ತಗಿಯಾಕ ನೋಡ್ತಾರ. ಹುಡ್ರು ಒಂದ ನಮೂನಿ ಆದ್ರ ಹುಡುಗಿಯರು ಮತ್ತೊಂದು ನಮೂನಿ", ಸುಮ್ಮನಾದ, "ನಿನ್ನ ಸಲಗಿ ಹಿಡ್ಕೊಂಡಾರ ಒಬ್ಬ ಬೆನ್ನ ಹಿಡ್ಕೊಂಡ್ರ ಹಿಂಗ ಈ ಮಂದಿ ಸತಾಯಿಸಿ ಬಿಡ್ತಾರ. ಈ ಊರಿನ ಹುಡ್ರು ಎಡವಟ್ಟೆ ಸಂಬಾಯಿತು ಯಾರಾರು ಸಿಕ್ಕಬಿಟ್ರು ಕತಿ ಮುಗೀತು ಬಕರಾ ಮಾಡಿ ಬಿಡ್ತಾರ. ನಿನ್ನ ಪರಿಸ್ಥಿತಿ ಬೇಕು. ಹಿಂದ ಎಷ್ಟೋ ಮಂದಿ ಪರ್ಮೆಂಟ್ ನೌಕರಿ ಮಾಡ್ತಿದ್ದೋರು ಕೆಲ್ಸ ಬಿಟ್ಟು ಸವಾಸ ಬ್ಯಾಡ್ರೋ ಯಪ್ಪ ಇವರ್‍ದು ಅಂತೇಳಿ ಶರಣು ಹೊಡದ ಹೋಗ್ಯಾರ" ಅಂದ ಪಾಟೀಲ. ಪ್ರಭುಗ ಏನೂ ತೋಚಲಿಲ್ಲಾ, ಪ್ರತಿದಿನ ನಡಿಯೋ ಸಂಗತಿಗಳಿಗ ಸಾಕ್ಷಿಯಾಗಿದ್ದ. "ಎಲ್ಲೋ ಹಾದಿ ತಪ್ಪಿದೆ ನಮ್ಮ ವ್ಯವಸ್ಥೆಯೊಳಗ, ತಂದಿತಾಯಿದ ತಪ್ಪೋ. ಪರಿಸರದ ತಪ್ಪೋ. ಶಿಕ್ಷಣದ ತಪ್ಪೋ, ಇಲ್ಲಾ ಕಲಿಸ್ತಿರೋ ಮೇಷ್ಟ್ರುಗಳ ತಪ್ಪು, ಒಂದು ಹಂತಕ್ಕ ಕಾಲಿಟ್ರ ಹುಡ್ರು ವಿನಯತೆ ಕಳ್ಕೊಂತ್ತಾರ, ಅವರಿಗ ಮೂಲ ಆಕರ್ಷಣೆ

ಅಂದ್ರ ಹುಡುಗಿಯರು, ಅವರ ಗಮನ ಸೆಳಿಯಾಕ ನೂರಾ ಎಂಟು ಕೋತಿಯಾಟ ಆಡ್ತಿರ್ತಾರ" ಅಂತ ದಿನ ನಿತ್ಯದ ತನ್ನ ಅನುಭವವನ ಹೇಳಿದ ಪ್ರಭು. ತಪ್ಪು ಎಲ್ಲರದೂ ಐತಿ, ಯಾದಿಕ್ಕಿನೊಳಗ ಹೋಗಬೇಕಂತ ತಿಳಿಯದಿರೋದು ಮೊದಲನೆಯ ತಪ್ಪು, ಅದನ್ನ ಯಾರು ಹೇಳಿಕೊಡ ಬೇಕು ಹೇಳು, ಶಿಕ್ಷಣ ಪೋಷಕರೋ, ಮೇಷ್ಟ್ರೋ, ಎಲ್ಲರೂ ಜವಾಬ್ದಾರಿಯಿಂದ ನುಣಚಿಕೊಳ್ಳಾಕ ನೋಡ್ತಾರ." ಅಡ್ಡಗೋಡಿ ಮ್ಯಾಲ ದೀಪ ಇಟ್ಟೆ ಹಂಗ ಹೇಳಿದ. "ಮದಲು ನಾವು ಸುಧಾರಿಸಿಕೊಳ್ಳಬೇಕು, ವಿನಯತೆ, ನಮ್ರತೆಗಳನ್ನ ನಾವು ಕಲಿಬೇಕು ಅಂತ ನನ್ನ ಅಭಿಪ್ರಾಯ. ಎದಿ ಗರ್ವದಿಂದ ಹುಡುಗರ ಎದ್ರು ಮಾತಾಡಿದ್ರ ಮತ್ತೇನಕೈತಿ ಹೇಳು, ಹಂಗಂತ ಎಲ್ಲರ ಹತ್ರ ಒಂದೇ ವರ್ತನೆ ಆಗಬಾರದು" ಪ್ರಭು ಹೇಳಿದ. ಪಾಟೀಲ ಮನಿಗ ಹೊಂಟ ಪ್ರಭು ಅವನನ್ನ ಕಳಿಸಿ ಬಂದ, ಬೀಡಿಅಂಗಡಿ ಮಾಬುಲಿಸಾಬ್ ಅವನ ಕಂಡು ನಕ್ಕ," ಬಳ ದಿನಾ ಆಯ್ತು ಸಾರ್ ಬಡವರ ಕಡಿ ಬರ್ಲಿಲ್ಲಾ" ಅಂದ ನೀನೆ ಕಾಣಲಿಲ್ಲಾ ಮರಾಯ ನಾನು ಇಲ್ಲೆ ಅದೀನಿ" ಅಂತ ರೂಂ ಕಡಿಗ ಹೊಂಟ.

ಪ್ರವಾಸಕ್ಕ ವಾರದಿಂದ ಎಲ್ಲಾ ತಯಾರಿ ನಡದಿದ್ದು, ಹುಡ್ರೆಲ್ಲಾ ರೊಕ್ಕ ಕೊಟ್ಟಿದ್ರು. ಮುಂದುವರಿದ ಮಾಡ್ತಿದ್ದ ಸಿದ್ದೇಶಿ, ಹನುಮಂತರಿಗ ಶೆಟ್ಟಿ ಧಮಕಿ ಕೊಟ್ಟಿದ, "ನನ್ನ ಪುಕ್ಸಟ್ಟೆ ಕರ್‍ಕೊಂಡ ಹೋಗ್ಲಿಲ್ಲಾ ಮಕ್ಕಳಾ ನಿಮ್ಮನೊಂದಕೈ ನೋಡಿಬಿಡ್ತೀನಿ ನಾನೇ ನಿಮ್ಮನ್ನ ಲೀಡರ್ ಮಾಡ್ಸಿದ್ದು, ನಿಮ್ಮ ಪ್ರಿನ್ಸಿಪಾಲ ಗಿನ್ಸಿಪಾಲ್ರಿಗ ಹೆದ್ರಂಗಿಲ್ಲಾ" ಅಂತ, ಪ್ರಿನ್ಸಿಪಾಲರಿಗ ಹೇಳಿದ್ರು, "ಅವನದು ಇರ್ಲಿ ನೀವು ಮದ್ಲು ತಯಾರಿ ಮಾಡ್ರಿ. ಮದ್ಲು ನಾವು ಮೈಲಾರಕ ಹೋಗಿ ಹ್ಯಾಂಗ ಜಾತ್ರಿ ಇರ್ತೈತಿ, ಒಂದ ತಾಸಿದ್ದು ಹೊಳಲಿಗ ಹೋಗೋಣ, ಅಲ್ಲಿ ಹರಿಯ ಅನಂತ ಶಯನನ ಅವತಾರದ ಮೂರ್ತಿ, ಹಳೆಕಾಲದ್ದು, ವಿಜಯನಗರದ್ದೊ ಕಂದಬರ ಕಾಲದ್ದೊ ಐತಿ ನೊಡ್ಕೊಂಡು, ದೇವರ ಗುಡ್ಡ, ಅಲ್ಲಿಂದ ಸಿದಾ ಉಕ್ಕಡಗಾತ್ರಿ, ರಾತ್ರಿ ಹೊಳ್ಳಿಬರಬಹುದು" ಅಂದಿದ್ರು ಪ್ರಿನ್ಸಿಪಾಲರು. ಒಂದು ಬಸ್ಸ್ ಆಗ ಬಹುದಾದಷ್ಟು ಜನ ಹುಡುಗರು ತಯಾರಾಗಿದ್ರು, ಬೆಂಡ್ತಿ ಮಾಂತ್ಯ, ಕುಂಬಾರ ನಿಂಗಪ್ಪ, ಎಲ್ರಿಗಿಂತ ಮದ್ಲು ತಯಾರಾಗಿದ್ರು, ಪ್ರಿನ್ಸಿಪಾಲರು, ಪ್ರಭುನ ಒತ್ತಾಯ ಮಾಡಿದ್ರು, ಅವರ ಹೇಳಿಕೆ ಮ್ಯಾಲ ಹೂಂ ಅಂದಿದ್ದ. ಅವರವರ ಲೋಕದೊಳಗ ಅವರು ವಿಚಾರ ಮಾಡ್ತಿದ್ರು. ಪುಂಡಶೆಟ್ಟಿ ನಡುಕ ಜಗಳ ತಗಿತಾನಂತ ಗೊತ್ತಿತ್ತು. ಅವನಿಗ ಎಲ್ಲಾ ಮೇಷ್ಟ್ರ ಬೆಂಬಲ ಐತಿ, ಒಬ್ರೆ ಪ್ರಿನ್ಸಿಪಾಲರು ನಿಷ್ಠೂರವಾಗಿ ಹೇಳಿ ವಿರೋಧ ಕೊಡ ಕಟ್ಕೊಂಡಿರೋದು, ಅವರಿಗೊಬ್ರಿಗೆ ಅವನು ಹೆದರೋದು ಬಾಕಿ ಯಾರಿಗೂ ಕೇರ್ ಮಾಡೋದಿಲ್ಲಾ. ಪ್ರಿನ್ಸಿಪಾಲರು ಅವರ ವ್ಯಕ್ತಿತ್ವನ್ನು ಕಾಪಾಡ್ಕೊಂಡ ಬಂದಾರ. ಕಾಲೇಜಿ ಗಾಗಿ ಇಡಿ ಜೀವನಾನೇ ಸವಿಸಿರೋದರಿಂದ ಮ್ಯಾನೇಜ್‌ಮೆಂಟಿನವರು ಸಹ ಅವರ ಬಗ್ಗೆ ಗೌರವ ಇಟ್ಕೊಂಡಾರ.

ಗಡಬಿಡಿಯಾಗಿತ್ತು. ಅವನ ಬರ್ಲಿಲ್ರಿ ಸಾರ್, ಅವಳ ಬರ್ಲಿಲಾ ಸಾರ್ ಅಂತ ಗೌಜಲು ಆರಂಭ ಆಗಿತ್ತು. ಸಿದ್ದೇಶಿ, ಹನ್ಮಂತರಿಗ ಶೆಟ್ಟಿ ಹೆದರಿಕೆ. ಪ್ರಿನ್ಸಿಪಾಲರು ಅವನು ರೊಕ್ಕ ಕೊಡದೆ ಹ್ಯಾಂಗ ಬರ್ತಾನಂತೆ ಪಟ್ಟು ಹಿಡಿದಿದ್ರು. ಅವರಿಬ್ರೂ ಸೇರಿ ಅವನ ರೊಕ್ಕ

ಹಾಕ್ಕೊಂಡು ಕರ್‍ಕೊಂಡು ಹೋಗೊ ವಿಚಾರ ಮಾಡಿಂದ. ಪರಿಸ್ಥಿತಿ ಒಂದು ಹಂತಕ ಬಂದಿತ್ತು. ಬಸ್ಸಿಗ ಪೂಜಿ ಮಾಡೋದ್ರಾಗ ಶೆಟ್ಟಿ ಮುಂದಿದ್ದ. ಎಲ್ಲರನ್ನು ಹತ್ತಿಸಿ. ಅವನಿಗ ಬೇಕಾಗಿದ್ದ ಸುಮ್ಮಿ ಪಕ್ಕದ ಸೀಟು ಹಿಡಿಯಾಕ ಹೇಳಿದ್ದ ಪ್ರಿನ್ಸಿಪಾಲರು ಮುಂದ ಕುತ್ಕೊಂಡಿದ್ರು. ಉಮ್ಮಣ್ಣಿ, ಕುಳ್ಳಿ ಹಿಂದ, ಶೆಟ್ಟಿ ಅವರ ಸಂಗಡ ಕುತ್ಕೊಂಡು ದಾಂದ್ಲಿ ಎಬ್ಬಿಸಿದ್ದ.

ಎದ್ದ ನಿಂತ ನೆಟ್ಟಗ ಹೋದ, ಆ ಹುಡುಗಿ ಸೀಟಿನ ಹತ್ರ ನಿತ್ಕೊಂಡು ಕೈ ಮುಂದ ಮಾಡಿ ಒಂದು ಬೆಳ್ಳು ಚಾಚಿದ ಅದನ್ನ ನೆಟ್ಟಗ ಆ ಹುಡುಗಿ ಮಕಕ ಒಯ್ದಿ, ಒಯ್ದಿ, ಒಯ್ದಿವನೆ ಅಲಿಂದ ಮೇಲೆ ತಂದ, ಹುಡುಗಿ ಹೆದರ್‍ಕೊಂಡು ಚೀರಿಕೊಂಡ್ಲು. ಪ್ರಿನ್ಸಿಪಾಲರು ಓಡಿ ಬಂದ್ರು. ಪ್ರಭು ಹಿಂದಿದ್ದ. "ಏನಾತು ಯಾರು ಕೂಗಿಕೊಂಡೋರು" ಕೇಳಿದ್ರು, ಯಾರೊಬ್ರು ಬಾಯಿ ಬಿಡಲಿಲ್ಲಾ, ಆ ಹುಡುಗಿ ಬೆವತ್ಕೊಂಡು ಕರ್ಚೀಪಿನಿಂದ ಮಕ ಒರಿಸ್ಕೊಂತಿದ್ಲು, ಶೆಟ್ಟಿ ಕಣ್ಣುಕಿಸದು ಹೇಳಿದ್ರ ನಿನ್ನ ಏನ್ಮಾಡ್ತಿನೋಡು ಅನ್ನೋ ಹಂಗ ಕಣ್ಣಲೇ ಸೂಚಿಸ್ತಿದ್ದ. ಪ್ರಿನ್ಸಿಪಾಲ್ರು ಬಾಯಿಗ ಬಂದಂಗ ಹೇಳಿದ್ರು. ಯಾರು ಮಾತಾಡ ಲಿಲ್ಲಾ, ಹುಡುಗಿ ಒಳಗೊಳಗ ಅಳ್ತೀರೋದು ನೋಡ್ದ ಪ್ರಭು, ಟ್ರಿಪ್‌ನ್ನೆ ಕೆಡಸ್ತಾನ ಅವನ ಹೆಸರು ಹೇಳಿದ್ರ ಅಂತ, ಸುಮ್ಮನೆ, ಪ್ರಿನ್ಸಿಪಾಲರಿಗೆ ಸಮಾಧಾನ ಮಾಡಿದ.

ಎಲ್ಲಿ ನೋಡಿದರೂ ಮಂದಿ, ಟೆಂಟುಗಳು, ಬಸ್ಸು, ಚಕ್ಕಡಿಗಾಡಿ, ಕಿಲಾರಿ ಕಟ್ಕೊಂಡು ಅಲ್ಲಲ್ಲಿ ನಿಂತಿದ್ವು. ಟ್ರಾಕ್ಟರ ಮ್ಯಾಲ ಗುರಾಡ ಕಟ್ಟಿ ನೆಳ್ಳ ಮಾಡಿಕೊಂಡು ಮಂದಿ ಆರಾಮ ತಗೊಂತಿದ್ರು. ಜನಂಜಾತ್ರಿ. ಒಂದು ಅಂಗಡಿ, ಒಂದ ಬಲೂನ ಮಾರೋನು. ಯಾರ ಹತ್ರ ನೋಡಿದ್ರು ಗುಂಪು ಗುಂಪಾಗಿ ಮಂದಿ ನೆರದಿದ್ರು. ನಾಲಿಗೆ ಸೀಳಿಕೊಳ್ಳೊರು, ತೊಡಿಯೊಳಗ ಶೂಲ ನೆಟ್ಟಿಕೊಳ್ಳೊರು ಗೊರಪ್ಪಗಳ ಢಮರಿನ ಸದ್ದು, ಏಳಕೋಟಿ ಮೈಲಾರಲಿಂಗನ ಗುಣಗಾನ ಮಾಡೋ ಮಂದಿ ಕಾರಣಿಕನ ಹೇಳಿಕೆಗಾಗಿ ಕಾದು ನಿಂತಿದ್ರು. ಈ ಜನರೊಳಗ ಹುಡ್ರನ್ನ ಬಿಟ್ರ ಕಳ್ಕೊಂತಾರಂತ, ಅವರಿದ್ದ ಬಸ್ಸನ್ನ ತುಂಗಭದ್ರ ನದಿಯ ತೀರದೊಳಗ ನಿಲ್ಸಿದ್ರು, ತುಂಗ ಭದ್ರೆಯ ತಿಳಿ ನೀರೊಳಗ ಹೊಲಸು ಜೊಂಡು ಗಟ್ಟಿ, ಕಳೆ ಕಳ್ಕೊಂಡಿತ್ತು. ಅದನ್ನ ನೋಡೆ ಸುಸ್ತಾದ ಹುಡ್ರು ಇಳಿಯೋದು ಬ್ಯಾಡ ಅಂದ್ರು ಒಂದೆರಡು ಅಂಗಡಿ ಸಮೀಪ ಇಳದು ಜಾತ್ರಿ ಸಾಮಾನು ಖರೀದಿ ಮಾಡ್ಕೊಂಡು. ಒಂದಿಬ್ರು ಹುಡುಗಿಯರು ಪ್ರಭುನ ಹಿಂದ ಹೋಗಾಕ ಗಂಟ ಬಿದ್ರು, ಶೆಟ್ಟಿ ಕಾಟತಾಳದ ಬಚ್ಚಿಟ್ಟು ಕೊಳ್ಳತೊಡಗಿದ್ರು. ಪ್ರಭು ಯಾರೋ ಹುಡುಗರಿಗ ಅಂಟಿಸಿ, ಹಂಡು ಪಾಟೀಲನ ತಂಗಿಗ ಅವನ ತಾಯಿಗ ಖರೀದಿ ಮಾಡಾಕ ಹೊಂಟ.

ದೇವರ ಗುಡ್ಡ ತಲುಪಿದಾಗ ಹೊತ್ತು ನೆತ್ತಿ ಮ್ಯಾಲ ಬಂದಿತ್ತು ಅರ್ಧ ಗುಡ್ಡ ಹತ್ತಿದ ಬಸ್ಸು ಇನ್ನೂ ಅರ್ಧ ಹತ್ತದಾದಾಗ ಇಳದೆ ಹೊಂಟ್ರು. ಸುತ್ತಲೂ ಒಂದು ಸಲಕಣ್ಣ ಹಾಯಿಸಿದ ಪ್ರಭು, ಎಲ್ಲಿ ನೋಡಿದ್ರೂ ಬಟಾ ಬಯಲು ಅರ್ಧ ಕಿಲೋ ಮೀಟರಿಗ ಒಂದರಂಗ ಜಾಲಿ ಗಿಡಗಳು, ಬೇವಿನ ಗಿಡಗಳು ರಕ್ಕಸ ಪಟ್ಟಿ ಪೊದೆಗಳು, ಅಲಲ್ಲಿ ಏಲೊ ಬಿಸಲು ಮರಿಚಿಕೆ ಬಿಸಲಿನ ಝಳ ಒಂದ ಕಡಿ ಜಿರುಂಡಿ ಶಬ್ದ ಜಿಕ್ ಅಂತ ಕಿವಿ

ಕೆಪ್ಪಾಗೊಹಂಗಿತ್ತು. ತಲಿ ಚಿಟ್ಟನಿಸಿತು. ರಣ ರಣ ಬಿಸಿಲು. ಮಂದಿ ತಮ್ಮ ಸ್ವಾರ್ಥಕ ಬೆಳದು ನಿಂತಿದ್ದ ಗಿಡ ಮರಗಳನ್ನ ಕಡದು ನಾನು ಐವತ್ತು ಎಕ್ಕರೆ, ನೀನು ನೂರು ಎಕ್ಕರೆ ಅಂತ ಪ್ರಕೃತಿಯನ್ನ ಬಯಲು ಮಾಡಿ ಹೊಲಮಾಡಿದ್ರು, ಮಳಿ ಕಾಣದೇ ಬರಗಾಲದ ನಾಡು. ಶೆಟ್ಟಿ ಯಾವುದೋ ಕೆಟ್ಟ ಜೋಕು ಹೇಳಿದ್ದ ಕೇಳಿ ಉಮ್ಮಣ್ಣ ಮತ್ತ ಕುಳ್ಳಿ ವಿಕಾರವಾಗಿ ನಕ್ಕಿದ್ರು, ಎಲ್ರೂ ಹಿಂದಿರುಗಿ ನೋಡಿದ್ರು, ಪ್ರಭು. ವಾಸ್ತವಕ ಬಂದ. ಮನುಷ್ಯನಗೂ ಒಂದ ರೀತಿ ಆದ್ರ ಅವರದೆ ನಗೆ ವಿಭಿನ್ನವಾಗಿತ್ತು. ಕತ್ತೆ ಅರಚಿದಂಗೆ, ಯಾಕ ಹಿಂಗ ತಮ್ಮ ಸೂಕ್ಷ್ಮತೆಯನ್ನ ಅರ್ಥ ಮಾಡಿಕೊಳ್ಳೇದಿಲ್ಲಾ ಇವರು, ತಾವು ಎಲ್ಲರಿಗಿಂತಲೂ ಭಿನ್ನ, ಶ್ರೇಷ್ಠರು, ಅಂತ ತಮ್ಮೊಳಗೆ ಅಂತರ ಸೃಷ್ಟಿಸಿಕೊಂಡು, ಯಾರ ಹತ್ರ ಸೇರದೆ, ತಾವೇ ಒಂದು ಗುಂಪು ಕಟ್ಕೊಂತ್ತಾರ. ಅಲ್ಲಿ ಅವರಂತಹ ವಿಚಾರದವನೇ ಸೇರ್ಕೊಂಡು ಎಲ್ಲರ ಬಗ್ಗೆಯೂ ಟೀಕೆ, ಅವರ ನಜರಿನ್ಯಾಗ ಯಾರು ಶ್ರೇಷ್ಟರಲ್ಲಿ, ಅವರನ್ನ ಬಿಟ್ಟು, ಪ್ರಿನ್ಸಿಪಾಲ, ಪ್ರಭು, ಮ್ಯಾನೇಜ್‌ಮೆಂಟಿನ ಕೆಲ ಸದಸ್ಯರು, ಹುಡುಗರು, ಹುಡುಗಿಯರು, ಊರಿನ ಶ್ರೇಷ್ಠ ವ್ಯಕ್ತಿಗಳು ರಾಷ್ಟ್ರನಾಯಕರು, ನಟರು, ಯಾರನ್ನು ಬಿಡದೆ, ಎಲ್ಲರನ್ನೂ ತಮ್ಮ ಟೀಕಾ ಅಸ್ತ್ರದೊಳಗ ಸಾರಾಸಗಟಾಗಿ ಸೇರಿಸ್ಕೊಂಡು ಬಿಡ್ತಾರ.

ಗುಡ್ಡ ಹತ್ತಿದಾಗ ಎಲ್ಲರೂ ಎದಿರುಸಿರು ಬಿಡಾಕಹತ್ತಿದ್ರು. ಪ್ರಿನ್ಸಿಪಾಲರಿಗ ಸಾಕಾಗಿತ್ತು. ದೇವರಗುಡಿಗ ಬರಾಕ ಒಪ್ಪಲಿಲ್ಲಾ. ಪ್ರಭು, ಕೆಲ ಹುಡುಗರ ಸಹಾಯ ದಿಂದ ಹತ್ತಿದರು. ಗುಹೆ, ಪ್ರಶಾಂತವಾಗಿತ್ತು. ತಂಪಿತ್ತು. ಅಲ್ಲೆ ಕೆಲವು ಮನೆಗಳಿದ್ದು ಇಷ್ಟು ಮ್ಯಾಲ ಮಂದಿ ಹೆಂಗ ಹತ್ತತ್ತಾರನ್ನೋದು ಅನೇಕರ ಸಮಸ್ಯೆ, ಕೆಲವರು ಹೆಂಗಸರು ಕಟ್ಟಿಗೆ ಹೊರೆ ಹೊತ್ಕೊಂಡು ಹತ್ತುತ್ತಿದ್ದರು. ಆ ಕಡೆ ಈ ಕಡೆ ನೆರಕೆ ತಟ್ಟಿ ಕಟ್ಟಿ ಮ್ಯಾಲಿ ಹಂದ್ರ ಹೊದಿಸಿ ಚಾ ದಂಗಡಿ ಮಾಡಿದ್ದ ಒಂದು ಅಂಗಡಿಯೊಳಗ ಒಂದೀಟು ಚಾ ಕುಡದು ಉಕ್ಕಡಗಾತ್ರಿಗ ಹೋಗುವುದಾಗಿ ಹೇಳಿಂದ ಗಡಿಬಿಡಿಯಿಂದ ಹತ್ತಿದ್ರು.

ಬಿಸಿಲಿನ ತಾಪಕ ಸೊಂಟದ ಮಟ ನೀರೊಳಗ ಹುಡ್ರು ಹುಡುಗಿಯರು ಈಜಾಡಾಕ ಇಳಿದಿಂದ, ಹೊರಗ ಕರಿಯೋದು ಕಷ್ಟ ಆಗಿತ್ತು. ತುಂಗಭದ್ರದ ನೀರು ಸ್ವಚ್ಛವಾಗಿತ್ತು. ಸುಮಾರು ಅರ್ಧ ಕಿಲೋಮೀಟರ್ ಅಗಲದಲ್ಲಿ ಹರಿತ್ತಿದ್ದ ನೀರು ಬ್ಯಾಸಿಗ ಆದ್ದರಿಂದ ಕಮ್ಮಿ ಇತ್ತು. ದೆವ್ವ ಹಿಡಿದವರಿಗ ಇಲ್ಲಿ ತಂದು ನದಿಯೊಳಗ ಬಿಟ್ಟಿಂದ ಎಷ್ಟೋ ಜನರು ದೇವ್ವ ಬಿಟ್ಟು ಬಂದು ದಡ ಸೇರಿ ಹೌಹಾರಿ ಸುಸ್ತಾಗಿ ಹೋಗ್ತಿದ್ರಂತ. ದೇವ್ವ ಕೆಲವರನ್ನ ನೀರೊಳಗೆ ಮುಳಗಿಸಿ ಕೊಂದ ಘಟನೆ ಉಂಟು ಎಂದು ಅಲ್ಲಿಯ ಮಂದಿ ಹೇಳಿಂದ, ಹುಡುಗರಿಗ ಮೋಜು ಅನಿಸಿತು. ಶೆಟ್ಟಿ ಹುಡುಗಿಯರ ಹಿಂದಿಂದ ಈಜಾಡ್ತಿದ್ದ, ಏನಾದ್ರು ಹೆಚ್ಚು ಕಮ್ಮಿ ಮಾಡ್ಯಾನಂತ ಪ್ರಿನ್ಸಿಪಾಲರು ಅವನನ್ನ ಕಾಯಿತಾ ಇದ್ರು. ಪ್ರಭು ಎಲ್ರಿಗಿಂತ ಮೊದ್ಲು ಮುಗಿಸಿಕೊಂಡ ದಡದ ಮ್ಯಾಲಕುಂತು ನೀರನ್ನ ದಿಟ್ಟಿಸಿ ನೋಡತೊಡಗಿದ. ಇದೇ ನೀರು ಹರಿಹರದ ಹತ್ರ ಬಿರ್ಲಾ-ಕಿರ್ಲೋಸ್ಕರ ಕಂಪನಿಗಳ ಕೊಳೆಯಿಂದ ಕುಲಿಷಿತವಾಗಿ, ಜಾತ್ರೆಯಲ್ಲಿ ಮಲೀನವಾಗಿ ವಾಕರಿಕೆ ಬರೋಹಂಗಿತ್ತು. ಒಂದೊಂದು ಪ್ರದೇಶದ ಪ್ರಭಾವದಿಂದ ನೀರು ಸಹ ನಾಶವಾಗಿ ಹೊಗ್ತಿದೆ ಅಂದ ಮೇಲೆ ಪರಿಸರದಲ್ಲಿ ಉಂಟಾಗುವ

ಸ್ಥಿತಿ ಇನ್ನೂ ಎಂಥದ್ದು ಅನಿಸಿತು. ಜಲಚರಗಳಿಗುಂಟಾಗಿರಬಹುದಾದ ಘಾತವನ್ನ ಊಹಿಸಿದಾದೆ. ಯಾಕೆ ಹೀಗೆ, ಹಣ ಕೂಡಿಟ್ಕೊಂಡು ರಾಶಿ ಮಾಡಿ,ಅಮಾಸಿಗೊಂದ ಸಲ, ಹುಣ್ಣಿಮಿಗ ಒಂದ ಸಲ ಪೂಜಿ ಮಾಡಿ ಭದ್ರವಾಗಿ ಬೀಗ ಜಡಿದು ಉಣ್ಣೋರ ಬಾಯಿಗ ಮಣ್ಣ ಹಾಕೋ ಪ್ರವೃತ್ತಿ ಯಾಕಂತ? ಕೂಲಿ ಮಾಡಿ ಮಾಡಿ, ಒಂದಕ್ಕ ಎರಡು, ಎರಡಕ್ಕ ನಾಕ ಪಟ್ಟು ದುಡದು. ತನ್ನದು ಅನ್ನೋ ಭಾವನೆಯಿಂದ ಕೆಲಸ ಮಾಡಿದ್ರು ಸಿಗೋದೇನು? ಎರಡ ಹೊತ್ತಿನ ಕೂಳೆ, ಅದು ಸರಿಯಾಗಿ ಸಿಗೋದಿಲ್ಲಾ, ನಮ್ಮಪ್ಪ ಹೊಲ ಉತ್ತು ಬಿತ್ತಿ ಬೆಳೆದು ಕೊನೆಗ ಅನುಬವಿಸೋದೇನು? ಉಪಾಸ ಮಲಗಿ ನಿದ್ದಿ ಬರದೆ ನೂಕಿದ ರಾತ್ರಿಗಳೇಷ್ಟು. ಒಂದು ಮಗ್ಗಲು ಮಕ್ಕೊಂಡು ತನ್ನ ಸ್ಥಿತಿಗ ಯೋಚನೆ ಮಾಡಿ ಮಾಡಿ ಚರ್ಮ ಸುಕ್ಕ ಗಟ್ಟಿದ ಮುದಿದೇಹ ನೋವಾದಾಗ ಮತ್ತೊಂದು ಮಗ್ಗಲು ಹೊಳ್ಳಿ ಮಲಗೋದ್ರಾಗ ಮುಂಗೋಳಿ ಕೂಗಿ ಎಚ್ಚರಿಸಿಂದ, ಇಷ್ಟಬೇಗ ಬೆಳಕು ಹರಿತಾ ಹಾಳಾದ್ದು ಒಂದ ಜಂಪು ನಿದ್ದೇನೂ ಮಾಡಲಿಲ್ಲಾ. ಅಂತ ಶಾಪಾ ಹಾಕೋ ಮುಂದ ಆತನೊಳಗ ಯಾರ ವಿರುದ್ಧವೂ, ಯಾವ ಭಾವನೆ ಇರೋದಿಲ್ಲಾ. ಎಷ್ಟೋ ವ್ಯರ್ಥ ಬದಕುಗಳು ಹಿಂಗ ತಮ್ಮ ಸ್ಥಿತಿಯನ್ನೂ ಅರಿಯಲಾಗದೆ ಮಣ್ಣಿನೊಳಗ ಹೂತು ಹೋದವು. ಯಾರದೋ ಮ್ಯಾಲ ನೀರ ಗೊಜ್ಜಾಕ ಹೋಗಿ ನನ ಮ್ಯಾಲ ನೀರು ಗೊಜಿದ ಶೆಟ್ಟಿ. ಪ್ರಭು ಗಾಬರಿಯಾದ ಹುಡ್ರೆಲ್ಲಾ ನಗ್ತಿದ್ರು. ಅವನೆದ್ದು ಮುಂದಕ ಹೋದ. ನೀರು ಒಂದು ಕಡೆ ಸಣ್ಣ ತೊರೆಯಾಗಿ ಹರಿತಿತ್ತು ಅದನ್ನ ದಾಟಿ, ಮುಂದಕ ಹೋದ, ಆಪು ದೊಡ್ಡದಾಗಿ ಬೆಳದಿದ್ದನ್ನ ಸರಿಸಿ ನಡದ, ಅವನ ಕಣ್ಣು ಪಕ್ಕದೊಳಗ ಬಿದ್ದಿದ್ದ ಎರಡು ದೇಹಗಳ ಕಡೀಗ ಹೋತು, ಅವನ ಕಣ್ಣಿನ ನಂಬದಾದ, ಸಪ್ಪಳ ಮಾಡದೇ ಮತ್ತೊಮ್ಮೆ ನೋಡಿ ಖಾತ್ರಿ ಮಾಡಿಕೊಂಡ, ಹೌದು ಅವರೇ, ಅವರೇ ಒಂದು ನಿಮಿಷ ಅವನ ಎದಿಡವ ಗುಡ ತೊಡಗಿತು. ಕಾಲಿನ ಶಕ್ತಿ ಇಂಗಿದಂಗಾಗಿತ್ತು. ಅವರು ಸ್ನಾನಕ ಇಳಿದಾಗಲೇ ನಾಪತ್ತೆ ಯಾಗಿದ್ದು ಈ ಮನುಷ್ಯ ಬ್ಯಾರೆರ ಬಗ್ಗೆ ಬಾಯಿಗ ಬಂದಂಗ ಮಾತಾಡಿ ಹಿಯಾಳಿಸುವವ, ಇಂತಹ ಕೆಲ್ಸ ಮಾಡ್ತಾನಂದ್ರ ಹುಡ್ರ ಊಹಿಸದಾದ. ಪ್ರಭುಗ ಏನು ಹೊಯಲೇ ಇಲ್ಲಾ, ಅವನ ಕಾಲುಗಳು ಹಿಂದಕ್ಕ ಚಲಿಸಿದವು. ಅವನಿಗ ಗರ ಬಡದಂಗಾಗಿತ್ತು. ಯಾರ ಮುಂದು ಹೇಳಲಿಲ್ಲಾ, ಹೇಳಾಕ ಮನಸು ಬರಲಿಲ್ಲಾ. ಒಬ್ಬನೆ ಕುಂತ್ಕೊಂಡ ಕಾಲೇಜು, ಹುಡುಗರು, ಶಿಕ್ಷಕರು, ವ್ಯವಸ್ಥೆ, ಬುದ್ಧಿ ಜೀವಿಗಳಂತ ಪೋಜು ಕೊಡೊ ಮಂದಿ, ಬೇಲಿ ಎದ್ದು ಹೊಲ ಮೇದಂತಾಗಿತ್ತು ಕಣ್ಣು ಮುಚ್ಚಿದಾಗ ಅದೆ ಚಿತ್ರ ಸ್ಮೃತಿಪಟಲದ ಮ್ಯಾಲ ಮೂಡಿ ಬರ್ತಿತು.

ಅವನು ಎಲ್ಲರೊಳಗೂ ಕೂಡಿಕೊಂಡಿದ್ದ. ಅವನ್ನ ಕಂಡು ಒಂದು ರೀತಿಯ ಅಸಹ್ಯ ಭಾವನೆ ಹುಟ್ಟತೊಡಗಿತು ಪ್ರಭುಗ ತಾನು ಎಡವಿದ್ದ ಎರಡನೆಯ ಸಾರಿ. ಆ ಮೊಂಡು ಸ್ವಭಾವದ ಹುಡುಗಿಯ ಹಠದಿಂದ. ಎರಡನೆಯ ತಪ್ಪು ಮಾಡಿದಾಗ ಮನಸು ಒಪ್ಕೊಂಡಿರ ಲಿಲ್ಲಾ, ಅನಿವಾರ್ಯ ಅನಿಸಿತು ಈ ಮನುಷ್ಯ, ಎಷ್ಟೋ ಹರೆಯವನ್ನ ಕೆಡಸಿ ಕುಂತಾನ ಅವನ ಮಾದರಿ ಶ್ರೇಷ್ಠಗುರು. ಅದೇ ಹುಡುಗಿಯ ಮುಂದ ನಿಂತು ಪಾಠ ಮಾಡುವಾಗ ಅವನ ಹಾಳು ಮನಸಿಗ ಯಾವ ರೀತಿಯ ಅನಿಸಿಕೆ ಅನಿಸುವುದಿಲ್ಲವೇ? ಅವನ ಕೈಗ ತಟ್ಟೆ

ಬಂದಿತ್ತು. ಆ ಹುಡುಗಿ ಏನೋ ಬಡಿಸಾಕ ಬಂದಾಗ ಒಂದ ಸಾರಿ ದಿಟ್ಟಿಸಿದ, ಅವಾಗತಾನೆ ಅರಳಿ ನಳನಳಿಸುತ್ತಿದ್ದ ಹೂವಿನ ರಸ ಹೀರಿ ಬಿಟ್ಟು ಹೋದ ದುಂಬಿ ಅದರಲ್ಲಿಯ ಎಲ್ಲಾ ಮಧುವನ ಹೀರಿಕೊಂಡಂಗ ಅನಿಸಿತು. ಅಕಿ ನಕ್ಕಳು, ಕಷ್ಟಪಟ್ಟು ತುಟಿ ಮ್ಯಾಲ ನಗಿ ತಂದಕೊಂಡು ನಕ್ಕ. ಹಿಂಸೆ ಅನಿಸಿತು. ಅವನು ಗಮನಿಸುತಿರೋದು ಕಂಡು ಪ್ರಭು ನೋಡಿದ. ಬೇಕಂತಲೇ ಅವಳನ ಕರದು ಮತ್ತೇನೋ ಬಡಿಸಾಕ ಹೇಳಿದ.

ಪ್ರಿನ್ಸಿಪಾಲರಿಗೆ ಸುಸ್ತಾಗಿತ್ತು. "ಅಂತು ಪಾರಾದ್ವಿ ಅಲ್ವೇನ್ರಿ, ಎಲ್ಲಿ ಏನೂ ಆಗಲಿಲ್ಲಾ, ಶೆಟ್ಟಿ ಗಿಟ್ಟಿ ಏನೂ ಎಡವಟ್ಟು ಮಾಡಲಿಲ್ಲಾ" ಪ್ರಭು ಮಾತಾಡಲಿಲ್ಲಾ," ಆ ಕುಳ್ಳಿ ಮತ್ತು ಉಮ್ಮಣ್ಣ ಶೆಟ್ಟಿಗ ಸರಿಯಾಗಿ ಹೇಳ್ಯಾರ, ಹಂಗೆ ಉಳಿದ ಹುಡ್ರುಗಳಿಗ ಕಂಟ್ರೋಲ ಮಾಡ್ಯರ" ಅಂದಾಗ ಮಾತ್ರ, ಪ್ರಭುಗ ಹೇಳಿ ಬಿಡಬೇಕು, ಅನಿಸಿ ನ್ಯಾಲಿಗಿ ಮ್ಯಾಲ ಬಂದ ಶಬ್ದ ಹೊರಗ ಹೊರಡಲಿಲ್ಲಾ. "ಹೌದು ಸರ್, ಪ್ರೊ. ಕುಳ್ಳಿ ಭಾರಿ ಒಳ್ಳೆಯವರು" ಅಂತ ಒತ್ತಿ ಹೇಳಿದ ಇಡಿ ವಾಕ್ಯದ ತುಂಬ ಟೀಕೆ ತುಂಬಿತ್ತು. ಆದ್ರ ಪ್ರಿನ್ಸಿಪಾಲರಿಗೆ ಅದು ಅರ್ಥ ಆಗಲಿಲ್ಲಾ.

ಎಂದಿನಂತೆ ಕಾಲೇಜು ಆರಂಭ ಆಗಿತ್ತು. ಅವನು ಆ ಹುಡುಗಿ ಕೂಡ ಏನೋ ಮಾತಾಡ್ತಿದ್ದ ಸ್ಟಾಫ್ ರೂಂ ನಲ್ಲಿ, ಬಹುಶಃ ಅಕಿ ಅಳ್ತಿರಬೇಕು. ಪ್ರಭುಗ ಗಾಬರಿ ಆತು. "ಏನು ಬ್ಲಾಕ್ ಮೇಲ್ ಮಾಡ್ತಿರ ಬಹುದೇ" ವಾಪಾಸಾದ. ಆ ಹುಡುಗಿಯನ್ನು ಕೇಳಬೇಕು ಅಂದ್ಕೊಂಡ. ನನಗ್ಯಾಕಬೇಕು ಅವನು ಅಕಿ ನಡುವಿನ ವ್ಯವಹಾರ, ಅಂತ ಜಾರಿಕೊಳ್ಳಾಕ ನೋಡಿದ, ಮನಸು ಒಪ್ಪಲಿಲ್ಲಾ, ಅಕೀಗ ಸಹಾಯ ಆಗೋದಾದ್ರ. ಅಂತೆಲ್ಲಾ ವಿಚಾರ ಮಾಡಿದ. ಆ ಹುಡುಗಿಯನ್ನ ಬೆಟ್ಟಿಯಾಗುವ ವಿಚಾರ ಮಾಡಿದ ಕ್ಲಾಸಲ್ಲಿ ಕಂಡು ಹೇಳಬೇಕು ಸಿಗಾಕ ಅಂತ ಅಂದ್ಕೊಂಡು ಕ್ಲಾಸಿಗ ಹೋದ. ಅಲ್ಲಿಂದ ಮನಿಗ ಹೋಗಿದ್ಲೋ, ಇಲ್ಲಾ? ಕಾಣಲಿಲ್ಲಾ, ತಾನೇಕ ತಲಿ ಕೆಡಿಸ್ಕೊ ಬೇಕಂತ ಪಾಠ ಮುಗಿಸಿ ಹೊಂಟ. "ಏನಪ್ಪ ಮನಿಗ ಹೊಂಟ್ಯಾ" ಅಂದ ಕುಳ್ಳಿ, ಯಾವತ್ತು ಇಲ್ಲದವನು ಒಳ್ಳೆ ಮಾತಾಡಿದ್ದನ್ನ ಕಂಡು ಪ್ರಭು "ಹೌದು ಸರ್" ಅಂದ "ಮತ್ಯಾವು ಬ್ಯಾಟಿ ಸಿಕ್ಕಿಲೇನು ಒಬ್ನೆ ಪರದೇಶಿ ಹಂಗ ಅಡಾಡ್ತಿಯಲ್ಲಾ"ಅಂದ. "ನಿಮ್ಮಂಗ ನಮಗ ಅವಕಾಶ ಎಲ್ಲಿ ಸಿಗಬೇಕು ಸರ್. ನೀವು ಮನಸು ಮಾಡಿದ್ರ ನದಿಯೊಳಗ.." ನಿಲ್ಲಿಸಿದ ಏನ್ರಿ ಪ್ರಭು ನಾನು ಏನೋ ಅಂದ್ರ ನೀವು ಮತ್ತೇನೋ ಹೇಳ್ತಿರಿ ಅಂತ ತಿರುಗಿದ ಕುಳ್ಳಿ. "ಹಂಗೇನಿಲ್ಲಾ ಸರ್, ನೀವು ಪರ್ಮೆಂಟ್, ನಾವು ತಾತ್ಕಾಲಿಕ, ಜೂನಿಯರ್, ಎಲ್ಲಾ ಅನುಭವ ಐತಿ ನಿಮಗ ನಾವೇನರ್ರಿ ನಿನ್ನೆ ಮನ್ನೆ ಬಂದೋರು, ಹೊಟ್ಟೆ ಪಾಡಿಗಾಗಿ ಏನೋ ಮಾಡ್ತೀವಿ." ಅಂತ ಅವನ ಮಕ ನೋಡಿದ. "ಏ ಹಂಗೇ ನಿಲ್ರಿ ನೀವು ಪಾಠ ಮಾಡ್ತೀರಿ ನಾವು ಮಾಡ್ತೀವಿ ಅಷ್ಟೇ. ನನಗ ಕ್ಲಾಸ್ ಐತಿ ಬರ್ತೀನಿ" ಅಂದವನೆ ಕಡದ ಹತ್ರ ತುರಿಸದಂಗ ಅವನಿಂದ ಬಿಡಿಸ್ಕೊಂಡು ಹೊಂಟ. "ನಿನ್ನ ದೌರ್ಬಲ್ಯ ಸಿಕ್ಯೆತಿ ಕುಳ್ಳಿ ಇನ್ನೂ ನೀನು ಹಾರಾಡಿದ್ರ ಅದನ್ನ ಹೊರಗ ಹಾಕಿಬಿಡ್ತೀನಿ" ಅಂದ್ಕೊಂಡ.

ಪ್ರಿನ್ಸಿಪಾಲರು ಹೇಳಿದ ಮಾತುಗಳನ್ನ ಗಮನದಲ್ಲಿಟ್ಕೊಂಡು ಪಾಠ ಮುಗಿಸಿ ಮತ್ತೊಮ್ಮೆ ರಿಪೀಟ್ ಮಾಡಿದ್ದ. ಫಲಿತಾಂಶ ಸರಿಗ ಬಂದ್ರೆ ಅವನನ್ನ ಮತ್ತೆ ತಗೋ

ಬೇಕು ಅಂತ ಪ್ರಿನ್ಸಿಪಾಲರು ಮ್ಯಾನೇಜ್‌ಮೆಂಟಿಗೆ ಹೇಳುವುದಾಗಿ ಹೇಳಿಂದ ಅವನು ಎಲ್ಲಾ ಪ್ರಯತ್ನ ಮಾಡತೊಡಗಿದ.

ಹೊಸದೊಂದು ವಿಷಯದ ಕುರಿತು ಭಾರಿ ಚರ್ಚೆಯೆ ನಡೆದಿತ್ತು. ಆ ವಿಷಯವನ್ನ ಪ್ರಭುನ ತಲಿಮ್ಯಾಲ ಕಟ್ಟಿ ಆ ಹುಡುಗಿ ಕಡೆಯಿಂದಲೇ ಅವನ ಹೆಸರು ಹೇಳಿಸಬೇಕಂತ ಹ್ಯಾಂಗೋ ವಿಷಯ ತಿಳಿಯಿತು. ಪ್ರಭು ನನ್ನ ಕಾಪಾಡಬೇಕಂತ ನನ್ನ ಕರದು ಕೇಳಿದ್ರು. ಸರ್ ಕುಳ್ಳಿ ಇದಕ್ಕೆಲ್ಲಾ ಕಾರಣ, ನಾನು ಅವತ್ತೆ ತಮಗ ಹೇಳಬೇಕು ಅಂದ್ಕೊಂಡಿದೆ. ಯಾಕ ಬೇಕಂತ ಸುಮ್ನಾದೆ" ಅಂದ. "ಇವತ್ತು ಅದೇ ಹುಡುಗಿ ನೀವು ಮಾಡೀರಿ, ಅಂತ ಕಂಪ್ಲೆಂಟ್ ಕೊಟ್ಟಾಳ ಮದ್ಲು ನನಗ ಯಾಕ ಹೇಳಲಿಲ್ಲಾ, ಇದೆಲ್ಲಾ ಅವರಿಬ್ಬರದೆ ಕೆಲ್ಸ. ನೀವು ಹೆದರ ಬ್ಯಾಡ್ರಿ, ಮಾಡಿದವನಿಗೆ ಶಿಕ್ಷೇ ಆಗಾಕಬೇಕು. ಅವನೇನಾದ್ರು ವಿಷಯ ಹೊರಗ ಹಾಕಿದ್ರ ಅವನ ಕೆಲ್ಸ ಹೊಗೋದು ಗ್ಯಾರಂಟಿ ಯಾಕಂದ್ರ ಇದು ಅವನ ಐದನೆಯ ಕೇಸು." ಅಂದ್ರು ಪ್ರಭುಗ ಹುಚ್ಚು ಹಿಡಿದಂಗಾತು. ನಾನು ಅಕೀಗ ಒಳ್ಳೇದಾಗಲಿ ಅಂತ ವಿಚಾರ ಮಾಡಿದ್ರ. ಅಕಿ ಉಲ್ಟಾ ನನ್ನ ಮ್ಯಾಲ ಕಂಪ್ಲೆಂಟ್ ಮಾಡ್ಯಾಳಂದ್ರ. ಬೆರಕಿ ಅದಾಳ ಅಂದಂಗಾತು ವಿಚಾರ ಮಾಡಹತ್ತಿದ. ಯಾವ ಹುತ್ತದಾಗ ಯಾವ ಹಾವೈತೋ ಹತ್ತು ಮಂದಿ ಹತ್ತ ಸಲ ಸತ್ಯ ಅಂತ ಹೇಳಿಬಿಟ್ರ. ಆ ಸುಳ್ಳು ಸತ್ಯ ಆಗತೈತಿ. ಏನ ಮಾಡಾಕು ಅಂಜದ ಮಂದಿ, ಅವರ ವಿರುದ್ಧ ಗುದ್ದಾಡಕ ಆಗೋದು ಉಂಟೇ, ಪಾಟಲಿಗ ಒಂದ ಮಾತು ಹೇಳಬೇಕು ಅಂತ ಮಾಬ್ಯಾನ ಬೀಡಿ ಅಂಗಡಿ ಬಂದ. "ಏನ್ರಿ ಮಾಸ್ತರ ಪಾಟೀಲ ಸಿಕ್ಕಿಲ್ಲೇನ್ರಿ ನಿಮಗ, ಹುಡಕಾಕ ಹತ್ತಿದ್ದ, ಕಾಲೇಜಿಗ ಹೋದ್ನೋ ನಿಮ್ಮ ರೂಂಗೆ ಹೋದ ಅರ್ಜೆಂಟ್ ಬಂದ್ರ ಹೇಳಂದ," ಅಂತ, ಹೇಳಿದ. "ನಾನು ಅವನ್ನ ಹುಡಕಾಕ ಹತ್ತೀನಿ ಮರಾಯ. ಸರಿ ರೂಂ ಕಡೀಗ ಹೊಕ್ಕೀನ ಅಲ್ಲಿ ಇಲ್ಲಾಂದ್ರ ಮನೀಗ ಹೊಕ್ಕೀನಂದ." ಹಂಡು ಪಾಟೀಲ ಖೋಲಿ ಮುಂದ ನಿಂತಿದ್ದ. "ನಿನ್ನ ಹುಡಕಿ ಕೊಂಡೆ ಹೊಂಟಿದ್ದೆ" ಅಂದ ಪ್ರಭು" ಮತ್ತೇನೂ ಶುರು ಆಗ್ಯೆತಲ್ಲಪ್ಪ. ಆ ಹುಡುಗಿ ನಿನ್ನ ಹೆಸರು ಹೇಳ್ತಾಳಂತೆ. ನೀನು ಅವತ್ತೆ ಬಡಕೊಂಡೆ ಹುಷಾರಿರೋ ನಿನ್ನ ಬಿಡಸಾಕ ಎಲ್ರೂ ಕಿತಬಿ ಮಾಡಾಕ ಹತ್ಯಾರಂತ" ಅಂದ." "ನಾನಾ ಏನ್ಮಾಡ್ಲಿ ಹೇಳು ಉದ್ದೇಶ ಇಟ್ಕೊಂಡು ಒಂದು ಘಟನೆಯನ್ನೆ ನನ್ನ ವಿರುದ್ಧ ಸೃಷ್ಟಿ ಮಾಡ್ತಾರಂದ್ರ ಎಷ್ಟು ಬುದ್ಧಿವಂತ್ರು ಇರಬೇಕು? ಪ್ರಭು ನಿರಾಶೆಯಿಂದ ಹೇಳಿದ. "ಬೇಜಾರಾಗಬ್ಯಾಡ ಆಗ್ಲಿ ಬಂದಿದ್ದನ್ನ ನೋಡಾನಂತ ನಿನ್ನ ಹಳೆ ಕೇಸಿಗ, ಎಲ್ಲಿ ಟೈಟ್ ಮಾಡಬೇಕೋ ಅಲ್ಲಿ ಟೈಟ್ ಮಾಡೀನಿ ಅವರು ನಿನ್ನ ಸುದ್ದಿಗೇನು ಬರೋದಿಲ್ಲಾ" ಅಂದ. ಪ್ರಭುಗ ತಲಿ ಬುಡಾ ಅರ್ಥ ಆಗಲಿಲ್ಲಾ, ಕೇಳಬೇಕು ಅನಿಸಲಿಲ್ಲಾ.

ಕುಳ್ಳಿಗ ಗೊತ್ತಾತು. ತಾನೇನಾದರು ಸುದ್ದಿ ಹೊರಗ ಬಿಟ್ರ ತನ್ನ ಮ್ಯಾಲ ಬರತೈತಿ ಅಂದು ವಿಷಯವನ್ನ ಎಷ್ಟು ಸಾಧ್ಯ ಅಷ್ಟನ ತಣ್ಣಗ ಮಾಡಾಕ ನೋಡಿದ. ಶೆಟ್ಟಿ ಎಲ್ಲರ ಬಾಯಿ ಮುಚ್ಚೊ ಕೆಲಸ ಮಾಡ ತೊಡಗಿದ. ಪ್ರಿನ್ಸಿಪಾಲರಿಗ ಖುಷಿ ಆಗಿತ್ತು. ಪ್ರಭುಗ ಮದ್ಲೆ ಅನ್ಸಿತ್ತು. ಇದು ಹಿಂಗೆ ಆಕೈತಿ ಅಂತ, ಆದ್ರ ಪಾಪ ಆ ಹುಡುಗಿ ಕಾಲೇಜು ಬಿಟ್ಟು ಮನಿಯೊಳಗ ಕುಂದ್ರಬೇಕಾತು. ದೊಡ್ಡ ಮನಿತನದ ಹುಡುಗಿ ಇರಬೇಕು. ಬಡವರ

ಹೆಣ್ಣಾಗಿದ್ರ ಇಡಿ ಕಾಲೇಜ ತುಂಬೆಲ್ಲಾ ಗುಲ್ಲೆದ್ದು, ಅಕಿ ಜೀವನಾನೇ ಹಾಳಾಗಿ ಹೊಕ್ಕಿತ್ತು. ಬಡವರ ಮತ್ತು ಉಳ್ಳವರ ನಡುವೆ ವ್ಯತ್ಯಾಸ ಇಟೆ. ಇವರು ಮಾಡಿದ್ದೆಲ್ಲಾ ಸುದ್ದಿ ಅಕ್ಕಾವ, ಅವರು ಮಾಡಿದ್ದೇಲ್ಲಾ ಮುಚ್ಕೊಂಡ ಹೊಕ್ಕಾವ, ಜಗತ್ತೆ ಹಿಂಗಿರೋ ಮುಂದ ನನ್ನಂತೋರ ಏನ ಮಾಡಾಕ ಆದೀತು. ಎಲ್ಲಿವರಿಗ ನಾವು ಹಣದಾಗ ಶ್ರೀಮಂತ್ರಾಗೋದಿಲ್ಲೋ ಅಲ್ಲಿ ತನಕ ಈ ಬೂತಗಳೆಲ್ಲಾ ಬೆನ್ನು ಹತ್ತೋದನ್ನ ಬಿಡೋದಿಲ್ಲಾ, ಹಣ ಸುಲಭವಾಗಿ ದಕ್ಕೋದಿಲ್ಲಾ, ಯಾರಾದಾದ್ರು ತಲಿ ತಗಿಬೇಕು, ಮೋಸ ಮಾಡಬೇಕು, ಗಂಟು ಹಾಕಬೇಕು, ಆ ಕೆಲ್ಸ ಸುಲಭ ಅಲ್ಲ ಯಾಕಂದ್ರ ಒಣ ಪ್ರತಿಷ್ಟೆಯಿಂದ ಆದರ್ಶ ಅಂತೆಲ್ಲ ಮಾತಾಡಿ ಕೊಂಡು ನಮ್ಮ ಹತ್ರ ಇರೋ ದೌರ್ಬಲ್ಯವನ್ನ ಮುಚ್ಕೊಳ್ಳಾಕ ನೋಡ್ತೀವಿ, ಹೋರಾಡೋ ಪ್ರವೃತ್ತಿಗಿಂತ ಒಪ್ಕೊಂಡು ಹೋಗೋ ಪ್ರವೃತ್ತಿಯಿಂದಲೇ, ಮಂದಿ ಕಣ್ಣಿಗ ಬಿಳೋದು.

ಶೆಟ್ಟಿ ಒಳ್ಳೆಯವನಾಗಿ ಮಾತಾಡಿಸಿದ. ಉಮ್ಮಣ್ಣ ಭಾರಿ ಗೌರವ ಕೊಡ ಹತ್ತಿದ ಎಲ್ಲೋ ಎಡವಟ್ಟಾಗಿರಬೇಕು ಅಂದ್ಕೊಂಡ ಪ್ರಭು. ಇಲ್ಲಾಂದ್ರ ಗ್ರಹಗತಿ ಎಲ್ಲಾ ಹೇರಾಫೇರಿಯಾಗಿರಬೇಕು. ಬೆಕ್ಕು ಸನ್ಯಾಸ ಸ್ವೀಕರಿಸಿದಂಗಾತು ಅನಿಸಿತು. ಒಂದೆಲ್ಡಸಾರಿ ಸುಮ್ಮಿ ಮಾತಾಡಿಸಿದ್ನು. ಮಾತಿನೊಳಗ ಅವನು ಆಸಕ್ತಿ ತೋರಿಸಲಿಲ್ಲಾ, ಅವನು ಏನ ಮಾಡಿದರೂ ಎದ್ದು ಕಾಣ್ತಿತ್ತು. ಅವಾಗವಾಗ ಬದುಕು ನಿಂತ ನೀರು ಅನಿಸುತ್ತಿತ್ತು. ಅವನ ಆವೇಷ ಪೂರಿತ ಭಾಷಣಗಳು, ಮಂದಿ ನಡು ನಿಂತು ಅವರ ಪರಿಸ್ಥಿತಿ ಕುರಿತು ಅವರಿಗ ಹೇಳೊ ಧಾಟಿ, ಅವನ ಶಿಷ್ಯರಗುಂಪು, ಸದಾ ಚಟುವಟಿಕೆಯಿಂದ ಇರ್ತಿದ್ದ ಅವನು, ಹಲ್ಲು ಕಿತ್ತ ಹಾವಿನ ಹಂಗಾಗಿದ್ದ. ದೇಗಲೂರಿಗೆ ಬಂದ ನಂತರ ತಾನಾಗಿ ಏನನ್ನು ಮಾಡಲಿಲ್ಲಾ, ಸಂಘಟನೆಗಳೊಳಗ ನಂಬಿಕೆ ಕಳ್ಕೊಂಡಿದ್ದ. ಹೋರಾಟ ಯಾಕ? ಅನಿಸಿತು. ಪ್ರೊ.ಕಂಪಣ್ಣ, ಅವನಿಗೆ ಮಾರ್ಗದರ್ಶಕರಾಗಿದ್ದರು ಅವನ ನೆಚ್ಚಿನ ಗುರು ಪ್ರೊ.ಕಂಪಣ್ಣ ಒಳಗೊಂದು ಹೊರಗೊಂದು ಮಾಡಿ. ಅವಕಾಶ ಗಿಟ್ಟಿಸಿಕೊಳ್ಳೋದನ್ನ ನೋಡಿದಾಗ ಈ ಹಾದಿಯೇ ಬ್ಯಾಡ ಅನಿಸಿಬಿಟ್ಟಿತ್ತು. ಯಾರ ಕಣ್ಣಿಗೂ ಬೀಳದಂಗ ತನ್ನ ಪಾಡಿಗ ತಾನೊಬ್ಬನೇ ಇರಬೇಕು. ಬದುಕನ್ನ ಅನುಭವಿಸಬೇಕು. ಹುಲಿವೇಷ ಹಾಕೊಂಡು ಮಂದಿ ಯನ್ನ ಹೆದರಿಸೋ ಆಟ ಮಾಡಬೇಕು ಯಾಕೆ? ಅನಿಸಿತು. ಆ ಮಂದಿಯನ್ನ ದೂರದಿಂದ್ಲೆ ನೋಡ್ತಾ, ಅವರ ಚಟುವಟಿಕೆ ಗಮನಿಸಿದರೆ ಸಾಕು ಅನಿಸಿತು.

ಒಂಟಿ ಹಕ್ಕಿ ಹಂಗ ಸ್ವಚ್ಛಂದವಾಗಿ ದೂರದ ವರಿಗ ಹಾರಬೇಕು ಅನಿಸಿತು ಗಿಡಗದ ಭಯ. ಅವತ್ತಿನ ಆ ಘಟನೆಯ ನೆನಪು ಮಾಡಿಕೊಂಡ ಹೆದರಿಕೆಯಾತು. ಖೋಲಿಯೊಳಗ ಮುದಡಿಕೊಂಡು ಕುಂತ. ಲೆನಿನ್ ಬಗ್ಗೆ ಒದಬೇಕು ಅನಿಸಿತು. ಸಮತಾದ ಬೀಜ ಬಿತ್ತದ, ಆ ನೆಲ ಅದಕ್ಕ ಪ್ರಸ್ತುತವಾಗಿತು. ಈ ನಾಡು ಅದಕ್ಕ ಅವಕಾಶ ಯಾವತ್ತು ಕೊಡಂಗಿಲ್ಲಾ, ನನ್ನಂತಹ ಹುಚ್ಚು ಕನಸುಗಾರರ ಕನಸು ನನಸಾಗದೆ ಭ್ರಮನಿರಸನ ಹೊಂದಿ ಅವಿವೇಕಿ ಅನಿಸಿಕೊಂಡಾರ. ಅಂದಿನ ನಮ್ಮ ಆಂದೋಲನದೊಳಗ ಸಮಾನ ಮನಸ್ಕರಂತ ಅಂದ್ಕೊಂಡಿದ್ದವರೆಲ್ಲಾ ಮಾಡಿದ್ದಾರೂ ಏನು ಸಮತಾದ ಮ್ಯಾಲ ನಂಬಿಕೆ ಇದ್ದ ಬುದ್ದೇಗೌಡ ಸಿಕ್ಕಂಗ ರೊಕ್ಕ ಮಾಡ್ಕೊಂಡ. ಸಿಂಗಾರ ಸುಂಕಾಪುರ ಸರ್ಕಾರದ ರೊಕ್ಕದಾಗ ಹತ್ತ ವರ್ಷ

ಉಡ್ಡೋವಷ್ಟು ಸೀರೆಗಳನ್ನ ಹೆಂಡ್ತಿಗ ತಗೊಂಡಿದ್ದನ ನೋಡಿದ್ದೆ. ಸಿದ್ಧಾಂತಗಳೆಲ್ಲಾ ಸುಳ್ಳು ಅನಿಸಿದವು. ಸಿದ್ಧಾಂತ ಸುಳ್ಳೆ ಬಡಬುಡಿಕೆಯವನ ಬುಡವಡಕೆಯಂತೆ ಹಸಿ ಹಸಿ ಸುಳ್ಳು, ತನ್ನ ಪರಿಮಿತಿಯೊಳಗ ಮಾಡಬೇಕಾದ್ದನ್ನ ಬಿಟ್ಕೊಂಡು, ಬದ್ಧನಾಗದೆ, ಹುಡುಗಿಯರ ಸಂಗಡ ಮಾಡಿದಾದ್ರು ಏನು? ಅವಾಗ ಎಲ್ಲಿ ಹೋಗಿತ್ತು ಅವನ ಸಿದ್ಧಾಂತ. ಎಲ್ಲಾ ನೆನಪು ಅವನ ಕಣ್ಣಮುಂದೆ ಸುಳಿದು ಮಾಯವಾಗತೊಡಗಿದವು.

ಯಾರೋ ಒಳಗ ಇಣುಕಿ ನೋಡಿದಂಗಾತು. 'ಯಾರು?' ಅಂದ, ಉತ್ತರ ಬರ್ಲಿಲ್ಲಾ, ಎದ್ದ ಬಾಗಿಲವರಿಗ ಬಂದ, ಯಾರೂ ಕಾಣಲಿಲ್ಲಾ, ದೂರದಾಗ ಹುಡುಗಿ ಹೊಂಟಿದ್ಲು. ಆಂಟಿ ಹೊರಗ ಬಂದಿದ್ರು. 'ಏನಾಯ್ತು ಮೈಸನ್' ಅಂದ್ರು, " ಏನೂ ಇಲ್ಲಾ ಮದರ್, ಯಾರೋ ಒಳಗ ಇಳಾಕಿ ನೋಡಿ ಹೋದ್ರು, ಹಿಂದೆ ಬಂದೆ ಯಾರು ಇರ್ಲಿಲ್ಲಾ" ಅಂದ. "ಯಾರೋ ಇರಬಹುದು ಬಿಡು," ಅಂದು ಹೋದ್ರು. ಒಳಗ ಬಂದು ಕುಂತ, ಯಾಕೋ ಮನಸಿಗ ಕಿರಿಕಿರಿ ಅನಿಸಿ ಎದ್ದು ಬಟ್ಟೆ ಹಾಕ್ಕೊಂಡು. ಮಾಬೂಲಿ ಅಂಗಡಿ ಕಡೀಗ ಹೆಜ್ಜೆ ಹಾಕಿದ. ಯಾರೋ ಹಿಂದಿಂದ ಬರ್ತಿದ್ದಂಗ ಅನಿಸಿತು. ಯಾರೋ ಅಪರಿಚಿತ, ಇದ್ದೊಂದು ಜಿಲ್ಲೆ, ನೂರಾರು ಮಂದಿ ಬರ್ತಾರ ಹೊಕ್ಕಾರ ಅಂತಾದ್ರಾಗ ನಾಯಾಕ ಸುಮ್ನೆ ತಲಿಕೆಡಸ್ಕಂಡೀನಿ" ಅಂತ ನಕ್ಕ, ಮಾಬೂಲಿ ಕದಾ ಹಾಕಿದ್ದ, ಯಾಕಿವತ್ತು ಇಷ್ಟೊತ್ತಾದ್ರು ಕದ ತಗದಿಲ್ಲಾ ಉರಾಗ ಇರ್ಲಿಕ್ಕಿಲ್ಲಾ, ಅಂದ್ಕೊಂಡ, ಕಾಲೇಜಿಗ ಹೋಗಬೇಕು ಪಸ್ಟ್ ಕ್ಲಾಸ್ ಐತಿ, ಖೋಲಿ ಕಡೀಗ ಬಂದು, ಪುಸ್ತಕ ಹಿಡ್ಕೊಂಡು, ದಿನಾ ಹೋಗ್ತಿದ ದಾರಿ ಬಿಟ್ಟು, ಸ್ವಲ್ಪ ಸುತ್ತಾದ್ರು ಜನ ಅಡ್ಡಾಡೋ ಮುನ್ಸಿಪಾಲ್ಟಿರೋಡ್‌ನಲ್ಲಿ ಹೊಂಟ. ಅಯ್ಯಂಗಾರ್ ಬೇಕರಿ ದಾಟಿ ಮುನ್ಸಿಪಾಲ್ಟಿ ಮುಂದಿಂದ ಬೆನಕನಳ್ಳಿ ಮೆಡಿಕಲ್ಸ್ ಅಂಚೆ ಕಛೇರಿ ದಾಟಿ, ಕಾಲೇಜಿನ ಆವರಣದೊಳಗ ಕಾಲಿಟ್ಟ. ಹಿಂದಿಂದ ಬಂದ ಕಾರು ವೇಗದಿಂದ ಬಂದಿದ್ದೆ ಅವನ ಪಕ್ಕದಾಗ ನಿಂತಿತು. ಪ್ರಭು ಹೆದರಿ ಪಕ್ಕಕ ಸರದ, ಒಳಗಿಂದ ಯಾರೋ ಇಳಿದ್ರು. ಪ್ರಭು ದೊಡ್ಡ ಹೆಜ್ಜೆ ಹಾಕಿ ಮುಂದಕ ಹೋದ. "ಏ ನಿಲ್ಲೋ" ಅಂದ, ಒಬ್ಬ, ಪರಿಚಿತ ಧನಿ, ಹಿಂದಕ ತಿರಗಾಕ ಹೆದರಿಕಿ ಆತು, ಪ್ರಭು ತಿರುಗಿದ, ದುರ್ಗೇಶಿ, ಜಿಂದಾಲು ಆ ಅಪರಿಚಿತ ಡಾ. ಹಳ್ಳೆಪ್ಪನವರ್ ಅವರೊಂದಿಗ ಮತ್ತೊಬ್ಬ ಸುರದ್ರೂಪಿ ಯುವಕ ನಿದ್ದ. ನಿಮಿಷದೊಳಗ ಪ್ರಭು ಊಹಿಸದಂತ ಘಟನೆ ನಡದ ಹೋತು, ಜಿಂದಾಲು ಓಡಿ ಬಂದವನೆ ಪ್ರಭುನ ಅಂಗಿ ಹಿಡದು ನಿಲ್ಸಿದ, "ಏ ಯಾಕೋ ಜಿಂದಾಲು ಇರ್ದೇನು ಶಿರಗೂರ ಅಂದ್ಕೊಂಡಿ ಏನು?" ಕೇಳಿದ. "ಮಗನೆ ಮಾಡೋದ ಮಾಡಿ ಮತ್ತ ಬ್ಲಾಕ್ ಮೇಲ್ ಮಾಡ್ತಿ ಏನೋ," ಹನಮೇಶಿ ಗುಡುಗಿದ. "ಯಾಕಲೇ ಹನಮೇಶಿ, ಒಂದ ಬಾಟಲ ಸರಾಯಿಗ ಬ್ಲಾಕ್ ಮೇಲ್ ಮಾಡೋ ನೀನು ಅಂದ್ಕೊಂಡಿ ಏನು" ಅಂದ ಪ್ರಭು. "ಅವನಿಗೇನು ನೋಡ್ತೀರಿ ಹಾಕ್ರಲೇ" ಅಂದ ಡಾಕ್ಟರ ನಾಕ ಜನ ಸೇರ್ಕೊಂಡು ಹಿಗ್ಗಾಮುಗ್ಗ ಜಜ್ಜ ತೊಡಗಿದರು. ಪ್ರಭುಗ ಏನೂಂತ ತಿಳಿಲಿಲ್ಲಾ. ಹುಡ್ರೆಲ್ಲಾ ನೋಡ್ತಿದ್ರು. ಕುಳ್ಳಿ ದೂರದೊಳಗ ನಿಂತು ಬೆಂಡಿ, ಉಮ್ಮಣ್ಣಾ ಸುದ್ದಿ ಹೇಳಿ ಕರ್ಕೊಂಡು ಬರಾಕ ಓಡಿದ.

ಪುನಾ-ಬೆಂಗಳೂರು ರಸ್ತೆಯಲ್ಲಿ ಓಡ್ತಿದ್ದ ಕಾರು ಯಾವಕಡಿಗ ಹೊಂಟೈತಿ ಅನ್ನೋದು

ಅವನಿಗ ತಿಳಿಲಿಲ್ಲಾ, ಸೈಕಲ್ ಚೈನು, ಕೋಲಿನ ಹೊಡ್ತ ತಲಿಗ ಮೀನ ಖಂಡಕ ಬಿದ್ದಿದ್ರಿಂದ ಪ್ರಭುಗ ಎಚ್ಚರ ತಪಿತ್ತು, ಬಾಯಿ ಒಣಗಿತ್ತು. ತಲಿ ಹೊಡುದು ರಕ್ತ ಜಿನಗುತ್ತಿತ್ತು. ಮೈ ನೋವು ಹೆಚ್ಚಾತು, "ಅವ್ವ" ಅಂದ, "ಅವ್ವ ಹಲ್ಕ ಕೆಲ್ಸ ಮಾಡೊ ಮುಂದ ಎಲ್ಲೋಗಿದ್ಲು ನಿಮ್ಮವ್ವ" ಅಂತ ಕಾಲಿಂದ ಜಾಡಿಸಿ ಒದ್ದ ಜಿಂದಾಲು ಅವನನ್ನ ಹೆಡಮುರಗಿ ಕಟ್ಟಿ ಕಾಲಿಡೋ ಜಾಗದಾಗ ಎಸದು ಅವನ ಮ್ಯಾಲ ಕಾಲಿಟ್ಕೊಂಡು ಡಾಕ್ಟರ್ ಹನಮೇಶಿ ಪಕ್ಕ ಕುಂತ್ಕೊಂಡಿದ್ರು."

ಮೂವಾರು ಜೋರಾಗಿ ಚರ್ಚೆ ನಡಸಿದ್ರು. ಹನಮೇಶಿ 'ಕುಂದೆ ಬಿಡಾನ್ರಿ' ಅಂದ. ಡಾಕ್ಟರ್ 'ಬ್ಯಾಡ್ರೋ ಹಲ್ಕ ನನಮಗ ನನ್ನ ಹೆಸರು ಹೇಳಿ ಬದಕೊಳ್ಳಿ, ಆದ್ರ ಅವನ ಕಾಲ ಮಾತ್ರ ಮುರಿದು ಬಿಡ್ರಿ, ನನ್ನ ಮಗಳ ಜೀವನ ಹಾಳಮಾಡಾಕ ಹೊಂಟಾನ. ಅವತ್ತೇ ಇವನ್ನ ಮತ್ತು ಆ ಬಿದ್ದಪ್ಪ ಕೊಂದು ತ್ವಾಟದೊಳಗ ಮುಚ್ಚೊ ವಿಚಾರ ಮಾಡಿದ್ವಿ, ಕುಬಸಣ್ಣನ ಮಾತು ಕೇಳಿ ಬಿಟ್ವಿ" ಅಂದ. "ಇಂತೋರು ಬದಕಬಾರ್ದು ಅಣ್ಣ ಪೂಲಮ್ಯಾಲ ಹಳ್ಳಿ ಹತ್ರದ ಪೂಲ ಮ್ಯಾಲಿಂದ ಬಿಸಾಕಿದ್ವಿ ಅಂತಂದ್ರ ಜಾಲಿಯೊಳಗ ಬೀಳತೈತಿ ಬಾಡಿ, ನೀ ಹೂಂ ಅಂದ್ರ ಆತು" ಅಂದ ಜಿಂದಾಲು "ಹೋಗಲಿ ಬಿಡ್ರಿ ಕಾಲು ಮುರುದು ಬಿಸಾಕ ಬಿಡ್ರಿ, ಇಂತೋರು ಹಿಂಗ ಸಾಯಿಬಾರದು. ಜೀವನದ ತುಂಬ ಮಾಡಿದ ತಪ್ಪು ತಿಳಿಬೇಕು. ಇವನು ನನಗ ಪತ್ರ ಬರದಾನ, ತನ್ನ ಹಳೆಯ ದಾಖಲೆಗಳನ್ನ ಕಳಿಸ್ಯಾನ" ಅಂದ ಆತ. ಜಿಂದಾಲು ಅವನ ಕೈಯಾಗಿದ ಕೊಲಿಂದ, ಮಣಕಾಲಿಗ ಜೋರಾಗಿ ಹೊಡದ, ನೋವಿಂದ ಕೂಗಿದ ಪ್ರಭು, ಹಾಡ ಹಗಲೇ ನಡದಿತ್ತು ಇದೆಲ್ಲಾ. ಪಕದ್ದಾಗ ಕೆಲ್ಸ ಮಾಡ್ತಿದ್ದ ರೈತರು, ಒಂದೇ ಸಲ ಬಂದ ಭಯಾನಕ ಕೂಗನ ಕೇಳಿ ಹೌಹಾರಿದ್ರು. ಓಡಿ ಬಂದು ನೋಡಿದ್ರ ಎಲ್ಲಿ ಏನು ನಡೀತು ಅನ್ನೋದೆ ತಿಳಿಲಿಲ್ಲಾ.

ಕಾಲೇಜಿನೊಳಗ ಭಯಾನಕ ವಾತಾವರಣ ನಿರ್ಮಾಣ ಆಗಿತ್ತು. "ಅವನು ಮಾಡಿದಕ್ಕ ಸರಿಯಾದ ಶಿಕ್ಷೆ ಆತನೋಡ್ರಿ", ಅಂತ ಎಲ್ಲಾರ ಮುಂದ ಹೇಳ್ತಿದ್ದ ಕುಳ್ಳಿ ಒಂದು ದೊಡ್ಡ ಕತಿ ಮಾಡಿ", ನಮ್ಮ ಹುಡುಗಿಯರನ್ನ ಮದವಿ ಮಾಡ್ಕೊಂಡು ನಮ್ಮ ಜಾತಿ ಮ್ಯಾಲ ಸೇಡ ತೀರಿಸ್ಕೊಂತೀನಿ ಅಂತಿದ್ದ ಅವನಿಗ ಸರಿಯಾದ ಶಿಕ್ಷೆ ಆತು" ಅಂತೇಳಿ ಸಾರ ತೊಡಗಿದ ಉಮ್ಮಣ್ಣ. ಪ್ರಿನ್ಸಿಪಾಲರಿಗ ತಡವಾಗಿ ಸುದ್ಧಿ ಮುಟ್ಟು "ಒಂದ ನಿಮಿಷ ಸುಮ್ಮನಾದ್ರು, ಎರಡ ಸಿಗರೇಟು ಸೇದಿದ್ರು ಸಮಾಧಾನ ಆಗಲಿಲ್ಲಾ". ಜಾತಿ ಮ್ಯಾಲಿನ ಚರ್ಮ ಸುಲಿದು ಹೊಸ ಚರ್ಮ ಬಂದಾಗ ನನ್ನ ಹಳೆ ಜಾತಿ ಹೋಗಿ ಹೊಸ ಜಾತಿ ಬಂತು ಅಂತೇಳಿ ಅಂದ್ರೂ ಆ ಜಾತಿ ಅನ್ನೋದು ಅಷ್ಟು ಸುಲಭದಿಂದ ಹೋಗೋದಲ್ಲಾ". ಕುರ್ಚಿಗ ವರಗಿಕುಂತ್ರು, ಎದಿಯೊಳಗ ಸಣ್ಣಗ ನೋವು ಕಾಣಿಸಿಕೊಂಡಿತು ಮನಸು ಭಾರ ಅನಿಸಾಕ ಹತ್ತು. "ಪಾಪ ಜೀವನದಾಗ ನೊಂದಿದ್ದ". ಉಸಿರುಬಿಟ್ರು, ಎಷ್ಟೋ ಮುಗ್ದ ಹುಡುಗಿಯರು ಜಾತಿ ಕಾರಣಕ ಶೀಲ ಕಳ್ಕೊಂತ್ತಾರ. ಎಷ್ಟೋ ಗುಡ್ಲು ಸುಟ್ಟು ಭಸ್ಮ ಆಕ್ಯಾವ ಈ ಸವರ್ಣೀಯರ ಜಗಳದೊಳಗ. ಎಷ್ಟೋ ಬದಲಾವಣೆ ಕಂಡೀವಿ, ಕಲ್ಯಾಣದಾಗ ಹನ್ನೆಲ್ಡನೇ ಶತಮಾನದೊಗ ಕ್ರಾಂತಿ ಆದ್ರು ಸ್ಥಿತಿ ಬದಲಾಗಲೇ ಇಲ್ಲಾ". ಅವರ ವಿಚಾರಕ ಕೊನೆ

ಅನ್ನೋದೆ ಇರ್ಲಿಲ್ಲಾ. ಪಾಟೀಲ ಗಡಬಡಿಯಿಂದ ಒಳಗ ನುಗ್ಗಿದ ಪ್ರಿನ್ಸಿಪಾಲರಿಗ ಏನು ಹೇಳಬೇಕೊ ತಿಳಿಯದೆ ಕಕ್ಕಾಬಿಕ್ಕಿ ಆದ್ರು. ಹಂಡು ಪಾಟೀಲ ಸ್ವಲ್ಪ ಹೊತ್ತು ಮಾತಡಲೇ ಇಲ್ಲಾ". ಏನ ವಿಚಾರ ಮಾಡೀರಿ ಸರ್" ಕೇಳಿದ. "ಏನು ಮಾಡ್ಲಿ ಹೇಳಪ್ಪ" ಸುಮ್ಮನಾದ್ರು "ಕಂಪ್ಲೇಂಟ್ ಕೊಟ್ರ ಹ್ಯಾಂಗ ಸಾರ್", ಅಂದ ಪಾಟೀಲ. "ಸಾಕ್ಷಿ ಹೇಳೋರು ಯಾರು?" "ನಿಮ್ಮ ಕಾಲೇಜಿನೊಳಗ ಎಲ್ಲಾ ನಡದೈತಿ, ಹುಡುಗರು ಹುಡುಗಿರು ನಿಮ್ಮ ಮೇಷ್ಟ್ರುಗಳು ನೋಡ್ಯಾರ ಅವರ್‍ಯಾರು ಹೇಳ್ಲಿಕಿಲ್ಲಾ?" ಅವರನ್ನೆ ನೋಡ್ದ ಪಾಟೀಲ. "ಇಲ್ಲ ಯಾರು ಹೇಳೋದಿಲ್ಲಾ, ಇಲ್ಲಿಂದ ಕೆಲಮಂದಿ ಸಪೋರ್ಟ್ ಅದಾರ, ಅಂದಮ್ಯಾಲೆ ವಿಚಾರ ಮಾಡು" ಪಾಟೀಲ ಸ್ವಲ್ಪ ಹೊತ್ತು ಸುಮ್ಮನಾದ.

ಹಂಡುಪಾಟೀಲ ಮಾಬೂಲಿಗ ಹೇಳಿ ಅವನ ಗೆಳೆಯನ ಹಳೆ ಸ್ಕೂಟರ್ ತಗೊಂಡು ದೇಬೂರಿನ ಸುತ್ತ ಅಡ್ಡಾಡಿದ. "ಹಂಡಣ್ಣ ಕರ್ಜಿಗಿ ಕೋಡಿಗ ನಡಿ ಅಲ್ಲಿ ಜಾಲಿ ಐತಿ, ಅಲ್ಲೆನಾರ ಬಿಟ್ಟು ಹೋದಗಿದ್ದಾರೇನ", ಅಂದ ಮಾಬೂಲಿ ಸಾಬ್, ಕರ್ಜಿಗಿಕೋಡಿ, ಹದಡಿ ರಸ್ತೆ, ಶಿರಗೂರ ರಸ್ತೆ, ಅಡ್ಡಾಡಿ ಸಕಾಗೋಯ್ತು. ರಾತ್ರಿ ಕತ್ಲಾದಿಂದ, ಇಬ್ರೂ ವಾಪಾಸಾದ್ರು. "ಸುಮ್ನೆ ಕೊಡೋ ಹಂಗ ಕಂಪ್ಲೇಂಟ್ ಕೊಟ್ಟೆ, ಬಿಡಣ್ಣ" ಅಂದ ಆತ. "ಯಾರಿಗ ಕೊಡಬೇಕು, ಅವನ ಪರವಾಗಿ ಸಾಕ್ಷಿ ಹೇಳಾಕ ಒಬ್ಬರೂ ಇಲ್ದಿರೋವಾಗ ನಾವು ಹೇಳುವುದನ್ನು ಯಾರ ನಂಬ್ತಾತರ ಹೇಳು, ನೂರಾಎಂಟ ಪ್ರಶ್ನೆಗಳಿಗ ಉತ್ತರ ಕೊಡಾಕ ಆಗೋದಿಲ್ಲಾ" ಪಾಟೀಲನ ಧನಿಯೊಳಗ ನೋವಿತ್ತು". ಅವನ್ನ ಸುಮ್ನೆ ಕರ್ಕೊಂಡ ಬಂದೆ, ಎಲ್ಲಾದ್ರು ಕೂಲಿನಾಲಿ ಮಾಡಿ ಬದಕ್ಕೊಂತಿದ್ದ ಅವನೊಬ್ಬ ಪ್ರತಿಭಾವಂತ ಜೀವನಾನೇ ಹಾಳಾಗ ಬಾರ್ದಂತ ಹಿಂಗ ಮಾಡ್ದೆ ಅದು ಬೇರೆ ಆಗಿಹೋತು". ಪಾಟೀಲ ತಪ್ಪಿಗ ಪರಿತಪಿಸ ತೊಡಗಿದ.

ಏನೂ ನಡೆದಿಲ್ಲಾ ಅನ್ನೊ ಹಂಗಿತ ವಾತಾವರಣ, ನಿಸರ್ಗದಾಗ ಎಲ್ಲಾ ಹಿಂಗೆ, ಯಾರೊಬ್ಬರ ಇಲ್ಲದಿರುವಿಕೆಯಿಂದ ನಿಂತ ಹೋಗೋದಿಲ್ಲಾ, ಯಾರು ಯಾರ ಬಗ್ಗೆನೂ ವಿಚಾರ ಮಾಡೋದಿಲ್ಲಾ. ಮನುಷ್ಯನ ಅಂತಃ ಸತ್ವ ಕ್ಷೀಣಿಸ್ತಾ ಹೊಗ್ತಾ ಇದೆ, ತನ್ನ ಸುತ್ತಲ ಬದುಕಿನೊಡನೆ ಸಂಬಂಧ ಕಳಚಿ ಕೊಳ್ತಾ ಅದಾನ, ತನ್ನ ಸ್ವಾರ್ಥವೇ ಸಾಕವನಿಗೆ, ಮಾನವೀಯ ಗುಣದ ಇರುವಿಕೆ ಗುರ್ತಿಸಬೇಕು. ಇರುವಿಕೆಯೇ ಸುಳ್ಳು ಅಂತ ತಿಳ್ಕೊಂಡಿದ್ರು ಎಲ್ಲಾ ಡೊಂಬರಾಟ. ಎಷ್ಟು ಹುಡುಗರಿಗೆ ಪಾಠ ಹೇಳಿ ಜೀವನ ರೂಪಿಸಿದ್ದೀನಿ ಅಂತ ತಿಳ್ಕೊಂಡೀವಿ ನಾನು. ಊರಾಗ ಹೋದಾಗಲೆಲ್ಲಾ ನಮಸ್ಕಾರ ಹೇಳಿ ಸಾಕಾಗ ಹೋಗುತ್ತೆ. ಎಲ್ಲಾ ಏನು ಹಂಗಾರ, ಪ್ರಿನ್ಸಿಪಾಲರಿಗೆ ವಿಚಿತ್ರ ಅನಿಸಿತು. ನಾನು ಮನುಷ್ಯ, ಒಂದೆರಡು ಘಳಿಗೆ ಪರಿತಪಿಸೋದು ಬಿಟ್ಟು ಮತ್ತೇನು ಮಾಡಲಾರೆ, ಒಂದು ಸಾರಿ ಉಸರುಬಿಟ್ರು, ಮೌನ ಆವರಿಸಿತು.

ಶೆಟ್ಟಿ ಮತ್ತೊಂದು ನಾಟಕ ಆರಂಭಿಸಿದ್ದ. "ನಮ್ಮ ಲಕ್ಚರನ್ ಯಾರೋ ಕಿಡ್ನಾಪ್ ಮಾಡ್ಕೊಂಡ ಹೋಗ್ಯಾರ, ನಾವೆಲ್ಲಾ ಕಾಲೇಜ ಬಂದ ಮಾಡಿಸಿ ಕಂಪ್ಲೇಂಟ್ ಕೊಡಬೇಕು", ಅಂತ ಎಲ್ಲಾ ಹುಡುಗರನ್ನ ಕೂಡಿಸಿಕೊಂಡು ಭಾಷಣ ಮಾಡಿದ. ಒಂದಿಬ್ಬರು ಹೂಂ ಅಂದ್ರು, ಮತ್ತೊಂದಿಬ್ರು ಊಹೂಂ ಅಂದ್ರು, ಪ್ರಿನ್ಸಿಪಾಲರಿಗೆ ಸುದ್ದಿ ಮುಟ್ಟಿ ಹೋದಾಗ

ಶೆಟ್ಟಿ, ನಡುವೆ ನಿಂತು ಲೀಡರ್ ಆಗಿದ್ದಾ. "ಏ ಶೆಟ್ಟಿ ಏನೋ ಅದು ದಾಂದ್ಲಿ" ಅಂದ್ರು, "ಏನಿಲ್ಲಾ ಸರ್, ಪ್ರಭುಸರ್" ಅಂದ, "ಏನಾಯ್ತು ಪ್ರಭು ಸರ್", "ನಾವು ಸ್ಟ್ರೈಕ್ ಮಾಡ್ತೀವಿ ಕಂಪ್ಲೇಂಟ್ ಕೊಡ್ತೀವಿ ಪೊಲೀಸರು ಹುಡಕ ಬೇಕಂತ ಗಲಾಟೆ ಮಾಡ್ತೀವಿ" ಅಂದ. ಇದು ಪರೀಕ್ಷೆ ಟೈಂ, "ಅವತ್ತು ನೀನು ಇದ್ದೆ ಅಲ, ಹೋಗು ಪೊಲೀಸರಿಗೆ ಹೇಳು ನಾನು ನೋಡಿನಿ ಅಂತ" ಎಲ್ಲರನ್ನ ಕೂಡಿಸ್ಕೊಂಡು, ಅವರ ಹೊತ್ತನಯಾಕ ಹಾಳ ಮಾಡ್ತಿ" ಅಂದ್ರು. "ಸರ್ ಅದು ನಾನು" ತಡವರಿಸಿದ, "ನಂಗೊತ್ತಯ್ಯ ಇದ್ರಾಗ ನಿನ್ನ ಕೈವಾಡಾನು ಐತಿ ಅಂತ, ಆದ್ರ ಸಾಕ್ಷಿ ಇಲ್ಲದಕ ನೀವೆಲ್ಲಾ ಬಚಾವ ಆಗೀರಿ, ಹೋಗು ಇನ್ನೊಂದ ಸಲ ಹಿಂಗೆಲ್ಲಾ ಹುಡುಗರ ತಲಿ ಕೆಡಸೋದ ಬ್ಯಾಡ ಕೇಳ್ತ" ಅಂದ್ರು, ಶೆಟ್ಟಿ ಅವರನ್ನ ನೋಡ್ತ. ಅವಮಾನ ಆದಂಗಾಗಿ, ಹೊಂಟ ಹೋದ.

ವಾರ ಕಳ್ದಿತ್ತು, ಎಲ್ಲೂ ಏನೂ ಸುದ್ದಿ ತಿಳಿಲಿಲ್ಲಾ, ಪಾಟೀಲ ಹುಡಕಾಟ ನಡೆಸಿದ್ದ. ಒಂದೆರಡು ಹೆಣಗಳನ್ನೂ ನೋಡಿ ಬಂದಿದ್ದು, ಅವು ಅಲ್ಲ ಅನ್ನೋದನ್ನ ಖಾತ್ರಿ ಪಡಿಸಿ ಕೊಂಡ. ಅವನು ಸತ್ತಿಲ್ಲ ಬದುಕ್ಯಾನ ಅನ್ನೋದನ್ನ ಖಾತ್ರಿ ಮಾಡಿಕೊಂಡ. ಆದ್ರ ಅವನನ್ನ ಹುಡಕೋದು ಎಲ್ಲಿ? ಸಮಸ್ಯೆ ಆತು. ಅವನು ಈ ಊರಿಗ ಬರೋದಿಲ್ಲಾ. ಒಂದವೇಳೆ ಸಾಯಿಗೊನಿಸಿದ್ರ ಮುಗದ ಹೋತು. ಭೂಮಿ ಋಣ ತೀರಿಹೋಯ್ತಿ, ದಿನ ಸಾಯೋ ನೂರ ಮಂದಿಯೊಳಗ ಅವನ್ದು ಒಂದು ದರ್ಮರಣ. ತನ್ನ ತಾ ಸಾಮಾದಾನ ಪಡಿಸ್ಕೊಂಡ. ಯಾರ ಸತ್ರೇನು ಯಾರ ಬಿಟ್ರೇನ, ಎಲ್ಲಾನು ನಡಿತೈತಿ, ಅಂತಹವನಿಗ ಹಿಂಗ ಆಗಬಾರ ದಾಗಿತ್ತು. 'ಹುಡುಗಿ' ಒಂದು ನಿಮಿಷ ಸುಮ್ಮನಾದ.

ಉಮ್ಮಣ್ಣ, ಕುಳ್ಳಿ, ಪ್ರಿನ್ಸಿಪಾಲರಿಗೆ ಕಂಪ್ಲೇಂಟ್ ಮಾಡಾಕ ಸಲಹೆ ಕೊಟ್ರು. ಅವರ ಹಿನ್ನೆಲೆ ತಿಳ್ಕೊಂಡಿದ್ರು ಪ್ರಿನ್ಸಿಪಾಲರು, ಪ್ರಯೋಜನ ಆಗೋದಿಲ್ಲಾಂತ ತಿಳ್ಕೊಂಡು ಹೂಂ ಅನ್ನದೇ ಸುಮ್ನೆ ಕಳಿಸಿದ್ರು, ಅವನ ಇಲ್ಲದಿರುವಿಕೆ ದಿನಕೊಂದು ಬಣ್ಣ ಪಡಕೊಳ್ಳಾಕ ಹತ್ತು, ಹುಡುಗಿನ ಕಟ್ಕೊಂಡ ಓಡಿ ಹೋಗ್ಯಾನಂತ ಕೆಲವರು, ಹಿಂದೆ ಎದ್ದಿದ್ದ ವಿವಾದವನ್ನ ಸುತ್ತುವರಿದು, ಆ ಹುಡುಗಿ ಅಪ್ಪ ಮಾಡ್ಸಿರಬೇಕಂತ ಕೆಲವರು ಮಾತಾಡ್ತಿದ್ರು. ಜನರ ತಲಿಯೊಳಗ ಹುಟ್ಕೊ ವಿಚಾರಗಳು ಬಾಯಿಂದ ಬಾಯಿಗ ಭಿನ್ನ ವಿಭಿನ್ನ ರೂಪ ತಳೆದು ವಿಕಾರಗೊಳ್ತಾ ಹೋಗ್ತಾ ಇತ್ತು ಸುದ್ಧಿ.

ಸಾವು ನಿಶ್ಚಿತವಾಗಿತ್ತು. ಮೈತುಂಬ ಮುಳ್ಳುಗಳು ನೆಟ್ಟಿದ್ವು. ಗಂಟಲು ಗರಗರ್ ಎಳಿತ್ತಿದ್ದ. ಕಾಲು ಸ್ವಾಸ್ತ್ಯ ಕಳ್ಕೊಂಡಿದ್ವು, ಹೆಣ ಕೊನೆಯ ಉಸರಿಗಾಗಿ ಹಾತೊರೆಯ ತೊಡಗಿತು. ರೈತರು ಕೂಗು ಬಂದ ಕಡಿಗ ದೌಡಾಯಿಸಿದ್ರು, "ಹುಡುಕ್ರಲೇ, ಇಲ್ಲೇ ಎಲ್ಲೋ ಬಿಸಾಕಿರಬೇಕು" ಅಂದ ಮುದುಕ ಸೇತುವೆ ಕೆಳಗೆ ಒಣಗಿದ ವರದಾ ನದಿಯೊಳಗ ಒಂದ ಮೂಲಿಯಲ್ಲಿ ಹೆಣ, ಬಿದ್ದಿದ್ದನ್ನ ನೋಡಿದ ಒಬ್ಬ. "ಇಲ್ಲೇ ಐತಿ ಬರ್ರಿ" ಅಂತ ಕೂಗಿದ. ಐದಾರಮಂದಿ ಓಡಿಹೋಗಿ ನೋಡಿದ್ರು, ಗರ್ ಗರುರ್ ಶಬ್ದ ಬರ್ತಿತು, "ಅವನು ಸತ್ತಿಲ್ಲಾ, ನೀರು ತರ್ರಿ ಓಡ್ರಲೇ" ಅಂದ. ಯಾರೋ ಒಬ್ಬಾತ, ಹೆಗಲ ಮ್ಯಾಲಿದ್ದ ಟವಲ್ಲನ್ನ ನೀರೊಳಗ ಅದ್ದೊಂಡ ಬಂದಾ ಅವನ ಬಾಯಿಯೊಳಗ ನೀರ ಬಿಟ್ಟಂದ, ಚೂರು

ಮಿಸಕಾಡಿದ, ಮುದಕ ಕಾಲು ಕಟ್ಟಿದ. ಮುಳ್ಳು ಕಿತ್ತು ಅಂಗಾತ ಮಲಗಿಸಿ ಗಾಳಿ ಹಾಕಿದ್ರು. "ಏನ ಕೆಲ್ಸ ಮಾಡಿದ್ನೋ ಮಾಡಬಾರ್ದನ್ನ" ಒಬ್ಬ ಹೇಳಿದ. "ಅದೇ ಇರ್ತತೈ ತಮ್ಮ ಹೆಣ್ಣು-ಮಣ್ಣು ಇಲ್ಲಾಂದ್ರ ರೊಕ್ಕ ಇಷ್ಟಕ್ಕೆ ನಡ್ಡಿರೋದಿದು". ನಾಡಿ ಹಿಡಿದ ಮುದಕ", ಜಿಂವ್ವ ಐತಿ, ಕಾಲ ಮುರದೈತಿ, ತಪ್ಪಲ ಹಾಕಿ ಕಟ್ಟಿದ್ರ ನಾಕ ದಿನ್ನಾಗ ಸರಿ ಹೊಕ್ಕೈತಿ, ಯಾರೋ ಪಾಪ, ಪುಣ್ಯ ಬರ್ತೈತ್ರಲೇ ನಡಿರಿ ನಮ್ಮ ಊರಿಗ" ಅಂದ ಮುದುಕ.

ಪ್ರಭುಗ ಏನಾತು ಅಂತ ತಿಳ್ಕೊಳ್ಳೊದ್ರಾಗ ಎಂಟದಿನ ಕಳದ ಹೋಗಿದ್ವು, ಮುದಕ ಯಾವದೊ ಎಲಿ ಹಾಕಿ, ಬಿದಿರಿನ ಚಿಪುಗಳಿಂದ, ಎಲ್ಬು ಜೋಡಿಸಿ ಕಟ್ಟಿದ್ದ, ಎಳಾಕ ಆಗದೆ ತೆವಳ್ಕೊಂತ ಹೋಗ್ತಿದ್ದ ಪ್ರಭು" ಇನ್ನೊಂದು ಎಲ್ಡದಿನಾ ತಮ್ಮ ಆಮ್ಯಾಕ ಬಿಚ್ಚಿ ಅಡ್ಡಾಡು ಏನೂ ಆಗಂಗಿಲ್ಲಾ" ಅಂದ ಮುದುಕ. ಅವನನ್ನ ಒಂದು ಸಲ ನೋಡಿದ, ಅವನಪ್ಪನ ನೆನಪಾತು, ಮನಸ್ಸಿಗೆ ಘಾತವಾಗಿತ್ತು, ಅವಮಾನ ಅಪಮಾನದ ಬದುಕ ಬದಕೋದಕ್ಕಿಂತ ಸತ್ತುಹೋಗಿದ್ರ ಪಾಡಿತ್ತು ಅನಿಸಿತು ಅವನಿಗೆ. ಎಲ್ಲಾ ಮುಗಿದು ಹೋದ ಕತೆ. ಈ ಜನರ ಸವಾಸಬೇಡಾ, ಒಂದ ಜಾತಿಯನ್ನ ಸಾಯೋತಂಕ ಜೀವಂತ ಇಟ್ಟು-ಅದನ್ನೆ ಅಸ್ತ್ರ ಮಾಡಿಕೊಂಡು ಹಿಂಸೆ ಮಾಡೊ ಜನರ ನಡುವೆ ಬದಕೋದಕಿಂತ ದೂರಹೋಗಿ ಇವ್ಯಾವು ಇಲ್ದಿರೋ ಜಾಗದಲ್ಲಿ ನಾಕ ದಿನ ನೆಮ್ಮದಿಯಿಂದಿರಬೇಕು ಅನಿಸಿತು.

ಅವನೆದ್ದು ನಿಂತ, ಆಗಲಿಲ್ಲ, ತೆವಳ್ಕೊಂತ ಕತ್ತಲೊಳಗ ತಡವರಿಸ್ತಾ ಹೊಂಟಿದ್ದ, ನಿಶ್ಚಿತ ಗುರಿ ಇರ್ಲಿಲ್ಲಾ, ಯಾಕೆ ಅನ್ನೋದು ಗೊತ್ತಿರಲಿಲ್ಲಾ. ಎಲ್ಲಿಗೆ ಅಂತ್ಲು ತಿಳಿಲಿಲ್ಲಾ. ಸುಮ್ನೆ ತೆವಳ್ತಾ ತೆವಳ್ತಾ ಹಳ್ಳಿ ಬಿಟ್ಟು ದೂರ ಬಂದ, ಬೆಳಗಾಗೋದ್ರಾಗ ಆ ಜಾಗದಿಂದ ದೂರ ಹೊರಟಿದ್ದ.

ಒಂದು ಸ್ಪಷ್ಟ ನಿರ್ಧಾರಕ ಬಂದಿದ್ದ ಅವನು, ಎಲ್ಲಾ ಜಂಜಾಟಕ, ಅಲ್ಲಿ ಎದ್ದಿರಬಹು ದಾದ ಎಲ್ಲಾ ವಿವಾದಗಳು ಊಹೆಗಳು ಅನುಮಾನಗಳಿಗೊಂದೆ ಮದ್ದು ನನ್ನ ಸಾವು. ಅಲ್ಲಿ ನಾನು ಸಾಯಲಿಲ್ಲಾ ಆದರೆ ಈಗ ನನ್ನ ಸಾವು ಆ ಊರಿನ ನೂರು ಪ್ರಶ್ನೆಗಳಿಗೆ ಉತ್ತರ ಆಗತೈತಿ, ಅಂದ್ಕೊಂಡವನೆ, ಸಿದಾ ಅಂಚೆ ಕಛೇರಿಗ ಹೋದ ಒಂದು ಟೆಲಿಗ್ರಾಂ ಅಂದ. ಅವನು ಯಾವದೋ ಭಾಷೆಯೊಳಗೆ ಮಾತಾಡ್ತಿದ್ದ ಪ್ರಭುಗ ಧಾಟಿ ಮ್ಯಾಲ ಗೊತ್ತಾತು, ಪುಣ್ಯಾತ್ಮ ಡ್ರೈವರ ಕೇರಳದ ಯಾವುದೋ ಭಾಗದಲ್ಲಿ ಬಿಟ್ಟು ಹೋಗ್ಯಾನಂತ. ಅಲ್ಲಿದ್ದ ಫಾರಂ ತಗೊಂಡು ದಪ್ಪ ಅಕ್ಷರಗಳಲ್ಲಿ ಪ್ರಭು ತನ್ನ ಸಾವಿನ ಸುದ್ಧಿಯನ್ನು ತಾನೆ "PRABHU IS DEAD" ಅಂತ ಬರದು, ಅವನ ಹತ್ರ ಇದ್ದ ರೊಕ್ಕ ಕೊಟ್ಟು ರಸೀದ ತಗೊಂಡು. ಹೊರಗ ಬಂದಾಗ ನೆಮ್ಮದಿ ಅನಿಸಿತು. ಅಲ್ಲೇ ಪಕ್ಕದ ಬೆಂಚಿನ ಮೇಲೆ ಕುತ್ಕೊಂಡು ಕಣ್ಣು ಮುಚ್ಚಿ ಉಸಿರು ಬಿಟ್ಟ.



ಮೈಸೂರು ವಿಶ್ವವಿದ್ಯಾಲಯದ ಮಹಾರಾಜ ಕಾಲೇಜಿನಲ್ಲಿ ಆಂಗ್ಲ ಭಾಷಾ ಅಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿರುವ ಶಾಂತನಾಯ್ಕ ಅವರು ಅಲಕ್ಷಿತ ಸಮುದಾಯದಿಂದ ಬಂದವರು. ಗ್ರಾಮೀಣ ನೆಲೆಯಿಂದ ನಗರದ ನೆಲೆಗೆ ಬಂದಾಗ ಎರಡು ಸಂಸ್ಕೃತಿಗಳ ಅಂತರವನ್ನ ತನ್ನ ಅಂತರಂಗದಲ್ಲಿಯೇ ಲೆಕ್ಕ ಹಾಕಿ ಇವೆರಡರಲ್ಲಿ ಯಾವುದನ್ನ ಅಪ್ಪಿಕೊಳ್ಳಬೇಕು, ಇವುಗಳ ಸ್ಥಿತ್ಯಂತರಗಳನ್ನು ದಾಖಲಿಸುವ ಮಾಧ್ಯಮ ಯಾವುದೆಂಬುದರ ಕಡೆಗೆ ತೀವ್ರವಾಗಿ ಆಲೋಚಿಸುತ್ತ ಬಂದವರು. ಸಾಕ್ಷರತಾ ಆಂದೋಲನ, ಕೋಮು ಸೌಹಾರ್ದ ಶಿಬಿರ - ಎನ್.ಎಸ್.ಎಸ್. ಮುಂತಾದ ಜನಪರವಾದ ಕಾರ್ಯಕ್ರಮಗಳಲ್ಲಿ ನಿರಂತರವಾಗಿ ಭಾಗಿಯಾಗುತ್ತ ಮನುಷ್ಯನ ಕಷ್ಟ ಸುಖಗಳನ್ನ, ಬದುಕಿನ ಬರ್ಬರತೆಯನ್ನ ಬದಲಾವಣೆಯನ್ನ ಸೃಜನ ಶೀಲತೆಯಲ್ಲಿ ಕಟ್ಟಿಕೊಡಬೇಕೆಂಬ ಉತ್ಸಾಹವನ್ನು ವ್ಯಕ್ತಪಡಿಸುತ್ತಲೇ ಬಂದವರು. ಹಾಗಾಗಿ ಕಾವ್ಯ, ಕತೆ, ನಾಟಕ, ಕಾದಂಬರಿ, ವೈಚಾರಿಕ ಲೇಖನ, ಈ ಪ್ರಕಾರಗಳಲ್ಲಿ ತಮ್ಮ ಚಿಂತನೆಯನ್ನ ಹರಿಯಬಿಟ್ಟದ್ದು ಗಮನಾರ್ಹ ಸಂಗತಿ. ಇದರ ಫಲವಾಗಿ ಗುಡ್ಡಜ್ಜ (ಕಥಾ ಸಂಕಲನ)ಮೀನು ಮತ್ತು ಹುಡುಗಿ (ಕಾವ್ಯ), ಕತ್ತಲು ಕರಗುವ ಮುನ್ನ(ಕಾದಂಬರಿ), ಹಳೆ ಭಾವನೆಯ ಹೊಸ ಮನುಷ್ಯ (ಕಾವ್ಯ), ಕೊಂಯ್ಯ ಮತ್ತು ಧೋತ್ರ (ಕಥಾ ಸಂಕಲನ), ನಮ್ಮೊಳಗಿನ ಮನುಷ್ಯ (ನಾಟಕಗಳು), ಮನು ಹಿಟ್ಲರ್ ಮತ್ತು ಅಂಬೇಡ್ಕರ್ -ಒಂದು ಚಿಂತನೆ (ವೈಚಾರಿಕ ಲೇಖನಗಳು) ಮುಂತಾದ ಕೃತಿಗಳ ನಿರ್ಮಾಣಕ್ಕೆ ಕಾರಣವಾದುದ್ದು ಮಹತ್ವದ ಸಂಗತಿ. ತಳ ಸಂಸ್ಕೃತಿಯ ಪಾಡು, ಹಿಂಸೆ ಇವೆಲ್ಲಾ ಶಾಂತನಾಯ್ಕರ ಸೃಜನ ಶೀಲತೆಯ ಭಿನ್ನ ನೆಲೆಗಳಲ್ಲಿ ಅಭಿವ್ಯಕ್ತಗೊಂಡು ವಿಭಿನ್ನ ಕೃತಿ ರೂಪಗಳಿಗೂ ಅವಕಾಶವಾಗಿರುವುದನ್ನ ಗಮನಿಸಬಹುದು.

- ಡಾ. ಜಿ. ಆರ್. ತಿಪ್ಪೇಸ್ವಾಮಿ